ಕಸ್ತೂರಿ

ನವೆಂಬರ್, ೧೯೬೦



ಒಂದೇ ಒಗೆತದಲ್ಲಿ 3-ವಿಧ ಕ್ರಿಯೆಯಿಂದ...



ಡೇಟ್ ಅಧಿಕ ಬಿಳಿಗೊಳಿಸುತ್ತದೆ

— ಇತರ ಯಾವುದೇ ಪೌಡರಿಗಿಂತ.

ಅದು ಹೇಗೆ ಮತ್ತು ಯಾಕೆಂದರೆ:

1. ಡೆಟ್‌ನಲ್ಲಿರುವ ವಿಶೇಷ ಕ್ರಿಯಾಶಾಲಿ ವಸ್ತುವು ಬಟ್ಟೆಯಲ್ಲಿ ಶೀಘ್ರವಾಗಿ ಪ್ರವೇಶಿಸಿ, ಅಲ್ಲಿ ಅಡಗಿರುವ ಕೊಳೆಯನ್ನು ಸುಲಭವಾಗಿ ತೆಗೆದುಬಿಡುತ್ತದೆ—ಬಟ್ಟೆಯು ನಿರ್ಮಲವಾಗುತ್ತದೆ.
2. ಡೆಟ್ ಕೊಳೆಯನ್ನು ತೆಗೆದ ಮೇಲೆ ಕೊಳೆಯು ಇನ್ನೊಮ್ಮೆ ಬಟ್ಟೆಯಲ್ಲಿ ಹರಡದಂತೆ ಪ್ರತ್ಯೇಕಿಸಿ ಬಿಡುತ್ತದೆ—ಬಟ್ಟೆಯು ನಿರ್ಮಲವಾಗಿ, ನಿರ್ಮಲವಾಗಿಯೇ ಉಳಿಯುತ್ತದೆ!
3. ಡೆಟ್ ಬಟ್ಟೆಗಳಿಗೆ ಉಜ್ವಲ ಬಿಳುಪನ್ನು ನೀಡುತ್ತದೆ—ಬಟ್ಟೆಗಳನ್ನು ಎಂದಿಗಿಂತಲೂ ಅಧಿಕ ನಿರ್ಮಲ ಮತ್ತು ಬಿಳಿಗೊಳಿಸುತ್ತದೆ. (ಇದಕ್ಕೆ ನೀಲಿ ಅಥವಾ ಇತರ ಬಿಳಿಗೊಳಿಸುವ ಪದಾರ್ಥಗಳನ್ನು ಸೇರಿಸಬೇಕೆಂದಿಲ್ಲ.)

ಇಂದೇ ಡೆಟ್ ಕೊಂಡುಕೊಳ್ಳಿರಿ!

ಸ್ವಸ್ತಿಕ್ ಆಯಿಲ್ ಮಿಲ್ಸ್, ಬೊಂಬಾಯ

SHILPI HPMA 38A/70 KA

ಪ್ರಕಟಣೆ:
ಪ್ರತಿ ತಿಂಗಳ ೧ನೇ ದಿನಾಂಕ

ಸಂಪಾದಕರು :
ರಂಗನಾಥ ದಿವಾಕರ
ಸಹಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಕಸ್ತೂರಿ ಕಾರ್ಯಾಲಯ ಹುಬ್ಬಳ್ಳಿ

ಕಲೆ :
ಕೆ. ಬಿ. ಕುಲಕರ್ಣಿ

ಮುದ್ರಣ:
ಸಂಯುಕ್ತ ಕರ್ನಾಟಕ ಪ್ರೆಸ್
ಹುಬ್ಬಳ್ಳಿ

ಮುಖಚಿತ್ರ:
ಆದಿ ಜನಾಂಗದ ಸುಂದರಿ
ಕೃಷ್ಣ ಕ್ಷತ್ರಿ

ಚಂದಾ ದರ :

೩ ವರ್ಷ (ಅಂಚೆ ಸೇರಿ)		ರೂ. ೨೮-೦೦
೨ ವರ್ಷ	,,	ರೂ. ೨೦-೦೦
೧ ವರ್ಷ	,,	ರೂ. ೧೧-೦೦
ಅರ್ಧ ವರ್ಷ	,,	ರೂ. ೬-೦೦

KASTURI November 1970

ಲೇಖಕರಿಗೆ ಸೂಚನೆ

"ಕಸ್ತೂರಿ"ಯಲ್ಲಿ ಪ್ರಕಟನೆಗಾಗಿ ಲೇಖನ ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗುಲಿಗೆ ವಿವರವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಅವುಗಳ ಮೂಲ ಲೇಖಕರ ಹಾಗೂ ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ ಲೇಖನಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯ ಬೇಕು ವಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. "ಇದುವೆ ಜೀವ ಇದು ಜೀವನ" ಮೊದಲಾದ ಚುಟುಕುಗಳನ್ನು ತಿರುಗಿ ಕಳಿಸಲು ಅಥವಾ ಆ ಬಗ್ಗೆ ಪತ್ರವ್ಯವಹಾರ ಮಾಡಲು ಸಾಧ್ಯವಿಲ್ಲ. ಲೇಖನ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವುದು. ಲೇಖಕರು ತಮ್ಮ ಲೇಖನಗಳ ನಕಲುಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖನಗಳು ಅಕಸ್ಮಾತ್ತಾಗಿ ಕಳೆದುಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖನ ಪ್ರಕಟವಾದರೆ, "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ, ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿ ತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲುಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಸಪ್ಟಂಬರ್ ತಿಂಗಳಿನ 'ಕಸ್ತೂರಿ'ಯಲ್ಲಿ ಪ್ರಕಟವಾದ ವಿಧವಾವಿವಾಹದ ಬಗೆಗಿನ ಲೇಖನದಲ್ಲಿ ಕೆಲ ವಿಷಯಗಳು ತಪ್ಪಾಗಿ ಗ್ರಹಿಸಿ ಬರೆಯಲ್ಪಟ್ಟಿವೆ. (೧) ಶ್ರೀ ಅಕದಾಸರ ಪತ್ನಿ ತೀರಿಕೊಂಡಿದ್ದು ೧೯೨೮ ರಲ್ಲಿ ಮತ್ತು ಅವರು ವಿಧವಾ ವಿವಾಹವಾದದ್ದು ೧೯೩೨ ರಲ್ಲಿ. (೨) ಅಕದಾಸ ಗಣಪತಿಭಟ್ಟರು ಯಾವುದೇ ಪ್ರಚಾರ ಸಂಸ್ಥೆಯನ್ನು ಸ್ಥಾಪಿಸದೆ ಎಲ್ಲ ಪ್ರಚಾರ ಕಾರ್ಯವನ್ನು ಸ್ವತಃ ನಡೆಸಿಕೊಂಡು ಹೋಗುತ್ತಿದ್ದರು ಹಾಗೂ ತಮ್ಮ ಮನೆಯಲ್ಲೇ ವಿಧವಾವಿವಾಹಗಳನ್ನು ನೆರವೇರಿಸಿ ಈ ಪದ್ಧತಿಯನ್ನು ಪ್ರೋತ್ಸಾಹಿಸುತ್ತಿದ್ದರು. (೩) ವಿಧವಾ ವಿವಾಹದಿಂದ ಜನಿಸಿದ ಹೆಣ್ಣುಮಕ್ಕಳ ವಿವಾಹ ಲೇಖನದಲ್ಲಿ ಸೂಚಿಸಿದಂತೆ ವೈಶ್ಯರೊಡನೆ ನಡೆದಿಲ್ಲ. ಇತ್ತಲಾಗಿ ಮೊದಲಿನ ಕಟ್ಟುನಿಟ್ಟುಗಳು ಸಡಿಲಾದುದರಿಂದ ಇಂತಹ ಜನರ ವಿವಾಹ ಯಾವ ತೊಂದರೆಯೂ ಇಲ್ಲದೆ ಜರುಗಿದೆ. (೪) ಶ್ರೀ ಅಕದಾಸರು ತೀರಿಕೊಂಡಿದ್ದು ೧೯೪೪ ರಲ್ಲಿ.

ಶಿರ್ಸಿ -ಮಹಾಬಲೇಶ್ವರ ಗ. ಅಕದಾಸ

['ಕಸ್ತೂರಿ'ಯ ಸಂದರ್ಶಕರು ವಿಷಯವನ್ನು ತಪ್ಪಾಗಿ ಗ್ರಹಿಸಿ ಬರೆದುದಕ್ಕೆ ವಿಷಾದಿಸುತ್ತೇವೆ. - ಸಂ]

ನನ್ನ ನೆಚ್ಚಿನ 'ಕಸ್ತೂರಿ ಮಾಮೂಲಿನಂತೆ ಈ ತಿಂಗಳೂ (ಅಕ್ಟೋಬರ್) ನನ್ನ ಕೈ ಸೇರಿತು. ಈ ಸಂಚಿಕೆಯಲ್ಲಿನ ಕಥೆಗಳೂ ಲೇಖನಗಳೂ ಬಹಳ ಚೆನ್ನಾಗಿವೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. 'ಸುಗಂಧ-ದುರ್ಗಂಧ'ದಲ್ಲಿನ ನೀತಿ. ಅಂಧ ವಿಶ್ವಾಸದ ಶತ್ರುವಾದ ಗಾಂಧೀಜಿಯವರು ನೀಡಿದ 'ಕುರುಡು ನಂಬಿಕೆಗೆ ಚಿಕಿತ್ಸೆ'ಯಿಂದ ಹಿಡಿದು 'ಏಕಾಕಿ ನಾರಿಯ ದುರಂತ' 'ರೈಲಿನಲ್ಲಿ ನರಭಕ್ಷಣೆ' 'ಕನ್ನಡ ಯಾರಿಗೆ ಬೇಕು?' 'ದಾರಿಹೋಕ' ಇವೆಲ್ಲಾ ಬಹಳ ಚೆನ್ನಾಗಿವೆ. ಕನ್ನಡ ಕ್ಷೇತ್ರಕ್ಕೆ 'ಕಸ್ತೂರಿ' ಸಲ್ಲಿಸುತ್ತಿರುವ ಸೇವೆ ಅಮೋಘ.

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಏಕಾಕಿ ನಾರಿಯ ದುರಂತದ' ಬಗ್ಗೆ ಒಂದೆರಡು ಸಾಲು ಬರೆಯುತ್ತಿದ್ದೇನೆ. ಇದೇ ಕಥೆಯನ್ನು ಈಗ್ಗೆ ಸುಮಾರು ೧ ಅಥವಾ ೧॥ ತಿಂಗಳ ಹಿಂದೆ, ಮಂಗಳೂರಿನಿಂದ ಬರುವ 'ನವಭಾರತ' ದಿನ ಪತ್ರಿಕೆಯಲ್ಲಿ ಓದಿದೆ. ಒಮ್ಮೆ ಒಂದು ಪತ್ರಿಕೆಯಲ್ಲಿ ಪ್ರಕಟವಾದ ಕಥೆ (ಅದೂ ಕನ್ನಡದ ಪತ್ರಿಕೆಯಲ್ಲೇ) ಮತ್ತೊಮ್ಮೆ ಇಷ್ಟು ಅಲ್ಪಾವಧಿ ಸಮಯದಲ್ಲಿ ಮುದ್ರಿತವಾದುದು ಸೋಜಿಗವಲ್ಲವೆ? ನೀವೇನನ್ನುತ್ತೀರಿ?

ದಾರ್ಗಾಲಿಂ, ಗೋವಾ - ಕೆ. ಸುಬ್ರಮಣ್ಯ

[ಎಷ್ಟೇ ಗಮನವಿರಿಸಿದರೂ ಬೇರೆ ಪತ್ರಿಕೆಗಳಲ್ಲಿ ಬಂದದ್ದನ್ನು ನಮ್ಮಲ್ಲಿ ಪುನರಾವರ್ತನೆಯಾಗದಂತೆ ತಡೆಯುವುದು ಕಷ್ಟ. 'ಕಸ್ತೂರಿ'ಯ ಪ್ರತಿ ಸಂಚಿಕೆ ಒಂದೂವರೆ ತಿಂಗಳಷ್ಟು ಹಿಂದೆಯೇ ಸಿದ್ಧವಾಗತೊಡಗುವುದು ಇದಕ್ಕೊಂದು ಕಾರಣ. —ಸಂ.]

'ಕಸ್ತೂರಿ'ಯ ಅಕ್ಟೋಬರ್ ಸಂಚಿಕೆಯಲ್ಲಿ ಶ್ರೀಯುತ ಅ. ಗೋ. ಶೇವಡೆ ಅವರ 'ಸೋಲು ಗೆಲುವಿನ ಗುಟ್ಟು' ಲೇಖನವನ್ನು ಓದುತ್ತಾ, 'ನಾವು ಏನಾಗಬೇಕೆಂದು ಎಣಿಸಿದ್ದೇವೋ ಅದರ ಸಂಪೂರ್ಣ ಕಲ್ಪನೆ ನಮಗಿರಬೇಕು' 'ನಮ್ಮ ಮನೋವೃತ್ತಿ ಮತ್ತು ದೃಷ್ಟಿ ನಮ್ಮ ಭವಿಷ್ಯದ ನಿರ್ಮಾಪಕರು' ಹಾಗು. 'ಹಗಲಿರುಳು ಜಯದ ಚಿಂತನೆ ನಡೆಸಿದರೆ ನಾವದನ್ನು ನಿಜ ಜೀವನದಲ್ಲಿ ಪಡೆಯುವೆವು'-ಇವುಗಳನ್ನು ಕೂಲಂಕಷವಾಗಿ ದೃಷ್ಟಿಸಿ ಲೇಖನವನ್ನು ಪೂರ್ತಿ ಓದಿದೆ.

ಲೇಖಕರು ಇಲ್ಲಿ ಕಲ್ಪನಾ ವಿಲಾಸಕ್ಕೆ ಪ್ರಧಾನ ಪ್ರಾಶಸ್ತ್ಯವಿತ್ತು. ಗೆಲುವಿನ ಗುಟ್ಟಿನ ತಳಹದಿಯಾದ ಕರ್ತವ್ಯದೆಡೆಗೆ ತೀರ ಗಮನಕೊಡದೆ ಕೊನೆಗೊಳಿಸಿರುವುದು ಅನುಚಿತವೆನಿಸುತ್ತಿದೆ.

ಪಾಗಟ - ವಿ. ಎಂ. ವೆಂಕಟಸ್ವಾಮಯ್ಯ

ನಿಮ್ಮ 'ಕಸ್ತೂರಿ'ಯ ಅಕ್ಟೋಬರ್ ಸಂಚಿಕೆಯಲ್ಲಿನ ಪುಸ್ತಕವಿಭಾಗ ತುಂಬಾ ಚೆನ್ನಾಗಿತ್ತು. ಅತ್ಯಂತ ಪ್ರಭಾವಶಾಲಿ ಕಾದಂಬರಿಕಾರ ಡಿಕನ್ಸ್‌ರವರ ವ್ಯಕ್ತಿಚಿತ್ರಣ ಚತುರ ಪಿ. ವಿ. ಶಾಸ್ತ್ರಿಯವರ ಲೇಖನಿಯಲ್ಲಿ ಸ್ಫುಟವಾಗಿ ಅಚ್ಚುಕಟ್ಟಾಗಿ ಮೂಡಿಬಂದಿದೆ. ಪರ್ಲ್ ಬಕ್‌ರ ಮೇಲೆ ಅಷ್ಟೊಂದು ಪರಿಣಾಮ ಬೀರಿದ ಡಿಕನ್ಸರ

ವ್ಯಕ್ತಿತ್ವ, ಮಾನವೀಯತೆ ಇವನ್ನೆಲ್ಲ ಚೆನ್ನಾಗಿ ಪರಿಚಯ ಮಾಡಿಸಿಕೊಟ್ಟ ಶ್ರೀ ಪಿ. ವಿ. ಶಾಸ್ತ್ರಿಯವರಿಗೆ ಧನ್ಯವಾದಗಳು.

ಇದೇ ರೀತಿ ಮಾನವತೆಯ ಮಹೋಪಾಸಕರ ವ್ಯಕ್ತಿತ್ವ ಮತ್ತು ಸಾಹಿತ್ಯದ ಪರಿಚಯವನ್ನು ತಮ್ಮ ಜನಪ್ರಿಯ ಪತ್ರಿಕೆಯ ಮುಖಾಂತರ ನಮ್ಮಂಥ ನವಯುವಕ ಪ್ರಪಂಚಕ್ಕೆ ಮಾಡಿಕೊಡುವುದು ಒಂದು ಅಗತ್ಯದ ಕರ್ತವ್ಯ.

ಗೋಕರ್ಣ —ಜಯಂತಕುಮಾರ ಕೈಕಿಣಿ

ಅಗಸ್ಟ ೭೦ ರ 'ಕಸ್ತೂರಿ'ಯಲ್ಲಿ ಶ್ರೀ ಪ್ರಭುಶಂಕರರು "...ಸಮರ್ಥರಾದ ಕವಿಗಳು ನಮ್ಮ ಕಾವ್ಯದಲ್ಲೂ ತಕ್ಕಮಟ್ಟಿಗೆ ಗಣನೀಯ ಪ್ರಯೋಗಗಳನ್ನು ಮಾಡಿದ್ದಾರೆ;...ಆದರೆ ನವ್ಯ ಕಾವ್ಯವನ್ನೋದಿದಾಗ ನನಗೆ ಅಸಹ್ಯವೆನಿಸುತ್ತದೆ ಇಲ್ಲವೇ ನಗು ಬರುತ್ತದೆ. ಇನ್ನಾವ ಅನುಭವವೂ ಆಗುವುದಿಲ್ಲ...'' ಎಂದು ಮುಂತಾಗಿ ಹೇಳಿದ್ದಾರೆ.

ತಾವು ಓದಿದ ಸಾಹಿತ್ಯದ ಒಂದು ಪ್ರಕಾರ ನಗು ತರಿಸಿದಾಗ ಇಲ್ಲವೇ ಅಸಹ್ಯವೆನ್ನಿಸಿದಾಗ ಅಂಥ ಸಾಹಿತ್ಯದಲ್ಲೂ 'ಸಮರ್ಥರಾದ ಕವಿಗಳು ಗಣನೀಯವಾದ ಪ್ರಯೋಗಗಳನ್ನು ಮಾಡಿದ್ದಾರೆ' ಅನ್ನುವ ಮಾತಿಗೆ ಆಧಾರ ಅಥವಾ ಅರ್ಥ ಏನು?

ಶೃಂಗೇರಿ -ಎ. ವಿ. ಲಕ್ಷ್ಮೀನಾರಾಯಣ್

ನಿಮ್ಮ 'ಕಸ್ತೂರಿ'ಯ ಸಪ್ಟಂಬರ್ ಸಂಚಿಕೆಯಲ್ಲಿ ಲಂಕಾದ್ವೀಪ ಸಾಲ್ಸೆಟ್ ದ್ವೀಪವೆಂದು ಬರೆದಿದ್ದೀರಿ. ಆದರೆ ಈಗಿನ ಸಿಲೋನ್ ದ್ವೀಪವೇ ಲಂಕೆ ಎಂಬುದರಲ್ಲಿ ಸಂದೇಹವಿಲ್ಲ. ಆಗಿದ್ದ ಹೆಸರೂ ಈಗಲೂ ಅದಕ್ಕೆ ಇದೆ. ಅಲ್ಲದೆ ಲಂಕೆಯಾದರೂ ಭಾರತ ತೀರದಿಂದ ಬಹುದೂರವಿಲ್ಲ. ಕೇವಲ ೨೫ ಮೈಲು ದೂರ. ಶ್ರೀ ಆದಿರೇಣುಕಾಚಾರ್ಯ ರಾವಣನ ಮಿತ್ರರೂ ಗುರುಗಳೂ ಆಗಿದ್ದರೆಂದು ಅವರ ಗ್ರಂಥಗಳಿಂದಲೇ ತಿಳಿದು ಬರುತ್ತದೆ. ಈಚೆಗೆ ಸಿಲೋನಿನಲ್ಲಿ ರೇಣುಕ ಮಠವೊಂದು ಪತ್ತೆ ಆಗಿದೆಯಂತೆ. ಈ ದಾಖಲೆ ಸಹ ಯೋಚಿಸುವಂತಹದು. ಅಲ್ಲದೆ ಕಿಷ್ಕಿಂಧೆ, ಆನೆಗೊಂದಿ, ಹಂಪೆಯೇ ಹೊರತು ಸಾತ್‌ಪುಡಾ ಪರ್ವತಗಳಲ್ಲ. ಪಂಪಾ ಸರೋವರವಿರುವುದು, ನದಿ ಇರುವುದು ಹಂಪೆಯಲ್ಲಿ.

ಇನ್ನೊಂದು 'ಸ್ವಾರಸ್ಯ ವಿಚಾರ' ಪುಸ್ತಕವೊಂದರಲ್ಲಿ ಓದಿದ್ದೆ. 'ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ'ವೆಂಬ ಹಳೇ ಪುಸ್ತಕದಲ್ಲಿ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ೨ ಶಾಸನಗಳು ಸಿಕ್ಕಿದ್ದು, ಅವುಗಳಲ್ಲಿ ಒಂದು ರಾವಣನ ರಾಜ್ಯವು ಪಶ್ಚಿಮ ಕರ್ನಾಟಕದಲ್ಲಿ ಗೋವೆಯ ವರೆಗೆ ಇತ್ತೆಂದೂ ದಕ್ಷಿಣ ಜಿಲ್ಲೆ ಅವನಿಗೆ ಸೇರಿತ್ತೆಂದೂ ಇನ್ನೊಂದು ಶಾಸನದಲ್ಲಿ ಪಾಂಡವರ ಕಾಲದಲ್ಲಿ ಈ ಪ್ರದೇಶ ಸಹದೇವನಿಗೆ ಸೇರಿತ್ತೆಂದೂ ಬರೆಯಲಾಗಿದೆಯಂತೆ. ಪೂರ್ವ ಕರ್ನಾಟಕ ವಾನರರಿಗೆ ಸೇರಿದ್ದಿರಬಹುದು. ಶ್ರೀ ರಂಭಾಪುರೀ ಪೀಠವೂ ಪಶ್ಚಿಮ ಕರ್ನಾಟಕದ ಪರಿಸರದಲ್ಲೇ ಇದೆ. ಇದರಿಂದ ರೇಣುಕಾ ಪೀಠದ ಶಾಖೆ ದೊರೆತಿರುವ ಲಂಕೆ ಎಂದರೆ ಸಿಲೋನ್ ದ್ವೀಪವೇ ಲಂಕೆ ಎಂದು ಊಹಿಸಬಹುದಾಗಿದೆ. ಸಾಲ್ಸೆಟ್ ದ್ವೀಪ ಲೆಕ್ಕಕ್ಕೂ ಸಿಕ್ಕದಷ್ಟು ಚಿಕ್ಕದು.

ಚಿಕ್ಕಮಗಳೂರು —ಎ. ಎನ್. ಸ್ವಾಮಿ

ಅಗಸ್ಟ ೧೯೭೦ರ ಸಂಚಿಕೆಯಲ್ಲಿ, 'ಕೊಡಗು ನಕ್ಸಲೀಯರಿಗೆ ಪಾಠ ಕಲಿಸಿತು' ಎನ್ನುವ ಲೇಖದಲ್ಲಿ ಶ್ರೀ 'ಕೇಶಿ'ಯವರು ಶ್ರೀ ಇ.ಎಂ.ಎಸ್. ನಕ್ಸಲೀಯರ ಪೋಷಕರು ಎಂದಿದ್ದಾರೆ. ಹಾಗಾದರೆ ಬಿಹಾರ್, ಒರಿಸ್ಸಾ ಮತ್ತು ಆಂಧ್ರ ಪ್ರದೇಶಗಳ ಮುಖ್ಯಮಂತ್ರಿಗಳು ನಕ್ಸಲೀಯರ ಪೋಷಕರೆ? ಅಲ್ಲಿಯೂ ಗಲಭೆಗಳು ನಡೆಯುತ್ತಿವೆಯಲ್ಲ. ಇ.ಎಂ.ಎಸ್. ಅವರ ವಿರುದ್ಧ ಕಪ್ಪುಬಾವುಟ ಪ್ರದರ್ಶಿಸಿದರೆ ನಕ್ಸಲೀಯರಿಗೆ ಹೇಗೆ ಪಾಠ ಕಲಿಸಿದಂತಾಗುತ್ತದೆ? ನಿಜವಾಗಿಯೂ ಇ.ಎಂ.ಎಸ್. ನಕ್ಸಲೀಯರ ಪೋಷಕರಾಗಿದ್ದರೆ, ಮಿಸ್ ಅಜಿತಾ ಅವರ ತಾಯಿ ಮತ್ತು ಸಂಗಡಿಗರನ್ನು ಸೆರೆಮನೆಗೆ ಕಳಿಸುತ್ತಲೇ ಇರಲಿಲ್ಲ. ಶ್ರೀ 'ಕೇಶಿ'ಯವರಿಗೆ ಸಿ.ಪಿ. (ಎಂ. ಎಲ್.) ಮತ್ತು ಸಿ.ಪಿ.ಎಂ. ಪಕ್ಷಗಳ ವ್ಯತ್ಯಾಸ ತಿಳಿದಂತಿಲ್ಲ.

ಪುಣೆ ಎನ್. ಸಿ. ಆನಂದ್

[ನನಗೆ ನೆನಪಿರುವ ಮಟ್ಟಿಗೆ ನಕ್ಸಲೀಯರನ್ನು ನಂಬೂದ್ರಿಪಾದರು ಅರೆ ಮನಸ್ಸಿನಿಂದಲೇ ಬಂಧಿಸಿದರು. —ಸಂ.]

ಸಂಚಿಕೆ : ೩ ವರ್ಷ : ೧೫

ನವಂಬರ್ ೧೯೭೦

ಮಡಿ- ಮೈಲಿಗೆ

ದೇವರನ್ನು ಕುರಿತು ಯೋಚನೆ ಮಾಡಲು ಅಂಥ ಇಂಥ ಸಮಯವೆಂದಾಗಲಿ, ಮಡಿ, ಮೈಲಿಗೆಯೆಂಬ ಅಡ್ಡಿಯಾಗಲಿಇಲ್ಲವೆಂಬ ಅಭಿಪ್ರಾಯವನ್ನು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ತಮ್ಮ ಆತ್ಮಚರಿತೆ 'ಭಾವ'ದ ಎರಡನೆಯ ಭಾಗದಲ್ಲಿ ವ್ಯಕ್ತಪಡಿಸಿದ್ದಾರೆ. ಈ ಸಂಬಂಧದಲ್ಲಿ ಹಿರಿಯರೊಬ್ಬರು ಅವರಿಗೆ ಒಂದು ಕಥೆ ಹೇಳಿದರಂತೆ. ಅವರು ಹೇಳುವ ಕತೆ ಕೆಳಕಂಡಂತಿದೆ:

"ತಿಳಿದವರು ಹೇಳಿದ ಹಿಂದಿನ ಕಾಲದ ಕಥೆ. ರಾಮದೇವರು ರಾಜ್ಯ ಆಳುತ್ತ ಸುಖವಾಗಿದ್ದ ಕಾಲದಲ್ಲಿ ಹನುಮಂತ ದೇವರು ದಿನಾ ಅವರಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತ ಇದ್ದರಂತೆ. ದಿನವೆಲ್ಲ ಜೊತೆಗೆ ಇದ್ದು ದೊರೆ ಸಂಜೆ ಅಂತಃಪುರಕ್ಕೆ ಹೋದಾಗ ಇವರು ವಿಹಾರಕ್ಕಾಗಿ

ಒಂದಷ್ಟು ಆಕಾಶದಲ್ಲಿ ಹಾರಾಡಲು ಹೋಗುವರು. ಒಂದು ದಿನ ಇವರು ಹೀಗೆ ಆಕಾಶದಲ್ಲಿ ಹಾರಾಡುತ್ತ ಇದ್ದಾಗ ಕೆಳಗೆ ಯಾರೋ ರಾಮ ಅಂತ ಹೇಳಿದ್ದು ಕೇಳಿಸಿತು. ರಾಮ ಎಂದು ಯಾರೇ ಹೇಳಿದರೂ ಹನುಮಂತ ದೇವರಿಗೆ ರೋಮಾಂಚನ ಆಗುವುದು. ಇದು ಯಾರು ಎಂದರು ಎಂದು ಅವರು ಕೆಳಕ್ಕೆ ದೃಷ್ಟಿ ಹಾಯಿಸಿದರು. ಯಾವನೋ ಬಡಪಾಯಿ. ಮೂರು ದಿನ ಮಲಕಟ್ಟಿದ್ದು, ಅದು ಕಳೆದಾಗ ದೇಹಕ್ಕೆ ಹಾಯಿ ಆಗಿ, ಹಾಯಿ ಆದ ಕ್ಷಣದಲ್ಲಿ ರಾಮ ಎಂದಿದ್ದನು. ಹನುಮಂತನಿಗೆ ಕೋಪ ಬಂದಿತು. ಈ ಪ್ರಾಣಿ ಈ ಸ್ಥಿತಿಯಲ್ಲಿ ನನ್ನ ದೊರೆಯ ಹೆಸರನ್ನು ಹೇಳಿದನೆ ಎಂದು ಮುನಿದು ಅವರು ಅವನು ಕುಳಿತಿದ್ದ ಕಡೆಗೆ ಎರಗಿದ. ಅವನ ತಲೆಯ ಮೇಲೆ ಮೊಟ್ಟಿಕ್ಕಿದ. ಕೋಪ ತೀರಿ ಮತ್ತೆ ಮೇಲಕ್ಕೆ ಹಾರಿದ. ಮರುದಿವಸ ಹನುಮಂತ ಒಡೆಯನಿಗೆ ಎಣ್ಣೆ ಹಚ್ಚಲು ಎದುರಿಗೆ ನಿಂತ. ರಾಮಚಂದ್ರ ಪೀಠದ ಮೇಲೆ ಕುಳಿತಿದ್ದಾರೆ. ಸೇವಕನಿಗೆ ಒಡೆಯನ ತಲೆಯ ಮೇಲೆ ದೊಡ್ಡದೊಂದು ಬಾವು ಇರುವುದು ಕಂಡಿತು. 'ಏನು, ರಾಮ? ನಿನ್ನ ತಲೆಯ ಮೇಲೆ ಪೆಟ್ಟಾಗಿದೆಯಲ್ಲಾ? ಏನಾಯಿತು?' ಎಂದು ಆತ ಕೇಳಿದ. ರಾಮ, 'ನೀನೇ ಮೊಟ್ಟಿ, ಬಾವು ಮಾಡಿ, ಯಾರು ಮಾಡಿದರು ಎಂದು ಕೇಳುತ್ತೀಯಾ?' ಎಂದರು. 'ನಾನು! ನಿನ್ನನ್ನು ಮೊಟ್ಟಿದೆನೆ? ಇದು ಯಾವ ಮಾತು?' 'ಬೇರೆ ಯಾವ ಮಾತೂ ಅಲ್ಲಪ್ಪ. ನಿನ್ನೆ ಸಂಜೆ ನೀನು ಆಕಾಶ ವಿಹಾರದಲ್ಲಿದ್ದಾಗ ಏನಾಯಿತು ನೆನೆದುಕೋ.' 'ಹೌದು! ಅಶುಚಿಯಾಗಿದ್ದ ಮನುಷ್ಯ ನಿನ್ನ ಹೆಸರು ಹೇಳಿದ. ಕೋಪ ಬಂದು ನಾನು ತಲೆಯ ಮೇಲೆ ಮೊಟ್ಟಿದೆ.' 'ಏನೋ ಕಷ್ಟ ಹರಿದು ಸುಖ ಆದಾಗ ಆ ಮನುಷ್ಯ ನನ್ನ ಹೆಸರನ್ನು ಹೇಳಿದ. ಅದಕ್ಕೆ ಶುಚಿ ಅಶುಚಿ ಏತರದು? ನೀನು ಅವನನ್ನು ಮೊಟ್ಟಿದೆ. ನನ್ನ ಹೆಸರು ಹೇಳುವವರನ್ನು ಮೊಟ್ಟಿದರೆ ಆ ಮೊಟ್ಟು ನನಗೆ ತಾಕುತ್ತದೆ. ನನ್ನ ತಲೆಯ ಈ ಬಾವು ನನ್ನ ರಕ್ಷಕ ಸೇವಕ ನೀನೇ ಮಾಡಿದ್ದು. ಬಾ, ಎಣ್ಣೆ ಹಚ್ಚು,' ಎಂದರು ದೊರೆ. ರಾಮನ ನಾಮ ಪತಿತರನ್ನು ಪಾವನ ಮಾಡುವ ನಾಮ. ಅಶುಚಿಯಾದವರು ಅದನ್ನು ಹೇಳಬಾರದು ಎಂದರೆ ಯಾರೂ ಹೇಳುವಂತಿಲ್ಲ, ಲೋಕ ಉಳಿಯುವಂತಿಲ್ಲ."

—ಸಂಗ್ರಹ: ವೃಷ್ಣಿರಾಜ

೧೯೫೮ರಲ್ಲಿ ಹರಿದ್ವಾರದ ಬಳಿ ಜ್ವಾಲಾಪುರದ ಗುರುಕುಲದ ಸ್ವರ್ಣ ಮಹೋತ್ಸವದಲ್ಲಿ ಜವಾಹರಲಾಲ ನೆಹರೂ ಅವರು ಪದವೀದಾನ ಭಾಷಣ ಮಾಡಲು ಹೋಗಿದ್ದರು. ಊಟವಾದ ಮೇಲೆ ನಿತ್ಯ ಸಿಗರೇಟ್ ಸೇದುವ ಅಭ್ಯಾಸವಿದ್ದುದರಿಂದ ವಿರಾಮಾಸನದಲ್ಲಿ ಕೂಡುತ್ತ ಕ್ಯಾಪ್ಸ್ಟನ್ ಸಿಗರೇಟ್ ತರಿಸಲು ಅವರು ಹೇಳಿದರು. ಹತ್ತಿರವಿದ್ದ ಪ್ರಕಾಶವೀರ ಶಾಸ್ತ್ರಿಗಳು, ಗುರುಕುಲದಲ್ಲಿ ಧೂಮಪಾನಕ್ಕೆ ಕಠೋರ ನಿಷೇಧವಿರುವದರಿಂದ ಅದನ್ನಿಲ್ಲಿ ಮಾರುವುದಿಲ್ಲ, ಜ್ವಾಲಾಪುರಕ್ಕೆ ಕಾರಿನಲ್ಲಿ ಯಾರನ್ನಾದರೂ ಕಳಿಸಿ ತರಿಸಿ ಕೊಡುತ್ತೇನೆ," ಎಂದರು.

ಇದನ್ನೆಲ್ಲ ಆಲಿಸುತ್ತಿದ್ದ ನೆಹರೂ ಅವರ ಅಂಗರಕ್ಷಕ ತನ್ನ ಜೇಬಿನಿಂದ ಸಿಗರೇಟ್ ಡಬ್ಬಿ ತೆಗೆದು ಪ್ರಧಾನಮಂತ್ರಿಗಳ ಮುಂದೆ ಹಿಡಿದು, ತೆಗೆದುಕೊಳ್ಳೋಣಾಗಲಿ." ಎಂದ.

ನೆಹರು ಒಂದು ಕ್ಷಣ ಶಾಸ್ತ್ರಿಗಳತ್ತ ದೃಷ್ಟಿ ಹರಿಸಿ, "ಇಲ್ಲಿ ಯಾರೂ ಸಿಗರೇಟ್ ಸೇದುವುದಿಲ್ಲವೆಂದಮೇಲೆ ನಾನು ಹೇಗೆ ಸೇದಲಿ?" ಎಂದು ಹಾಗೆಯೇ ವಿಶ್ರಾಂತಿಗಾಗಿ ಒರಗಿದರು.

ಮುಖ ಶೃಂಗಾರ

ಮನುಷ್ಯ ಎಂದೂ ತನ್ನ ನಿಸರ್ಗದತ್ತ ರೂಪದಿಂದ ತೃಪ್ತನಾಗಿಲ್ಲ. ತಾನಿದ್ದುದಕ್ಕಿಂತ ಹೆಚ್ಚು ಚೆನ್ನಾಗಿ ಕಾಣಬೇಕು ಎಂಬ ಅಪೇಕ್ಷೆ ಅವನಿಗೆ ಅನಾದಿಯಲ್ಲೇ ಮೂಡಿದಹಾಗೆ ಕಾಣುತ್ತದೆ. ಹೀಗೆ ಹುಟ್ಟಿತು ಶೃಂಗಾರ ಕಲ್ಪನೆ. ಅತ್ಯಂತ ಹಿಂದುಳಿದ ಜನಾಂಗಗಳಲ್ಲಿ ಕೂಡ ಶರೀರವನ್ನು ಶೃಂಗರಿಸಿಕೊಳ್ಳುವ ಹವ್ಯಾಸ ಇತ್ತು, ಈಗಲೂ ಇದೆ. ಶೃಂಗಾರದ ಹವ್ಯಾಸ ಒಂದಕ್ಕೊಂದು ಸಂಪರ್ಕವೇ ಇಲ್ಲದ—ಭೂಮಿಯ ಆ ತುದಿ ಈ ತುದಿಗಳಲ್ಲಿ ವಾಸಿಸುವ—ಜನಾಂಗಗಳಲ್ಲಿ ವ್ಯಕ್ತವಾಗುವುದನ್ನು ನೋಡಿದರೆ ಮನುಷ್ಯನ ಮೂಲ ಸ್ವಭಾವದಲ್ಲೇ ಅದು ನಿಹಿತವಾಗಿದೆ ಅನಿಸುತ್ತದೆ. ಶೃಂಗಾರದ ಹವ್ಯಾಸ ಎಷ್ಟು ಉತ್ಕಟವಾಗಿದೆಯೆಂದರೆ ಆದಿಮ ಜನಾಂಗಗಳು ಅದಕ್ಕಾಗಿ ಎಂಥಾ ಯಾತನೆಯನ್ನು ಸಹಿಸುವುದಕ್ಕೂ ಹಿಂದೆಗೆಯುವುದಿಲ್ಲ. ಬಣ್ಣದ ಕಲ್ಲುಗಳನ್ನು ತೇದು ಮೈ, ಮುಖಗಳಿಗೆಲ್ಲ ಬಣ್ಣಬಣ್ಣದ ಪಟ್ಟಿಗಳನ್ನು ತೊಡೆದುಕೊಳ್ಳುವುದರಿಂದ ಹಿಡಿದು ಆಳವಾದ ಗಾಯಗಳನ್ನು ಕೊಯ್ದು ಶಾಶ್ವತವಾದ ಗೆರೆಗಳ ಕಲೆಗಳನ್ನು ಮಾಡಿಕೊಳ್ಳುವ ವರೆಗೆ ನಾನಾ ವಿಧದ ರೂಪಗಳನ್ನು ಶೃಂಗಾರದ ಹವ್ಯಾಸ ತಾಳುತ್ತದೆ. 'ಹಚ್ಚೆ' ಚುಚ್ಚಿಸಿಕೊಳ್ಳುವ ರೂಪದಲ್ಲಿ ಇಂದಿನ ನಾಗರಿಕ ಸಮಾಜದಲ್ಲಿಯೂ ಯಾತನಾಪೂರ್ಣ ಶೃಂಗಾರ ಕಲೆ ಜೀವಂತವಾಗಿದೆ.

ಶೃಂಗಾರ ಮಾಡಿಕೊಳ್ಳುವ ಸಂಪ್ರದಾಯ ಆಧುನಿಕ ಜನಾಂಗಗಳು ಯಾವುದನ್ನು ಸೌಂದರ್ಯ ಎಂದು ಕರೆಯುತ್ತವೋ ಆ ಸೌಂದರ್ಯ ಸಾಧಕವೆಂದು ಹೇಳಲು ಸಾಧ್ಯವಿಲ್ಲ. ಅನಾಗರಿಕ ಸಮಾಜದಲ್ಲಿ ಅದು ಒಂದು ತರಹದ ಧಾರ್ಮಿಕ ವಿಧಿ ರೂಪದಲ್ಲಿಯೂ ಪ್ರಕಟವಾಗುತ್ತದೆ. ಜನಾಂಗದ ಮಾಂತ್ರಿಕ ವೈದ್ಯನು ಸಮಾರಂಭಗಳಲ್ಲಿ ಹಾಕಿಕೊಳ್ಳುವ ವೇಷಗಳನ್ನು ಉದಾಹರಿಸಬಹುದು. ಲೈಂಗಿಕ ರಹಸ್ಯವಾದವೂ ಅದರಲ್ಲಿ ಅಡಕವಾಗಿದೆ. ದಕ್ಷಿಣ ಅಮೇರಿಕ ಮತ್ತು ಆಫ್ರಿಕದ ಮೂಲ ನಿವಾಸಿಗಳ ಸಾಮೂಹಿಕ ಶೃಂಗಾರ ನೃತ್ಯಗಳಲ್ಲಿ ಶರೀರವನ್ನು ಗಂಡು ಹೆಣ್ಣುಗಳೆರಡೂ ಚಿತ್ರವಿಚಿತ್ರವಾಗಿ ಅಲಂಕರಿಸಿಕೊಳ್ಳುವುದು ಅನಿವಾರ್ಯ ವಿಧಿಯಾಗಿದೆ. ಒಟ್ಟಿನ ಮೇಲೆ ಅದರ ಉದ್ದೇಶ ಕಲಾವಿಲಾಸವೆನ್ನುವುದಕ್ಕಿಂತಲೂ ಸಂಮೋಹಕ (hypnotic) ಎಂದು ಹೇಳಬಹುದು. ಮಾಂತ್ರಿಕನಾಗಿರಲಿ, ಹೆಣ್ಣು-ಗಂಡಾಗಿರಲಿ ಬರಲಿರುವ ಚಿಕಿತ್ಸೆ ಅಥವಾ ಕಾಮ ಕ್ರಿಯೆಯಲ್ಲಿ ಸಂಬಂಧಪಟ್ಟವರು ಕೆಲ ಕ್ಷಣಗಳ ವರೆಗೆ ಉಳಿದೆಲ್ಲವನ್ನು ಮರೆಯುವ ಒಂದು ಬಗೆಯ ಮಂತ್ರ ಮುಗ್ಧತೆಯನ್ನು ಸಾಧಿಸಿ ಪರಮ ಏಕಾಗ್ರತೆಯ ಅವಸ್ಥೆಯಲ್ಲಿ ಅವರನ್ನು ತಲ್ಲೀನಗೊಳಿಸುವುದು ಈ ವಿಭ್ರಮದ ಉದ್ದೇಶವಾಗಿರಬೇಕು.


ಶೃಂಗಾರ ವಿಧಾನಗಳು ಕೊರಳಿನ ಮೇಲಿನ ಭಾಗದ ಅವಯವಗಳಿಗೆ ಅನ್ವಯಿಸಿ ವ್ಯಾಪಿಸಿದಷ್ಟು ಬೇರೆ ಅವಯವಗಳಿಗೆ ವ್ಯಾಪಿಸಿಲ್ಲ. ಮುಂದಿನ ಪುಟಗಳಲ್ಲಿ ವಿವಿಧ ಜನಾಂಗಗಳಲ್ಲಿ ಪ್ರಚಲಿತವಾಗಿರುವ ಮುಖ ಮತ್ತು ಶಿರಃ ಶೃಂಗಾರ ವೈವಿಧ್ಯಗಳನ್ನು ತೋರಿಸಿದೆ:

(೧) ಭಾರತದ ನೇಫಾ ಪ್ರದೇಶದ ಅಪಾ ತಾನೀ ಜನಾಂಗದ ತರುಣಿ. (೨) ಅಮೇರಿಕದ ಅರಿಜೋನಾ ರಾಜ್ಯದ ಹೋಪಿ ಮೂಲ ನಿವಾಸಿಗಳಲ್ಲಿ ಅವಿವಾಹಿತ ತರುಣಿಯರ ಶಿರೋಲಂಕಾರ. (೩) ಕಾಂಗೋ (ಆಫ್ರಿಕ) ಅಜಂದೇ ಜನಾಂಗದವರ ಮುಖ ಮತ್ತು ಶಿರೋಲಂಕಾರ (ತಲೆ ಬೋಳಿಸಿ ಹಕ್ಕಿ ಗರಿಗಳ ತಲೆದುಂಡುಗೆ ಧರಿಸುತ್ತಾರೆ.) (೪) ನ್ಯೂಗಿನಿಯ ತರುಣನ ಊರ್ಧ್ವ ಕೇಶ ಕಲಾಪ. (೫) ಮೊರಕ್ಕೋವಿನ ಮರಾಕೇಶ್ ಜನಾಂಗದ ಹೆಂಗಳೆಯರು ಧರಿಸುವ ಬುರಕಾ ಒಂದು ಅಲಂಕಾರವಾಗಿಯೇ ಯೋಜಿಸಲಾಗಿದೆ. (೬) ಮೆಕ್ಸಿಕೋ (ಮಧ್ಯ ಅಮೇರಿಕ) ಅಜ್‌ಟೆಕ್ ನರ್ತಕನ ವೇಷ. (೭) ನೈಜೀರಿಯ (ಆಫ್ರಿಕ) ಫಿಲಿಪೈನ್ಸ್‌ನ ಉತ್ತರ ಲುಜಾನ್ ಪ್ರಾಂತದ ನಿವಾಸಿಗಳ ಶಿರಸ್ತ್ರಾಣ. (೮) ಕಾಂಗೋವಿನ ಹೆಂಗಸು ಮೇಲ್ತುಟಿಯಲ್ಲಿ ಒಂದು ಚಕ್ರವನ್ನು ತೊಟ್ಟಿದ್ದಾಳೆ. ಇದು ತರುಣಿಯರಲ್ಲಿ ಕೆಲ ಕಾಲ ಹಿಂದೆ ಬಹಳ ಫ್ಯಾಶನೇಬಲ್ ಎನಿಸಿತ್ತು. (೯) ಜಪಾನಿನ ಕಾಸ್ಸಾಯಿ ನಾರಿಯ ಅಲಂಕ್ರಿಯೆ.


ಮುಖ
ಶೃಂಗಾರ









ಹೂವರ್ ಅಣೆಕಟ್ಟು

ನಾಗೇಶ ಹೆಗಡೆ

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಬಗೆಗೆ ಸಾಮಾನ್ಯ ಜ್ಞಾನವಿರುವವರೆಲ್ಲ ಕೊಲರಾಡೊ ನದಿಯ ಹೆಸರನ್ನು ಕೇಳಿರಲೇಬೇಕು. ೧೪೦೦ ಮೈಲು ಉದ್ದವಿರುವ ಇದು ಅಮೇರಿಕದ ಅತ್ಯಂತ ಭಯಾನಕ ನದಿ. ಅತಿ ಶೀತ ಪ್ರದೇಶದಲ್ಲಿ ಉಗಮವಾಗಿ, ಅತಿ ಆಳವಾದ ಕಂದರಗಳಲ್ಲಿ ಹರಿದು, ಅತಿ ಉಷ್ಣವಾದ ಮರುಭೂಮಿಯನ್ನು ದಾಟಿ, ಕ್ಯಾಲಿಫೋರ್ನಿಯ ಆಖಾತದಲ್ಲಿ ಶಾಂತ ಸಾಗರ ಸೇರುವ ಈ ನದಿಯ ಪಕ್ಕದಲ್ಲಿ ವಾಸಿಸುವವರಿಗೆ ಯಾವಾಗಲೂ ಕಷ್ಟವನ್ನು ಎದುರಿಸುತ್ತಲೇ ಇರಬೇಕಾಗುತ್ತಿತ್ತು. ಒಮ್ಮೆ ಹಿಮಕರಗಿ ಹಿಗ್ಗಿ ಮಹಾಪೂರವಾದರೆ ಇನ್ನೊಮ್ಮೆ ನೀರಿಲ್ಲದೆ ಕುಗ್ಗಿ ಬರಗಾಲ ಇಷ್ಟಿದ್ದರೂ ಈ ಕೊಲರಾಡೊವಿನ ಪೂರ್ವಾಪರಗಳನ್ನು ತಿಳಿಯುವ ಗೋಜಿಗೆ ೧೮೬೯ ವರೆಗೆ ಯಾರೂ ಹೋಗಿರಲಿಲ್ಲ. ಆ ಮೇಲೆ ಜಾನ್ ಪಾವೆಲ್ ಎಂಬಾತ ನದಿಯ ಗುಂಟ ೧೦೦೦ ಮೈಲು ಸಾಗಿ, ಪ್ರಸಿದ್ಧವಾದ ಬಣ್ಣ ಬಣ್ಣದ ಕಲ್ಲುಗಳಿಂದ ಕಂಗೊಳಿಸುವ "ಗ್ರ್ಯಾಂಡ್ ಕ್ಯಾನಿಯನ್" ಕಣಿವೆಯ ನಕ್ಷೆ ತೆಗೆದು, ಜಗತ್ತಿಗೊಂದು ಹೊಸ ಸೋಜಿಗವನ್ನು ತೋರಿಸಿಕೊಟ್ಟ. ಈ ನದಿಯ ಪ್ರವಾಹದಿಂದಲೆ ನಿರ್ಮಿತವಾದ 'ಗ್ರ್ಯಾಂಡ್ ಕ್ಯಾನಿಯನ್' ಕಂದರ ೪ ರಿಂದ ೧೮ ಮೈಲುಗಳ ವರೆಗೆ ಅಗಲವಾಗಿದ್ದು, ೨೧೭ ಮೈಲು ಉದ್ದ ಹಾಗೂ ಒಂದು ಮೈಲು ಆಳವಾಗಿದೆ.

ವರ್ಷ ವರ್ಷವೂ ಈ ನದಿಯ ತೀರದಲ್ಲಿನ ಪ್ರದೇಶಗಳ ಜನರ ಆಕ್ರೋಶ ಹೆಚ್ಚಿದಂತೆ ಅದಕ್ಕೊಂದು ಅಣೆಕಟ್ಟಿನ ಅವಶ್ಯಕತೆ ಇದೆಯೆಂದು ಅಮೇರಿಕದ ಸರಕಾರಕ್ಕೆ ಅನ್ನಿಸತೊಡಗಿತು. ಪಾವೆಲ್‌ನಂತಹ ಉಗ್ರ ಬರಹಗಾರರೂ ಮುಂದಾಳುಗಳೂ ಬಹಳ ಶ್ರಮಿಸಿದ ನಂತರವೇ ಸರಕಾರ ಅಂತಿಮ ನಿರ್ಧಾರ ಕೈಕೊಂಡದ್ದು. ಅಂತೂ ಕೊನೆಗೊಮ್ಮೆ ಅಂಜುತ್ತ ಅಂಜುತ್ತ ಹರ್ಬರ್ಟ್ ಹೂವರ್ ಅವರ ನೇತೃತ್ವದಲ್ಲಿನ ಸರಕಾರ ೧೯೩೦ ರಲ್ಲಿ ಈ ಅಪಾಯಕಾರಿ ನದಿಗೊಂದು ಅಣೆಕಟ್ಟು ಕಟ್ಟಲು ನಿರ್ಧರಿಸಿತು.

ಅದು ಸುಲಭದ ಕೆಲಸವಾಗಿರಲಿಲ್ಲ. ಅದು ಜಗತ್ತಿನ ಅತಿ ದೊಡ್ಡ ಇಂಜಿನಿಯರಿಂಗ್ ಕಾರ್ಯವೆಂದು ಪರಿಗಣಿಸಲ್ಪಟ್ಟ ಕಾಲ ಅದಾಗಿತ್ತು. ಮಹಾಪೂರವನ್ನು ತಡೆಗಟ್ಟುವುದು, ನೀರಾವರಿಯ ಅನುಕೂಲ ಕಲ್ಪಿಸುವುದು, ಸುತ್ತಲಿನ ದೊಡ್ಡ ಪಟ್ಟಣಗಳಿಗೆ ವಿದ್ಯುತ್ ಸೌಕರ್ಯ ಒದಗಿಸುವುದು ಬಹಳ ರೇವೆಮಣ್ಣು ಸಂಗ್ರಹವಾಗದಂತಹ ಆಳ ಜಲಾಶಯ ನಿರ್ಮಿಸುವುದು, ಇದ್ದೊಂದೇ ಅಣೆಕಟ್ಟಿನಿಂದ ಸಾಧಿಸಬೇಕಾಗಿತ್ತು. ಕೆಲಸ ಪ್ರಾರಂಭವಾಗುವ ಮುಂಚೆಯೇ ಸುತ್ತಲಿನ ಏಳು ರಾಜ್ಯಗಳಲ್ಲಿ ನೀರಿನ ನ್ಯಾಯವಾದ ಹಂಚಿಕೆಯ ಬಗೆಗೆ ತೊಡಕುಗಳುಂಟಾಗತೊಡಗಿದುವು. ಅಮೇರಿಕದ ಕೇಂದ್ರ ಸರಕಾರಕ್ಕಂತೂ ತಾನು ತೊಡಗಿಸಬೇಕಾದ

"ಸ್ಪಾನ್" ಆಧಾರದಿಂದ

ಅಪಾರ ಹಣ ಮರಳಿ ಬಂದೀತೆಂಬ ವಿಶ್ವಾಸವೂ ಇರಲಿಲ್ಲ. ಆವೇಳೆ ಆರು ಬೃಹತ್ ಕಂಪನಿಗಳು ತಮ್ಮ ಅಪಾರ ಸಂಪತ್ತನ್ನು ಈ ಅದ್ಭುತ ಕಾರ್ಯಕ್ಕೆ ವೆಚ್ಚ ಮಾಡಲು ಸಿದ್ಧವಾದಾಗ ಜಗತ್ತಿನ ಕುತೂಹಲವನ್ನು ಸೆಳೆಯುವ "ಹೂವರ್ ಡ್ಯಾಮ್"ನ ನಿರ್ಮಾಣ ಕಾರ್ಯ ಆರಂಭವಾಯಿತು.

ಈ ಅಣೆಕಟ್ಟಿನ ಯಶಸ್ಸಿಗಾಗಿ ತಮ್ಮ ತನು ಮನಗಳನ್ನು ಅರ್ಪಿಸಿದ ಸಹಸ್ರಾರು ಜನ ಎಂಜಿನಿಯರರುಗಳಲ್ಲಿ ಇಬ್ಬರ ಹೆಸರನ್ನು ಇಲ್ಲಿ ನಮೂದಿಸಲೇಬೇಕು. ಅವರಲ್ಲೊಬ್ಬರು ಅಣೆಕಟ್ಟುಗಳ ವಿನ್ಯಾಸ ರಚಿಸುವಲ್ಲಿ ಅಪ್ರತಿಮರೆಂದು ಜಗದ್ವಿಖ್ಯಾತರಾಗಿದ್ದ ಡಾ. ಜಾನ್ ಸವೇಜ್. ಅವರ ಕೌಶಲ್ಯಪೂರ್ಣ ವಿನ್ಯಾಸಗಳು ಅಮೇರಿಕದ ಬಹುತೇಕ ಎಲ್ಲ ಅತಿದೊಡ್ಡ ಅಣೆಕಟ್ಟುಗಳ ನಿರ್ಮಾಣಕ್ಕೂ ಆಧಾರವಾಗಿದ್ದವು (ಭಾರತದ ಭಾಕ್ರಾ ಅಣೆಕಟ್ಟಿನ ಸಲಹೆಗೂ ಅವರನ್ನೇ ಕರೆಸಲಾಗಿತ್ತು). ಮತ್ತೊಬ್ಬರು ಹಾರ್ವೆ ಸ್ಲೋಕಮ್. ಹಣ ತೊಡಗಿಸಿದ ಆರೂ ಕಂಪನಿಗಳ ಪರವಾಗಿ ನಿರ್ಮಾಣ ಅಧಿಕಾರಿಯಾಗಿ ಕೆಲಸ ಮಾಡಿದ ಇವರು ಸಟ್ಲೆಜ್ ನದಿಗೆ ಕಟ್ಟಿದ ಭಾಕ್ರಾ ಅಣೆಕಟ್ಟಿನ ನಿರ್ಮಾಣದ ಕಾಲದಲ್ಲಿ ಮುಖ್ಯ ಮೇಲ್ವಿಚಾರಕರಾಗಿದ್ದರು. ಕೆಲಸ ಪೂರ್ತಿಯಾದಾಗ ಭಾರತ ಸರಕಾರದಿಂದ ಇವರಿಬ್ಬರೂ ಸನ್ಮಾನಿತರಾದರು.

ಹೂವರ್ ಯೋಜನೆಯು ಪ್ರಾರಂಭವಲ್ಲಿ ಅಮೇರಿಕ ಆರ್ಥಿಕ ಮುಗ್ಗಟ್ಟಿನಲ್ಲಿತ್ತು. ದೇಶದ ನಾನಾ ಭಾಗಗಳಿಂದ ಕೆಲಸ ಹುಡುಕಿಕೊಂಡು ಬರುವವರಿಗಾಗಿ ಅಲ್ಲೊಂದು ಹೊಸ ಪಟ್ಟಣವನ್ನೇ ನಿರ್ಮಿಸಲಾಯಿತು. ಆಧುನಿಕ ಗೃಹಗಳು ತಲೆಯೆತ್ತಿದವು; ಕೈದೋಟ, ಉದ್ಯಾನವನಗಳು ನಿರ್ಮಾಣವಾದವು. ಅಂತೂ ವಿಸ್ಮಯಕಾರಕವಾಗಿ ಅತಿ ಕಡಿಮೆ ಅವಧಿಯಲ್ಲೇ ಸ್ಕೂಲು, ಚರ್ಚು, ಅಂಗಡಿ ಸಿಮೆಂಟ್ ರೋಡುಗಳಿಂದ ಸುಸಜ್ಜಿತವಾದ "ಬೋಲ್ಡರ್ ಸಿಟಿ" (Boulder city) ನೆವಾಡಾದಲ್ಲಿ ನಿರ್ಮಾಣವಾಯಿತು. ಆ ಪಟ್ಟಣಕ್ಕೆ ಬೇಕಾದ ವಿದ್ಯುತ್ತು ೨೨೨ ಮೈಲು ದೂರದ



ಶಾಂತಸಾಗರ ತೀರದಿಂದ ಸರಬರಾಜಾಗ ತೊಡಗಿತು. ರಾಜಮಾರ್ಗಗಳೂ ರೈಲು ಮಾರ್ಗಗಳೂ ಆ ಮರುಭೂಮಿಯಲ್ಲಿ ಒಡಮೂಡಿದವು. ಆ ದೇಶದ ದೊಡ್ಡ ದೊಡ್ಡ ಔದ್ಯೋಗಿಕ ಕೇಂದ್ರಗಳಿಂದ ಸಿಮೆಂಟು, ಉಕ್ಕು ಹಾಗೂ ಇತರ ಯಂತ್ರಸಾಮಗ್ರಿಗಳು ಅವಿರತವಾಗಿ ಪೂರೈಕೆಯಾಗತೊಡಗಿದವು.

ಅಣೆಕಟ್ಟಿನ ನಿವೇಶನದಲ್ಲಿಯ ನೀರನ್ನು ಖಾಲಿ ಮಾಡುವುದೇ ದೊಡ್ಡ ಸಮಸ್ಯೆಯಾಗಿತ್ತು. ಇದಕ್ಕಾಗಿ ಪಕ್ಕದ ಆಳವಾದ ಕಣಿವೆಯ "ಗೋಡೆ"ಗಳ ಮೂಲಕ ನಾಲ್ಕು ದೊಡ್ಡ ಸುರಂಗಗಳನ್ನು ತೋಡಬೇಕಾಯಿತು. ೧೯೩೧ ಜೂನ್‌ನಲ್ಲಿ ಪ್ರಾರಂಭವಾದ ಈ ಕಾರ್ಯ ೧೯೩೨ರ ನವೆಂಬರ್‌ದಲ್ಲಿ ಮುಕ್ತಾಯವಾಯಿತು. ೫೬ ಫೂಟುಗಳಷ್ಟು ವ್ಯಾಸವಿರುವ ಈ ನಾಲ್ಕು ಸುರಂಗಗಳ ಒಟ್ಟು ಉದ್ದ ಸುಮಾರು ಮೂರು ಮೈಲು. ಪಾಯ ತೋಡಬೇಕಾಗಿದ್ದ ಸ್ತರಗಳನ್ನು ಒಣದಾಗಿ ಇಡುವ ಉದ್ದೇಶದಿಂದ ಈ ಸುರಂಗಗಳ ಕೆಳಬದಿಗೆ ತಾತ್ಕಾಲಿಕವಾಗಿ ಎರಡು "ತಡೆಗಟ್ಟು" (cofferdams) ಗಳನ್ನು ನಿಲ್ಲಿಸಲಾಯಿತು.

ನಿಜವಾದ ಸಮಸ್ಯೆಗಳು ಪ್ರಾರಂಭವಾದದ್ದು ಈ ಎಲ್ಲ ಪೂರ್ವಭಾವಿ ಕ್ರಮಗಳನ್ನು ಕೈಕೊಂಡ ಮೇಲೆಯೇ. ಅಗಾಧ ಸಾಮರ್ಥ್ಯವುಳ್ಳ ಅಣೆಕಟ್ಟನ್ನು ನಿರ್ಮಿಸಬೇಕಾದರೆ ಅದನ್ನು ಪೂರ್ತಿ ಕಾಂಕ್ರೀಟಿನಲ್ಲಿಯೇ ಎರಕ ಹೊಯ್ಯಬೇಕಾಗಿತ್ತು. ಇದು ಸುಲಭದ ಕಾರ್ಯವಲ್ಲ. ಕಾಂಕ್ರೀಟು ಹೆಪ್ಪುಗಟ್ಟುವಾಗ ಉತ್ಪನ್ನವಾದ ಶಾಖ ಬಹು-ಕಾಲದ ವರೆಗೆ ಇರುತ್ತದೆ ಕಾಂಕ್ರೀಟು ಕ್ರಮೇಣ ಘನೀಭೂತವಾದರೂ ಶಾಖವನ್ನು ಹಾಗೇ ಉಳಿಯಗೊಟ್ಟರೆ ಪೂರ್ತಿ ಕಟ್ಟಡ ತಂಪಾಗಲು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲಾವಧಿ ಬೇಕು. ಹೀಗಾಗುವಾಗ ಇಡೀ ಅಣೆಕಟ್ಟು ಕ್ರಮೇಣ ಸಂಕುಚಿತಗೊಂಡು ಅಸಂಖ್ಯ ಬಿರುಕುಗಳುಂಟಾಗುವ ಭಯವೂ ಇತ್ತು. ಈ ಸಮಸ್ಯೆಯನ್ನು ನಿವಾರಿಸಲು ಹೂವರ್ ಯೋಜನೆಯ ಎಂಜಿನಿಯರರು ಹೊಸ ಉಪಾಯವನ್ನು ಹುಡುಕಿದರು. ಸ್ತಂಭಾಕೃತಿಯ ಅಚ್ಚು (Block) ಗಳಲ್ಲಿ ಒಂದೊಂದೇ ಬಕೆಟ್ ಕಾಂಕ್ರೀಟನ್ನು ಸುರುವಿ, ತಕ್ಷಣ ಅದನ್ನು ತಂಪುಗೊಳಿಸಲು ಅಚ್ಚುಗಳಲ್ಲಿ ಹುದುಗಿಸಿಟ್ಟ ನಳಿಗೆಗಳ ಮೂಲಕ ಹಿಮಶೀತಲ ನೀರನ್ನು ಹಾಯಿಸಿದರು. ಅನಂತರ ಒಂದೊಂದು ಅಚ್ಚು ತಂಪಾಗಿ ಸಂಕುಚಿತಗೊಂಡು ಬಿರುಕುಗಳು ಗೋಚರಿಸುವವರೆಗೆ ಕಾಯ್ದು ಆಮೇಲೆ ಆ ಬಿರುಕುಗಳಲ್ಲಿ ಸಿಮೆಂಟ್‌ಗಾರೆಯನ್ನು ಸುರುವಿ ಮುಚ್ಚಲಾಯಿತು. ಅಂತೂ ಕೊನೆಗೊಮ್ಮೆ ಈ ೭೦ ಲಕ್ಷ ಟನ್ ಭಾರದ ದೈತ್ಯಾ-ಕೃತಿಯು ಶೀತಲವಾಗಿ ಒಂದಚ್ಚಿನಲ್ಲಿ ನಿರ್ಮಿತಗೊಂಡಿತು

ಆದರೆ ಅವರ ಸಾಹಸ ಇಷ್ಟಿಗೇ ಮುಗಿಯಲಿಲ್ಲ. ಜಲಾಶಯದ ಯಾವ ಮೂಲೆಯಲ್ಲಿಯೂ ಹನಿ ನೀರು ಒಸರದಂತೆ ಪ್ರತಿಯೊಂದು ಬಿರುಕನ್ನೂ ತೂತನ್ನೂ ಹುಡುಕಿ ಅವುಗಳನ್ನು ಮುಚ್ಚ



ಈ ಬ್ಯಾಟ್ ಸರಿಹೋಗುತ್ತೆ...ಗಟ್ಸ್ ಬೇಡಾ

ಬೇಕಾಯಿತು. ಇದಕ್ಕಾಗಿ ೮೫೦ ಲಕ್ಷ ಪೌಂಡುಗಳಷ್ಟು ಉಕ್ಕು ಹಾಗೂ ೫೦ ಲಕ್ಷ ಬ್ಯಾರೆಲ್ ಸಿಮೆಂಟನ್ನು ಬಳಸಬೇಕಾಯಿತು. ಒಟ್ಟಿನಲ್ಲಿ ಈ ಅಸಾಮಾನ್ಯ ಅಣೆಕಟ್ಟಿಗೆ ಹತ್ತು ಕೋಟಿ ಹನ್ನೆರಡು ಲಕ್ಷ ಐವತ್ತುಸಾವಿರ ಘನಫೂಟಿನಷ್ಟು ಕಾಂಕ್ರೀಟನ್ನು ಬಳಸಬೇಕಾಯಿತು! ಈ ಪರಿಮಾಣದಲ್ಲಿ ನೂರು ಚದರಡಿ ಕ್ಷೇತ್ರದ ಎರಡೂವರೆ ಮೈಲು ಎತ್ತರದ ಒಂದು ಸ್ಮಾರಕ ಸ್ತಂಭವನ್ನು ನಿರ್ಮಿಸಬಹುದಿತ್ತು! ಅಷ್ಟೇಕೆ, ತ್ರಿಕೋನಾಕೃತಿಯಲ್ಲಿ ದಿಲ್ಲಿ—ಬೊಂಬಾಯಿ—ಕಲ್ಕತ್ತ—ದೆಲ್ಲಿ ನಗರಗಳನ್ನು ಜೋಡಿಸುವ ಒಂದು ಬೃಹತ್ ರಾಜಮಾರ್ಗವನ್ನು ರಚಿಸಬಹುದಿತ್ತು!

ಈಜಿಪ್ಟಿನ ಅತಿದೊಡ್ಡ ಪಿರಾಮಿಡ್‌ಗಿಂತಲೂ ಎತ್ತರವಾದ ಹೂವರ್ ಡ್ಯಾಮ್ ೭೨೬ ಅಡಿಗಳಷ್ಟಿದೆ. ಅರವತ್ತು ಅಂತಸ್ತಿನ ಗಗನ ಚುಂಬಿ ಕಟ್ಟಡವನ್ನು ಎತ್ತರದಲ್ಲಿ ಮೀರಿಸಬಲ್ಲ ಈ ಅಣೆಕಟ್ಟಿನ ತಳ ೬೬೦ ಅಡಿಗಳಷ್ಟು ಅಗಲವಾಗಿದೆ. ಅಂದರೆ ಅದು ಒಟ್ಟು ಎರಡು ಫುಟ್‌ಬಾಲ್ ಬಯಲುಗಳಷ್ಟು ಉದ್ದವಾಗಿದೆ! ಈ ಅಣೆಕಟ್ಟಿನ ಹಿಂದಿರುವ ಜಲಾಶಯದ ಕ್ಷೇತ್ರಫಲ ೨೫೫ ಚದುರ ಮೈಲುಗಳಷ್ಟಿದ್ದು. ಹೋಲಿಕೆಯಲ್ಲಿ ಇಡೀ ಪಂಜಾಬ ರಾಜ್ಯವನ್ನು ಒಂದಡಿ ನೀರಿನಲ್ಲಿ ಮುಳುಗಿಸುವಷ್ಟು ನೀರನ್ನು ಅಲ್ಲಿ ಶೇಖರಿಸಬಹುದು. ಈ ಜಲಾಶಯ ೧೧೫ ಮೈಲು ಉದ್ದವಿದ್ದು ೫೫೦ ಮೈಲು ಉದ್ದದ ದಡವನ್ನು ನಿರ್ಮಿಸಿಕೊಂಡಿದೆ.

ಇಂದು ಹೂವರ್ ಡ್ಯಾಮಿನ ಜಲವಿದ್ಯುತ್ ಕೇಂದ್ರವು ಅರಿಜೋನಾ, ನೇವಡಾ ಹಾಗೂ ಕ್ಯಾಲಿಫೋರ್ನಿಯಾ ರಾಜ್ಯಗಳ ಪ್ರತಿಯೊಂದು ಮನೆಗೆ, ಉದ್ಯಮ ಕೇಂದ್ರಕ್ಕೆ ಬೆಳಕನ್ನೂ ಶಕ್ತಿಯನ್ನೂ ಪೂರೈಸುತ್ತದೆ. ವಿದ್ಯುತ್ತಿನಿಂದ ಸಂಪಾದ್ಯವಾಗುವ ಹಣ, ಅಣೆಕಟ್ಟಿನ ರಿಪೇರಿ ಹಾಗೂ ಮೇಲ್ವಿಚಾರಣೆಯ ವೆಚ್ಚವನ್ನು ಕಳೆದು ಇನ್ನು ಐವತ್ತು ವರ್ಷಗಳಲ್ಲಿ ಅಮೇರಿಕ ಸರಕಾರ ತೊಡಗಿಸಿದ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸುವುದು. ಈ ಅಣೆಕಟ್ಟಿನ ಮೀಡ್ ಜಲಾಶಯವು (Lake Mead) ರಾಷ್ಟ್ರೀಯ ವಿಹಾರ ಕೇಂದ್ರವೆಂದು ಸರಕಾರದಿಂದ ಮನ್ನಣೆಪಡೆದಿದ್ದು, ಪ್ರತಿವರ್ಷ ಲಕ್ಷಗಟ್ಟಲೆ ಪ್ರವಾಸಿಕರನ್ನು ಆಕರ್ಷಿಸುತ್ತದೆ.

ಮಾನವ ತನ್ನ ದೃಢ ಸಂಕಲ್ಪದಿಂದ ನಿಸರ್ಗದ ಹುಚ್ಚಾಟಗಳಿಗೆ ಸಂಕೋಲೆ ಹಾಕಿ ಪಳಗಿಸಬಲ್ಲನೆಂಬುದನ್ನು ಹೂವರ್ ಡ್ಯಾಮಿನ ಕೆಲಸಗಾರರು ಪ್ರದರ್ಶಿಸಿದ್ದಾರೆ. ೧೯೩೦ ರ ದಶಕದ ಆರ್ಥಿಕ ಮುಗ್ಗಟ್ಟಿನಲ್ಲಿಯೂ ನಿಶ್ಚಿತ ಅವಧಿಗಿಂತ ಕೇವಲ ಎರಡು ವರ್ಷ ಮೊದಲಾಗಿ ಮುಕ್ತಾಯವಾದ ಈ ಎಂಜಿನಿಯರಿಂಗ್ ಅದ್ಭುತ ಅಮೇರಿಕದ ಜನತೆಗಷ್ಟೆ ಅಲ್ಲ. ಸಮಸ್ತ ಮಾನವ ಕುಲಕ್ಕೇ ಹೆಮ್ಮೆಯ ಸಂಗತಿಯಾಗಿದೆ. ▲

ಕೃಪಣನಂಥ ದಾನಿ ಲೋಕದಲ್ಲೇ ಇಲ್ಲ. ಏಕೆಂದರೆ ತನ್ನ ಧನವನ್ನು ತಾನು ಮುಟ್ಟದೇ ಎಲ್ಲವನ್ನೂ ಪರರಿಗಾಗಿ ಬಿಟ್ಟು ಹೋಗುತ್ತಾನೆ.

—ಮಹಾಭಾರತ

ಯಾವ ಮನುಷ್ಯನಾದರೂ ಹೃತ್ಪೂರ್ವಕವಾಗಿ ಅಪೇಕ್ಷಿಸಿದರೆ ದೈವೀ ವಾಣಿಯನ್ನು ಕೇಳಬಲ್ಲ. ಏಕೆಂದರೆ ಆ ವಾಣಿ ಅವನೊಳಗೇ ಇದೆ.

—ಮಹಾತ್ಮಾ ಗಾಂಧಿ

ದೊಡ್ಡವರ ಸಣ್ಣ ಕತೆಗಳು

ಕಾಶಿಯಲ್ಲಿ ಗಂಗೆಯಲ್ಲಿ ಸ್ನಾನ ಮಾಡುತ್ತಿದ್ದಾಗ ಕಲಕತ್ತೆಯ ಪ್ರಸಿದ್ಧ ಬಂಗಾಲಿ 'ಪ್ರವಾಸಿ' ಮತ್ತು ಇಂಗ್ಲಿಷ್ 'ಮಾಡರ್ನ್' ರಿವ್ಯೂ ಸಂಪಾದಕರಾದ ರಾಮಾನಂದ ಚಟರ್ಜಿಯವರು ಅಕಸ್ಮಾತ್ತಾಗಿ ಕಾಲುಜಾರಿ ಬಿದ್ದು ನದಿಯಲ್ಲಿ ಮುಳುಗತೊಡಗಿದರು. ಅವರೊಟ್ಟಿಗೆ ಸ್ನಾನಮಾಡುತ್ತಿದ್ದ ಜನ ಸಾಕಷ್ಟು ಹಾಹಾಕಾರವನ್ನು ಮಾಡಿದರೂ ನೀರಿಗೆ ಧುಮುಕಿ ಅವರನ್ನು ಉಳಿಸುವ ಧೈರ್ಯ ಒಬ್ಬರಿಗೂ ಬರಲಿಲ್ಲ. ಅಷ್ಟರಲ್ಲಿ ಸಾಹಸಿ ತರುಣನೊಬ್ಬ ಜೀವದ ಹಂಗು ತೊರೆದು ಗಂಗೆಯಲ್ಲಿ ಧುಮುಕಿ ಆ ವೃದ್ಧರನ್ನು ಮೇಲೆತ್ತಿದ.

ಜೀವ ಉಳಿಸಿದ್ದಕ್ಕಾಗಿ ಅವರು ಕೃತಜ್ಞತೆಗಳನ್ನು ಸಲ್ಲಿಸುತ್ತ, "ಹುಡುಗಾ, ನಿನಗೇನು ಬೇಕು. ಸಂಕೋಚವಿಲ್ಲದೆ ಹೇಳು, ಕೊಟ್ಟುಬಿಡುತ್ತೇನೆ." ಎಂದರು.

"ಏನೂ ಬೇಡ, ರಾಯರೆ, ನಿಮ್ಮನ್ನು ಉಳಿಸುವುದು ನನ್ನ ಕರ್ತವ್ಯವೇ ಆಗಿತ್ತು. ಅದಕ್ಕೇಕೆ ಪ್ರತಿಫಲ ?" ಎಂದು ಆತ ಪ್ರತಿಫಲವನ್ನು ತೆಗೆದುಕೊಳ್ಳಲು ಒಪ್ಪಲೇ ಇಲ್ಲ. ಕೊನೆಗೆ. ಚಟರ್ಜಿಯವರು ತಮ್ಮ ಹೆಸರು. ವಿಳಾಸ ಬರೆದ ಕಾಗದವನ್ನು ಕಿಸೆಯಿಂದ ತೆಗೆದುಕೊಡುತ್ತ, "ಕಲಕತ್ತೆಗೆ ಬಂದಾಗ ಭೆಟ್ಟಿಯಾಗು. ಸಹಾಯಮಾಡುತ್ತೇನೆ," ಎಂದು ಹೇಳಿ ಹೊರಟುಹೋದರು.

ಇದಾದ ಅನೇಕ ವರ್ಷಗಳ ನಂತರ ಆ ಯುವಕ ಕಲಕತ್ತೆಗೆ ಹೋಗಿ ಆ ವೃದ್ಧರನ್ನು ಭೆಟ್ಟಿಯಾದ.

"ಹೇಳು ತಮ್ಮಾ. ನಿನಗೇನು ಬೇಕು." ಎಂದವರು ವಾತ್ಸಲ್ಯಪೂರ್ಣ ಧ್ವನಿಯಿಂದ ಕೇಳಿದರು.

ಆಗಂತುಕ ಕೆಲ ಕಾಗದಗಳನ್ನು ತೆಗೆದುಕೊಡುತ್ತ, "ನಾನು ಕೆಲವು ಕವಿತೆಗಳನ್ನು ಬರೆದಿದ್ದೇನೆ. ದಯವಿಟ್ಟು 'ಪ್ರವಾಸಿ'ಯಲ್ಲಿ ಪ್ರಕಟಿಸಬೇಕು," ಎಂದು ಹೇಳಿದ.

ಒಂದು ಸಾಲನ್ನೂ ಬಿಡದೆ ಆತ ಬರೆದುದೆಲ್ಲವನ್ನೂ ಓದಿ, ಅನಂತರ ಚಟರ್ಜಿಯವರು ವಿಷಾದದಿಂದ "ತಮ್ಮಾ, ತಪ್ಪು ತಿಳಿದುಕೊಳ್ಳಬೇಡ. ನೋಡು, ಇವುಗಳನ್ನು ಪತ್ರಿಕೆಯಲ್ಲಿ ಛಾಪಿಸಲಿಕ್ಕಾಗುವುದಿಲ್ಲ." ಎಂದರು. ತರುಣ ಅವರನ್ನು ಇನ್ನೂ ಆಕ್ಷೇಪಕ ದೃಷ್ಟಿಯಿಂದ ನೋಡುತ್ತ ಕುಳಿತ. ಚಟರ್ಜಿ ಮೃದುವಾಗಿ ಹೇಳಿದರು. "ಇದನ್ನು ಪ್ರಕಟಿಸುವುದು ನನ್ನಿಂದಾಗದು. ಬದಲಿಗೆ ನೀನು ನನ್ನನ್ನು ಬೇಕಾದರೆ ಪುನಃ ಗಂಗೆಯಲ್ಲಿ ಮುಳುಗಿಸಿದರೂ ಸರಿಯೆ."

ಈಶ್ವರ ಚಂದ್ರ ವಿದ್ಯಾಸಾಗರರಿಗೆ ಖುದ್ದಾಗಿ ಒಂದು ಪತ್ರವನ್ನೊಪ್ಪಿಸುವುದಕ್ಕಾಗಿ ಯಾರೋ ಒಬ್ಬರು ದೂರದಿಂದ ಒಬ್ಬ ಪೇದೆಯನ್ನು ಕಳಿಸಿದ್ದರು. ಆತ ವಿದ್ಯಾಸಾಗರರಲ್ಲಿಗೆ ಬಂದಾಗ ಅವರು ಉಪ್ಪರಿಗೆಯಲ್ಲಿದ್ದರು. ಕೆಳಗೆ ಯಾರನ್ನೂ ಕಾಣದೆ ಪೇದೆ ಯಾರಾದರೂ ಬರುವುದನ್ನು ನಿರೀಕ್ಷಿಸುತ್ತ ಕುಳಿತ. ಮಧ್ಯಾಹ್ನದ ಬಿಸಿಲಲ್ಲಿ ದಣಿದು ಬಂದಿದ್ದ ಅವನಿಗೆ ಹಾಗೇ ನಿದ್ದೆ ಬಂದುಬಿಟ್ಟಿತು ಕೆಲ ಹೊತ್ತಿನ ನಂತರ ಕೆಳಗಿಳಿದು ಬಂದ ವಿದ್ಯಾಸಾಗರರು ಅವನನ್ನು ನೋಡಿ ಎಚ್ಚರವಾಗದಂತೆ ಮೆಲ್ಲಗೆ ಪತ್ರವನ್ನು ತೆಗೆದುಕೊಂಡು ಓದಿದರು. ಆ ಮೇಲೆ ಬೀಸಣಿಗೆ ತೆಗೆದುಕೊಂಡು ಅವನಿಗೆ ಗಾಳಿ ಹಾಕತೊಡಗಿದರು.

ಅಷ್ಟರಲ್ಲಿ ಅಲ್ಲಿಗೆ ಬಂದ ಅವರ ಮಿತ್ರರೊಬ್ಬರು ಇದನ್ನು ನೋಡಿ ವಿಸ್ಮಿತರಾದರು. "ಈ ಏಳು ರೂಪಾಯಿಯ ಪೇದೆಗೆ ನಿಮ್ಮಂಥ ಮಹಾನುಭಾವರು ಗಾಳಿ ಹಾಕುವುದೆ!" ಎಂದವರು ಉದ್ಗಾರ ತೆಗೆದರು.

ವಿದ್ಯಾಸಾಗರರು ಹೇಳಿದರು : "ಇಲ್ಲಿ ನೋಡಿ. ನಮ್ಮ ತಂದೆ ಏಳು ರೂಪಾಯಿಯ ನೌಕರಿಯನ್ನೇ ಮಾಡುತ್ತಿದ್ದರು. ಒಂದು ದಿನ ಅವರು ನಡುಬಿಸಿಲಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ ಬವಳಿ ಬಂದು ಬೀಳಲಾದರು. ಅವರಿಗೆ ಆಗ ಮಂಡಕ್ಕಿ ಮಾರುವವಳೊಬ್ಬಳು ನೀರು ಕೊಟ್ಟು ಜೀವ ಉಳಿಸಿದ್ದಳು."

ರಾಜಕೀಯ ಕೈದಿಗಳ
ಬಿಡುಗಡೆಗಾಗಿ ಅದು ಶ್ರಮಿಸುತ್ತದೆ

ಆಮ್ನೆಸ್ಟಿ ಇಂಟರ್‌ನ್ಯಾಶನಲ್

ರಾಜಾರಾಮ ಹೆಗಡೆ

೧೯೬೧ರ ಬೇಸಿಗೆ. ಪೂರ್ವ ಜರ್ಮನಿಯ ಪ್ರೊಟೆಸ್ಟಂಟ್ ಹುಡುಗರು ಕೆಲವರು ಬಾಲ್ಟಿಕ್ ಸಮುದ್ರ ದಂಡೆಯಲ್ಲಿ ಬೈಬಲ್ ಅಭ್ಯಾಸಿಗರ ಸಮ್ಮೇಲನದಲ್ಲಿ ಭಾಗವಹಿಸಿ ಮರುಳುವ ಮುನ್ನ ಒಂದು ವಿಹಾರ ನೌಕೆಯಲ್ಲಿ ವಿಹಾರ ಹೊರಟರು. ಅವರು ಡೇನಿಶ್ ಆಡಳಿತದಲ್ಲಿರುವ ಬೋರ್ನ್‌ಹೋಂ ಎಂಬ ಸುಂದರ ದ್ವೀಪಕ್ಕೆ ಹೋಗಬೇಕೆಂದಿದ್ದರು. ಆದರೆ ಹಡಗು ರುಗೆನ್ ಎಂಬ ಜರ್ಮನ್ ಆಳಿಕೆಯಲ್ಲಿರುವ ದ್ವೀಪಕ್ಕೆ ಹೋಗಲಿದೆಯೆಂದು ತಿಳಿಯುತ್ತಲೇ ಆ ಹುಡುಗರು ೧೮ ವರ್ಷದ ಜರ್ಗೆನ್ ವೈಚರ್ಟನ ನೇತೃತ್ವದಲ್ಲಿ ಹಡಗದ ಕ್ಯಾಪ್ಟನ್ನನಿಗೊಂದು ಅರ್ಜಿ ಸಲ್ಲಿಸಿ, ತಮ್ಮನ್ನು ಬೋರ್ನ್‌ಹೋಂಗೆ ಒಯ್ಯಬೇಕೆಂದು ಸವಿನಯ ಮನವಿ ಮಾಡಿಕೊಂಡರು. ಕ್ಯಾಪ್ಟನ್ ತತ್‌ಕ್ಷಣ ಅವರನ್ನು ಬಂಧಿಸಿ ಸೆರೆಯಲ್ಲಿಟ್ಟನು. ದಡಕ್ಕೆ ಮರಳಿದೊಡನೆ ಪೂರ್ವ ಜರ್ಮನಿಯಿಂದ ತಪ್ಪಿಸಿಕೊಂಡು ಓಡಿಹೋಗುವ ಯತ್ನ ಮಾಡಿದರೆಂದು ಆರೋಪಿಸಿ ಆ ಹುಡುಗರನ್ನು ಬೇರೆ ಬೇರೆ ಅವಧಿಯ ಶಿಕ್ಷೆಗೆ ಗುರಿಪಡಿಸಿ ಸೆರೆಮನೆಗಟ್ಟಲಾಯಿತು. ಅವರ ನಾಯಕ ಜರ್ಗೆನ್ನನಿಗೆ ಎಂಟು ವರ್ಷಗಳ ಶಿಕ್ಷೆ ಸಿಕ್ಕಿತು.

ಅಪಾಯಕರಾದ ಹುಡುಗರಿಗೆ ವಿಧಿಸಿದ ಈ ಶಿಕ್ಷೆಯ ಸುದ್ದಿ ಲಂಡನ್ನಿನಲ್ಲಿರುವ ಅಂತಾರಾಷ್ಟ್ರೀಯ ರಾಜಕೀಯ ಕೈದಿಗಳ ವಿಮೋಚನಾ ಸಂಘ (ಆಮ್ನೆಸ್ಟಿ ಇಂಟರ್ ನ್ಯಾಶನಲ್)ಕ್ಕೆ ತಿಳಿಯಲು ತಡವಾಗಲಿಲ್ಲ. ಕೂಡಲೇ ಅದು ತನ್ನೊಬ್ಬ ವಕೀಲನನ್ನು ಬರ್ಲಿನ್ನಿಗೆ ಕಳಿಸಿತು. ವಕೀಲ ಈ ನಿರಪರಾಧಿಗಳ ಬಿಡುಗಡೆಗಾಗಿ ಪೂರ್ವ ಜರ್ಮನ ಕಮ್ಯುನಿಸ್ಟ್ ಅಧಿಕಾರಿಗಳ ಸಂಗಡ ನಡೆಸಿದ ಚರ್ಚೆ ಫಲಕಾರಿಯಾಗಲಿಲ್ಲ. ಈ ವಿಷಯ ಮುಂದು ವರಿಸುವ ಕೆಲಸವನ್ನು ಸಂಘ ತನ್ನ ಪ್ಯಾರೋ ವಿಭಾಗಕ್ಕೆ ಒಪ್ಪಿಸಿತು. ಅವರು ಪೂರ್ವ ಜರ್ಮನಿಯ ಗೃಹಮಂತ್ರಿ, ನ್ಯಾಯಾಂಗಮಂತ್ರಿಗಳಿಂದಾರಂಭಿಸಿ ಎಲ್ಲ ಪ್ರಮುಖ ಅಧಿಕಾರಿಗಳಿಗೂ ಮನವಿ ಕಳಿಸಿದರು. ಪೂರ್ವ ಜರ್ಮನ್ ಪತ್ರಿಕೆಗಳಿಗೆ ಬರೆದರು. ಯುರೋಪಿನಲ್ಲೆಲ್ಲ ಪ್ರಚಾರ ಕೈ ಕೊಂಡ ಫಲವಾಗಿ ಕಮ್ಯುನಿಸ್ಟ್ ಅಧಿಕಾರಿಗಳಿಗೆ ಜಗತ್ತಿನ ಮೂಲೆಮೂಲೆಯಿಂದ ಪತ್ರಗಳು ಬರ ತೊಡಗಿದವು. ಈ ಹುಡುಗರ ಪ್ರಶ್ನೆಗೆ ಅಂತಾ ರಾಷ್ಟ್ರೀಯ ಸ್ವರೂಪ ಬಂದದ್ದರಿಂದ ಜಾಗತಿಕ ಜನಾಭಿಪ್ರಾಯದ ಒತ್ತಡಕ್ಕೆ ಮಣಿದು ಪೂರ್ವ ಜರ್ಮನಿಯ ಸರಕಾರ ಆ ಹುಡುಗರನ್ನು ೧೯೬೩ ಅಕ್ಟೋಬರದಲ್ಲಿ ಬಿಡುಗಡೆ ಮಾಡಿತು.

೧೯೬೧ರಲ್ಲಿ ಸ್ಥಾಪಿತವಾದ ಆಮ್ನೆಸ್ಟಿ ಇಂಟರ್‌ನ್ಯಾಶನಲ್ ಸಂಘಕ್ಕೆ ದೊರೆತ ಪ್ರಥಮ ಯಶಸ್ಸುಗಳಲ್ಲಿ ಇದು ಒಂದಾಗಿತ್ತು. ಇದರ ಸ್ಥಾಪಕ ಪೀಟರ್ ಬೆನೆನ್‌ಸನ್ ಲಂಡನ್ನಿನ ಒಬ್ಬ ವಾಣಿಜ್ಯ ವಕೀಲ. ನಿರಪರಾಧಿ ರಾಜಕೀಯ ಕೈದಿಗಳ ಮೇಲಿನ ಸಹಜ ಅನುತಾಪದಿಂದ ಆತ ಅಂಥವರ ಪರವಾಗಿ ವಾದಿಸಲು ಹಂಗರಿ, ಸೈಪ್ರಸ್, ದಕ್ಷಿಣ ಆಫ್ರಿಕ, ಸ್ಪೇನ್ ಮೊದಲಾದ ದೇಶಗಳಿಗೆ ಹೋಗುತ್ತಿದ್ದ. ೧೯೫೯ರಲ್ಲಿ ಅಪಾರವಾದ ಪಿತ್ರಾರ್ಜಿತ

ಆಸ್ತಿ ಕೈಗೆ ಬಂದದ್ದರಿಂದ ಆತ ವಕೀಲಿವೃತ್ತಿಯನ್ನು ತೊರೆದು ದೇಶದೇಶಾಂತರಗಳಲ್ಲಿರುವ ರಾಜಕೀಯ ಕೈದಿಗಳ ಬಿಡುಗಡೆಯನ್ನು ಪೂರ್ಣ ಅವಧಿಯ ಕೆಲಸವಾಗಿ ಮಾಡಿಕೊಂಡನ. ಮೊದಲು ಆತ ಕೋರ್ಟಿನಲ್ಲಿ ಅವರ ಸಲುವಾಗಿ ವಾದಿಸುವುದಕ್ಕೆ ಆರಂಭಿಸಿದ. ಆದರೆ ನ್ಯಾಯಾಲಯಗಳಲ್ಲಿ ವಾದಿಸುವುದಕ್ಕಿಂತ ಹೆಚ್ಚಿನ ಕ್ರಮಗಳು ಅಗತ್ಯವೆಂದು ಅವನಿಗೆ ಬೇಗ ಮನದಟ್ಟಾಯಿತು. ಇದು ಒಬ್ಬನಿಂದಾಗತಕ್ಕ ಕೆಲಸವಲ್ಲವೆಂದೂ ಅವನಿಗೆ ಅರಿವಾಯಿತು.

೧೯೬೧ರಲ್ಲೊಂದು ದಿನ ಬೆನೆನ್‌ಸನ್ ಇಬ್ಬರು ಪೋರ್ತುಗೀಸ್ ತರುಣರಿಗೆ ಅವರ ಸರಕಾರದಿಂದ ಸಿಕ್ಕಿದ ಏಳು ವರ್ಷಗಳ ಶಿಕ್ಷೆಯ ಸುದ್ದಿ ಓದಿದ. ಕುಡಿದು ಅವರು ಸ್ವಾತಂತ್ರ್ಯ ಘೋಷಣೆ ಮಾಡಿದ್ದೇ ಅವರ ತಪ್ಪಾಗಿತ್ತು. ಲಂಡನ್ನಿನಲ್ಲಿರುವ ಪೋರ್ತುಗೀಸ್ ರಾಯಭಾರಿ ಕಚೇರಿಗೆ ಹೋಗಿ ಇದರ ವಿರುದ್ಧ ಒಂದು ಪ್ರತಿಭಟನಾ ಪತ್ರವನ್ನು ಒಪ್ಪಿಸಬೇಕೆಂದು ಮೊದಲು ಯೋಚಿಸಿದರೂ ಅದು ವಿಶೇಷ ಫಲಕಾರಿಯಾಗದೆಂದು ಅವನಿಗನಿಸಿತು. ಒಬ್ಬನ ಬದಲು ಸಾವಿರಾರು ಜನರಿಂದ ಪ್ರತಿಭಟನೆಗಳು ತಲುಪತೊಡಗಿದರೆ ಹೇಗೆ ಎಂದು ವಿಚಾರ ಅವನಿಗೆ ಹೊಳೆಯಿತು. ಆಗಲೇ ರಾಜಕೀಯ ಕೈದಿಗಳ ವಿಮೋಚನೆಗಾಗಿ ಜಗತ್ತಿನಲ್ಲೆಲ್ಲ ಸದಸ್ಯರುಳ್ಳ ಒಂದು ಸಂಘವನ್ನು ಸ್ಥಾಪಿಸುವ ವಿಚಾರ ಅವನ ಮನಸ್ಸಿನಲ್ಲಿ ಮೂಡಿದ್ದು.

ಅವನ ಮಿತ್ರ ಎರಿಕ್ ಬೇಕರ್‌ನೊಡನೆ ಚರ್ಚಿಸಿದ ಮೇಲೆ ವಿಚಾರಕ್ಕೆ ಸ್ಪಷ್ಟರೂಪ ಬಂತು. "ಲಂಡನ್ ಒಬ್ಸರ್ವರ್" ಪತ್ರಿಕೆಯಲ್ಲಿ "ಮರೆತು ಹೋದ ಕೈದಿಗಳು" ಎಂಬ ತಲೆಬರೆಹದ ಒಂದು ಲೇಖನವನ್ನು ಆತ ಪ್ರಕಟಿಸಿದ. ಅದರಲ್ಲಿ ಆತ ದೇಶದೇಶಗಳಲ್ಲಿ ಕೊಳೆಯುತ್ತಿರುವ ರಾಜಕೀಯ ಕೈದಿಗಳ ವಿಷಯವನ್ನು ಪ್ರಸ್ತಾಪಿಸಿ ಅವರ ಬಿಡುಗಡೆಯ ಪ್ರಯತ್ನಗಳಿಗೆ ಎಲ್ಲೆಡೆಗಳಿಂದ ಸಹಕಾರ ಕೋರಿದ್ದ. ಈ ವಿಷಯದಲ್ಲಿ ಆಸಕ್ತಿಯುಳ್ಳ ಉತ್ಸಾಹಿಗಳು ಅಲ್ಲಲ್ಲೇ ಗುಂಪುಗಳನ್ನು ಮಾಡಿಕೊಂಡು ಕಾರ್ಯೋನ್ಮುಖರಾದರೆ ಅಂತಾರಾಷ್ಟ್ರೀಯ ಸಂಘ ಅವರಿಗೆ ಸಲಹೆ, ಸಹಕಾರ ನೀಡುವುದೆಂದು ತಿಳಿಸಿದ್ದ.

ಜಗತ್ತಿನಲ್ಲೆಲ್ಲ ಅನೇಕ ಪತ್ರಿಕೆಗಳಿಂದ ಪುನರ್ಮುದ್ರಿಸಲ್ಪಟ್ಟ ಈ ಲೇಖನದ ಫಲವಾಗಿ ಒಂದು ತಿಂಗಳೊಳಗೆ ಬೆನೆನ್‌ಸನ್‌ನಿಗೆ ಸಾವಿರಕ್ಕೂ ಮಿಕ್ಕ ಪತ್ರಗಳು ಬಂದವು. ಹುರಿಗೊಂಡವರಾಗಿ ಬೆನೆನ್‌ಸನ್ ಮತ್ತು ಬೇಕರ್ ಲಗ್ಸೆಂಬರ್ಗಿನಲ್ಲಿ ಸಂಘದ ಮೊದಲ ಸಭೆ ಕರೆದರು. ಅದಕ್ಕೆ ಬ್ರಿಟನ್, ಫ್ರಾನ್ಸ್, ಇಂಗ್ಲೆಂಡ್, ಅಯರ್ಲಂಡ್, ಜರ್ಮನಿ, ಬೆಲ್ಜಿಯಂ ಮೊದಲಾದ ದೇಶಗಳಿಂದ ನೂರಾರು ಪ್ರತಿನಿಧಿಗಳು ಬಂದಿದ್ದರು. ಆಮ್ನೆಸ್ಟಿ ಇಂಟರ್ ನ್ಯಾಶನಲ್ ಅಲ್ಲೇ ಜನ್ಮ ತಾಳಿತು.

ರಾಜಕೀಯ ಕೈದಿಗಳು ಯಾವ ದೇಶದಲ್ಲಿರಲಿ, ಯಾವ ಮತ ಪಂಥ ಪಕ್ಷದವರಿರಲಿ, ಅವರ ಬಿಡುಗಡೆಗೆ ಸಂಘ ಯತ್ನಿಸುತ್ತದೆ. ಆದರೆ ಹಿಂಸಾಚಾರದಲ್ಲಿ ತೊಡಗಿದ ಅಥವಾ ತಮ್ಮ ದೇಶದ ಸರಕಾರದ ವಿರುದ್ಧ ದಂಗೆ ಏಳುವುದಕ್ಕೆ ಪ್ರೇರಿಸಿದ ಅಥವಾ ದಂಗೆಯೆಬ್ಬಿಸಿದ ಅಪರಾಧಕ್ಕಾಗಿ ಶಿಕ್ಷೆ ಅನುಭವಿಸುವವರನ್ನು ಮಾತ್ರ ಅದು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ತೀರ ಕ್ಷುಲ್ಲಕ ಕಾರಣಗಳಿಗಾಗಿ ಇಲ್ಲವೇ ಬಾಯ್ಮಾತಿನ ಹೇಳಿಕೆಗಾಗಿ ಅಥವಾ ಕೇವಲ ಕಾಲ್ಪನಿಕ ಸಂಶಯದಿಂದ ದಂಡಿಸಲ್ಪಟ್ಟ ಪ್ರಾಮಾಣಿಕರ ಬಿಡುಗಡೆಗಷ್ಟೇ ಅದು ದುಡಿಯುತ್ತದೆ.

ಸಂಘದ ಕೇಂದ್ರ ಕಚೇರಿ ಲಂಡನ್ನಿನಲ್ಲಿದೆ. ಜಗತ್ತಿನಾದ್ಯಂತ ಚೆದುರಿದ ಸದಸ್ಯರನ್ನು ಚಿಕ್ಕ ಚಿಕ್ಕ ಘಟಕಗಳಾಗಿ ವಿಂಗಡಿಸಲಾಗುತ್ತದೆ. ಒಂದು ಘಟಕದಲ್ಲಿ ಮೂರರಿಂದ ೭೦ ಸದಸ್ಯರಿರಬಹುದು. ಇಂಥ ೮೦೦ ಕ್ಕೂ ಹೆಚ್ಚು ಘಟಕಗಳು ಸಂಘದಲ್ಲಿ ಸಮಾವೇಶ ಹೊಂದಿವೆ. ಪ್ರೊಫೆಸರರಿಂದ ಹಿಡಿದು ಗೃಹಿಣಿಯರ ವರೆಗೆ ನಾನಾ ವೃತ್ತಿ ಉದ್ಯೋಗಗಳಲ್ಲಿರುವವರು ಸದಸ್ಯರಾಗಿದ್ದಾರೆ. ಪ್ರತಿ ಘಟಕದಲ್ಲಿಯೂ ಸಾಮಾನ್ಯವಾಗಿ ಒಬ್ಬ ವಕೀಲ

ಇರುತ್ತಾನೆ. ಪ್ರತಿ ಘಟಕವೂ ಕಮ್ಯುನಿಸ್ಟ್ ದೇಶಗಳಲ್ಲಿನ ಒಬ್ಬ, ಪಾಶ್ಚಾತ್ಯ ದೇಶಗಳಲ್ಲಿನ ಒಬ್ಬ ಮತ್ತು ಪೌರಸ್ತ್ಯ ದೇಶಗಳಲ್ಲಿನ ಒಬ್ಬ—ಹೀಗೆ ಮೂರು ಕೈದಿಗಳ ಬಿಡುಗಡೆಗಾಗಿ ಹೆಣಗಬೇಕು. ಹೀಗೆ ಪಕ್ಷಪಾತದ ಆರೋಪದಿಂದ ಮುಕ್ತವಾಗಬಹುದೆಂದು ಆಮ್ನೆಸ್ಟಿ ಇಂಟರ್‌ನ್ಯಾಶನಲ್ ಭಾವಿಸಿದೆ.

ಲಂಡನ್ನಿನ ಕೇಂದ್ರ ಕಚೇರಿಯಲ್ಲಿ ಜಗತ್ತಿನ ನಾನಾ ದೇಶಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ರಾಜಕೀಯ ಕೈದಿಗಳ ಒಂದು ಯಾದಿಯೇ ಇದೆ. ತಮ್ಮ ಸದಸ್ಯರಿಂದ, ರೇಡಿಯೋ ವಾರ್ತೆಗಳಿಂದ, ಪತ್ರಿಕೆಗಳಿಂದ ಹೊಸಹೊಸದಾಗಿ ಬಂಧನಕ್ಕೊಳಗಾದ ರಾಜಕೀಯ ಕೈದಿಗಳ ವಿವರಗಳನ್ನು ಕಲೆ ಹಾಕುತ್ತಲೇ ಇರುತ್ತಾರೆ. ಈ ವರೆಗೆ ಸಂಘ ಸುಮಾರು ೩,೦೦೦ ರಾಜಕೀಯ ಕೈದಿಗಳ ಬಿಡುಗಡೆಯನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ.

ಸಾಮಾನ್ಯವಾಗಿ ಸರಕಾರಗಳು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಬಡಪೆಟ್ಟಿಗೆ ಒಪ್ಪುವುದಿಲ್ಲ. ಇದಕ್ಕಾಗಿ ಸಾರ್ವಜನಿಕಾಭಿಪ್ರಾಯದ ಒತ್ತಡ ತರುವುದು ಸಂಘದ ಆಯುಧಗಳಲ್ಲಿ ಒಂದಾಗಿದೆ. ಜಗದ್ವ್ಯಾಪಿಯಾದ ಸಾರ್ವಜನಿಕಾಭಿಪ್ರಾಯವನ್ನು ಕಡೆಗಣಿಸುವುದು ಯಾವ ಸರಕಾರಕ್ಕೂ ಕಷ್ಟವಾಗುತ್ತದೆ. ನಮ್ಮ ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಜೈಲಿನಲ್ಲಿದ್ದ ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರಖಾನರ ಪ್ರಕರಣವನ್ನು ಉದಾಹರಿಸಬಹುದು. ಅವರ ಬಿಡುಗಡೆಗಾಗಿ ಅವರ ಅನುಯಾಯಿಗಳೂ ಸಹಾನುಭೂತಿಪರರೂ ಎಷ್ಟೇ ಪ್ರಯತ್ನಿಸಿದರೂ ಪಾಕಿಸ್ತಾನ ಸರಕಾರ ಕಿವಿಗೆ ಹಾಕಿಕೊಂಡಿರಲಿಲ್ಲ. ಆಮೇಲೆ ಆಮ್ನೆಸ್ಟಿ ಇಂಟರ್‌ನ್ಯಾಶನಲ್ ಈ ವಿಷಯವನ್ನು ಕೈಗೆತ್ತಿಕೊಂಡಿತು. ಸಂಘದ ವಕೀಲರೂ ಪ್ರಮುಖ ಸದಸ್ಯರೂ ಪಾಕಿಸ್ತಾನಕ್ಕೆ ಹೋಗಿ ಖಾನರ ಬಗ್ಗೆ ವಿಚಾರಿಸಿದರು. ಲಂಡನ್ನಿನಲ್ಲಿರುವ ಪಾಕಿಸ್ತಾನ ಹೈಕಮಿಶನರ್ ಕಚೇರಿಗೆ ದಿನಾಲೂ ಜನರು ಬಂದು ಕೇಳತೊಡಗಿದರು. ಬ್ರಿಟಿಶ್ ಪತ್ರಿಕೆಗಳು ಲೇಖನಗಳನ್ನು ಬರೆದವು. ಗಫಾರಖಾನರನ್ನು "ವರ್ಷದ ಕೈದಿ" ಎಂದು ಘೋಷಿಸಲಾಯಿತು. ಡಿಸೆಂಬರ್ ೧೦ ರಂದು ಮಾನವೀಯ ಹಕ್ಕುಗಳ ಆಚರಣಾ ದಿನ ಸಭೆಗಳಲ್ಲಿ ಖಾನರ ಬಿಡುಗಡೆಗೆ ಒತ್ತಾಯಮಾಡುವ ನಿರ್ಣಯಗಳಾದವು. ಈ ಬಗೆಯ ಅನಿಷ್ಟ ಪ್ರಸಿದ್ಧಿಯನ್ನು ಅಲಕ್ಷಿಸಲಾರದೆ ೧೯೬೪ ಜನವರಿಯಲ್ಲಿ ಗಫಾರ್ ಖಾನರ ಬಿಡುಗಡೆಯಾಯಿತು.

ಕೆಲವೊಂದು ಪ್ರಕರಣಗಳಲ್ಲಿ ಕೈದಿಗಳ ಬಿಡುಗಡೆಗೆ ವಿಶೇಷ ರೀತಿಯ ತಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ. ಪೂರ್ವ ಯುರೋಪಿನ ದೇಶವಾದ ಝೆಕೋಸ್ಲೊವಾಕಿಯದ ಆರ್ಚ್‌ಬಿಶಪ್ ಜೊಸೆಫ್ ಬೆರಾನರ ಬಿಡುಗಡೆಯನ್ನೇ ತೆಗೆದುಕೊಳ್ಳಿ. ೧೯೪೯ ರಲ್ಲಿ ಕಮ್ಯುನಿಸ್ಟರ ಆಡಳಿತಕ್ಕೆ ವಿಧೇಯರಾಗಿರುವ ಪ್ರತಿಜ್ಞೆ ಕೈಕೊಳ್ಳಲು ನಿರಾಕರಿಸಿದ್ದಕ್ಕಾಗಿ ಅವರನ್ನು ಹಿಡಿದು ಗೃಹಬಂಧನದಲ್ಲಿರಿಸಲಾಗಿತ್ತು. ಆಮ್ನೆಸ್ಟಿ ಇಂಟರ್‌ನ್ಯಾಶನಲ್‌ನವರು ಈ ಪ್ರಕರಣವನ್ನು ಕೈಗೆತ್ತಿಕೊಳ್ಳಬೇಕಾದರೆ ಆಗಲೇ ಬೆರಾನರು ೧೨ ವರ್ಷಗಳನ್ನು ಸೆರೆಮನೆಯಲ್ಲಿ ಕಳೆದಿದ್ದರು. ಮೊದಲ ಹೆಜ್ಜೆಯಾಗಿ ಲಂಡನ್ನಿನಲ್ಲಿರುವ ಝೆಕ್ ರಾಯಭಾರಿ ಕಚೇರಿಗೆ ಹೋಗಿ ಆರ್ಚಿಬಿಶಪ್ಪರ ಬಗ್ಗೆ, ಅವರ ಆರೋಗ್ಯದ ಬಗ್ಗೆ, ಅವರ ಮೇಲೆ ಹೊರಿಸಿದ ಆಪಾದನೆಗಳ ಬಗ್ಗೆ ವಿವರಗಳನ್ನೊದಗಿಸುವಂತೆ ಒತ್ತಾಯಿಸಲಾಯಿತು. ಅನಂತರ ಜಗತ್ತಿನಾದ್ಯಂತ ಕೆಥೊಲಿಕ್ ಜನಾಂಗಗಳಲ್ಲಿ ಅವರ ಬಗ್ಗೆ ಪ್ರಚಾರವಾಯಿತು. ಆ ಮೇಲೆ ಕ್ರಿಸ್ಮಸ್ ಕಾರ್ಡುಗಳಲ್ಲಿ ಬೆರಾನರ ಚಿತ್ರಗಳನ್ನು ಮುದ್ರಿಸಿ ಲಕ್ಷಾಂತರದಲ್ಲಿ ಹಂಚಲಾಯಿತು. ಅದನ್ನು ನೋಡಿದ ಸಾವಿರಾರು ಜನ ಅವರ ಬಿಡುಗಡೆಗಾಗಿ ಝೆಕ್ ಸರಕಾರಕ್ಕೆ ಬರೆಯತೊಡಗಿದರು. ಬಿ. ಬಿ. ಸಿ. ಮತ್ತು ರೇಡಿಯೋ ಫ್ರೀ ಯುರೋಪಿನಲ್ಲಿ ಅವರ ಬಿಡುಗಡೆಯ ಮನವಿಗಳು ಪ್ರಸಾರವಾದವು. ಹೀಗೆ ನಿರಂತರ ಪ್ರಚಾರದಿಂದ ಎರಡು ವರ್ಷಗಳ ನಂತರ ಆರ್ಚಿ

ಬಿಶಪ್ ಬೆರಾನರು ಬಿಡುಗಡೆ ಹೊಂದಿದರು. ಕ್ರಿಸ್ಮಸ್ ಕಾರ್ಡುಗಳ ಮೂಲಕ ಪ್ರಚಾರ–ಇದು ಹೊಸ ತಂತ್ರವಾಗಿತ್ತು.

ಪೂರ್ವ ಜರ್ಮನಿಯ ಫ್ರಾನ್ಸ್ ಬ್ರಾಂಟನದು ಇನ್ನೂ ಕಠಿನ ಪ್ರಕರಣವಾಗಿತ್ತು. ಕಮ್ಯುನಿಸ್ಟ್ ಪಕ್ಷದವನೇ ಆಗಿದ್ದ ಈತ ೧೯೫೮ ರಲ್ಲಿ ಪೂರ್ವ ಜರ್ಮನಿಯನ್ನು ತ್ಯಜಿಸಿ ಪಶ್ಚಿಮ ಜರ್ಮನಿಗೆ ಪಲಾಯನ ಮಾಡಿದ್ದ. ೧೯೬೧ ಜೂನ್‌ನಲ್ಲಿ ಬರ್ಲಿನ್ನಿನಿಂದ ಅವನನ್ನು ಅಪಹರಿಸಿಕೊಂಡು ಹೋಗಿ ಗೂಢಚರ್‍ಯೆಯ ಆರೋಪ ಹೊರಿಸಿ ಗುಟ್ಟಾಗಿ ವಿಚಾರಣೆ ನಡೆಸಿ ೧೩ ವರ್ಷಗಳ ಶಿಕ್ಷೆ ವಿಧಿಸಲಾಯಿತು.

ಬ್ರಾಂಟನ ಬಿಡುಗಡೆ ಸುಲಭವಾಗಿರಲಿಲ್ಲ. ಕಮ್ಯುನಿಸ್ಟನಾಗಿ ಪಕ್ಷತ್ಯಾಗ ಮಾಡಿದ್ದೇ ಅವರ ದೃಷ್ಟಿಯಲ್ಲಿ ಮಹಾಪರಾಧವಾಗಿತ್ತು. ಪಲಾಯನ ಮಾಡಿದ್ದು ಸಾಲದೆ ಪೂರ್ವಜರ್ಮನ್ ಸರಕಾರದ ವಿರುದ್ಧ ಪ್ರಚಾರವನ್ನು ಮಾಡಿ ಆತ ಹಲವು ರಹಸ್ಯಗಳನ್ನು ಹೊರಗೆಳೆದಿದ್ದ. ಅವನ ಪ್ರಕರಣದಲ್ಲಿ ಆಮ್ನೆಸ್ಟಿ ಇಂಟರ್‌ನ್ಯಾಶನಲ್ ಬಹುಮುಖ ಉಪಾಯಗಳನ್ನು ಪ್ರಯೋಗಿಸಿತು. ಮೂರು ಮೂರು ಸಲ ಸದಸ್ಯರು ಪೂರ್ವ ಜರ್ಮನಿಗೆ ಭೇಟಿಕೊಟ್ಟರು. ಒಬ್ಬರಂತೂ ಅಧ್ಯಕ್ಷ ವಾಲ್ಟರ್ ಉಲ್‌ಬ್ರಿಚನನ್ನು ಕಂಡು ಮನವಿ ಸಲ್ಲಿಸಿದರು. ಲೀಪ್ಸಿಕ್ ಜಾತ್ರೆಗೆ ಹೋದ ಬ್ರಿಟಿಶ್ ಪಾರ್ಲಿಮೆಂಟ್ ಸದಸ್ಯರಿಗೆ ಹೇಳಿಕೊಂಡು ಅಲ್ಲಿ ಭೆಟ್ಟಿಯಾದ ಪ್ರತಿಯೊಬ್ಬ ಪೂರ್ವ ಜರ್ಮನ್ ಅಧಿಕಾರಿಯ ಹತ್ತಿರವೂ ಬ್ರಾಂಟ್‌ನ ಕುರಿತು ವಿಚಾರಿಸುವಂತೆ ಮಾಡಿದರು. ಬ್ರಾಂಟ್ ಪ್ರಕರಣದ ಬಗ್ಗೆ ಒಂದು ಪುಸ್ತಕವನ್ನೇ ಪ್ರಕಟಿಸುವ ನಿರ್ಧಾರ ಮಾಡಿ ಅದಕ್ಕೆ ಒಂದು ಮುನ್ನುಡಿಯನ್ನು ಬರ್ಟ್ರಂಡ್ ರಸೆಲ್ಲರಿಂದ ಬರೆಸಿ ಇನ್ನೊಂದನ್ನು ಬರೆಯಿರೆಂದು ರಶಿಯದ ಪ್ರಮುಖ ಲೇಖಕ ಇಲ್ಯಾ ಎಹ್ರೆನ್‌ಬರ್ಗರನ್ನು ಕೇಳಿಕೊಂಡರು. ಆತ ಬರೆಯಲಾರನೆಂದು ಮೊದಲೇ ಗೊತ್ತಿತ್ತು. ಆದರೆ ಇದರಿಂದ ಪೂರ್ವ ಜರ್ಮನಿಯ ಮೇಲೆ ಪ್ರಭಾವವುಳ್ಳ ರಶಿಯನ್ ಸರಕಾರದ ಗಮನ ಈ ಪ್ರಕರಣದ ಕಡೆ ಹರಿಯುವುದೆಂದು ನಿರೀಕ್ಷಿಸಿದ್ದು ಸರಿಯಾಯಿತು. ಕೊನೆಗೆ ೧೯೬೩ ರಲ್ಲಿ ಅವನನ್ನು "ವರ್ಷದ ಕೈದಿ" ಎಂದು ಸಾರಿದ್ದಾಯಿತು. ರಸೆಲ್ಲರು ಪೂರ್ವ ಜರ್ಮನಿ ತಮಗೆ ಕೊಡಲಿದ್ದ ಶಾಂತಿಪದಕವನ್ನು ತಿರಸ್ಕರಿಸಿ ಹಿಂದಿರುಗಿಸಿದರು. ಅಂತೂ ೧೯೬೪ ಮೇ ಯಲ್ಲಿ ಬ್ರಾಂಟನ ಬಿಡುಗಡೆಯಾಯಿತು.

ಭಾರತದಲ್ಲಿ ಕೂಡ ಆಮ್ನೆಸ್ಟಿ ಇಂಟರ್ ನ್ಯಾಶನಲ್ ಘಟಕವೊಂದಿದೆ.

ಪೋರ್ತುಗೀಸ್ ಸೆರೆಮನೆಯಲ್ಲಿ ಕೊಳೆಯುತ್ತಿದ್ದ ಟೆಲೋ ಡಿ ಮಾಸ್ಕರೆನ್ಹಸ್ ಅವರ ಬಿಡುಗಡೆಗಾಗಿಯೂ ಆಮ್ನೆಸ್ಟಿ ಇಂಟರ್‌ನ್ಯಾಶನಲ್ ಪ್ರಯತ್ನಿಸಿತು. ಗೋವೆಯವರಾದ ಮಾಸ್ಕರೆನ್ಹಸರು ಲಿಸ್ಬನ್ನಿನಲ್ಲಿ ಶಿಕ್ಷಣಹೊಂದಿ ವಕೀಲ ವೃತ್ತಿ ನಡೆಸುತ್ತಿದ್ದರೂ ಗೋವೆಗೆ ಸ್ವಾತಂತ್ರ್ಯಬೇಕೆಂದು ವಾದಿಸುತ್ತಿದ್ದುದರಿಂದ ಪೋರ್ತುಗೀಸ್ ಸರಕಾರ ಅವರ ಮೇಲೆ ಕಣ್ಣಿಟ್ಟಿತ್ತು. ೧೯೫೫ ರಿಂದ ೧೯೫೮ ರ ವರೆಗೆ ಅವರು ಮುಂಬಯಿಯಲ್ಲಿ ಭಾರತದ ಆಕಾಶವಾಣಿಯಲ್ಲಿದ್ದು ಗೋವಾ ವಿಮೋಚನೆಯ ಪ್ರಚಾರ ಮಾಡಿದರು. ೧೯೫೯ರಲ್ಲಿ ಎಲ್ಲ ರಾಜಕೀಯ ಕೈದಿಗಳನ್ನು ಕ್ಷಮಿಸಿರುವುದಾಗಿ ಸಾರಿದಾಗ ಅವರು ತಾಯ್ನಾಡಿಗೆ ಮರಳಿದರು. ಗೋವೆಗೆ ಸ್ವಾತಂತ್ರ್ಯ ಕೊಡಬೇಕೆಂದು ಅಧ್ಯಕ್ಷ ಸಾಲಾಜಾರರಿಗೆ ಕೇವಲ ಒಂದು ಪತ್ರ ಬರೆದದ್ದಕ್ಕಾಗಿ ಅವರನ್ನು ಬಂಧಿಸಿ ೨೪ ವರ್ಷಗಳ ಶಿಕ್ಷೆ ವಿಧಿಸಲಾಯಿತು. ೧೯೬೭ ರಿಂದಲೂ ಆಮ್ನೆಸ್ಟಿ ಇಂಟರ್‌ನ್ಯಾಶನಲ್ ಅವರ ಬಿಡುಗಡೆಗಾಗಿ ಯತ್ನಿಸುತ್ತಿತ್ತು. ಕಳೆದ ಬೇಸಗೆಯಲ್ಲಿ ಪ್ರಶ್ನೆ ಅಂತಾರಾಷ್ಟ್ರೀಯ ಮಟ್ಟಕ್ಕೆ ಬಂದಿತ್ತು. ಅಷ್ಟರಲ್ಲಿ ಪೋರ್ತುಗಾಲಿನ ಕಾಮೋನಿಸಾ ಜನ್ಮಶತಾಬ್ದಿ ಉತ್ಸವದ ಸಂದರ್ಭದಲ್ಲಿ ರಾಜಕೀಯ ಕೈದಿಗಳಿಗೆ ಕ್ಷಮಾದಾನವಿತ್ತಾಗ ಟೆಲೋ ಬಿಡುಗಡೆ ಹೊಂದಿ ತಾಯ್ನಾಡಿಗೆ ಮರಳಿದರು. ▲

ಮಹಾಕವಿ ಪಂಪ

ಆಂಧ್ರದಲ್ಲಿದ್ದು ಕನ್ನಡದ ಆದಿಕವಿಯಾದ

ಎನ್ಕೆ

ಕವಿಗಳಲ್ಲಿ ಈತನೊಳ್ಳಿದನು. ನೃಪರಲ್ಲಿ ಆತನೊಳ್ಳಿದನು. ಈತ ಕವಿನೃಪನು. ಆತ ನೃಪೋತ್ತಮನು. ಈತ ಕವಿತಾಗುಣಾರ್ಣವ. ಆತ ಗುಣದೋೞ್ಗ್ಗಳನಾದ ಗುಣಾರ್ಣವ.

ಈತ ನಮ್ಮ ಆದಿಕವಿ ಪಂಪ! ಆತ ಚಾಲುಕ್ಯ ಅರಿಕೇಸರಿ! ಇಬ್ಬರಿಗೂ ಎಂತಹ ಸಮಜೋಡಿ! ಇಬ್ಬರೂ ಸರ್ವವಿಧದಲ್ಲಿ ಸಮಾನಸ್ಕಂಧರಾಗಿದ್ದಂತೆ ಸಮವಯಸ್ಕರೂ ಆಗಿದ್ದಿರಬಹುದೆ? ಕವಿ ಪಂಪ ರಾಜನ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು ಕಲಿಯಾಗಿ ಯುದ್ಧಭೂಮಿಯಲ್ಲೂ ಹೋರಾಡಿದ. ಭಾರತದಲ್ಲಿ ಕವಿತನ ಕಲಿತನಗಳ ಈ ಸಂಯೋಗ ಅಪರೂಪವೇ ಆಗಿದೆ.

ರಾಮಾಯಣವನ್ನು ಬರೆದ ವಾಲ್ಮೀಕಿ ಕವಿ ಭಾರತದ ಆದಿಕವಿಯೆನಿಸಿದರೆ ಮಹಾಭಾರತವನ್ನು ಬರೆದ ಪಂಪಕವಿ ಕನ್ನಡನಾಡಿನ ಆದಿಕವಿಯೆನಿಸಿದ. ಈತನಿಗಿಂತ ಮೊದಲು ಕವಿಗಳೂ ಕಾವ್ಯಗಳೂ ಬೆಳಗಿರಲಿಲ್ಲವೆಂದಲ್ಲ. ಆದರೆ ಸೂರ್ಯಪ್ರಕಾಶದ ಮುಂದೆ ನಕ್ಷತ್ರಗಳು ಮಸುಳಿಸಿ ಹೋಗುವಂತೆ ಪಂಪನ ಪ್ರತಿಭೆಯ ತೇಜಸ್ಸಿನ ಮುಂದೆ [illegible] ಕೃತಿಗಳು ಕರಗಿ ಮರೆಯಾಗಿರಬೇಕು. 'ಮುನ್ನಿನ ಕಬ್ಬಮನೆಲ್ಲಮನಿಕ್ಕಿ ಮೆಟ್ಟಿದುದು' ಪಂಪನ ಕಾವ್ಯ.

ಪಂಪಕವಿ ಜನ್ಮಿಸಿದುದು ಅಣ್ಣೀಗೇರಿಯಲ್ಲಿ ಎಂದು ಊಹಿಸಲು ಈಗ ಆಧಾರಗಳಿವೆ. ಗದುಗಿನಿಂದ ಹುಬ್ಬಳ್ಳಿಗೆ ಬರುವ ದಾರಿಯಲ್ಲಿ ಎರಡನೆಯ ರೈಲು ನಿಲ್ದಾಣವೆ ಅಣ್ಣೀಗೇರಿ. ಸುತ್ತಲೂ ಎರೆಯ ಹೊಲ. ಅದರಲ್ಲಿ ಹಸುರಾಗಿ ಕಂಗೊಳಿಸುವ ಬೆಳಸು ಯಾವ ಕಣ್ಣಿಗೂ ಹಬ್ಬವನ್ನು ಮಾಡಿಸುತ್ತದೆ. ಇಂತಹ ಎರೆಯ ನಾಡಿನಲ್ಲಿ ಜನ್ಮವೆತ್ತಿದುದರಿಂದಲೊ ಏನೊ 'ಕದಳೀ ಗರ್ಭಶ್ಯಾಮ' ನೆನಿಸಿದ ಮಗು ಪಂಪ.

ಸಾವಿರ ವರುಷಕ್ಕೆ ಮೇಲ್ಪಟ್ಟು ಪಂಪನ ಕಾಲದ ಅಣ್ಣೀಗೇರಿ ಮೊದಲಿನ ಗ್ರಾಮೀಣ ಪರಿಸರವನ್ನೆ ಇಂದಿಗೂ ಹೊದ್ದುಕೊಂಡು ನಿಂತಿದೆ. ಸುಧಾರಣೆ, ಫ್ಯಾಶನ್ನುಗಳ ಹೊಸಗಾಳಿ ಇತ್ತ ಕಡೆ ಬೀಸಿಲ್ಲ. ಅಂತೆಯೆ ಅಣ್ಣೀಗೇರಿ, ಪುಲಿಗೆರೆಗಳ ಈ ನಾಡು ಪಂಪನ ಹೆಜ್ಜೆ–ಪಾಡು ಅಳಸಿಹೋಗಿಲ್ಲವೇನೊ ಎಂಬಂತೆ ಅಜ್ಜಳಿಯದೆ ಉಳಿದುಕೊಂಡಿವೆ. ನಾಳೆ ನಾಡಿಗೇ ಆದಿಕವಿಯೆನಿಸಿ ಬೆಳಗಲಿದ್ದ ಈ ಸಿರಿಗನ್ನಡ ಕುವರನನ್ನು ಅಣ್ಣೀಗೇರಿಯ ಕೇರಿಕೇರಿಯ ಹೆಂಗಳೆಯರೆಲ್ಲರೂ ಕಂಡು ನಲಿದಾಡಿರಬೇಕು. ಎತ್ತಿ ಮುದ್ದಾಡಿರಬೇಕು. ಅದನ್ನೇ ಕವಿ ತನ್ನ ಕಾವ್ಯದಲ್ಲೂ ಒಣ್ಣಿಸಿದ್ದಾನೆ—ತಾನು 'ಯುವತೀ ಜಘನಕಾಂಚೀರತ್ನ' ನೆನಿಸಿದೆ ಎಂದು. ಪಂಪನಿಗೆ ತನ್ನ ಕಾವ್ಯದ ಮೇಲೆ ಎಷ್ಟೋ ಅಷ್ಟೇ ತನ್ನ ರೂಪದ ಮೇಲೂ ಅಭಿಮಾನ.

ಕ್ರಿ. ಶ. ಒಂಬೈನೂರಾಒಂದರಲ್ಲಿ ದುಂದುಭಿ ನಾಮ ಸಂವತ್ಸರದಲ್ಲಿ ಹುಟ್ಟಿದ ಪೆಂಪಿನ ಪಂಪ ಕವಿ. ತಂದೆ ಭೀಮದೇವ (ಹೊಸ ಶೋಧನೆಯ ಮೇರೆಗೆ). ತಾಯಿ ಅಬ್ಬಣಬ್ಬೆ. ಅಬ್ಬಣಬ್ಬೆಯ ತವರುಮನೆ ಅಣ್ಣೀಗೇರಿ. ಬೆಳ್ವೊಲದ ಈ ಸಮೃದ್ಧಸೀಮೆಯಲ್ಲಿ ಪಂಪನು ಜನ್ಮವೆತ್ತು ತನ್ನ ಬಾಲ್ಯ ಯೌವನಗಳನ್ನು ಅಣ್ಣೀಗೇರಿ, ಪುಲಿಗೆರೆ, ಬನವಾಸಿ ಪ್ರದೇಶಗಳಲ್ಲಿ ಕಳೆದಿರಬೇಕು. ಬನವಾಸಿಯ ವನಸೌಂದರ್ಯವು ಪಂಪನ ತರುಣ ರಸಿಕ ಮನವನ್ನು ಸೆರೆಹಿಡಿದಿರಬೇಕು. ಸೊಗಯಿಸಿ ಬಂದ ಮಾಮರವನ್ನು, ಅದನ್ನು ತಬ್ಬಿ ಎಳವಳ್ಳಿಯನ್ನು, ಪೂತ ಜಾತಿಯ ಸಂಪಗೆಯನ್ನು, ಕುಕಿಲ್ವ ಕೋಗಿಲೆಯನ್ನು, ಪಾಡುವ ತುಂಬಿಯನ್ನು ಕವಿ ಮನಸೋತು ಮನವಾರೆ ಬಣ್ಣಿಸಿದ್ದಾನೆ. ಅಲ್ಲಿಯ ಜನ ಉತ್ತಮ ಸಂಸ್ಕಾರ ಪಡೆದವರು. ರಸಿಕರು. ಯಾವಾಗಲೂ ಸುಖ-

ಸಂಕಥಾವಿನೋದ ಗೋಷ್ಠಿಯಲ್ಲಿ ನಿರತರಾಗಿರುವವರು. ಅವರು ಭೋಗಿಗಳಾಗಿರುವಂತೆ ತ್ಯಾಗಿಗಳೂ ಹೌದು. ಇಂತಹ ಒಂದು ದೇಶದಲ್ಲಿ ಮರಿದುಂಬಿಯಾಗಿ, ಕೋಗಿಲೆಯಾಗಿಯಾದರೂ ಹುಟ್ಟಬೇಕು ಎಂದು ದೂರದ ಆಂಧ್ರದಲ್ಲಿ ಕುಳಿತು ಕಾವ್ಯರಚನೆ ಮಾಡುತ್ತ ಕವಿ ಹಂಬಲಿಸುತ್ತಾನೆ. ಬನವಾಸಿಯ ಬಳಿಯ ಗೋಕರ್ಣನಾಥನನ್ನೂ ಭಕ್ತಿಯಿಂದ ನೆನೆದಿದ್ದಾನೆ. ಮೂಲ ಮಹಾಭಾರತದ ಅರ್ಜುನನಿಗೆ ಅರಿಯದಾದ ಕನ್ನಡ ನಾಡಿನ ಗೋಕರ್ಣ ಪುಣ್ಯಸ್ಥಳ ಪಂಪನ ಪಾರ್ಥನಿಗೆ ತೀರ್ಥಯಾತ್ರಾಕ್ಷೇತ್ರವಾಗಿ ಕಾಣಿಸಿಕೊಂಡಿದೆ.

ಬಾಲ್ಯದಲ್ಲಿಯೆ ಕವಿ 'ಗುರು ದೇವೇಂದ್ರ ಮುನೀಂದ್ರ'ರಿಂದ ಶ್ರವಣಬೆಳ್ಗೊಳದಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ ಉಭಯಭಾಷಾ ಪ್ರವೀಣನಾದ. ಜಿನಸೇನಾಚಾರ್ಯರ 'ಪೂರ್ವಪುರಾಣ'ವನ್ನೂ ಅಭ್ಯಸಿಸಿ ಅಳವಡಿಸಿಕೊಂಡ. ಇಷ್ಟೊಂದು ಪಾಂಡಿತ್ಯಪೂರ್ಣ ಸಂಸ್ಕೃತಾಭ್ಯಾಸಿಯೆನಿಸಿಯೂ ನಾಡಿನ ಪುಲಿಗೆರೆಯ ತಿರುಳ್ಗನ್ನಡದ ಅನ್ನವನ್ನು ಉಂಡು ಅರಗಿಸಿಕೊಂಡು ಬೆಳೆದ ಜೀವ ಇದು. ಪುಲಿಗೆರೆಯ ನಾಡಿನ ದೇಸಿಯನ್ನು ಮೈಗೂಡಿಸಿಕೊಂಡು ಅದನ್ನೆ ತನ್ನ ಕಾವ್ಯಕ್ಕೆ ತೊಡಿಸಿದ—ಈ ಕವಿ. ಬನವಾಸಿ, ಪುಲಿಗೆರೆಗಳಿಗೆ ನೀರುಣಿಸಿದ ಪುಣ್ಯ ವರದಾನದಿಯಲ್ಲಿ ಅದೆಷ್ಟು ಸಲ ಸ್ನಾನ ಮಾಡಿ ಎದ್ದಿದ್ದನೊ! ತನ್ನ ಕಾವ್ಯದಲ್ಲಿ ಆತ ವರದಾನದಿಯನ್ನೂ ವರ್ಣಿಸಿದ್ದಾನೆ.

ರಾಷ್ಟ್ರಕೂಟರು, ಚಾಲುಕ್ಯರು—ಒಬ್ಬರಿಗೊಬ್ಬರ ಮೇಲುಗೈ ನಡೆದಿತ್ತು. ಚಾಲುಕ್ಯರು ವೇಂಗಿನಾಡನ್ನು ಆಳತೊಡಗಿದ್ದರು. ವೇಂಗಿನಾಡು ಆಂಧ್ರದೇಶದ ಭಾಗ. ತರುವಾಯದ ಚಾಲುಕ್ಯ ವಂಶದ ಇಮ್ಮಡಿ ಅರಿಕೇಸರಿ ವೇಂಗಿ ಮಂಡಲದ ಪಶ್ಚಿಮದ ಕಡೆಯಿದ್ದ 'ವೆಂಬುಳಪಾಟಕ' ಎಂದರೆ ಈಗಿನ ವೇಮುಲವಾಡವನ್ನು ಆಳುತ್ತಿದ್ದ. ಹತ್ತನೆಯ ಶತಮಾನದ ಮಧ್ಯಕಾಲದ ವೀರಯುಗವದು. ಇಮ್ಮಡಿ ಅರಿಕೇಸರಿ ಪಂಪಕವಿಯ ಕವಿತಾಚಾತುರ್ಯವನ್ನೂ ಕಲಿತನವನ್ನೂ ಮೆಚ್ಚಿ ತನ್ನ ಆಸ್ಥಾನದಲ್ಲಿ ಆಶ್ರಯ ಕೊಟ್ಟ. ತನ್ನೊಡನೆ ಪಂಪನನ್ನು ಯುದ್ಧರಂಗಕ್ಕೂ ಕರೆದೊಯ್ದ.

ವೇಮುಲವಾಡ ಈಗ ಚಿಕ್ಕ ಗ್ರಾಮ. ಅರಿಕೇಸರಿಯ ಆಸ್ಥಾನ ಎಂತಿದ್ದಿರಬೇಕು? ಪಂಪ ಕವಿ ಈ ಆಸ್ಥಾನದಲ್ಲಿ ಹೇಗೆ ವಿರಾಜಮಾನವಾಗಿ ಕುಳಿತಿದ್ದಿರಬೇಕು? ಈ 'ನಾಡೋಜನ' ಪ್ರತಿಭೆಗೆ ಮೆಚ್ಚಿ ಅಪ್ರತಿಭನಾದ ರಾಜ ಆತನನ್ನು ಹೇಗೆ ಮನ್ನಿಸಿರಬೇಕು? ಎಂಬ ಸಹಜ ಕುತೂಹಲದ ಪ್ರಶ್ನೆಗಳು ಉದ್ಭವಿಸುತ್ತವೆ. ರಾಜನ ಕೀರ್ತಿಯನ್ನು ಭೂಮಿಯಲ್ಲಿ ನೆಲೆಗೊಳಿಸುವಂತೆ ಕಾವ್ಯ ರಚಿಸಲು ಸ್ಫೂರ್ತನಾದ ಪಂಪಕವಿ ತನ್ನ ಪೂರ್ವ ವೈದಿಕ ಸಂಸ್ಕಾರ ಬಲದಿಂದ 'ವಿಕ್ರಮಾರ್ಜುನ ವಿಜಯ' ಕಾವ್ಯವನ್ನು ಕೇವಲ ಆರು ತಿಂಗಳ ಅವಧಿಯಲ್ಲಿ ಬರೆದು ಪೂರೈಸಿದುದನ್ನು ಆಲೋಚಿಸಿದಾಗ ಪಂಪನ ಪ್ರತಿಭೆ, ಪಂಪನ ಪಾಂಡಿತ್ಯ ನಮ್ಮನ್ನು ಚಕಿತಗೊಳಿಸುತ್ತವೆ.

ಕನ್ನಡ ಕವಿಗಳಲ್ಲಿ ಹಿರಿಯ ಕವಿಯಾದ ಪಂಪ ಆಗ ನಾಲ್ವತ್ತು ವರುಷದ ಯುವಕ. ಆಗಲೇ ಆತ ಜೈನ ಪುರಾಣ ಕಾವ್ಯವಾದ ಆದಿ ಪುರಾಣವನ್ನು ಬರೆದು ಖ್ಯಾತನಾಗಿದ್ದ. ತನ್ನ ಆಶ್ರಯದಾತನ ಹೆಸರನ್ನು ಚಿರಂತನಗೊಳಿಸುವುದಕ್ಕಾಗಿ ಭಾರತವನ್ನು ಆತ ಬರೆಯಹೊರಟಿದ್ದಾಗಿತ್ತು. 'ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆ ನೆಗಳ್ತೆಯಾದುದು ಭೂಭುಜನಂ ಕಿರೀಟಿಯೊಳ್' ಎಂದು ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಆತ ಕಾವ್ಯ ರಚನೆ ಮಾಡಿದ. ಅರ್ಜುನನನ್ನು ಮಧ್ಯಮ ಪಾಂಡವನನ್ನಾಗಿ ಮಾಡದೆ ಒಮ್ಮೊಮ್ಮೆ ಅರಿಕೇಸರಿಯನ್ನೇ ಮಾಡಿಬಿಟ್ಟುದು ಒಂದಿಷ್ಟು ಅವಾಸ್ತವಕ್ಕೆ ಎಡೆ ಮಾಡಿಕೊಟ್ಟೀತು ಎಂಬ ವಿಮರ್ಶಕ ಬುದ್ಧಿ ಕೂಡ ಮರೆತುಹೋಗುವಂತಹ ರಾಜಮಮತೆ ಪಂಪನದು.

ಕಾವ್ಯದ ರಚನೆ ಪೂರ್ತಿಯಾದ ಮೇಲೆ ರಸಿಕ ರಾಜಸಭೆಯಲ್ಲಿ 'ದುಂದುಭಿಗಭೀರ ನಿನದ'ದಿಂದ ಅದನ್ನು ಕವಿ ಓದಿ ಪೂರೈಸಿದಾಗ ಸಭಿಕರು ಮೆಚ್ಚಿ ತಲೆದೂಗಿದರು. ತಾನೇ ಅರ್ಜುನನಾಗಿದ್ದೇನಲ್ಲಾ !—ಎಂಬ ಭಾವನೆ ಮನಸ್ಸಿನಲ್ಲಿ ಸುಳಿದಾಗ ಅರಿಕೇಸರಿಗೆ ಒಂದಿಷ್ಟು ಸಂತೋಷವೂ ಎನಿಸಿರಬೇಕು. ಆಚಂದ್ರಾರ್ಕವಾಗಿ ರಾಜನ ಯಶಸ್ಸು ನಿಲ್ಲುವಂತೆ ರಚಿಸಿದ ಕಾವ್ಯಕ್ಕೆ ಅರಿಕೇಸರಿ ಪಂಪನನ್ನು ಬಹಳ ಕೊಂಡಾಡಿ ಆತನಿಗೆ ಪಂಚ-

ರತ್ನದ ತುಡುಗೆ, ಉಡುಗೊರೆ, ಜೀವಧನ, ಅಗ್ರಹಾರ, ಕಾಂತಾಜನ ಮೊದಲಾದುವನ್ನು ಕೊಟ್ಟು ರಾಜಮರ್ಯಾದೆ ಮಾಡಿ ಧರ್ಮಪುರವೆಂಬ ಶಾಸನದ ಅಗ್ರಹಾರವನ್ನು ದಾನ ಮಾಡುತ್ತಾನೆ.

ಇಂದು ಪಂಪನಿಗೆ ದೊರೆತ ಪಂಚರತ್ನದ ತುಡುಗೆಗಳಿಲ್ಲ, ಉಡುಗೊರೆಗಳಿಲ್ಲ. ಜೀವಧನವಿಲ್ಲ, ಅಗ್ರಹಾರವಿಲ್ಲ. ಕಾಂತಾಜನವಿಲ್ಲ. ಅರಿಕೇಸರಿಯ ರಾಜ್ಯವೂ ಇಲ್ಲ. ಆದರೆ ಕವಿಯ 'ವಿಕ್ರಮಾರ್ಜುನ ವಿಜಯ'ವೀರ ಕಾವ್ಯ ಮಾತ್ರ ಅಮರವಾಗಿ ಜೀವಂತವಾಗಿ ಉಳಿದಿದೆ. ಧರ್ಮಪುರ ಬೇರೆ ಹೆಸರಿನಲ್ಲಿ ಇದ್ದರೂ ಆಗಿನ ಧರ್ಮಪುರವೆಲ್ಲಿ? ಈಗಿನ ಧರ್ಮಪುರವೆಲ್ಲಿ? ಗೋದಾವರಿ ತೀರದ ಈ ಪ್ರದೇಶ 'ಬಜ್ಜೆ ಸಾಸಿರದ' ಫಲವತ್ತಾದ ಪ್ರದೇಶವೆಂದು ಈಗ ಗುರುತಿಸುವುದು ಕಷ್ಟ. ಕಾಣಿಕೆಯಾಗಿ ಬಂದ ಈ ಪ್ರದೇಶದಲ್ಲಿ ಕವಿ ಮನೆ ಮಾಡಿಕೊಂಡು ಇದ್ದಿರಬಹುದೆ? ತನ್ನ ಹೆಂಡಿರು ಮಕ್ಕಳೊಡನೆ ಹಡುಳವಾಗಿ. ಸೊಗವಾಗಿ ಬಾಳಿರಬಹುದೆ? ಎಲ್ಲವೂ ಊಹೆ ಮಾತ್ರ. ತನ್ನ ವೀರ ಚಂಪೂ ಕಾವ್ಯವನ್ನು ಪೂರೈಸಿದ ಮೇಲೆ ಕವಿಯ ಮುಂದಿನ ಚರಿತ್ರೆಯನ್ನು ಹೇಳುವ ಯಾವ ವಸ್ತುವೂ ನಮಗೆ ದೊರೆತಿಲ್ಲ.

'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ಪಂಪನ ಮುಂದಣ ಕವಿಗಳು ಹೊಗಳಿದರು. 'ಸುಭಗ ಕವಿ ಪಂಪ'ನಿಂದ 'ವಾಗ್ವಿಭವೋನ್ನತಿ ನೆಗಳ್ದು'ದೆಂದು ಸ್ವತಃ ಮಹಾವಿದ್ಯಾಗರ್ವಿಯಾದ ರನ್ನ ಕವಿ ಪಂಪನಿಂದ ಅರ್ಧಶತಮಾನದೊಳಗೆ ಹೇಳಬೇಕಾದರೆ ಪಂಪನ ಲೋಕಪ್ರಿಯತೆ ಯಾವ ವೇಗದಲ್ಲಿ ಹಬ್ಬಿರಬಹುದು!

ನಿಜ. 'ಗುಣಕ್ಕೆ ಮಚ್ಚರಮುಂಟೆ?' ಕವಿ ಪಂಪನ ಪ್ರಸಿದ್ಧಿಗೆ ಆತನ ಮತಾತೀತವಾದ ಮಾನವ ಗುಣಧರ್ಮದ ಹಿರಿಮೆಯ ವರ್ಣನೆಯೇ ಕಾರಣ. ಆದಿಪುರಾಣದ ಪುರುದೇವನ ಮಕ್ಕಳಾದ ಭರತ. ಬಾಹುಬಲಿಗಳ ಮಾನವ ಸ್ವಭಾವ. ಭರತನ ಉದಾತ್ತ, ಉನ್ನತ ಗುಣ ಇವು ಹೃದಯಂಗಮವಾಗಿ, ಬುಧಜನಸಮೂಹಕ್ಕೆ ರಸಮಯ ಸಾಹಿತ್ಯವೆನಿಸಿವೆ. ಜೈನಧರ್ಮ, ಕಾವ್ಯಧರ್ಮ ಎರಡೂ ಇಲ್ಲಿ ಕಂಗೊಳಿಸಿವೆ. ಕಾವ್ಯಧರ್ಮವು ವರ್ಣನೆಯಲ್ಲಿ, ಅಲಂಕಾರಗಳಲ್ಲಿ, ಅಮೋಘವಾಗಿ ಹೊರಹೊಮ್ಮಿದೆ. ಚೂತರಾಜನನ್ನು ಉದ್ದೇಶಿಸಿ ಕವಿ ಹೇಳುತ್ತಾನೆ:

ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್
ನೀಂ ನೀಱನೈ ಪುಷ್ಪಸಂ-
ಕುಲದೊಳ್ ನೀನೆ ವಿಳಾಸಿಯೈ ಮಿಡಿಗ
ಳೊಳ್ ನೀಂ ಚೆಲ್ವನೈ ಪಣ್ತ ಪ-
ಣ್ಗಳಿನೋವೋ ಪೆಱತೇನೊ ನೀನೆ
ಭುವನಕ್ಕಾರಾಧ್ಯನೈ ಭೃಂಗಕೋ-
ಕಿಳಕೀರಪ್ರಿಯ ಚೂತರಾಜ ತರುಗಳ್
ನಿನ್ನಂತೆ ಚನ್ನಂಗಳೆ?

ಪ್ರಕೃತಿಯ ಚೆಲುವಿನಲ್ಲಿ ಕೂಡ ರಾಜವೈಭವವನ್ನು ಕಾಣುವ ರಸದ್ರಷ್ಟಾರನ ಕಣ್ಣು ಈತನದು. ನಿರ್ಜೀವವಾದ ಮಾಮರವನ್ನು ಕವಿ ಬಣ್ಣಿಸಿಲ್ಲ; ಚೇತನಾಪೂರ್ಣವಾದ ಚೂತರಾಜನನ್ನು ಚೇತೋಹಾರಿಯಾಗಿ ಬಣ್ಣಿಸಿದ್ದಾನೆ. ಇನ್ನೊಂದೆಡೆಗೆ ಕವಿ ಚಿತ್ರಿಸಿರುವ ಅಂಜನಾದೇವಿಯ ನೃತ್ಯವೈಖರಿಯಂತೂ ಓದುಗರ ಕಣ್ಗೆ ಆ ವಿದಗ್ಧ ಗಣಿಕೆಯ ಭಾವಭಂಗಿಯನ್ನು ತಂದು ನಿಲ್ಲಿಸುತ್ತದೆ:

ಪುಗುವ ಪೊರಮಡುವ ತೆರಂ ಎಡೆ
ಪುಗುವಳ್ ಪೊರಮಡುವಳ್ ಎನೆ ಸೊಗ
ಕಮರ್ದಂ ಮೇ
ಱುಗುಳ್ದಪಳ್ ಎನಿಸೆ ಮುಗುಳ್ನಗೆ
ನಗೆ ಮೊಗದ ಬೆಸಂಗು ಅವಳ್ಗದೇನೊಪ್ಪಿ
ದುದೊ॥

ಪೊಸವೆಳದಿಂಗಳ್ ಪೆಸೆದೆಸೆ-
ಗೆಸೆದುದು ಕುಮುದವನಂ ಅಲರ್ದುದು
ಎಂಬಂತೆ ಇರದೇನ್
ಎಸೆದುದೊ ಕಟಾಕ್ಷಮಾಲಾ-
ಪ್ರಸರಂಬೋಲ್ ಆಸ್ಯಸೌಂದರಂ
ನರ್ತಕಿಯಾ ॥

ಮಹಾಭಾರತವನ್ನಂತೂ ಕವಿ 'ಬಗೆ ಪೊಸದೊಪ್ಪುವಂತೆ, ಮೃದುಬಂಧದೊಳೊಂದುವಂತೆ

ದ ಸಿಂಪೋಳ್ ಪುಗುವಂತೆ. ಎಳಮಾವು ಕೆಂದಳಿರದ ಪೂವಿನ ಬಿಗಿಪ್ಪೊರೆಯಿಂದ ಬಳಲ್ದ ತುಂಬಿಗಳಿಂದ ತುಂಬಿ ಕೋಗಿಲೆಯ ಕೂಜನದಿಂದ ವಸಂತದ ಸುಗ್ಗಿಯಲ್ಲಿ ಒಪ್ಪುವಂತೆ ರಚಿಸಿದ್ದಾನೆ. 'ವಿಕ್ರಮಾರ್ಜುನ-ವಿಜಯ'ವು ತುಂಬಿದ ಮಾಮರದಂತೆ ಒಪ್ಪುತ್ತದೆ ಎಂಬ ಮಾತು ಶಬ್ದಶಃ ನಿಜ.

ಇಲ್ಲಿ ಪಾತ್ರನಿರೂಪಣೆಯಲ್ಲಿಯೂ ಕವಿ ಅಷ್ಟೇ ಮೈಮರೆಯುತ್ತಾನೆ. ಅರ್ಜುನನನ್ನು ಮರೆತು ಅವಾಸ್ತವವಾಗುವುದನ್ನು ಕಡೆಗಣಿಸಿ ಅರಿಕೇಸರಿಯನ್ನು ಕೊಂಡಾಡಿದರೆ ಉಭಯತರನ್ನೂ ಮರೆತುಬಿಟ್ಟು ಗುಣೈಕದೃಷ್ಟಿಯಿಂದ ಕರ್ಣನನ್ನು ನೆನೆಯುತ್ತಾನೆ. 'ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆ...ಕರ್ಣನಿಂ ಕರ್ಣರಸಾಯನಮಲ್ತೆ ಭಾರತಂ?' ಕರ್ಣನಿಗೆ ಎಂತಹ ಕಾಣಿಕೆ! ಆಶ್ರಯದಾತ ಅರಿಕೇಸರಿಯ ಮೇಲೆ ತೆರೆಯೆಳೆದುಬಿಟ್ಟು ಕರ್ಣನನ್ನು ಹೃದಯಸಿಂಹಾಸನದಲ್ಲಿ ಕುಳ್ಳಿರಿಸಿ ಪೂಜಿಸಿದ್ದಾನೆ.

ಇಂತಹ ಆದಿಕವಿಯ ಕುಲವೇನು? ಗೋತ್ರವೇನು? ಆತನ ತಾಯ ತವರೂರು ಅಣ್ಣಿಗೇರಿಯೆಂದು ನಾವು ನೋಡಿದ್ದೇವೆ. ಅಜ್ಜ ಜೋಯಿಸ ಸಿಂಘ. ಪಂಪನ ತಂದೆಯ ವಂಶಾವಳಿ ಏನು?

ವೆಂಗಿ ಮಂಡಲದೊಳಗಿನ ವೆಂಗಿಪಳು. ಅದರೊಳಗಿನ ವಸಂತ. ಕೊಟ್ಟೂರು. ನಿಡಗುಂದಿ, ವಿಕ್ರಮಪುರ ಎಂಬ ಅಗ್ರಹಾರಗಳು. ಸರ್ವಕ್ರತುಯಾಜಿ ಮಾಧವ ಸೋಮಯಾಜಿಯು ಪಂಪನಿಂದ ಹಿರಿಯ ಐದನೆಯ ತಲೆ. ಆಗಿನ್ನೂ ಈ ಕುಲ ಜೈನಧರ್ಮವನ್ನು ಅವಲಂಬಿಸಿರಲಿಲ್ಲ. ಮಾಧವ ಸೋಮಯಾಜಿಯ ಯಜ್ಞಗಳಿಂದ ಆಕಾಶದಲ್ಲಿ ಹೊಗೆತುಂಬಿ ಅವನ ಯಶಸ್ಸು ಕಪ್ಪಾಗಿತ್ತಂತೆ. ಸೋಮಯಾಜಿಯ ಮಗ ಅಭಿಮಾನಚಂದ್ರ 'ಎರೆದರ್ಗಿತ್ತವಂ'; ಆತನ ಮಗ ಕೊಮರಯ್ಯ 'ಭುವನಭವನವಿಖ್ಯಾತಂ'; ಆತನ ಮಗ ಭೀಮದೇವರಾಯ. 'ಗುಣಮಣಿ ರತ್ನಾಕರ.' ಆತನ ಮಗನೆ ನಮ್ಮ ನಚ್ಚಿನ ಕವಿಪಿತಾಮಹ, ಕವಿತಾಗುಣಾರ್ಣವ ಪಂಪ. ಪಂಪನ ತಂದೆ ಜೈನ ಧರ್ಮವನ್ನು ಅವಲಂಬಿಸಿದ.

ಜೈನಧರ್ಮದ ಉನ್ನತಿಕೆಯನ್ನು ನೆಚ್ಚಿ ತಮ್ಮ ಕುಲದ ಸೋಮಯಾಜಿ ಬ್ರಾಹ್ಮಣ ಭೀಮನಾಮಧೇಯನಾದ ತಂದೆ ಜೈನಧರ್ಮವನ್ನು ಸ್ವೀಕರಿಸಿದ. ಪಂಪನಿಗೂ ಜೈನಧರ್ಮದ ಉನ್ನತಿಕೆಯಲ್ಲಿ ವಿಶ್ವಾಸ. ಆದರೆ ತಾತನಿಂದ ಮೂರು ತಲೆಮಾರಿನಿಂದಲೂ ನಡೆದುಕೊಂಡು ಬಂದ ವೈದಿಕರಕ್ತವೂ ಒಳಗಿತ್ತು. ಪಂಪನಿಗೆ ವೈದಿಕದ ಬಗ್ಗೆ ಔದಾಸೀನ್ಯವಾಗಲಿ. ಅನಾಸಕ್ತಿಯಾಗಲಿ ಅನಾಸ್ಥೆಯಾಗಲಿ ಇದ್ದಿರಲಿಲ್ಲ. 'ವ್ಯಾಸಮುನೀಂದ್ರರುಂದ್ರವಚನಾಮೃತವಾರ್ಧಿಯನೀಸುವೆಂಕವಿವ್ಯಾಸನೆನೆಂಬ ಗರ್ವಮೆನಗಿಲ್ಲ' ಎಂದು ವಿನಯಸಂಪನ್ನತೆಯನ್ನು ಮೆರೆದ ಕವಿ ಜೈನ ವೈದಿಕ ಧರ್ಮಗಳ ನಡುವೆ ಒಂದು ಸಾಂಕೇತಿಕ ಕೊಂಡಿಯಂತಿದ್ದ. ಪಂಪ ಭಾರತದಲ್ಲಿ ಶ್ರೀಕೃಷ್ಣನ ಪಾತ್ರಕ್ಕೆ ಸ್ಥಾನ ಗೌಣ. ಕುಮಾರವ್ಯಾಸನಿಗೋ ಮಹಾಭಾರತವೆಂದರೆ ಕೃಷ್ಣಕಥೆ. ಯಾವುದನ್ನು ಕುಮಾರವ್ಯಾಸ ತನ್ನ ಭಕ್ತಿಯ ದೈವತಕ್ಕೆ ಅರ್ಪಿಸಿಕೊಂಡಿದ್ದನೊ ಅಂತೆಯೆ ಅದನ್ನು ಕೃಷ್ಣಕಥೆಯೆಂದು ಕರೆದನೊ ಆ ಕಾವ್ಯವನ್ನು. ಆ ಭಾರತವನ್ನು ಪಂಪ ಅರಿಕೇಸರಿಯ



ವ್ಯಾಜದಿಂದಾಗಿ 'ವಿಕ್ರಮಾರ್ಜುನವಿಜಯ' ಎಂದು ಕರೆದ. ವ್ಯಾಸವಚನಾಮೃತವಾರ್ಧಿಯನೀಸಿ ಅದರ ಅಣಿಮುತ್ತುಗಳನ್ನೆತ್ತಿಕೊಂಡು ಈ ಸಮಸ್ತ ಭಾರತಸಾರವನ್ನು ಮೂಲದ ಮೈಗೆಡಲೀಯದೆ ಅದರ ಸಮುದಾಯಶೋಭೆ, ಒಲವು ಚೆಲುವುಗಳಲ್ಲಿ ಅನುರೂಪವಾಗಿ ಕಂಗೊಳಿಸುವಂತೆ, ರಾವುಗನ್ನಡಿಯಲ್ಲಿ ಸೂರ್ಯಬಿಂಬವನ್ನು ಸಂಗ್ರಹಿಸಿದಂತೆ ಸಂಗ್ರಹಿಸಿದ್ದಾನೆ.

ಮಹಾಕವಿ ಪಂಪ ತನ್ನ 'ವಿಕ್ರಮಾರ್ಜುನ ವಿಜಯ'ದ ಮೊದಲ ಮತ್ತು ಕೊನೆಯ ಆಶ್ವಾಸಗಳಲ್ಲಿ ಸಾಕಷ್ಟು ತನ್ನ ವಿಷಯ ಹೇಳಿಕೊಂಡಿದ್ದಾನೆ. ಆದರೆ ಅರಿಕೇಸರಿ ಆತನಿಗೆ ಕೊಟ್ಟ ಅಗ್ರಹಾರ ಧರ್ಮಪುರ ಎಲ್ಲಿದೆ? ಆಂಧ್ರ ದೇಶದಲ್ಲೇ ಬಹು ಕಾಲ ಬಾಳಿ ಅಲ್ಲೇ ಕಾವ್ಯ ರಚನೆ ಮಾಡಿದ ಈ ಮಹಾಕವಿ ಮಲೆನಾಡಿನ ಬನವಾಸಿ ದೇಶವನ್ನು ಇಷ್ಟೊಂದು ಮೋಹದಿಂದ ಬಣ್ಣಿಸಿದನೇಕೆ? ಎಂದು ಮುಂತಾದ ಪ್ರಶ್ನೆಗಳು ಇದ್ದೇ ಇದ್ದವು. ಗದುಗಿನ ಹತ್ತಿರ ಇರುವ ಡಂಬಳವೇ ಧರ್ಮಪುರ ಇದ್ದಿರಬೇಕು ಎಂಬ ಊಹೆ ಇತ್ತು. ಆದರೆ ಈಚೆಗೆ ಆಂಧ್ರ ದೇಶದಲ್ಲೇ ಒಂದು– ಪಂಪನ ತಮ್ಮನಿಂದಲೇ ಕೆತ್ತಿಸಲ್ಪಟ್ಟ–ಶಾಸನ ಬೆಳಕಿಗೆ ಬಂದು ಪಂಪನ ಜೀವನದ ಮೇಲೆ ಹೊಸ ಬೆಳಕು ಕೆಡವಿದೆ.

ಆಂಧ್ರ ದೇಶದ ಕರೀಂ ನಗರ ಜಿಲ್ಲೆಯ ಗಂಗಾಧರಂ ಗ್ರಾಮದಲ್ಲಿ ಸಾವಿರ ವರುಷಗಳ ಪೂರ್ವದ ಈ ಶಿಲಾಶಾಸನ ಸಿಕ್ಕಿದೆ. ನಮ್ಮ ಆದಿಕವಿಯ ತಮ್ಮ ಜಿನವಲ್ಲಭ. ಕವಿಗೆ ಜಿನವಲ್ಲಭನೆಂಬ ಸೋದರನಿದ್ದನೆಂಬುದು ಈ ಶಾಸನದಿಂದ ಗೊತ್ತಾಗುತ್ತದೆ. ಈ ಶಾಸನವನ್ನು ಪ್ರಥಮದಲ್ಲಿ ಡಾ. ಎನ್. ವೆಂಕಟರಮಣಯ್ಯ, ಆಮೇಲೆ ಆರ್. ಸಿ. ಹಿರೇಮಠ, ಪ್ರೊ. ಎಮ್. ಎಮ್. ಕಲಬುರ್ಗಿ, ಪ್ರೊ. ವಿ. ಜಿ. ಕುಲಕರ್ಣಿ ಮೊದಲಾದವರು ಅಭ್ಯಸಿಸಿ ವಿವೇಚಿಸಿದ್ದಾರೆ.

ಸಾವಿರ ವರುಷಗಳ ಹಿಂದಿನ ಕರೀಂನಗರ, ಗುಂಟೂರು ಜಿಲ್ಲೆಗಳು ಹೇಗಿದ್ದವೋ ಯಾರಿಗೆ ಗೊತ್ತು? ಗಂಗಾಧರಂ ಗ್ರಾಮದ ಬೊಮ್ಮಲಗುಟ್ಟ ಎಂಬ ಬೆಟ್ಟದ ಸುತ್ತುಮುತ್ತಲಿನ ವಿಸ್ತಾರ ಪ್ರದೇಶವನ್ನು ನೋಡಿದಾಗ, 'ಕವಿತಾಗುಣಾರ್ಣವ'

ಎಂಬ ಕೆರೆಯನ್ನು ನೋಡಿದಾಗ ಮನಸ್ಸಿನಲ್ಲಿ
ಏನೇನೋ ಭಾವನೆಗಳು ಉಕ್ಕಿ ಬರುತ್ತವೆ
ಪ್ರೊ. ಕಲಬುರ್ಗಿಯವರು ಬೊಮ್ಮಲಗುಟ್ಟ
ಗುಡ್ಡದತ್ತ ಕಾಲುನಡಿಗೆಯಿಂದ ಸಾಗಿ ಅಲ್ಲಿ ತಾವು
ಅನುಭವಿಸಿದ ಆನಂದವನ್ನು ರಮಣೀಯ ಸ್ಮೃ
ಯಲ್ಲಿ ಹೀಗೆ ಹೇಳುತ್ತಾರೆ :

"ಎಳೆ ಬಿಸಿಲು ಕಾಲೂರಲು ಪ್ರಾರಂ
ಮಾಡಿತ್ತು. ದಾರಿಯ ಬಲದಲ್ಲಿ ವಿಶಾಲವಾ
ಭತ್ತದ ಗದ್ದೆಗಳು. ಎಡದಲ್ಲಿ ಒಂದು ಮೈಲ
ವಿಸ್ತಾರವಾದ ಕೆರೆ. ಗದ್ದೆಯಲ್ಲಿ ಭತ್ತದ ಸ
ಬಂಗಾರ ಬಣ್ಣಕ್ಕೆ ತಿರುಗಿತ್ತು. ಕೆರೆಯಲ್ಲಿ ನೀರ ತೆ
ನಿರಿಗೆ ಮುರಿಯುತ್ತಿತ್ತು. ಆ ಊರ ಜನ
ಇದನ್ನು 'ಪಾತಚೆರು' ಎಂದು ಕರೆಯುತ್ತಾರೆ
ಈ ತೆಲುಗು ಶಬ್ದಕ್ಕೆ 'ಪುರಾತನ ಕೆರೆ' ಎಂದು
ಅರ್ಥ. ಶಾಸನದಲ್ಲಿ ಈ ಕೆರೆಯನ್ನು 'ಕವಿತ
ಗುಣಾರ್ಣವ' ಎಂದು ಕರೆಯಲಾಗಿದೆ. ಇದ
ಪಂಪನ ಬಿರುದು. ಅಣ್ಣನ ಬಿರುದಿನ ಈ ಕೆ
ಯನ್ನು ಕಟ್ಟಿಸಿದವನು ತಮ್ಮ ಜಿನವಲ್ಲಭ. ಕೆ
ಯನ್ನು ನೋಡುತ್ತಲೆ ನನ್ನ ನಾಲಗೆ 'ಇದ
ಪಾತಾಳ ಬಿಲಕ್ಕೆ ಬಾಗಿಲ್...' ಎಂಬ ಪಂ
ಭಾರತದ ವಾಕ್ಯವನ್ನು ಗುಣುಗುಣಿಸಿತು. ಕೆ
ಸಮೀಪಿಸಿದಂತೆ ನನ್ನ ಭಾವ ತರಂಗ ಉಕ್ಕ
ರಿತು. ಭಕ್ತಿ–ತೆರೆ ಎದ್ದಿತು. ಕುಡಿಯಲು ಅಷ್ಟು
ಯೋಗ್ಯವಲ್ಲದಿದ್ದರೂ ಭಾವನಾಪರವಶವಾದ ನನ್ನ
ಮನಸ್ಸು ಆ ಪುಣ್ಯಜಲವನ್ನು ಸೇವಿಸಲು ಹಂಬ
ಸಿತು. ಹರಿದು ಹೋಗಿ ಜಲಸ್ಪರ್ಶ ಮಾಡಿದೆನು
ಮೈ ಜುಂ ಎಂದಿತು. ಒಂದು ಗುಟುಕು ಕುಡಿದೆ
ಗಂಗಾಪಾನದಷ್ಟು ಸುಖವೆನಿಸಿತು. ನೀರಿ
ಮೂಲಕ ಪಂಪನನ್ನೇ ಅಂತರಂಗದಲ್ಲಿ ತುಂಬಿಕೊ
ಳ್ಳುತ್ತಿರುವ ಅನುಭವವುಂಟಾಯಿತು. ಇದು
ನೀರಲ್ಲ. ತೀರ್ಥಜಲ ಎಂದು ನಾಲಗೆ ನುಡಿಯಿತು.

ಗಂಗಾಧರಂ ಗ್ರಾಮದ ಶಾಸನವನ್ನು ಬರೆಯಿ
ಸಿದ ಜಿನವಲ್ಲಭನು ತಾನು ಭೀಮಪಯ್ಯನ ಮ
ನೆಂದೂ, ತಾಯಿ ಬೆಳ್ವಲನಾಡಿನ ಅಣ್ಣಿಗೆರೆಯ
ಜೋಯಿಸ ಸಿಂಘನ ಮಗಳಾದ ಅಬ್ಬಣಬ್ಬೆ
ಯೆಂದೂ ಹೇಳುತ್ತಾನೆ. "ಜಿನವಲ್ಲಭನ ತಂದೆ–
ತಾಯಿಗಳೇ ಪಂಪನ ತಂದೆ—ತಾಯಿಗಳು
ಪಂಪನು ತನ್ನ ಬಾಲ್ಯದ ದಿನಗಳನ್ನು ಅಣ್ಣಿಗೇ

ಯಲ್ಲಿ ಕಳೆದಿದ್ದ. ಈ ಸಂಗತಿಗಳೊಂದಿಗೆ 'ವಿಕ್ರಮಾರ್ಜುನ ವಿಜಯ'ವನ್ನು ಬರೆದ ನಿಮಿತ್ತ ಪಂಪನಿಗೆ ಅರಿಕೇಸರಿಯು ಧರ್ಮಪುರವೆಂಬ ಗ್ರಾಮವನ್ನು ಕೊಟ್ಟನೆಂದೂ ಈ ವಿಷಯವನ್ನು ಉಲ್ಲೇಖಿಸುವ ಉನ್ನತ ಶಾಸನವೊಂದು ವೃಷಭಾದ್ರಿಯಲ್ಲಿದೆಯೆಂದೂ ಈ ಶಾಸನದಿಂದ ತಿಳಿದುಬರುತ್ತದೆ. ಜಿನವಲ್ಲಭನು ತಾನು ಜಿನಪ್ರತಿಮೆ ಪ್ರತಿಷ್ಠಾಪಿಸಿದ ಬೊಮ್ಮಲಗುಟ್ಟದ ಉತ್ತರಭಾಗಕ್ಕೆ ವೃಷಭಾಚಲವಿದೆಯೆಂದೂ ಅದರ ದಕ್ಷಿಣಕ್ಕೆ ಸಬ್ಬಿನಾಡ ಮಧ್ಯದಲ್ಲಿ ಧರ್ಮಪುರವಿದೆಯೆಂದೂ ಹೇಳಿದ್ದಾನೆ. ಇದರಿಂದ ಕರೀಂನಗರ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶ ಸಬ್ಬಿನಾಡು ಎಂದೂ ಪಂಪನು ದತ್ತಿಯಾಗಿ ಪಡೆದ ಧರ್ಮಪುರವು ಈಗಣ ಕರೀಂನಗರ ಜಿಲ್ಲೆಯ ಒಳ-ಹೊರಗೆ ಇದೆಯೆಂದೂ ವಿದಿತವಾಗುತ್ತದೆ."

ಪಂಪನ ಪೂರ್ವಜರು ಇದೇ ಸೀಮೆಯಲ್ಲಿದ್ದರೆ? ಅವರು ಯಾವ ಭಾಷೆಯನ್ನಾಡುತ್ತಿದ್ದರು? ತಿರುಳ್ಗನ್ನಡವೆ ಇದ್ದಿರಬೇಕಲ್ಲವೆ? ವೆಂಗಿಮಂಡಲದ ಕಮ್ಮೆನಾಡಿನಲ್ಲಿದ್ದ ಸುಪ್ರಸಿದ್ಧ ಏಳು ಅಗ್ರಹಾರಗಳಲ್ಲಿ ಒಂದಾದ ವೆಂಗಿಪಳು ಎಂಬ ಗ್ರಾಮ. ಜಮದಗ್ನಿ ಪಂಚಾರ್ಷೇಯ ಶ್ರೀವತ್ಸ ಗೋತ್ರದ ಕಮ್ಮೆ ಬ್ರಾಹ್ಮಣರಾದ ಈತನ ಪೂರ್ವಜರು ಅಭಿಮಾನಚಂದ್ರನ ಕಾಲಕ್ಕೆ ವೆಂಗಿಪಳುವನ್ನು ಬಿಟ್ಟು ಅದೇ ಸಪ್ತಗ್ರಾಮಗಳಲ್ಲಿ ಒಂದಾದ ಗುಂಡಿಗನದೀ ತೀರದ ನಿಡುಗುಂದಿಗೆ ಬಂದರೆಂದು ಇದೇ ಶಾಸನದಲ್ಲಿ ಹೇಳಿದೆ. "ಈ ವೆಂಗಿಪಳು, ನಿಡುಗುಂದಿಗಳು ಈಗಿನ ಗುಂಟೂರು ಜಿಲ್ಲೆಯ ಬಾಪಟ್ಲ ತಾಲ್ಲೂಕಿನಲ್ಲಿವೆ ಎಂದು ಈ ಶಾಸನದ ಸಂಪಾದಕರು ನಿರ್ಣಯಿಸಿದ್ದಾರೆ,'' ಎಂದು ಡಾ. ಆರ್. ಸಿ. ಹಿರೇಮಠ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ ಮೇರೆಗೆ ಇಂದಿಗೂ ಈ ತಾಲೂಕಿಗೆ ಒಮ್ಮೆ ಭೇಟ್ಟಿಕೊಟ್ಟರೆ ಹಿಂದಿನ ವೆಂಗಿಪಳು, ನಿಡುಗುಂದಿಗಳ ದರ್ಶನವಾದೀತೆ? ನಮ್ಮ ಕವಿ ಪಿತಾಮಹನ ಪ್ರಾಚೀನ ಕುರುಹುಗಳೇನಾದರೂ ನೋಡಲು ಸಿಕ್ಕಾವೆ? ಪಂಪ ತನ್ನ ಎರಡೂ ಕಾವ್ಯಗಳನ್ನು ವೇಮುಲವಾಡದಲ್ಲಿಯೇ ಬರೆದು ಪೂರೈಸಿರಬೇಕೆಂದು ಊಹಿಸಬಹುದಾಗಿದೆ.

ಪಂಪನ ವಿಷಯದಲ್ಲಿ ಹೊಸದಾಗಿ ಸಿಕ್ಕಿದ ಈ ಶಾಸನ ವಿಚಿತ್ರ ವಾದಗಳಿಗೆ ಎಡೆಗೊಟ್ಟಿದೆ. ಕನ್ನಡದ ಆದಿಕವಿ, ನಾಡೋಜ ಕಡೆಗೆ ನೋಡುವಾಗ ಒಬ್ಬ ಆಂಧ್ರ ಬ್ರಾಹ್ಮಣ ಎಂಬುದಾಗಿ ಕೆಲವರು ಹೇಳಿಕೊಳ್ಳತೊಡಗಿದ್ದಾರೆ. ಆತ ತನ್ನ ಸ್ವಭಾಷೆಯಾದ ಪುಲಿಗೆರೆಯ ಕನ್ನಡದಲ್ಲೇ ಕಾವ್ಯರಚನೆ ಮಾಡಿದ್ದೇನೆಂದು ಹೇಳಿಕೊಂಡಿದ್ದರೂ ಈ ತರದ ತರ್ಕ. ಈ ಬಗೆಯ ಭಾಷಾವಾದವಿಲ್ಲದ ಕಾಲದಲ್ಲಿ ಹುಟ್ಟಿದ ಪುಣ್ಯವಂತ ಪಂಪ.

ಜಿನವಲ್ಲಭನ ಶಾಸನ ನನ್ನ ಮನಸ್ಸಿನಲ್ಲಿ ಹೊಸತೊಂದು ಪ್ರಶ್ನೆಯನ್ನು ಎಬ್ಬಿಸಿದೆ. ಜಿನವಲ್ಲಭನಿಗೆ ಅಣ್ಣನ ಮೇಲಿದ್ದ ಪ್ರೇಮ ಅಪ್ರತಿಮವಾಗಿ ಕಾಣಿಸುತ್ತದೆ. ಪ್ರೇಮ ಸರಿಯೆ. ಆದರೆ ಜಿನವಲ್ಲಭ ತನ್ನಣ್ಣನ ಹೆಸರಲ್ಲಿ ಒಂದು ಭಾರಿ ಕೆರೆಯನ್ನೇ ಕಟ್ಟಿಸುತ್ತಾನೆ. ಇಂಥ ವೆಚ್ಚದ ಉಪಕ್ರಮವನ್ನು ಅಣ್ಣನಿಗಾಗಿ ಕೈಕೊಳ್ಳುವುದಕ್ಕೆ ತಮ್ಮನಿಗೆ ಪ್ರೇರಣೆ ಏನಿರಬಹುದು? ಪಂಪ ಅಕಾಲದಲ್ಲೇ ಮರಣ ಹೊಂದಿದನೆ? ಅವನು ನಿಪುತ್ರಿಕನಾಗಿದ್ದನೆ? ಅವನಿಗೆ ರಾಜನಿತ್ತ ಅಗ್ರಹಾರ ಸಮೇತವಾಗಿ ಎಲ್ಲಕ್ಕೂ ಜಿನವಲ್ಲಭ ಉತ್ತರಾಧಿಕಾರಿಯಾದನೆ? ಇದರಿಂದಲೇ ಈ ಧರ್ಮಕಾರ್ಯಗಳನ್ನು ಆತನ ಹೆಸರಲ್ಲಿ ಮಾಡಿಸಿದನೆ?

ತನ್ನೆರಡು ಚಂಪೂ ಕಾವ್ಯಗಳನ್ನು ಕನ್ನಡ ಸರಸ್ವತಿಗೆ ಕಾಣಿಕೆಯಾಗಿತ್ತ ಕವಿ ಒಂದು ದೃಷ್ಟಿಯಿಂದ ಭಾರತಕ್ಕೆಯೆ ಚಂಪೂವಿಧಾತನೆನಿಸಿದ ಎನ್ನಬಹುದು. ಏಕೆಂದರೆ ಪ್ರಧಾನ ಸಂಸ್ಕೃತ-ಚಂಪೂ ಕಾವ್ಯಗಳಾದ ರಾಮಾಯಣ ಚಂಪೂ, ಮಹಾಭಾರತ ಚಂಪೂ, ಯಶಸ್ತಿಲಕ ಚಂಪೂ ಇವು ಉದಯವಾದುದು ಪಂಪನ ತರುವಾಯವೆ. ಸಂಸ್ಕೃತದಲ್ಲಿ ಇದ್ದಿರಬಹುದಾದ ಚಂಪೂ ಶೈಲಿಯನ್ನು ಕನ್ನಡಕ್ಕೆ ಒಪ್ಪುವ ಹಾಗೆ, ಒಗ್ಗುವ ಹಾಗೆ ಈತ ಬಳಸಿದ. ಕನ್ನಡದಲ್ಲಂತೂ ಮುಂದೆ ಯಾರೂ ಪಂಪನನ್ನು ಸರಿದೂಗಲಿಲ್ಲ. ▲

ಡಾ. ಡ್ಯಾನ್
ಹೃದಯ ಶಸ್ತ್ರಕ್ರಿಯೆಯ ಮೊದಲಿಗ

ರಾಧಾಕೃಷ್ಣರಾವ್



ದಕ್ಷಿಣ ಆಫ್ರಿಕದ ಡಾ. ಬರ್ನಾರ್ಡರು ಈಗ ಕೆಲ ವರ್ಷಗಳಿಂದ ಹೃದಯದ ಕಸಿ ಮಾಡಿ ಅನೇಕ ಮರಣೋನ್ಮುಖ ಹೃದಯರೋಗಿಗಳನ್ನು ಬೇರೆಯವರ ಹೃದಯಗಳ ಮೂಲಕ ಜೀವಂತವಾಗಿರಿಸಿದ್ದಾರೆ. ಇದೇ ಪವಾಡವನ್ನು ಅಮೇರಿಕದ ಕೆಲ ಸರ್ಜನ್ನರು ಪುನಃ ಪುನಃ ಮಾಡಿದ್ದಾರೆ. ಭಾರತದಲ್ಲಿ ಕೂಡ ಹೃದಯದ ದೋಷಗಳನ್ನು ಸರಿಪಡಿಸುವುದಕ್ಕಾಗಿ ಶಸ್ತ್ರಕ್ರಿಯೆಗಳನ್ನು ಪ್ರಮುಖ ನಗರಗಳ ಸರ್ಜನ್ನರು ನೆರವೇರಿಸುತ್ತಿದ್ದಾರೆ. ಅಷ್ಟೇಕೆ, ಈಚೆಗೆ ಹುಬ್ಬಳ್ಳಿಯ ಒಬ್ಬ ತರುಣ ಸರ್ಜನ್ನರು ಹೃದಯಕ್ಕೆ ಸಂಬಂಧಿಸಿದ ರಕ್ತ ನಾಳಗಳನ್ನು ಶಸ್ತ್ರಕ್ರಿಯೆಗೊಳಪಡಿಸಿ ರಕ್ತಾಭಿಸರಣಕ್ಕೆ ಅನುಕೂಲ ಮಾಡಿಕೊಟ್ಟರೆಂದು ವರದಿಯಾಗಿದೆ.

ಇಂದು ಮಾನವನ ಎದೆಗುಂಡಿಗೆ ಸರ್ಜನ್ನನ ಚೂರಿಗೆ ನಿರಾಂತಕವಾಗಿ ಪ್ರವೇಶವೀಯುತ್ತಿದ್ದರೆ ಅದರ ಶ್ರೇಯಸ್ಸಿನ ಒಂದು ಪಾಲು ಅಮೇರಿಕದ ಡಾಕ್ಟರ್ ದಾನಿಯೆಲ್ ಹೇಲ್ ವಿಲಿಯಮ್ಸನಿಗೆ ದೊರಕಬೇಕು. ಈ ನಿಗ್ರೋ ಡಾಕ್ಟರನು ಮಾನವ ಹೃದಯದ ಮೇಲೆ ಮೊಟ್ಟಮೊದಲು ಯಶಸ್ವಿಯಾಗಿ ಶಸ್ತ್ರ ಆಡಿಸಿದವನಾಗಿದ್ದಾನೆ. ಈ ಶಸ್ತ್ರಕ್ರಿಯೆಗೆ ಗುರಿಯಾಗಿ ಜೀವದಾನ ಪಡೆದವನೂ ಒಬ್ಬ ನಿಗ್ರೋವೇ.

ವರ್ಷ ೧೮೯೩. ಚಿಕ್ಕಾಗೋವಿನ ಒಂದು ಗಡಂಗಿನ ಮುಂದೆ ನಡೆದ ಜಗಳ, ಮಾರಾಮಾರಿಯಲ್ಲಿ ಪರ್ಯವಸಾನ ಹೊಂದಿತು. ಜೇಮ್ಸ್ ಕಾರ್ನಿಶ್ ಎಂಬ ಕೆಲಸಗಾರನ ಎದೆಗೆ ಯಾರೋ ಚೂರಿಯಿಂದ ಇರಿದರು. ಅವನನ್ನು ಹತ್ತಿರವೇ ಇದ್ದ ಪ್ರಾವಿಡೆಂಟ್ ಆಸ್ಪತ್ರೆಗೆ ಹೊತ್ತು ತಂದಾಗ ಡಾ. ಡ್ಯಾನ್ (ದಾನಿಯೆಲ್ ವಿಲಿಯಮ್ಸನನ್ನು ಜನ ಕರೆಯುತ್ತಿದ್ದದ್ದು ಹಾಗೆ) ನಿಗೆ ಗಾಯವೇನೂ ಗಂಭೀರವಾಗಿ ಕಾಣಿಸಲಿಲ್ಲ. ಎದೆಯ ಅಸ್ಥಿಪಂಜರದ ಎಡ ಭಾಗದಲ್ಲಿ ನಾಲ್ಕು ಮತ್ತು ಐದನೇ ಪಕ್ಕೆಲುಬುಗಳ ನಡುವೆ ಮುಕ್ಕಾಲು ಅಂಗುಲದ ಗಾಯವಾಗಿತ್ತು. ಅದರಿಂದ ವಿಶೇಷ ರಕ್ತಸ್ರಾವವಾಗುತ್ತಿರಲಿಲ್ಲ. ಒಳಗೂ ರಕ್ತಸ್ರಾವವಾದ ಲಕ್ಷಣಗಳನ್ನು ಕಾಣದೆ ಡಾ. ಡ್ಯಾನ್

ರೋಗಿ ತಂತಾನೆ ಸುಧಾರಿಸಿಕೊಳ್ಳುವನೆಂದುಕೊಂಡನು. ಆದರೆ ಸ್ವಲ್ಪ ಸಮಯದ ನಂತರ ರೋಗಿಗೆ ಹೃದಯ ಪ್ರದೇಶದಲ್ಲಿ ತೀವ್ರ ವೇದನೆ ಆರಂಭವಾಯಿತು. ಆಘಾತದ (shock) ಲಕ್ಷಣಗಳೂ ಕಾಣಿಸಿಕೊಂಡವು. ಚೂರಿ ತಾನೆಣಿಸಿದ್ದಕ್ಕಿಂತಲೂ ಆಳವಾಗಿ ಹೊಕ್ಕಿರಬೇಕೆಂದೂ ಹೃದಯ ಅಥವಾ ಅದರ ಸುತ್ತಲ ಮಹತ್ವದ ರಕ್ತನಾಳಗಳಿಗೆ ಪೆಟ್ಟಾಗಿರಬೇಕೆಂದೂ ಡ್ಯಾನನಿಗೆ ಖಚಿತವಾಯಿತು.

೧೮೫೬ರಲ್ಲಿ ಹುಟ್ಟಿದ ಡಾ. ಡ್ಯಾನ್ ವಿಸ್ಕಾನ್ಸಿನ್ ಪ್ರಾಂತದ ಜೇನ್ವಿಲೆಯಲ್ಲಿ ಮೊದಲು ಹಜಾಮನಾಗಿ ಜೀವನ ಪ್ರಾರಂಭಿಸಿ, ಆ ಮೇಲೆ ಶಾಲೆಗೆ ಹೋಗಿ ಕೆಲ ಕಾಲ ಕಾನೂನನ್ನು ಅಭ್ಯಸಿಸಿ ಸರಿಬೀಳದೆ, ವೈದ್ಯಕೀಯದ ಕಡೆ ಹೊರಳಿದವನಾಗಿದ್ದ. ಕೆಲ ಕಾಲ ಪ್ರಸಿದ್ಧ ಡಾಕ್ಟರನಾದ ಹೆನ್ರಿ ಪಾಮರನಲ್ಲಿ ತರಬೇತಿ ಹೊಂದಿ ಚಿಕ್ಯಾಗೋ ಮೆಡಿಕಲ್ ಕಾಲೇಜಿಗೆ ತನ್ನ ೨೪ನೇ ವಯಸ್ಸಿನಲ್ಲಿ ಆತ ಪ್ರವೇಶ ಪಡೆದ. ಅದು ವೈದ್ಯಕೀಯ ರಂಗದಲ್ಲಿ ಹೊಸ ವಿಚಾರಧಾರೆಗಳ ಕಾಲ. ಪ್ರವೀಣ ವೈದ್ಯರೂ ಸರ್ಜನ್ನರೂ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದರು. ೧೮೮೩ರಲ್ಲಿ ಆತ ಡಿಗ್ರಿ ಪಡೆದು ಹೊರ ಬಂದಾಗ ತುಂಬಾ ಆತ್ಮವಿಶ್ವಾಸವುಳ್ಳವನಾಗಿದ್ದ. ಚಿಕ್ಯಾಗೋವಿನಲ್ಲಿ ಆತ ವೃತ್ತಿಯನ್ನಾರಂಭಿಸಿದ. ಬಲುಬೇಗನೇ ಅವನಲ್ಲಿಗೆ ರೋಗಿಗಳು ಹಿಂಡುಹಿಂಡಾಗಿ ಬರತೊಡಗಿದರು.

ಡಾ. ದಾನಿಯೇಲನ ವೃತ್ತಿಯ ಹತ್ತನೆ ವರ್ಷದಲ್ಲಿ ಹೃದಯದಲ್ಲಿ ಇರಿತದ ಈ ಪ್ರಕರಣ ಅವನ ಕಡೆ ಬಂದಿತ್ತು. ನಿಜವಾಗಿ ಗಾಯದ ರೂಪ ಏನಿತ್ತೆಂದು ತಿಳಿದುಕೊಳ್ಳುವ ಮಾರ್ಗವೇನೂ ಇರಲಿಲ್ಲ. ಆಗ X-ರೇ ಇನ್ನೂ ಆವಿಷ್ಕಾರವಾಗಿರಲಿಲ್ಲ. ವೈದ್ಯಕೀಯ ರಂಗದಲ್ಲಿ ಕ್ರಾಂತಿಕಾರಕ ಕಲ್ಪನೆಗಳು ಬರತೊಡಗಿದ್ದರೂ ಹೃದಯದ ವಿಷಯದಲ್ಲಿ ಸರ್ಜನ್ನರು ಇನ್ನೂ ಭಯಗ್ರಸ್ತರೇ ಆಗಿದ್ದರು. ಹೃದಯವೆಂಬುದು ಆತ್ಮದ ಅಧಿಷ್ಠಾನ, ಅದರ ಉಸಾಬರಿಗೆ ಹೋಗುವುದು ಧರ್ಮಬಾಹಿರ ಎಂಬ ಭಾವನೆ ಇನ್ನೂ ಇತ್ತು. ಹೃದಯಕ್ಕೆ ಗಾಯವಾದ ಪ್ರಕರಣಗಳಲ್ಲಿ ಕೆಲವರು ತಂತಾನೆ ಗುಣ ಹೊಂದುತ್ತಿದ್ದರು. ಇತರರು 'ದೇವರ ಇಚ್ಛೆಯಂತೆ' ಸಾಯುತ್ತಿದ್ದರು. ಕೆಲ ಡಾಕ್ಟರರು ಹೃದಯದ ಬಹಿರಾವರಣ (pericardium)ವನ್ನು ಚುಚ್ಚಿ ಅಲ್ಲಿ ಸೇರಿಕೊಂಡ ದುರ್ಜಲವನ್ನು ಖಾಲಿ ಮಾಡುವ ಧೈರ್ಯ ಮಾಡತೊಡಗಿದ್ದರೂ ಹೃದಯದ ಸಮೀಪದಲ್ಲಿರುವ ಜಟಿಲ ರಕ್ತನಾಳ ಮತ್ತು ನರಜಾಲಗಳಿಗೆ ಧಕ್ಕೆ ಮಾಡಿ ರೋಗಿಯ ಮರಣಕ್ಕೆ ಕಾರಣವಾಗುತ್ತಿದ್ದುದೇ ಹೆಚ್ಚು.

ಕೆಲ ವರ್ಷಗಳ ಹಿಂದೆ ಡ್ಯಾನ್‌ಜಿಗ್‌ನಲ್ಲಿ ಡಾ. ಬ್ಲಾಕ್ ಎಂಬವನು ಪ್ರಾಣಿಗಳ ಮೇಲೆ ಪ್ರಯೋಗ ಮಾಡಿದ ಮೇಲೆ, ಸರ್ಜನ್ನರು ವಕ್ಷಸ್ಥಳವನ್ನು ತೆರೆಯುವುದಕ್ಕೆ ಅಂಜದೆ ಹೃದಯದ ಬಹಿರಾವರಣವನ್ನು ಕೊಯ್ದು ಹೊಲಿಗೆ ಹಾಕುವುದಾದರೆ ಎಷ್ಟೋ ಜೀವಗಳನ್ನು ಉಳಿಸಬಹುದೆಂದು ಬರೆದಿದ್ದ. ಆದರೆ ವೈದ್ಯಕೀಯ ವರ್ಗಗಳಲ್ಲಿ ಈ ಸೂಚನೆ ವಿಶೇಷ ಸ್ವಾಗತ ಪಡೆದಿರಲಿಲ್ಲ. ವಸ್ತುತಃ ದಿಟ್ಟತನದಲ್ಲಿ ಕೊರತೆಯಿಲ್ಲದ ಜರ್ಮನ್ ಸರ್ಜನ್ನನಾದ ಥಿಯೋಡೋರ್ ಬಿಲ್‌ರಾಥನಂಥವರು ಕೂಡ ಈ ವಿಚಾರವನ್ನು ಕಠಿನವಾಗಿ ವಿರೋಧಿಸಿ, "ಹೃದಯಕ್ಕೆ ಹೊಲಿಗೆ ಹಾಕುವ ಯತ್ನ ಮಾಡುವ ಡಾಕ್ಟರನು ವೃತ್ತಿದ್ರೋಹಿ," ಎಂದು ಹೇಳಿದ್ದರು.

ಕಾರ್ನಿಷನ ಅವಸ್ಥೆಯನ್ನು ನೋಡುತ್ತಾ ಡಾ. ಡ್ಯಾನನಿಗೆ ಇವೆಲ್ಲಾ ವಿಚಾರಗಳು ಹೊಳೆದು ಹೋದವು. ರೋಗಿ ಈಗ ಕೆಮ್ಮತೊಡಗಿದ್ದ. ಹಾಗೇ ಬಿಟ್ಟರೆ ಆತ ಸಾಯುವುದು ಹೆಚ್ಚು ಕಡಿಮೆ ನಿಶ್ಚಿತವೆ. ಅವನನ್ನು ಅವನ ಪಾಡಿಗೆ ಸಾಯಗೊಟ್ಟರೆ ಯಾರೂ ತನ್ನನ್ನು ಆಕ್ಷೇಪಿಸುವಂತಿರಲಿಲ್ಲ. ಬದಲಿಗೆ ಒಂದು ವೇಳೆ ಡಾ. ಬ್ಲಾಕ್ ಹೇಳಿದ ಹಾಗೆ ತಾನು ಎದೆಯನ್ನು ತೆರೆದು ನೋಡಿ ಮುಂದಿನ ಕ್ರಮ ಕೈಕೊಂಡರೆ ರೋಗಿಯ ಬಚಾವಿನ ಸಂಭವವಿತ್ತು. ಈ ಯತ್ನದಲ್ಲಿ ತಾನು ಅಯಶಸ್ವಿಯಾದರೆ ತನ್ನ ವೃತ್ತಿಬಾಂಧವರೆದುರು

ಮುಖವೆತ್ತಿ ತಿರುಗಿಸುವುದು ಅಸಾಧ್ಯವಾಗುತ್ತಿತ್ತು.

ಏನೇ ಆಗಲಿ, ಶಸ್ತ್ರಕ್ರಿಯೆ ಮಾಡುವೆನೆಂದು ಡಾಕ್ಟರ್ ದಾನಿಯೇಲ್ ನಿರ್ಧರಿಸಿದ.

ಆ ಕಾಲದಲ್ಲಿ ಸರ್ಜನ್ನರ ಕೈಲಿ ತಮ್ಮ ಆಯುಧಗಳಲ್ಲದೆ ಮತ್ತಾವ ಸೌಕರ್ಯವೂ ಇರಲಿಲ್ಲ. ತರಬೇತಾದ ಅನಾಸ್ಥೆಟಿಸ್ಟರಾಗಲಿ (ಸ್ಮೃತಿ ತಪ್ಪಿಸುವವರು), ಆಕ್ಸಿಜನ್, ಎಥಲೀನ್ ಮೊದಲಾದ ಅನಿಲಗಳ ಸಿಲಿಂಡರುಗಳಾಗಲಿ, ನಂಜೇರಿದರೆ ತಡೆಯುವ ಸಲ್ಫಾ ಅಥವಾ ಜೀವಿರೋಧಿ ಔಷಧಗಳಾಗಲಿ ಇರಲಿಲ್ಲ. ರಕ್ತಸ್ರಾವ ಹೆಚ್ಚಾದರೆ ರಕ್ತದಾನದ ವ್ಯವಸ್ಥೆ ಕೂಡ ಲಭ್ಯವಾಗಿರಲಿಲ್ಲ. ಆದರೂ ಡಾ. ಡ್ಯಾನ್ ತನ್ನದೇ ಪ್ರತಿಭೆಯನ್ನು ನಂಬಿ ಎಲ್ಲಾ ವೈದ್ಯಕೀಯ ಪಠ್ಯಪುಸ್ತಕಗಳನ್ನು ಬದಿಗಿಟ್ಟು ಹೊಸ ಮಾರ್ಗದಲ್ಲಿ ಹೊರಟ.

ಶಿಷ್ಯರೂ ಇತರ ಡಾಕ್ಟರರು ಚಿಂತಿತರಾಗಿ ನೋಡುತ್ತಿದ್ದಂತೆ ಡಾ. ಡ್ಯಾನ್ ನಾಲ್ಕು ಮತ್ತು ಐದನೆ ಪಕ್ಕೆಲುಬುಗಳ ನಡುವೆ ಇದ್ದ ಗಾಯವನ್ನು ಕೊಯ್ದು ಅದನ್ನು ಆರಂಗುಲ ಅಗಲಕ್ಕೆ ವಿಸ್ತರಿಸಿದ. ಇದರಿಂದ ಎದೆಯ ಮಧ್ಯದ ಎಲುಬೂ ಐದನೆ ಎಲುಬಿನ ಒಂದಂಶವೂ ಕಾಣಿಸತೊಡಗಿದವು. ಆ ಮೇಲೆ ಎದೆಯೆಲುಬಿಗೆ ತಗಲಿಕೊಂಡ ಮೃದ್ವಸ್ಥಿಯನ್ನು ಕತ್ತರಿಸಿ ಸರಿಸಿದನು. ಈಗ ಎದೆಯಲ್ಲಿ ಒಂದು ಚಿಕ್ಕ ಕಂಡಿ ತೆರೆದಂತಾಗಿತ್ತು.

ಮೆಲ್ಲಗೆ ಚರ್ಮ, ಮಾಂಸ ಖಂಡ ಮತ್ತು ಮೃದ್ವಸ್ಥಿಗಳನ್ನು ಸರಿಸಿ ಡಾ. ಡ್ಯಾನ್ ಈ ಕಂಡಿಯಿಂದ ಕಾರ್ನಿಶನ ಎದೆಯ ಒಳಭಾಗದಲ್ಲಿ ಹಣಕಿ ನೋಡಿದನು. ಒಳಗಿನ ದೊಡ್ಡ ರಕ್ತನಾಳಗಳ ದರ್ಶನವಾಯಿತು. ಡಾ. ಡ್ಯಾನ್ ಊಹಿಸಿದ್ದಂತೆ ಈ ರಕ್ತನಾಳಗಳಲ್ಲಿ ಒಂದಕ್ಕೆ ಧಕ್ಕೆ ತಗಲಿತ್ತು. ಗಾಯ ದೊಡ್ಡದಾಗಿದ್ದಿದ್ದರೆ ರೋಗಿ ಆಸ್ಪತ್ರೆಯನ್ನು ಸಜೀವವಾಗಿ ತಲುಪುತ್ತಿರಲಿಲ್ಲ. ಆದರೂ ಪ್ರತಿ ಉಸಿರಾಟದೊಡನೆ, ಹೃದಯದ ಉಬ್ಬಿಳಿತದೊಡನೆ, ಸ್ವಲ್ಪ ಸ್ವಲ್ಪ ರಕ್ತಸ್ರಾವವಾಗಿ ಕಾರ್ನಿಶನಿಗೆ ತೀವ್ರ ಆಘಾತವಾಗಿತ್ತು. ಹೆಚ್ಚು ರಕ್ತಸ್ರಾವವಾಗದಂತೆ ಡಾ. ಡ್ಯಾನ್ ಈ ನಾಳವನ್ನು ಕಟ್ಟಿದನು.

ಎದೆಯಲ್ಲಿ ತೂತು ಮಾಡಿದ್ದರಿಂದ ಗಾಳಿ ಪ್ರವೇಶಿಸಿ ಶ್ವಾಸಕೋಶವನ್ನೂ ಹೃದಯವನ್ನೂ ಬದಿಗೆ ತಳ್ಳಿದ್ದರಿಂದ ಒಳಗಿನ ಅಂಗಾಂಗಗಳನ್ನು ಪರೀಕ್ಷಿಸುವುದು ಸುಲಭವಾಗಿರಲಿಲ್ಲ. ಸಾಲದ್ದಕ್ಕೆ ಬಹಿರಾವರಣ ಮಿನಿಟಿಗೆ ೧೨೦ ಸಲದಂತೆ ಕುಗ್ಗಿ ಹಿಗ್ಗುತ್ತಿತ್ತು. ಹೇಗೋ ಹೇಗೋ ಅತಂಕಗಳನ್ನು ಸರಿಸಿ ಡಾ. ಡ್ಯಾನ್ ಬಹಿರಾವರಣವನ್ನು ಪರೀಕ್ಷಿಸಿ ಅಲ್ಲಿ ಒಂದೂಕಾಲಂಗುಲದ ಗಾಯವಾದದ್ದನ್ನು ಕಂಡುಹಿಡಿದ. ಅದರ ನಂತರ ಈ ಚಂಚಲ ಚೀಲದ ಗಾಯವನ್ನು ಒಲು ಕಷ್ಟದಿಂದ ಅಗಲಿಸಿ ಎದೆಗುಂಡಿಗೆಯನ್ನು ಪರಿಶೀಲಿಸಿದ. ಅಲ್ಲಿಯೂ ಗಾಯವಾಗಿತ್ತು. ಆದರೆ ಅದರ ಅಗಲ ಒಂದು ನೂಲಿಗಿಂತ ಹೆಚ್ಚಾಗಿರಲಿಲ್ಲ. ವಿಶೇಷ ರಕ್ತಸ್ರಾವವೇನೂ ಗಮನಕ್ಕೆ ಬರಲಿಲ್ಲ. ಹೃದಯದ ಗುಂಡಿಗೆಗೆ ಹೊಲಿಗೆ ಅಗತ್ಯವಿಲ್ಲೆಂದಾತ ನಿರ್ಧಾರಕ್ಕೆ ಬಂದ.

ಅದರೆ ಬಹಿರಾವರಣದ ಮಾತು ಬೇರೆ. ಅಲ್ಲಿಯೂ ಅಂಥ ಸ್ರಾವವೇನೂ ಇಲ್ಲದಿದ್ದರೂ ಅಷ್ಟು ದೊಡ್ಡ ಗಾಯದಿಂದ ರೋಗಾಣು ಪ್ರವೇಶವಾಗಿ ನಂಜೇರುವ ಭಯವಿತ್ತು. ಅಥವಾ ಗಾಯ ಮಾಯುವಾಗ ಹೃದಯಾವರಣ ಶ್ವಾಸಕೋಶದ ಆವರಣಕ್ಕೆ ಅಂಟಿಕೊಂಡು ಮುಂದೆ ಗಂಭೀರ ಪರಿಣಾಮಗಳಿಗೆಡೆ ಕೊಡಬಹುದಾಗಿತ್ತು. ಡಾ. ಡ್ಯಾನ್ ಆ ಗಾಯವನ್ನು ಉಪ್ಪುನೀರಿಂದ ಸೇಚಿಸಿ, ಕ್ಷಣಕ್ಷಣವೂ ಚಡಪಡಿಸುತ್ತಿದ್ದ ಆ ಮೃದು ಚೀಲದ ಗಾಯದ ಎರಡೂ ಮಗ್ಗಲನ್ನೂ ಚಿಮ್ಮಟಿಯಿಂದ ಪ್ರಯತ್ನಪೂರ್ವಕ ಹಿಡಿದು ಜೋಡಿಸಿ ಕ್ಯಾಟ್‌ಗಟ್ ನೂಲಿನಿಂದ ಹೊಲಿದ. ಅನಂತರ ಪಕ್ಕೆಲುವುಗಳ ನಡುವಣ ಗಾಯವನ್ನೂ ಅದೇ ದಾರದಿಂದ ಹೊಲಿದುಬಿಟ್ಟು ಮೃದ್ವಸ್ಥಿ ಮತ್ತು ಹೊರಚರ್ಮದ ಗಾಯಗಳನ್ನು ರೇಶ್ಮೆ ನೂಲಿನಿಂದ ಹೊಲಿದು ಮುಚ್ಚಿದ. ಆ ಮೇಲೆಯೇ ತನ್ನ ನೋಯುತ್ತಿರುವ ಬೆನ್ನನ್ನು

ನೆಟ್ಟಗೆ ಮಾಡಿ ಆತ ನಿಟ್ಟುಸಿರು ಬಿಟ್ಟದ್ದು.

ಇಂದಿನ ಯಾವ ರಾಮಬಾಣ ಔಷಧಗಳೂ ಇಲ್ಲದಿದ್ದರೂ ರೋಗಿಗೆ ಹೇಳಿಕೊಳ್ಳುವ ಯಾವ ಶಸ್ತ್ರಕ್ರಿಯೋತ್ತರ ಉಪದ್ರವಗಳೂ ಆಗಲಿಲ್ಲ. ಮೂರು ದಿನಗಳ ವರೆಗೆ ಅಷ್ಟಿಷ್ಟು ಜ್ವರ, ನಾಡಿ ಬಡಿತದ ದೌರ್ಬಲ್ಯ, ರಕ್ತದ ಒತ್ತಡದ ಇಳಿತ ಇದ್ದವಷ್ಟೇ. ನಾಲ್ಕನೇ ದಿನದಿಂದ ಎಲ್ಲವೂ ನಿಸ್ಪತ್ತಿ ಹೊಂದಿದಂತೆ ತೋರಿತು. ಒಂದು ವಾರದ ನಂತರ ಶ್ವಾಸಕೋಶದ ಆವರಣದಲ್ಲಿ ದುರ್ಜಲ ಶೇಖರವಾಗಿ ನೋವೂ ಪಕ್ಕೆಲುಬುಗಳ ಪ್ರದೇಶದಲ್ಲಿ ಬಾವೂ ಕಾಣಿಸಿಕೊಂಡವು. ಆದರೆ ರೋಗಿಗೆ ಜ್ವರವಿಲ್ಲದ್ದರಿಂದ ಈ ಲಕ್ಷಣಗಳನ್ನು ತಾತ್ಕಾಲದ ಮಟ್ಟಿಗೆ ಹಾಗೇ ಬಿಟ್ಟನು. ಮೂರು ವಾರಗಳ ನಂತರ ರೋಗಿಯ ಎದೆಯಲ್ಲಿ ಇನ್ನೊಂದು ಗಾಯ ಮಾಡಿ ಐದು ಬಾಟಲಿ ಯಷ್ಟು ದುರ್ಜಲವನ್ನು ಹೊರತೆಗೆದದ್ದಾಯಿತು. ಆ ಮೇಲೆ ಯಾವ ತೊಂದರೆಯೂ ಇಲ್ಲದೆ ರೋಗಿ ಚೇತರಿಸಿಕೊಳ್ಳತೊಡಗಿದ. ಆಸ್ಪತ್ರೆ ಸೇರಿ ೫೧ ದಿನಗಳ ನಂತರ ಕಾರ್ನಿಶ್ ಪೂರ್ಣ ಗುಣಹೊಂದಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲ್ಪಟ್ಟ. ಇಪ್ಪತ್ತು ವರ್ಷಗಳ ನಂತರ ಆತ ಇನ್ನೂ ಆರೋಗ್ಯವಾಗಿದ್ದ ನೆಂದು ವರದಿ ಬಂತು.

ಇನ್ನಾಗಿ ಮೂರೂವರೆ ವರ್ಷಗಳ ವರೆಗೂ ಡಾ. ಡ್ಯಾನ್ ತನ್ನೀ ಸಾಹಸದ ವಿಷಯ ಅಧಿಕೃತ ವಾಗಿ ಯಾವ ವರದಿಯನ್ನೂ ಪ್ರಕಟಿಸಲಿಲ್ಲ. ಆದರೆ ಪ್ರಾವಿಡೆಂಟ್ ಆಸ್ಪತ್ರೆಯ ಡಾಕ್ಟರರೂ ಆಡಳಿತ ಮಂಡಳಿಯೂ ಸುದ್ದಿಯನ್ನು ಗುಟ್ಟು ಮಾಡಲಿಲ್ಲ. ಪತ್ರಿಕೆಗಳು ಡಾ. ಡ್ಯಾನನ ಮೇಲೆ ಮುಗಿಬಿದ್ದವು. 'ಇಂಟರ್ ಓಶಿಯನ್' ಪತ್ರಿಕೆಯ ಸುದ್ದಿಗಾರ 'ಹೃದಯವನ್ನು ಹೊಲಿದರು' ಎಂಬ ಚುಟುಕು ಆದರೆ ಬೆಚ್ಚಿಸುವ ತಲೆಬರಹದ ಕೆಳಗೆ ೩೭ ವರ್ಷಗಳ ಈ ನಿಗ್ರೋ—ಆದರೂ ಬಿಳಿ ತೊಗಲಿನ – ಡಾಕ್ಟರನ ಅಪ್ರತಿಮ ಸಾಹಸವನ್ನು ವರ್ಣಿಸಿದ. ಚಿಕ್ಯಾಗೋ ವೈದ್ಯಕೀಯ ವರ್ಗಗ-ಳಲ್ಲಿ ಡಾ. ಡ್ಯಾನನಿಗೆ ಉಚ್ಚ ಗೌರವ ಲಭ್ಯವಾ ಯಿತು. ಚಿಕ್ಯಾಗೋವಿನಲ್ಲಿ ಮಾತ್ರವಲ್ಲ, ದೇಶದ ಲ್ಲೆಲ್ಲಾ ಡಾ. ಡ್ಯಾನ್ ಮನೆಮಾತಾದ.

ಡಾ ಡ್ಯಾನನ ಈ ಸಾಹಸದ ಮೂರು ವರ್ಷ ಗಳ ನಂತರವೇ ಜರ್ಮನಿಯಲ್ಲಿ ಇನ್ನೊಬ್ಬ ಸರ್ಜ ನನು ಈ ಬಗೆಯ ಶಸ್ತ್ರಕ್ರಿಯೆಯನ್ನು ಮಾಡಿ ಯಶಸ್ವಿಯಾದದ್ದು. ಆದ್ದರಿಂದ ೧೮೯೭ ರಲ್ಲಿ ಡಾ. ಡ್ಯಾನ್ ತನ್ನ ಈ ಶಸ್ತ್ರಕ್ರಿಯೆಯ ಬಗ್ಗೆ ನ್ಯೂಯಾರ್ಕಿನ 'ಮೆಡಿಕಲ್ ರಿಕಾರ್ಡ್' ಪತ್ರಿಕೆ ಯಲ್ಲಿ ಬರೆಯುತ್ತಾ ಅದು ಹೃದಯದ ಬಹಿರಾವ ರಣದ ಗಾಯವನ್ನು ಹೊಲಿಯುವ ಪ್ರಪ್ರಥಮ ಯಶಸ್ವಿ (ಅಥವಾ ಅಯಶಸ್ವಿ) ಪ್ರಯತ್ನವೆಂದು ಹೇಳಿದ್ದು ವಾಸ್ತವವಾಗಿತ್ತು. ಈಗ ಡಾ. ಡ್ಯಾನ್ ಕೀರ್ತಿ ರಾಷ್ಟ್ರದ ಗಡಿ ದಾಟಿಹೋಗಿತ್ತು.

ಡಾ. ಡ್ಯಾನನ ಕಾರ್ಯ ಈ ಒಂದು 'ಅದ್ಭುತ ಪ್ರಥಮ'ಕ್ಕೆ ಸೀಮಿತವಾಗಿರಲಿಲ್ಲ. ಆತ ಉದಾತ್ತ ವೃತ್ತಿಯ ವ್ಯಕ್ತಿಯಾಗಿದ್ದ. ಸಾರ್ವಜ ನಿಕ ಸಹಾಯದಿಂದ ಆತ ಚಿಕ್ಯಾಗೋವಿನಲ್ಲಿ ಪ್ರಾವಿಡೆಂಟ್ ಆಸ್ಪತ್ರೆ ಸ್ಥಾಪಿಸಿದ್ದ. ಅದು ವರ್ಣ ಭೇದವಿಲ್ಲದೆ ಎಲ್ಲ ರೋಗಿಗಳಿಗೆ ಸೇವೆ ಸಲ್ಲಿಸು ತ್ತಿತ್ತು. ಅಮೇರಿಕದಲ್ಲಿ ನಿಗ್ರೋ ದಾದಿಯರನ್ನು ತರಬೇತು ಮಾಡುವ ಪ್ರಥಮ ಶಾಲೆಯನ್ನೂ ಅವನೇ ಸ್ಥಾಪಿಸಿದ. ನಿಗ್ರೋ ಡಾಕ್ಟರರಿಗಾಗಿ ಆತ ರಾಷ್ಟ್ರೀಯ ವೈದ್ಯಕೀಯ ಸಂಘವನ್ನೂ ಸ್ಥಾಪಿ ಸಿದ.

ಕೆಲ ವರ್ಷಗಳ ನಂತರ ಶಸ್ತ್ರವೈದ್ಯಕ ರಂಗದಲ್ಲಿ ಡಾ. ಡ್ಯಾನ್ ಇನ್ನೊಂದು ಸಾಧನೆಯನ್ನು ಮಾಡಿ ತೋರಿಸಿದ. ವಾಶಿಂಗ್‌ಟನ್ನಿನ ಫ್ರೀಡ್‌ಮನ್ ಆಸ್ಪತ್ರೆಯಿಂದ ತುರ್ತು ಕರೆ ಬಂದದ್ದರಿಂದ ಡಾ. ಡ್ಯಾನ್ ಅಲ್ಲಿ ಹೋಗಿ ನೋಡಿದಾಗ ಬರೇ ಮೂರೂ ಮುಕ್ಕಾಲಡಿ ಎತ್ತರದ ಬಸಿರು ಹೆಂಗ ಸೊಬ್ಬಳು ಸೆಳವು (convulsion)ವಿಂದ ಪೀಡಿತಳಾಗಿ ಮೂರ್ಛಾವಸ್ಥೆಯಲ್ಲಿ ನಾಲಿಗೆ ಯನ್ನು ಕಚ್ಚಿಕೊಂಡು ಬಿದ್ದುಕೊಂಡಿದ್ದಳು. ಅವಳ ಹೊಟ್ಟೆ ಉಬ್ಬಿತ್ತು. ಯಾರೋ ಅವಳಿಗೆ ಜಲೋದರಕ್ಕಾಗಿ ಔಷಧಿ ಕೊಟ್ಟಿದ್ದರಂತೆ.

ಡಾ. ಡ್ಯಾನನು ಅವಳ ಮೂತ್ರ ಪರೀಕ್ಷೆ ಮಾಡಿಸಿದನು. ಅದರಲ್ಲಿದ್ದ ಕೀವಿನ ಕಣಗಳು ಅವಳ ಮೂತ್ರ ಪಿಂಡಗಳು ರೋಗಗ್ರಸ್ತವಾಗಿದ್ದುದನ್ನು ಸೂಚಿಸಿದವು. ಡಾ. ಡ್ಯಾನ್ ಇತರ ಡಾಕ್ಟರರ ಮುಖ ನೋಡಿ, ಸಿಸೇರಿಯನ್‌ನಿಂದ ಮಗುವನ್ನು ಹೊರತೆಗೆಯುವುದು ಅಪಾಯಕರವಲ್ಲವೇ ಎಂದು ಕೇಳಿದನು. ಮೂತ್ರ ಪಿಂಡಗಳು ಸರಿಯಾಗಿದ್ದರೆ ಕೂಡ ಸಿಸೇರಿಯನ್ ಶಸ್ತ್ರ ಕ್ರಿಯೆಗಳು ಅನೇಕ ವರ್ಷಗಳಿಂದ ಮೃತ್ಯುವಿಗೆ ಆಮಂತ್ರಣವೆಂದೇ ಬರೆಯಲ್ಪಟ್ಟಿದ್ದವು.

ಆದರೂ ಡಾ. ಡ್ಯಾನ್ ಕೈಚೆಲ್ಲಿ ಕುಳ್ಳಿರಲಿಲ್ಲ. ರೋಗಿಯ ಶ್ರೋಣೀ ಅಸ್ಥಿಗಳು ತೀರ ಇಕ್ಕಟ್ಟಾಗಿದ್ದುದರಿಂದ ನೈಸರ್ಗಿಕ ಹೆರಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ಶಸ್ತ್ರಕ್ರಿಯೆ ಹೊರತು ಉಳಿಗಾಲವೇ ಇರಲಿಲ್ಲ. ಡಾ. ಡ್ಯಾನ್ ಅವಳನ್ನು ಆಪರೇಷನ್ ಥಿಯೇಟರಿಗೆ ತರಿಸಿದನು. ಡಾಕ್ಟರರೂ ದಾದಿಯರೂ ವಿದ್ಯಾರ್ಥಿಗಳೂ ಅಭಿಭೂತರಾದಂತೆ ನೋಡುತ್ತಿದ್ದರು. ಡಾ ಡ್ಯಾನ್ ರೋಗಿಯ ಹೊಟ್ಟೆಯನ್ನು ಸೀಳಿದನು. ಮಿಂಚಿನ ಚಮತ್ಕಾರದಿಂದ ಗರ್ಭಕೋಶವನ್ನೆತ್ತಿ ಹೊಟ್ಟೆಯ ಮೇಲಿಟ್ಟು ಮೆಲ್ಲಗೆ ಅದನ್ನು ಸೀಳಿ ಒಳಗಿದ್ದ ಮಗುವನ್ನು ಹೊರತೆಗೆದನು. ಮಗು ಏಳೂ ಮುಕ್ಕಾಲು ಪೌಂಡು ತೂಕದ ಪೂರ್ಣ ಗಾತ್ರದ ಹಸುಳೆಯಾಗಿತ್ತು. ಡಾ. ಡ್ಯಾನ್ ಅವಳ ಗರ್ಭಕೋಶ ಮತ್ತು ಹೊಟ್ಟೆಯನ್ನು ಹೊಲಿದು ಕೈ ತೊಳೆದುಕೊಂಡನು. ನಲುವತ್ತು ನಿಮಿಷಗಳಲ್ಲಿ ಇಡೀ ಚಮತ್ಕಾರ ಮುಗಿದುಹೋಗಿತ್ತು. ಕೆಲ ದಿನಗಳಲ್ಲೇ ಆ ಪುಟ್ಟ ಹೆಂಗಸು ಪೂರ್ತಿ ಗುಣಹೊಂದಿ ತನ್ನ ಗಾತ್ರದ್ದೇ ಮಗುವನ್ನು ಹೆಗಲ ಮೇಲೇರಿಸಿಕೊಂಡು ಆಸ್ಪತ್ರೆಯಲ್ಲೆಲ್ಲ ಪ್ರದರ್ಶಿಸುತ್ತ ಹೆಮ್ಮೆಯಿಂದ ಓಡಾಡತೊಡಗಿದಳು.

ಶಸ್ತ್ರಕ್ರಿಯಾ ಪ್ರಪಂಚದಲ್ಲಿ ಹೊಸ ದಾರಿಗಳನ್ನು ತೆಗೆದ ಈ ಎತ್ತರ, ಸುಂದರ ಡಾಕ್ಟರನ ಬದುಕು ಸುಖವಾಗಿರಲಿಲ್ಲ. ವಾಶಿಂಗ್ಟನ್ನಿನಲ್ಲಿ ನಿಗ್ರೋಗಳಿಗಾಗಿ ಹೊಸದಾಗಿ ಸ್ಥಾಪಿಸಲ್ಪಟ್ಟಿದ್ದ ಫ್ರೀಡಮನ್ ಆಸ್ಪತ್ರೆಗೆ ಅದರ ನಿರ್ದೇಶಕನಾಗಲು ಆತನನ್ನು ಕರೆದರು. ತನ್ನ ವ್ಯಕ್ತಿತ್ವ ಪ್ರಯತ್ನಗಳಿಂದ ಈ ಆಸ್ಪತ್ರೆಯನ್ನಾತ ಅತ್ಯುಚ್ಚ ಮಟ್ಟಕ್ಕೇರಿಸಿದ. ಆದರೆ ತನ್ನ ಸುತ್ತಲಿನ, ನಿಗ್ರೋಗಳೇ ಆದ ಡಾಕ್ಟರರ ಪಿತೂರಿಗಳಿಂದ ಆತನಿಗೆ ಅಲ್ಲಿ ಮುಂದುವರಿಯುವುದು ಅಸಾಧ್ಯವಾಯಿತು. ಹತಾಶನಾಗಿ ಆತ ತಾನೇ ಸ್ಥಾಪಿಸಿದ ಪ್ರಾವಿಡೆಂಟ್ ಆಸ್ಪತ್ರೆಗೆ ಮರಳಿದ. ಅಲ್ಲಿ ಮತ್ತೂ ಅನೇಕ ಶಸ್ತ್ರಕ್ರಿಯಾ ಚಮತ್ಕಾರಗಳನ್ನು ಸಾಧಿಸಿದ. ಆದರೆ ಅಲ್ಲಿಯೂ ಅವನ ಜಾತಿಯವರೇ, ಅವನ ಮಿತ್ರ–ಶಿಷ್ಯರೇ ರಾಜಕಾರಣವನ್ನಾಡಿ ಅವನನ್ನು ಅಧಿಕಾರದಿಂದ ಇಳಿಸಿದರು. ಮೊದಲೇ ಪ್ರೇಮದಲ್ಲಿ ಕೂಡ ಆತ ನಿರಾಶನಾಗಿದ್ದ. ಹೀಗೆ ಈ ಮಹಾಪುರುಷ ೧೯೩೧ ಆಗಸ್ಟ್ ೪ ರಂದು ಏಕಾಂಗಿಯಾಗಿಯೇ ಮರಣ ಹೊಂದಿದ. ▲



ಇಂದ್ರಿಯಗಳ ದಾಸ ದುಃಖಿಗಳ ದಾಸನೂ ಆಗುತ್ತಾನೆ.

— ಬ್ಯಾಕ್‌ಸ್ಟರ್

ಆ ರೂಪ ಈ ರೂಪ

ಕಲಮದಾನಿ ಗುರುರಾಯ

ಈಗ ನಾನು ಮುಂಬಯಿಗೆ ಬಂದು ಮುಲುಂಡ ವಿಭಾಗದಲ್ಲಿ ವಾಸಿಸುತ್ತೇನೆ. ಮುಂಬೈ ಜೀವನವೆಂದರೆ ಯಾಂತ್ರಿಕ, ಶುದ್ಧ ಯಾಂತ್ರಿಕ. ದಿನಾಲೂ ಒಂದೇ ವೇಳೆಗೆ ಏಳುವುದು; ಸ್ನಾನ. ಊಟ. ಅದೇ ವೇಳೆಗೆ ಸರಿಯಾಗಿ; ಆಫೀಸಿಗೆ ಹೋಗಲು ದಿನಾಲೂ ಅದೇ ಅದೇ ಲೋಕಲ್ ಟ್ರೇನ್ ಹಿಡಿಯುವುದು; ವಾಪಸು ಮನೆಗೆ ಬರುವುದು ಸಹ ನಿಖರವಾದ ವೇಳೆಗೆ ಸರಿಯಾಗಿಯೇ.

ನಾನು ದಿನಾಲು ಮುಂಜಾನೆ ಪೇಟೆಗೆ ಹೋಗಿ ಕಾಯಿಪಲ್ಯ ಕೊಂಡುಕೊಂಡು ಹೀಗೇ ತುಸು ಸುತ್ತಾಡಿ ಮನೆಗೆ ತಿರುಗುತ್ತೇನೆ. ಹಾಗೆ ಮನೆಗೆ ಬರುತ್ತಿರುವಾಗ ನನಗೆ ಎದುರಾಗಿ ಎರಡನೇ ಕ್ರಾಸ್ ಬೀದಿಯಿಂದ ಓರ್ವ ಗೃಹಸ್ಥ ಆಫೀಸಿಗೆ ಹೋಗಲು ಬರುತ್ತಿರುತ್ತಾನೆ. ಆಗ ನನ್ನ ರಿಸ್ಟ್‌ವಾಚ್ ನೋಡುತ್ತೇನೆ. ಸರಿಯಾಗಿ ೯–೧೫ ಆಗಿರುತ್ತದೆ. ಅವನು ೯–೨೦ ರ ಲೋಕಲ್ ಟ್ರೇನ್ ಹಿಡಿದು ನೌಕರಿಗೆ ಹೋಗುತ್ತಾನೆ. ಅವನನ್ನು ನೋಡಿದೊಡನೇ ನಮ್ಮ ಕವಿವರ್ಯ ದ. ರಾ. ಬೇಂದ್ರೆಯವರನ್ನು ಕಂಡಂತೆ ನನಗನಿಸುತ್ತದೆ. ಬೇಂದ್ರೆಯವರು ಈಗ ಸುಮಾರು ಹದಿನೈದು ವರುಷಗಳ ಹಿಂದೆ ಹೇಗಿದ್ದರೋ ಹಾಗೆಯೇ ಈ ವ್ಯಕ್ತಿ ಈಗ ದೂರದಿಂದ ಬರುತ್ತಿರುವಾಗ ಕಾಣಿಸುತ್ತಾನೆ. ಮೊದಲ ಸಲ ಅವನನ್ನು ಕಂಡು ಬೇಂದ್ರೆಯವರೇ ಬರುತ್ತಿದ್ದಾರೆಂದು ತಿಳಿದು ಗಕ್ಕನೇ ನಿಂತುಬಿಟ್ಟಿದ್ದೆ. ಅಷ್ಟೇ ಎತ್ತರ, ಅಷ್ಟೇ ದಪ್ಪ, ಅದೇ ಮೈಬಣ್ಣ, ಅದೇ ನಡಿಗೆ. (ಆಗಿನ) ಬೇಂದ್ರೆಯವರಂತೆ ತಲೆಗೂದಲುಗಳನ್ನು ಉದ್ದ ಬಿಟ್ಟು ಹಿಂದಕ್ಕೆ ಬಾಚಿಕೊಂಡಿರುತ್ತಾನೆ. ತುಂಬ ಚೌಕಾದ ಮುಖ, ಮೊಗದಲ್ಲಿ ಗಡುತರ ಮೀಸೆಗಳು. ಮಂದಹಾಸಯುಕ್ತ ಬಾಯಿ, ಅತ್ತಿತ್ತ ಚಂಚಲನೋಟ. ನಡೆಯುವಾಗ ತೋಳುಗಳ ಅಲೆದಾಟವೂ ಬೇಂದ್ರೆಯವರಂತೆಯೇ.

ಅವನನ್ನು ನೋಡಿದೊಡನೆಯೇ ನನಗೆ ಬೇಂದ್ರೆಯವರ ನೆನಪಾಗಿಬಿಡುತ್ತದೆ. ಆಗ ಮನಸ್ಸಿಗೆ ಸಂತೋಷವೆನಿಸುತ್ತದೆ. ಈ ಸಂತೋಷಕ್ಕಾಗಿ ಅವನನ್ನು ಕಾಣಲೆಂದೇ ನಾನು ದಿನಾಲೂ ಮುಂಜಾನೆ ವೇಳೆಗೆ ಸರಿಯಾಗಿ ಪೇಟೆಗೆ ಹೋಗಿ ಕೆಲಸ, ತಿರುಗಾಟಗಳನ್ನು ತೀರಿಸಿಕೊಂಡು ೯–೧೫ಕ್ಕೆ ಅವನನ್ನು ಎದುರಾಗಲು ಮನೆಗೆ ತಿರುಗುತ್ತೇನೆ. ಆಗ ಅವನ ದರ್ಶನ ತಪ್ಪದೇ ಆಗುವುದು. ನಾನು ಅವನನ್ನು ದೂರದಿಂದಲೇ ನೋಡುತ್ತ ಸಾಗುತ್ತೇನೆ. ಅವನೂ ನನ್ನನ್ನು ನೋಡುತ್ತಾನೆ. ಆತ ನನ್ನನ್ನು ನೋಡಿ ಏನೆನಿಸುತ್ತಾನೋ ನಾನರಿಯೆ.

ಈ ಪ್ರಕಾರ ನಮ್ಮಿಬ್ಬರ ಪರಸ್ಪರ ದರ್ಶನ ಅನೇಕ ತಿಂಗಳುಗಳ ವರೆಗೆ ನಡೆಯಿತು. ಒಂದು

ದಿನ ಅವನು ತನ್ನ ಮನದ ಭಾವವನ್ನು ತಡೆಯಲಾರದೇ ನೇರವಾಗಿ ನನ್ನೆದುರು ಬಂದು ನನ್ನನ್ನು ಮಾತಾಡಿಸಿದನು. "Goodmorning sir. Everyday I am seeing you with your affectionate eyes upon me, with your pleasing smile on your face. How is it? Who are you? Are you really pleased to see me?" (ನಮಸ್ಕಾರ ಸ್ವಾಮಿ, ಪ್ರತಿ ದಿನ ನಿಮ್ಮನ್ನು ನೋಡುತ್ತಿದ್ದೇನೆ. ನಿಮ್ಮ ಪ್ರೀತಿಪೂರ್ಣ ನೋಟ, ನಸುನಗೆ, ನನ್ನ ಮೇಲೆ ಬೀಳುವುದನ್ನು ಗಮನಿಸುತ್ತೇನೆ. ನೀವು ಯಾರು? ನನ್ನನ್ನು ನೋಡಿ ನಿಮಗೆ ನಿಜವಾಗಿ ಸಂತೋಷವಾಗುತ್ತದೆಯೆ?) ಎಂದ.

ನಾನೂ ಇಂಗ್ಲೀಷಿನಲ್ಲಿಯೇ ಉತ್ತರ ಕೊಟ್ಟೆ. "ಹೌದು, ನಿಮ್ಮನ್ನು ನೋಡಿದರೆ ನನಗೆ ಸಂತೋಷವಾಗುತ್ತದೆ. ನಾನು ಮೈಸೂರು ಸ್ಟೇಟಿನ ಪ್ರಜೆ. ಹುಬ್ಬಳ್ಳಿ ನನ್ನ ಊರು. ಇಡೀ ನಾಡಿಗೆ ಶ್ರೇಷ್ಠರಾದ ಕವಿಗಳೊಬ್ಬರು ನಮ್ಮೂರ ನೆರೆಯಲ್ಲಿದ್ದಾರೆ. ಬೇಂದ್ರೆ ಎಂದು ಅವರ ಹೆಸರು. ಅವರಿಗೂ ನನಗೂ ಬಹಳ ಋಣಾನುಬಂಧ. ಅವರು ನನಗೆ ಅಣ್ಣನಂತಿದ್ದಾರೆ. ನನ್ನ ಮೇಲೆ ಅವರಿಗೆ ಬಹು ಪ್ರೀತಿ. ನಿಮ್ಮನ್ನು ಕಂಡ ಸರತಿಗೊಮ್ಮೆ ನನಗೆ ಅವರ ನೆನಪಾಗಿ ಸಂತೋಷವಾಗುತ್ತದೆ. ಆದುದರಿಂದ ನಾನು ಮಂದಸ್ಮಿತನಾಗುತ್ತಿರಬಹುದು. ನೀವು ನನ್ನ ಅಣ್ಣನ ಪ್ರತಿ-ಪ್ರತಿಮೆಯೋ ಎಂಬಂತಿರುವಿರಿ," ಎಂದೆ.

ಅವನಿಗೆ ಬಹಳ ಸಂತೋಷವಾಯಿತು. ನನ್ನ ಹಸ್ತವನ್ನು ತನ್ನ ಎರಡೂ ಕೈಗಳಲ್ಲಿ ತೆಗೆದುಕೊಂಡು, ಬಹಳ ಹೊತ್ತು ಶೇಕ್‌ಹ್ಯಾಂಡ್ ಮಾಡಿದನು. ಬಾಯಿತುಂಬಾ ನಕ್ಕನು. ಲೋಕಲ್ ಗಾಡೀ ಹಿಡಿಯಲು ಧಾವಿಸಿದನು.

ಆ ದಿವಸದಿಂದ ಪ್ರತಿದಿವಸ ಅವನು ನನಗೆ ಭೆಟ್ಟಿಯಾದೊಡನೆಯೇ ಒಂದೆರಡು ನಿಮಿಷ ನಿಂತು ನನ್ನನ್ನು ಮಾತಾಡಿಸಿ ವಿನಯದಿಂದ ನಮಸ್ಕರಿಸಿ ಗಾಡೀ ಹಿಡಿಯಲು ಓಡುವನು. ಒಂದು ಆದಿತ್ಯವಾರ ಮುಂಜಾನೆ ವಾಡಿಕೆಯಂತೆ ೯–೧೫ಕ್ಕೆ ಅವನು ನನ್ನನ್ನು ಬೀದಿಯಲ್ಲಿ ಅದೇ ವಿಶಿಷ್ಟ ಸ್ಥಳದಲ್ಲಿ ಕಂಡನು. ನಾನೇ ಮಾತಾಡಿಸಿದೆನು. "ಇಂದು ಆದಿತ್ಯವಾರವಾದರೂ ಆಫೀಸಿಗೆ ಹೊರಟಿರೇನು?" ಎಂದು. "ಇಲ್ಲ, ನಿಮ್ಮನ್ನು ಭೆಟ್ಟಿಯಾಗಲು ಇಲ್ಲಿ ನಿಂತಿದ್ದೇನೆ... ನಡೆಯಿರಿ, ನಮ್ಮ ಮನೆಗೆ ಹೋಗೋಣ," ಎಂದು ಜುಲುಮೆಯಿಂದ ನನ್ನನ್ನು ಕರೆದೊಯ್ದ. ಅವನು ಗುಜರಾಥದವ



ನೇದು ಅವನ ಪತ್ನಿಯು ಉಡುಪಿನಿಂದ ಅರಿತೆ. ನಾನು ಮನೆಯಲ್ಲಿ ಕಾಲಿಟ್ಟೊಡನೆಯೋ ಎಷ್ಟೋ ವರುಷದ ಪರಿಚಿತನು ನಾನೆಂಬಂತೆ ಅವನ ಹೆಂಡತಿ ನನ್ನನ್ನು ಸ್ವಾಗತಿಸಿದಳು. ಅವನು ತನ್ನ ಪತ್ನಿಗೂ ತನ್ನ ಈರ್ವರು ಮಕ್ಕಳಿಗೂ ಗುಜರಾಥಿಯಲ್ಲಿ ಹೇಳಿದನು: "ನಾನು ಬೀದಿಯಲ್ಲಿ ದಿನಾಲು ಕಾಣುತ್ತಿರುವ ವ್ಯಕ್ತಿಯು ಬಗ್ಗೆ ಹೇಳುತ್ತಿದ್ದೆನಲ್ಲವೇ, ಅವರೇ ಇವರು!" ಎಂದು. ಅವನ ಮಕ್ಕಳು ನನ್ನನ್ನು ಕಂಡು ಸಂತೋಷದಿಂದ ಜಿಗಿದಾಡಿದರು. ಅವನ ಪತ್ನಿ ಎರಡು ತರದ ಉಪಹಾರಗಳನ್ನೂ 'ಮಸಾಲಾ' ಹಾಕಿ ತಯಾರಿಸಿದ ಚಹವನ್ನೂ ತಂದಳು. ನಮ್ಮೆದುರಿಗಿಟ್ಟು ತಾನೂ ಕುಳಿತಳು. ನಮಗೆ ಸ್ವೀಕರಿಸಲು ಬಿನ್ನವಿಸಿ ನಮ್ಮೊಡನೇ ತಾನೂ ಸ್ವೀಕರಿಸಿದಳು. ಪತಿಪತ್ನಿಯರು ಬಹಳ ಸಲಿಗೆಯಿಂದ ನನ್ನೊಡನೆ ಮಾತಾಡಿದರು.

ಅವಳು ಪತಿಯ ಕಡೆಗೆ ನೋಡಿ, "ಇವರು ನಿಮ್ಮ ಅಣ್ಣನಂತಿರುವರಂತಲ್ಲ! ನಿಮ್ಮ ಅಣ್ಣನಾರು?" ಎಂದಳು. ನಾನು ಬೇಂದ್ರೆಯವರ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿದೆ. "ಕನ್ನಡದಲ್ಲಿ ಬೇಂದ್ರೆಯವರನ್ನು ಸರಿಗಟ್ಟುವ ಕವಿಯು ಈಗ ಸದ್ಯಕ್ಕಂತೂ ಯಾರೂ ಇಲ್ಲ. ಮತ್ತು ಶ್ರೀ ಅರವಿಂದರ ತತ್ವಜ್ಞಾನವನ್ನು ಕೂಲಂಕಷವಾಗಿ ಅಭ್ಯಸಿಸಿ ಅದನ್ನು ಸಂಪೂರ್ಣವಾಗಿ ಅರಗಿಸಿಕೊಂಡಂಥವರಲ್ಲಿ ಶ್ರೀ ಬೇಂದ್ರೆ ಒಬ್ಬರು. ಇಂಥ ಮಹಾನುಭಾವನ ಹೋಲಿಕೆಯು ಸಂಪೂರ್ಣವಾಗಿ 'ನಿಮ್ಮವ'ರಲ್ಲಿದೆ. ನಿಮ್ಮ ಪತಿ ಮುಂದೆ ಅವರಂತೆಯೇ ಪ್ರಖ್ಯಾತನೂ ಮಹಾಭಗವದ್ಭಕ್ತನೂ ಆಗಬಹುದು." ಎಂದು ಹೊಗಳಿದೆ.

ಅವನ ಪತ್ನಿ ಶಕ್ಯವಿದ್ದಷ್ಟು ಅಗಲವಾಗಿ ತನ್ನ ವೇಗವನ್ನು ಹಿಗ್ಗಿಸಿದಳು. ಅಂತಃಕರಣಪೂರ್ವಕವಾಗಿ ನಕ್ಕಳು. "ಇನ್ನು ಮೇಲೆ ಪ್ರತಿ ಆದಿತ್ಯವಾರ ನಮ್ಮಲ್ಲಿಗೆ ನೀವು ಚಹಾಕ್ಕೆ ಬರಲಿಕ್ಕೇಬೇಕು," ಎಂದು ಆಗ್ರಹಪೂರ್ವಕವಾದ ಔತಣವನ್ನಿತ್ತಳು. ಬಹಳ ಹೊತ್ತಿನವರೆಗೆ ಅವರೊಡನೆ ಹರಟೆಹೊಡೆದು ಅವರ ಮನೆಯಿಂದ ಹೊರಬಿದ್ದೆನು

ಏನಿದು ವಿಚಿತ್ರ! ಎಲ್ಲಿಯ ನಾನು! ಇವನೆಲ್ಲಿಯವನು! ನಮ್ಮಿಬ್ಬರ ನಡುವೆ ಬೇಂದ್ರೆಯನ್ನು ತಂದು ಮಾಯಾಮೋಹಗಳು ನಮ್ಮನ್ನು ಬಿಗಿದುಬಿಟ್ಟವು ಎಂದು ನೆನೆಯುತ್ತ ಮನೆಗೆ ಬಂದೆ. ▲

ಒಮ್ಮೆ ನೆಹರೂರವರು ಲಾಲಬಹಾದ್ದೂರ ಶಾಸ್ತ್ರಿಯವರ ಸಂಗಡ ಜೀಪಿನಲ್ಲಿ ಸಂಚರಿಸುತ್ತಿದ್ದಾಗ ಸಂಭವಿಸಿದ ಘಟನೆಯಿದು. ಆಗ ಜೀಪು ಅಕಸ್ಮಾತ್ತಾಗಿ ರಸ್ತೆಯ ಬದಿಯಲ್ಲಿದ್ದ ಗಿಡಕ್ಕೆ ಬಡಿದದ್ದರಿಂದ ಬಾಗಿಲು ಧಡಕ್ಕೆಂದು ತೆರೆದುಕೊಂಡಿತಲ್ಲದೆ ನೆಹರೂ ಅವರು ಹೊರಗೆ ಬಿದ್ದರು. ಅವರೊಟ್ಟಿಗೆ ಶಾಸ್ತ್ರಿಯವರೂ ನೆಹರೂಜಿ ಮೇಲೆ ಥಂಗನೆ ಪುಟಿದು ಬಿದ್ದರು.

ನೆಹರೂ ಅವರು ದಿಲ್ಲಿಯಲ್ಲಿ ವಿಮಾನ ನಿಲ್ದಾಣದಲ್ಲಿ ಇಳಿಯುವುದೇ ತಡ, ಈ ಸುದ್ದಿಯನ್ನು ಪೇಪರುಗಳಲ್ಲಿ ಓದಿದ್ದ ಗೋವಿಂದ ವಲ್ಲಭ ಪಂತರು ತಮ್ಮ ಇಬ್ಬರು ಮಿತ್ರರೊಡನೆ ನೆಹರೂರಲ್ಲಿಗೆ ಬಂದು, "ಆ ಜೀಪ್ ದುರ್ಘಟನೆಯಲ್ಲಿ ಪೆಟ್ಟು ತಗುಲಲಿಲ್ಲವಷ್ಟೇ," ಎಂದು ಕಳಕಳಿಯಿಂದ ಕೇಳಿದರು.

ಆಗ ಜವಾಹರಲಾಲರು, "ಹೇಗೆ ಬಿದ್ದೀತು ಮಹಾರಾಯರೇ, ಶಾಸ್ತ್ರಿ ಅವರ ಬದಲು ನೀವಿದ್ದಿದ್ದರೆ ಮಾತ್ರ ಅಂತಿಂಥ ಪೆಟ್ಟಲ್ಲ, ಭಾರೀ ಪೆಟ್ಟೇ ಬೀಳುತ್ತಿತ್ತು," ಎಂದು ನಗುತ್ತಾ ಉತ್ತರಿಸಿದರು.

ಜಗತ್ಪ್ರಸಿದ್ಧ ಇತಿಹಾಸಜ್ಞನ ಸಿದ್ಧಾಂತ


ಧರ್ಮವೇ ತಾರಕ

ಅರ್ನಾಲ್ಡ್ ಟಾಯನ್‌ಬಿ

ಜಗತ್ತಿನ ಇಪ್ಪತ್ತೊಂದು ಸಂಸ್ಕೃತಿಗಳನ್ನು ಅಭ್ಯಸಿಸಿದ ಮೇಲೆ ನನಗೆ ಒಂದು ಮಾತು ಖಚಿತವಾಗಿದೆ. ಯಾವ ಸಂಸ್ಕೃತಿ ಸೃಜನಾತ್ಮಕವಾಗಿರುತ್ತದೋ ಅದೇ ಜೀವಂತವಾಗಿರಬಲ್ಲದು; ಅದೇ ಸ್ವಸ್ಥವಾಗಿರಬಲ್ಲದು. ಹವಾಮಾನ, ಜನಸಂಖ್ಯೆಯ ಹೆಚ್ಚಳ ಅಥವಾ ಆಂತರಿಕ ಪಲ್ಲಟಗಳಿಂದ ಹುಟ್ಟುವ ಮೂಲಭೂತ ಸಮಸ್ಯೆಗಳನ್ನು ಎದುರಿಸಬೇಕಾದಾಗ ಯಾವ ಸಂಸ್ಕೃತಿ ಸೃಜನಾತ್ಮಕ ಪ್ರಕ್ರಿಯೆಗಳಿಂದ ಅವುಗಳನ್ನು ಬಿಡಿಸಲು ಸಮರ್ಥವಾಗುವುದೋ ಅದೇ ಜೀವಂತವಾಗಿ ಉಳಿಯುತ್ತದೆ. ಅದೇ ಪ್ರಕಾರ ಯಾವ ಸಂಸ್ಕೃತಿ ತನ್ನೆಲ್ಲ ಸಮಸ್ಯೆಗಳನ್ನು ಸಮಾಧಾನಪಡಿಸಿಕೊಂಡ ಮೇಲೆ ಲಗಾಮನ್ನು ಸಡಿಲು ಬಿಡುವುದೋ ಅದು ಸಾವನ್ನು ಸಮೀಪಿಸಿದೆಯೆಂದೇ ತಿಳಿಯಬೇಕು. ತನ್ನ ಪ್ರಶ್ನೆಗಳಿಗೆ ಹೊಸ ಪರಿಹಾರಗಳನ್ನು ಅನ್ವೇಷಿಸುವುದೇ ಅದನ್ನು ಬದುಕಿಸುವ ಏಕಮೇವ ಉಪಾಯ.

ಕಲೆ. ಕೈಗಾರಿಕೆ ಅಥವಾ ಯಂತ್ರವಿದ್ಯೆಯಲ್ಲಿ ಪ್ರಾವೀಣ್ಯ ಪಡೆಯುವುದರಿಂದ ಚಾತುರ್ಯ ಬರುವುದು ನಿಜವಾದರೂ ಕಾಲದ ಆಹ್ವಾನಗಳನ್ನು ತಾಳುವ ಶಕ್ತಿ ಅದಕ್ಕಿಲ್ಲ. ಗತಕಾಲದಲ್ಲಿ ತನ್ನ ಹಸ್ತಕೌಶಲ್ಯ, ಯಂತ್ರ ಕೌಶಲ್ಯಗಳನ್ನೇ ನೆಚ್ಚಿಕೊಂಡ ಸಂಸ್ಕೃತಿಗಳೆಲ್ಲ ಆತ್ಮಹತ್ಯೆಯ ದಾರಿಯನ್ನೇ ಹಿಡಿದಂತಾಯಿತು. ಯಂತ್ರಕೌಶಲ್ಯವೇ ಗುರಿಯೆಂಬ ಸಂಕುಚಿತ ಭ್ರಮೆಯಿಂದ ಹೊರಬಂದು ದಿಕ್ಕನ್ನು ಬದಲಿಸಿಕೊಂಡ ಸಂಸ್ಕೃತಿಗಳಷ್ಟೇ ಉಳಿದುಕೊಂಡ ಉದಾಹರಣೆಗಳು ಸಿಗಬಹುದು.

ಯಂತ್ರವಿದ್ಯೆಯ ಮೇಲೆ ನಾವು ಪ್ರಭುತ್ವ ಸಂಪಾದಿಸಿ ಅದರಿಂದ ನಂನಾವೇ ಮುಗ್ಧರಾಗಿದ್ದೇವೆ. ಇಲ್ಲೇ ದೊಡ್ಡ ಅಪಾಯ ಅಡಗಿದೆ. ಮನುಷ್ಯನ ಎಲ್ಲಕ್ಕೂ ದೊಡ್ಡ ದೌರ್ಬಲ್ಯವೆಂದರೆ "ಮೂರ್ತಿಪೂಜೆ". ಅದರಿಂದ ಸೃಜನ ಶಕ್ತಿ, ಸ್ವತಂತ್ರ ಕಲ್ಪನೆ, ಕ್ರಾಂತಿಕ್ಷಮತೆ ಕುಂಠಿತವಾಗುತ್ತವೆ. ಇಂದಿನ ನಮ್ಮ ಸ್ವದೇಶಪೂಜೆ ಇದಕ್ಕೊಂದು ಉದಾಹರಣೆ. ನಮ್ಮ ರಾಷ್ಟ್ರ, ನಮ್ಮ ಧ್ವಜ, ನಮ್ಮ ಗತವೈಭವ ಇವುಗಳನ್ನು ಪೂಜಿಸುತ್ತಾ ಪೂಜಿಸುತ್ತಾ ಅವೇ ಪರಮಾರ್ಥ ಎಂದು ತಿಳಿದುಕೊಂಡಿದ್ದೇನೆ. ಆದರೆ ಇಂಥಾ ದೇಶಾಭಿ



ಮಾನ ಇಂದಿನ ಕಾಲದಲ್ಲಿ ಘಾತಕವಾಗಿದೆ. ಪೂಜೆ ಎಂದರೆ ಈಶ್ವರನ ಪೂಜೆ ಮಾತ್ರ ಇರಬೇಕು. ಈ ನಿಯಮವನ್ನು ಮರೆತು ನಾವು ನಮ್ಮ ಗತವೈಭವ ವೆಂಬ ಎರಡನೇ ದೇವರನ್ನು ಪೂಜಿಸತೊಡಗಿದರೆ ಅದೇ ನಮ್ಮ ಪತನದ ಆರಂಭ

ಹಿಂದೆ ಮನುಷ್ಯ ಭಗವಂತನನ್ನು ಪೂಜಿಸುತ್ತಿದ್ದ. ಆಗಲೂ ಆತ ರಾಷ್ಟ್ರಕ್ಕೆ ತನ್ನ ಕರ ಕಂದಾಯಗಳನ್ನು ಕೊಡುತ್ತಿದ್ದ. ಆದರೆ ಅವನ ಹೃದಯದ ಮೇಲೆ, ಅಂತಃಕರಣದ ಮೇಲೆ ರಾಜ್ಯಸತ್ತೆಯ ಪ್ರಭುತ್ವವನ್ನು ಆತ ಒಪ್ಪುತ್ತಿರಲಿಲ್ಲ. ಇಂದು ರಾಷ್ಟ್ರಪೂಜೆಗೆ, ದೇಶಾಭಿಮಾನಕ್ಕೆ ಧರ್ಮದ ಸ್ಥಾನ ಕೊಡಲಾಗಿದೆ. ನನ್ನ ಅಭಿಪ್ರಾಯದಲ್ಲಿ ಇದು ಭಾರೀ ದುರ್ಘಟನೆಯೇ ಸೈ.

ನಾವು ಸಹಜವೆಂದು ಬಗೆಯುವ ಈ ಅಂಧ ದೇಶಭಕ್ತಿ ನಿಜವಾಗಿಯೂ ಒಂದು ಭಯಂಕರ ತರಹದ ಮೂರ್ತಿಪೂಜೆಯೇ ಆಗಿದೆ. ಇಂಥದೇ ಇನ್ನೊಂದು ಮೂರ್ತಿಪೂಜೆ ವಿಜ್ಞಾನಕ್ಕೆ ಸಂಬಂಧಿಸಿದ್ದು. ವಿಜ್ಞಾನ ಕ್ಷೇತ್ರದಲ್ಲಿ ಆಶ್ಚರ್ಯ ಜನಕ ಮುನ್ನಡೆಯಾಗಿದೆ. ಆದರೆ ಇಂದು ನಮ್ಮ ಮುಂದಿರುವ ಪ್ರಶ್ನೆಗಳಿಗೆ ಪರಿಹಾರ [illegible] ಪ್ರಯೋಗಶಾಲೆಯಲ್ಲಿ ದೊರಕು [illegible] ಇಂದು ನಮ್ಮನ್ನೆದುರಿಸಿರುವ ಪ್ರಶ್ನೆಗಳು ನೈತಿಕ ಪ್ರಶ್ನೆಗಳು. ವಿಜ್ಞಾನವೋ [illegible]ಗೆ [illegible].

ಭೌತಿಕ ಶಕ್ತಿಗಳ ಮೇಲೆ ವಿಜ್ಞಾನ ಪಡೆದ ವಿಜಯದ ಉಪಯೋಗವನ್ನು ನಾವು ಹೇಗೆ ಮಾಡಿಕೊಳ್ಳುತ್ತೇವೆ ಎಂಬುದೇ ಇಂದಿನ ಕೂಟ ಪ್ರಶ್ನೆ. ಇದರಲ್ಲಿ ವೈಜ್ಞಾನಿಕ ಕ್ಷೇತ್ರವನ್ನು ವಿಸ್ತರಿಸುವ ನಮ್ಮ ಹಳೇ ಉಪಾಯ ಫಲಿಸಲಾರದು. ಒಂದೆ ಕೆಲಸಕ್ಕೆ ಬಂದ ಪ್ರಾವೀಣ್ಯ ಇಂದೂ ಕೆಲಸಕ್ಕೆ ಬಂದೀತೆಂದೆಣಿಸುವುದು ಮನುಷ್ಯಸಹಜವಾದರೂ ಈ ಮೋಹದಲ್ಲಿ ಸಿಲುಕಿಕೊಂಡರೆ ಪಾರಾಗುವ ದಾರಿ ಉಳಿಯದು. ಪೊಲಿನೇಶಿಯನ್ ಜನಾಂಗ ದವರು ನಾವಿಕ ಶ್ರೇಷ್ಠರಾಗಿದ್ದರು; ಎಸ್ಕಿಮೋಗಳು ಅಪ್ರತಿಮ ಶಿಸ್ತರಾಗಿದ್ದರು; ಸ್ಪಾರ್ಟನ್ ಜನ ಮಹಾ ಯುದ್ಧಪ್ರವೀಣರಾಗಿದ್ದರು; ಆದರೆ ಈ ಸಿದ್ಧಿಗಳನ್ನೇ ನಂಬಿಕೊಂಡದ್ದರಿಂದ ಹೊಸ ಪರಿಸ್ಥಿತಿಗಳನ್ನು ಎದುರಿಸಲಾರದೆ ಅವರ ಸಂಸ್ಕೃತಿ ಫಲಿಸಲಿಲ್ಲ.

ನೈತಿಕ ಬಲವನ್ನೇ ನೆಚ್ಚಿಕೊಂಡ ಸಂಸ್ಕೃತಿಗಳು ಹೇಗೆ ಉರುಳಿದವೆಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಯುದ್ಧಕಾಲದ ಬುದ್ಧಿ ಯುದ್ಧೋತ್ತರದಲ್ಲಿ ಕೆಲಸಕ್ಕೆ ಬಾರದು. ತೈಮೂರ. ಗ್ರೀಕ್ ಸಾಮ್ರಾಜ್ಯವಾದಿಗಳು, ಇಂಗ್ಲಂಡಿನ ಪ್ಲಾಂಟಾಜಿನೆಟ್ ರಾಜರು—ಎಲ್ಲರೂ ವಿಫಲರಾದರು. ಏಕೆಂದರೆ ಅವರು . ಸೈನ್ಯ ಶಕ್ತಿಯೊಂದಕ್ಕೇ ಪ್ರಾಧಾನ್ಯ ಕೊಟ್ಟರು. ಆದರೆ ಬದುಕು ಅಷ್ಟು ಸರಳವಾಗಿಲ್ಲ. ಸಾಫಲ್ಯಕ್ಕೆ ಒಂದೇ ರಾಮಬಾಣೋಪಾಯವಿಲ್ಲ. ಹೊಸ ಪ್ರಶ್ನೆಗಳಿಗೆ ಹೊಸ ಉತ್ತರಗಳೇ ಬೇಕು. ಆದರೆ ಮನುಷ್ಯ ಸ್ವಾಭಾವಿಕವಾಗಿ ಮೈಗಳ್ಳನಾಗಿದ್ದಾನೆ. ಆತ ಹಳೇ ಉಪಾಯಗಳನ್ನು ಬಿಟ್ಟು ಹೊಸವುಗಳನ್ನು ಹುಡುಕುವ ಕಷ್ಟ ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಇಂದಿನ ಮನುಷ್ಯ ಇಂದಿನ ಭೌತಿಕ ಸಾಧನಗಳಾದ ವಿಜ್ಞಾನ, ಯಂತ್ರವಿದ್ಯೆಗಳಿಂದ ತನ್ನ ಸಮಸ್ಯೆಗಳನ್ನು ಬಿಡಿಸಬಹುದೆಂಬ ಬಯಲಾಸೆಯನ್ನು ತೊರೆಯಲೊಲ್ಲ.

ಪ್ರಪಂಚದಲ್ಲಿ ಐಕ್ಯವನ್ನು ಸ್ಥಾಪಿಸುವ ಯಾವುದಾದರೂ ಸರ್ವಾರಿಷ್ಟ ಶಾಂತಿಸೂತ್ರವಿದ್ದಲ್ಲಿ ನಮ್ಮ ಪಂಡಿತರು ಅದನ್ನು ಕಂಡುಹಿಡಿ[illegible]ದೆ ಬಿಡುತ್ತಿರಲಿಲ್ಲ. ಆದರೆ ಅದಕ್ಕೆ ಇಂದಿನ ಮನುಷ್ಯನ ಹೃದಯಪರಿವರ್ತನೆಯು ಅಗತ್ಯವಿದೆ. [illegible] ಸರಕಾರಿ [illegible] ವಿಷಯವಲ್ಲ. ನಮ್ಮಲ್ಲಿ ಒಬ್ಬೊಬ್ಬರೇ [illegible] ನಾವೇ ಈ ಸಾಧನೆಯಲ್ಲಿ ತೊಡಗಬೇಕು. ಇದು ಕಟುವಾದರೂ ಸತ್ಯ. ಆಧ್ಯಾತ್ಮಿಕ ಪುನರ್ಜನ್ಮದಿಂದಲೇ ಸಂಸ್ಕೃತಿಗಳು ಅರಳಿದವು. ಫಲಿಸಿದವು.

ಈ ಆಧ್ಯಾತ್ಮಿಕ ಪರಿವರ್ತನೆ ನಮಗೆ ಬೇಕಾದರೆ [illegible]

ಯನ್ನು ನಿಲ್ಲಿಸಬೇಕು. ನಮ್ಮ ದೇಶ. ನಮ್ಮ ಧ್ವಜ, ನಮ್ಮ ನಮ್ಮ ಯಂತ್ರ, ನಮ್ಮ ಅರ್ಥಶಾಸ್ತ್ರ ಇವೆಲ್ಲವುಗಳ ಕುರುಡು ಆರಾಧನೆಗೆ ತಡೆಹಾಕಬೇಕು. ಇವು ತಾತ್ಕಾಲಿಕ ಸಾಧನಗಳು. ಇವುಗಳನ್ನು ಎಷ್ಟು ಹೆಚ್ಚು ಉಪಯೋಗಿಸುತ್ತೇವೋ ಅವುಗಳ ಹಿಡಿತದಿಂದ ಪಾರಾಗುವುದು ಅಷ್ಟೇ ಕಷ್ಟವಾಗುತ್ತ ಹೋಗುತ್ತದೆ. ಯಾವ ಕಾಲದಲ್ಲಿ ಯಹೂ ಶ್ರೀಮಂತರಿಗೆ ದೇವರ ಸಾನ್ನಿಧ್ಯದಲ್ಲಿ ಪ್ರವೇಶ ದುಷ್ಕರವೇ. ಹೆಚ್ಚು ಸಂಪನ್ನ ಮತ್ತು ಪ್ರಗತಿಪರ ಜನಾಂಗಗಳಿಗೆ ತಮ್ಮ ಸಂಕುಚಿತ ದೇಶಾಭಿಮಾನವನ್ನು ಕೈಬಿಡುವುದೂ ಲೋಕವೇ ತನ್ನ ಬಳಗ ಎನ್ನುವುದೂ ಬಲು ಕಠಿನವಾಗಿದೆ.

ಕ್ರಿಸ್ತಪೂರ್ವ ನಾಲ್ಕು. ಮೂರು, ಎರಡನೇ ಶತಮಾನಗಳಲ್ಲಿ ಗ್ರೀಕ್ ನಗರ ರಾಜ್ಯಗಳ ಮುಂದೆ ಇಂಥದೇ ಒಂದು ಸಮಸ್ಯೆ ಎದ್ದುನಿಂತಿತು. ಅವುಗಳ ಏಕೀಕರಣ ಅನಿವಾರ್ಯವಾಗಿತ್ತು. ಅದಕ್ಕಾಗಿ ಅಂದಿನ ವಿಚಾರಿಗಳೂ ವಿದ್ವಾಂಸರೂ ಎಷ್ಟೋ ಪ್ರಯತ್ನಪಟ್ಟರು. ಆದರೆ ಯಾವುದೂ ಫಲಕಾರಿಯಾಗಲಿಲ್ಲ. ಇದಕ್ಕೆ ಕಾರಣ ಆಯಾ ನಗರಗಳ ನಗರಾಭಿಮಾನ. ಅಥೆನ್ಸಿನವರಿಗೆ ಅಥೆನ್ಸ್ ನಗರದ ಮೇಲೆ ಎಷ್ಟು ಅಭಿಮಾನವಿತ್ತೆಂದರೆ ಅವರು ಏಕೀಕೃತ ಗ್ರೀಸಿಗೆ ತಮ್ಮ ನಿಷ್ಠೆಯನ್ನು ವರ್ಗಾಯಿಸುವ ಕಲ್ಪನೆಯನ್ನೇ ಮಾಡಲಾರದವರಾಗಿದ್ದರು. ಕೋರಿಂಥ್ ನಿವಾಸಿಗಳ ಮತ್ತು ಸ್ಪಾರ್ಟನ್ನರ ಪಾಡೂ ಇದೇ ಆಗಿತ್ತು. ಹೀಗಾಗಿ ಗ್ರೀಸಿನ ನಗರರಾಜ್ಯಗಳು ಒಂದೊಂದಾಗಿ ನಷ್ಟವಾದವು. ಆದರೆ ಅದೇ ಸಮಯದಲ್ಲಿ ಈಜಿಪ್ಟ್. ಇಟಲಿ. ಸಿರಿಯಾ ಮತ್ತು ಕಾರ್ಥೇಜ್ ದೇಶಗಳು ಯಾವ ತೊಂದರೆಯೂ ಇಲ್ಲದೆ ಏಕೀಕರಣ ಸಾಧಿಸಿದವು.

ಗಡಿ ನಾಡುಗಳಲ್ಲಿದ್ದ ಈ ಸಾಮ್ರಾಜ್ಯಗಳು ಕೊನೆಯಲ್ಲಿ ಗ್ರೀಕ್ ನಗರರಾಜ್ಯಗಳನ್ನು ಮುತ್ತಿ ವಶಪಡಿಸಿಕೊಂಡವು. ಇದಕ್ಕೆ ಕಾರಣ ಮತ್ತೇನೂ ಅಲ್ಲ. ಇಲ್ಲಿನ ಹೊಸ ನಗರಗಳಿಗೆ ಭವ್ಯವಾದ ಭೂತಕಾಲ ಇದ್ದಿಲ್ಲ. ಆದ್ದರಿಂದ ತಮ್ಮ ಗತ ವೈಭವದ ಗಂಟುಗಳು ಅವುಗಳ ಮನಸ್ಸಿನಲ್ಲಿದ್ದಿಲ್ಲ. ಅವುಗಳ ಹತ್ತಿರ ಭೂತಕಾಲದ ಯಾವ ಸಿದ್ಧಾಂತವೂ ಇದ್ದಿಲ್ಲವಾದ್ದರಿಂದ ಅವು ಹೊಸ ಉಪಾಯಗಳ ಶೋಧನೆಯಲ್ಲಿ ತೊಡಗಲು ಸ್ವತಂತ್ರವಾಗಿದ್ದವು.

ಇಂದಿನ ಜಗತ್ತಿನಲ್ಲಿ ಐಕ್ಯವನ್ನು ಸಾಧಿಸುವ ಕೆಲಸವನ್ನು ಬಹುಶಃ ಈಚೆಗಿನ ಶತಮಾನಗಳಲ್ಲಿ ಯಾವುದೇ ಗೌರವಾರ್ಹವಾದ ಉಜ್ವಲ ಸಾಧನೆಗಳಿಲ್ಲದ ಜನಾಂಗಗಳೇ ಕೈಕೊಳ್ಳಬಲ್ಲವೆಂದು ತೋರುತ್ತದೆ. ಇಂದಿನ ಪ್ರಬಲ ರಾಷ್ಟ್ರಗಳು ಹಳೆಗಾಲದ ರಾಷ್ಟ್ರೀಯವಾದಕ್ಕೆ ಬಲವಾಗಿ ಅಂಟಿಕೊಂಡಿರುವುದರಿಂದ ಯಾವ ಜನಾಂಗಗಳಿಗೆ ಇಂಥ ರಾಷ್ಟ್ರಭಾಷೆ ಅಥವಾ ರಾಷ್ಟ್ರಾಭಿಮಾನದ ನೆಮ್ಮದಿಯ ಅನುಭವವಿಲ್ಲವೋ ಅವುಗಳಿಗೇ ತಕ್ಕ ಪರಿಹಾರಗಳು ಹೊಳೆಯಬಲ್ಲವು.

ಒಂದಾಗದೆ ಜಗತ್ತಿಗೆ ಮುಕ್ತಿ ಇಲ್ಲ. ಈ ಉದ್ದೇಶ ಶಾಂತಿಯಿಂದ, ಅಹಿಂಸೆಯಿಂದ ಸ್ವೇಚ್ಛೆಯಿಂದ ಆಗುವುದು ಇಷ್ಟವಾಗಿದೆ. ಹೇಗಾದರೂ ಏಕೀಕರಣ ಮಾಡುವಂತಿದ್ದರೆ ಸಕಲ ಯುರೋಪನ್ನು ಗೆದ್ದು ಐಕ್ಯ ಸ್ಥಾಪಿಸುವ ಹಿಟ್ಲರನ ಉಪಾಯ ಸೂಕ್ತವಾಗಿತ್ತು. ಆದರೆ ಖಡ್ಗಬಲದಿಂದ ಆದ ಏಕೀಕರಣ ಶಾಶ್ವತವಲ್ಲ ಎಂಬುದು ರೋಮನ್ ಇತಿಹಾಸದಿಂದ ಸಿದ್ಧವಾಗುತ್ತದೆ.

ಆದರೂ ಏಕೀಕರಣವಿಲ್ಲದೆ ಉಳಿಗಾಲವಿಲ್ಲ. ಮನುಷ್ಯಮಾತ್ರನಲ್ಲಿ ಭ್ರಾತೃಭಾವನೆ ಆದರ್ಶರೂಪದಲ್ಲಿ ಸಿದ್ಧವಾಗಬೇಕಾದರೆ ಸಮಸ್ತಮಾನವರೂ ಸಕಲರ ಹಿತಸಾದ ಪರಮಾತ್ಮನಲ್ಲಿ ಶ್ರದ್ಧೆಯುಳ್ಳವರಾಗಬೇಕೆಂದು ನನ್ನ ದೃಢವಾದ ನಂಬಿಕೆ. ನಮ್ಮ ಪಾಶ್ಚಾತ್ಯ ಸಂಸ್ಕೃತಿಗೆ ತಳಪಾಯ ಹಾಕಿದವರು ಯಾರು ? ಆರ್ಥಿಕ ಪ್ರಗತಿ. ರಾಜಕೀಯ ಸ್ವಾತಂತ್ರ್ಯ ಅಥವಾ ಮತ್ತಾವ ಭೌತಿಕ ಧ್ಯೇಯವನ್ನೂ ಇಟ್ಟುಕೊಂಡವರಲ್ಲ—ಜಗತ್ತಿನ ಮೇಲೆ ಪರಮಾತ್ಮನ ರಾಜ್ಯವನ್ನು ಸ್ಥಾಪಿಸಬೇಕೆಂದು ಆಶಿಸಿದ ಮಹಾಪುರುಷರು. ಅವರ ಪ್ರಯತ್ನಗಳ ಆಕಸ್ಮಿಕ ಅಥವಾ ಗೌಣ ಫಲವಾಗಿ ಈ ಸಂಸ್ಕೃತಿ ಮಧ್ಯಯುಗದಲ್ಲಿ ಸಾಕಾರವಾಯಿತು.

ಇಂದಿನ ಸಮಸ್ಯೆಗಳನ್ನು ಅಧಿಭೌತಿಕ ಉಪಾಯಗಳಿಂದ ಬಿಡಿಸುವ ನಮ್ಮ ಪ್ರಯತ್ನಗಳು ನಿಷ್ಫಲವಾಗುತ್ತಿವೆ. ನಮ್ಮ ಎಲ್ಲ ಸುಂದರ ಯೋಜನೆಗಳೂ ಹಾಸ್ಯಾಸ್ಪದವಾಗುತ್ತಿವೆ. ಮನುಷ್ಯನ ಶ್ರಮವನ್ನು ಉಳಿಸುವ ಯಂತ್ರಗಳನ್ನು ಸೃಷ್ಟಿಸಿದ್ದೇವೆಂದು ನಾವು ಅಭಿಮಾನದಿಂದ ಹೇಳಿಕೊಳ್ಳುತ್ತೇವೆ. ಆದರೆ ಇದರ ಪರಿಣಾಮಗಳು ವಿಚಿತ್ರ ರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ. ಶ್ರಮವುಳಿಸುವ ಸಾಧನಗಳು ಇಷ್ಟಿದ್ದರೂ ಇಂದಿನ ಗೃಹಿಣಿಯ ಮೇಲೆ ಹಿಂದೆಂದೂ ಇಲ್ಲದ ಕೆಲಸದ ಭಾರ ಬೀಳುತ್ತಿದೆ. ಅಮೇರಿಕದಲ್ಲಿ ಹೆಂಗಸು ಗೃಹಿಣಿ ಮತ್ತು ಮಾತೆಯಾಗಿ ಕಾರ್ಯಭಾರವನ್ನು ಹೊರುವುದು ಸಾಲದೆ ಹೊರಗೆ ಕಚೇರಿಗಳಿಗೆ ಹೋಗಿ ದುಡಿಯುವುದೂ ಅನಿವಾರ್ಯವಾಗಿದೆ. ಹೆಣ್ಣಿಗೆ ಗೃಹಕ್ಷೇತ್ರದಿಂದ ಹೊರಗೆ ಹೋಗುವ ಪ್ರಸಂಗ ಒದಗಿದಾಗೆಲ್ಲ ಅದು ಅವನತಿಗೆ ನಾಂದಿಯಾಗಿದೆ. ಹೆಣ್ಣು ಗೃಹಿಣಿಯೇ ಆಗಿದ್ದಾಗ ಕ್ರಿಸ್ತಪೂರ್ವ ೫ ನೇ ಶತಮಾನದಲ್ಲಿ ಗ್ರೀಸ್ ತನ್ನ ಉನ್ನತಿಯ ಶಿಖರಸ್ಥಾನದಲ್ಲಿತ್ತು. ಅಲೆಗ್ಜಾಂಡರನ ಕಾಲದ ನಂತರ ಗ್ರೀಸಿನ ನಾರಿಯರು ಇಂದಿನ ಅವಸ್ಥೆಯಲ್ಲೇ ಇದ್ದರು. ಆಗ ಆ ದೇಶದ ಇಳಿಗಾಲ ಪ್ರಾರಂಭವಾಯಿತು.

ಭಗವಂತನನ್ನು ಅಲ್ಲಗಳೆದು ನಮ್ಮ ಸಾಮಾಜಿಕ ದೋಷಗಳನ್ನು ನಿವಾರಿಸುವ ನಮ್ಮ ಪ್ರಯತ್ನಗಳು ಇನ್ನೂ ಕೆಲ ಆಶ್ಚರ್ಯಜನಕ ಮತ್ತು ಕರುಣಾಜನಕ ಫಲಗಳನ್ನು ತಂದಿವೆ. ಯಂತ್ರಯುಗ ತಾನು ತಂದ ಸಮೃದ್ಧಿಗೆ ಪ್ರತಿಫಲವಾಗಿ ಹಿಂದೆಂದೂ ಇಲ್ಲದಷ್ಟು ಸಂಕಷ್ಟಗಳನ್ನು ತಂದು ಹಾಕಿದೆ. ಯಂತ್ರಗಳು ಶ್ರಮವನ್ನುಳಿಸುತ್ತವೆ, ಮನುಷ್ಯನಿಗೆ ವಿರಾಮವನ್ನು ಕೊಡುತ್ತವೆ ಎಂದು ನಾವು ತಿಳಿದುಕೊಳ್ಳುತ್ತೇವೆ. ಆದರೆ ಯಂತ್ರಯುಗದಲ್ಲಿ ನಿರುದ್ಯೋಗ ಮತ್ತು ಕೆಲಸಗಾರರ ಸಂಕಷ್ಟಗಳು ಹೆಚ್ಚಾಗಿವೆ. ಯಂತ್ರಗಳನ್ನು ನಾವು ತಲೆಯ ಮೇಲೇರಿಸಿಕೊಂಡು ಕುಣಿಯುತ್ತ ಗಂಡಾಂತರಗಳನ್ನು ಬರಮಾಡಿಕೊಂಡಿದ್ದೇವೆ. ಹಿಂದಿನ ಸಾದಾ ಕಾಲದಲ್ಲಿ ನೀತಿಯ ಅವಶ್ಯಕತೆ ಇದ್ದುದಕ್ಕಿಂತಲೂ ಹೆಚ್ಚಾಗಿ ಇಂದಿನ ಯುಗದಲ್ಲಿ ಅದು ಬೇಕಾಗಿದೆಯೆಂದು ಈಗ ಸ್ಪಷ್ಟವಾಗುತ್ತಿದೆ. ಔದ್ಯೋಗೀಕರಣದಿಂದ ಎಲ್ಲರ ಅಗತ್ಯಗಳೂ ಪೂರೈಸುವವು; ಎಲ್ಲರ ಉನ್ನತಿಯೂ ಸಾಧಿಸುವುದು ಎಂದು ಕಟ್ಟಿಕೊಂಡಿದ್ದ ಆಶೆ ಈಗ ಉಳಿದಿಲ್ಲ.

ಮನುಷ್ಯನ ಧ್ಯೇಯ ಎಲ್ಲಿಯವರೆಗೆ ಕೇವಲ ಭೌತಿಕ ಉನ್ನತಿಯೇ ಆಗಿರುತ್ತದೋ ಅಲ್ಲಿಯವರೆಗೆ ಆತ ನೈತಿಕ ದೃಷ್ಟಿಯಿಂದ ಕಲ್ಯಾಣಕರವೂ ಶುಭಕರವೂ ಆದ ನಿರ್ಣಯಗಳನ್ನು ಕೈಕೊಳ್ಳಲಾರ. ಮಾತೃಭಾವ ಮತ್ತು ಮಾನವ ಬಂಧುತ್ವ ಇವು ಇತಿಹಾಸ ನಿರ್ಮಾಣದಲ್ಲಿ ಬಹಳ ನೆರವಾಗಿವೆ. ಆದರೆ ಪರಮಾತ್ಮನಲ್ಲಿನ ಉತ್ಕಟ ಭಕ್ತಿಯಿಂದ ಹುಟ್ಟಿದಾಗಲೇ ಈ ಬಂಧುಭಾವನೆ ಸಾಧ್ಯವಿದೆ. ಪರಮಾತ್ಮನ ಪುನಃ ಪ್ರತಿಷ್ಠಾಪನೆ ಇಂದಿನ ಪರಮ ಅವಶ್ಯಕತೆಯಾಗಿದೆ. ನೈತಿಕತೆ ಮತ್ತು ಆಧ್ಯಾತ್ಮಿಕತೆಯಿಲ್ಲದ ಇಂದಿನ ಅಧಾರ್ಮಿಕ ಮನುಷ್ಯ ತನ್ನ ಪ್ರಯೋಗಶಾಲೆಯಲ್ಲಿ ಸೃಷ್ಟಿಯಾದ ಶಸ್ತ್ರಾಸ್ತ್ರಗಳ ಪ್ರಭುವಾಗಿ ಉಳಿದಿಲ್ಲ. ಈ ಆಟದ ಸಾಮಾನುಗಳನ್ನು ಹಿಡಿದಿರುವಷ್ಟು ಕಾಲ ಆತನನ್ನು ನಂಬಲಾಗದು. ಆದ್ದರಿಂದಲೇ ಆಧ್ಯಾತ್ಮಿಕ ಮೂಲ್ಯಗಳ ಪ್ರಾಣಾವಾಹನೆ ಇಂದಿನ ಪರಮ ಆವಶ್ಯಕತೆಯಾಗಿದೆ. ▲

ಸಾಧುವೊಬ್ಬ ನದಿಯಲ್ಲಿಳಿದು ಸ್ನಾನ ಮಾಡುತ್ತಿದ್ದ. ಆಚೇದಡದಿಂದ ಒಬ್ಬ ನಾವಿಕನ ಕೂಗು ಕೇಳಿ ಆತ ಅತ್ತ ನೋಡಿದ. "ಸ್ವಾಮೀ, ಎಷ್ಟು ಹುಟ್ಟು ಹಾಕಿದರೂ ನನ್ನ ನಾವೆ ಮುಂದೆ ಸಾಗಲೊಲ್ಲದು. ನನ್ನನ್ನು ಕಾಪಾಡಿ" ಎಂದು ತುಂಬುದೋಣಿಯ ನಾವಿಕ ಕೂಗುತ್ತಿದ್ದ. ಸಾಧು ಹುಬ್ಬಿನ ಮೇಲೆ ಕೈ ಇಟ್ಟು ನಿರುಕಿಸಿದ. "ಮೊದಲು ನಾವೆಯನ್ನು ದಡಕ್ಕೆ ಕಟ್ಟಿರ ಹಗ್ಗ ಬಿಚ್ಚಿಕೊಳ್ಳಯ್ಯಾ! ಆ ಮೇಲೆ ಹುಟ್ಟು ಹಾಕು," ಎಂದ.



ಸಮಾಜವಾದಕ್ಕೊಲಿದ
ಆಗರ್ಭ ಶ್ರೀಮಂತ ಮಹಿಳೆ

ಸಿರಿಮಾ ಬಂಡಾರನಾಯಕೆ

ಶಿರೀಷ ಪ್ರಭು

ಸ್ತ್ರೀಯರ ಹಕ್ಕುಗಳಿಗಾಗಿ ಹೋರಾಟ ಪ್ರಾರಂಭವಾದದ್ದು ಯುರೋಪಿನಲ್ಲಿ—ಶತಮಾನದ ಪ್ರಾರಂಭದಲ್ಲಿ. ಯುರೋಪ್ ಅಮೇರಿಕಗಳಲ್ಲಿ ಇಂದು ಮಹಿಳೆಯರಿಗೆ ಬಯಸಿದ್ದೆಲ್ಲಾ ಸಿಕ್ಕಿದೆ. ಆದರೂ ಜಗತ್ತಿನ ಪ್ರಥಮ ಮಹಿಳಾ ಪ್ರಧಾನಮಂತ್ರಿ ಆದದ್ದು ಏಶಿಯಾದಲ್ಲಿ; ಎರಡನೆಯವಳು ಮತ್ತು ಮೂರನೆಯವಳು ಕೂಡ ಈ ಹಿಂದುಳಿದ ಖಂಡದಲ್ಲಿಯೇ. ಸಿಂಹಳ, ಭಾರತ, ಇಸ್ರೇಲ್—ಮೂರು ತರಹದ ಈ ಮೂರು ನಾಡುಗಳಲ್ಲಿ ಮೂವರು ಮಹಿಳಾ ಪ್ರಧಾನಮಂತ್ರಿಗಳು ಆಳುತ್ತಿದ್ದಾರೆ.

ಇವರಲ್ಲಿ ಪ್ರಥಮ ಪ್ರಧಾನಮಂತ್ರಿಯನ್ನು ಪಡೆಯುವ ಭಾಗ್ಯ ಪುಟ್ಟ ಸಿಂಹಳ ದೇಶಕ್ಕೆ ಹತ್ತು ವರ್ಷಗಳ ಹಿಂದೆ ಬಂತು. ಸಿರಿಮಾ ಬಂಡಾರನಾಯಕೆ ಅಡಿಗೇಮನೆಯಿಂದ ದೇಶದ ನಾಯಕತ್ವಕ್ಕೆ ಓಮ್ಮಿಂದೊಮ್ಮೆ ತೂರಿ ಬಂದದ್ದು, ಅವರ ಗಂಡ ಸೊಲೊಮನ್ ಡಾಯಸ್ ಬಂಡಾರನಾಯಕೆಯವರ ಕೊಲೆಯಾದ ಕಾರಣದಿಂದ. ಸೊಲೊಮನ್ ಬಂಡಾರನಾಯಕೆಯವರು ಸ್ಥಾಪಿಸಿದ ಶ್ರೀಲಂಕಾ ಸ್ವಾತಂತ್ರ್ಯ ಪಕ್ಷಕ್ಕೆ ತನ್ನ ಗತಿಸಿದ ನಾಯಕನ ಸ್ಥಾನವನ್ನು ತುಂಬುವುದಕ್ಕೆ ಅಷ್ಟೇ ಪ್ರಭಾವಿ ವ್ಯಕ್ತಿ ಬೇರೊಬ್ಬ ಸಿಗದೆ, ವೈಧವ್ಯದ ಕಣ್ಣೀರು ಇನ್ನೂ ಆರದಿರುವಾಗಲೇ ಅವರನ್ನು ಅದು ರಾಜಕಾರಣದ ಮುಂದಿನ ಸಾಲಿಗೆ ಎಳೆದುತಂದಿತು. ಪಕ್ಷದ ಅಧ್ಯಕ್ಷಪದವನ್ನು ಅವರು ಸ್ವೀಕರಿಸಲೇಬೇಕಾಯಿತು. ಸ್ವತಃ ಸಿಂಹಳ ಸಂಸತ್ತಿಗೆ ನಿಲ್ಲುವುದಕ್ಕೆ ಅವರು ನಿರಾಕರಿಸಿದರು. ಶ್ರೀಲಂಕಾ ಸ್ವಾತಂತ್ರ್ಯ ಪಕ್ಷದ ಪರವಾಗಿ ದೇಶವೆಲ್ಲ ಸುತ್ತಿ ಅಶ್ರುಭರಿತ ಪ್ರಚಾರ ಮಾಡಿದರು. ಪಕ್ಷ ಬಹುಮತ ಪಡೆದು ಅಧಿಕಾರಕ್ಕೆ ಬಂತು; ಆದರೆ ಪ್ರಧಾನಮಂತ್ರಿ ಪದಕ್ಕೆ ಮತ್ತಾರನ್ನೂ ಕಾಣದೆ ಸಿರಿಮಾ ಅವರನ್ನೇ ಆಶ್ರಯಿಸಿತು. "ನನ್ನ ಪತಿಗಾಗಿ ಈ ಕರ್ತವ್ಯವನ್ನು ಒಪ್ಪಿಕೊಳ್ಳಲೇಬೇಕಾಗಿದೆ," ಎಂದು ಅವರು ಹೊಣೆಗೆ ತಲೆಕೊಟ್ಟರು. ಐದು ವರ್ಷಗಳ ವರೆಗೆ ಅಧಿಕಾರ ನಡಸಿ ಗಂಡನ ಸಮಾಜವಾದಿ ಧೋರ

ಣೆಯನ್ನು ಜಾರಿಗೆ ತರಲು ಯತ್ನಿಸಿದ ಮೇಲೆ ಸಾಂಪ್ರದಾಯಕ ಡಡ್ಲಿ ಸೇನಾನಾಯಕೆಯವರ ಸಂಯುಕ್ತಪಕ್ಷ ಅವರನ್ನು ಸೋಲಿಸಿ ಅಧಿಕಾರಕ್ಕೆ ಬಂತು. ಈ ವರ್ಷ ಪುನರಪಿ ಶ್ರೀಲಂಕಾ ಪಕ್ಷಕ್ಕೆ ಪ್ರಚಂಡ ವಿಜಯ ದೊರಕಿದೆ. ೧೯೭೦ ರಲ್ಲಿ ೯೬ ಸ್ಥಾನಗಳನ್ನು ಪಡೆದ ಶ್ರೀಲಂಕಾ ಸ್ವಾತಂತ್ರ್ಯ ಪಕ್ಷದ ನಾಯಿಕೆಯಾಗಿ ಸಿರಿಮಾ ಎರಡನೇ ಬಾರಿ ಪ್ರಧಾನ ಮಂತ್ರಿಯಾಗಿದ್ದಾರೆ. ಇಂದು ಶ್ರೀಮತಿ ಬಂಡಾರ ನಾಯಕೆಯವರಿಗೆ ಅವರ ಗಂಡನಿಗಿಂತಲೂ ಪ್ರಬಲವಾದ ಜನತಾಬೆಂಬಲವಿದೆ ಎನ್ನಬಹುದು.

ಭಾರತದಲ್ಲಿ ಸಮಾಜವಾದವನ್ನು ಸರಕಾರದ ಆಧಾರತತ್ವವನ್ನಾಗಿ ಮಾಡಿದ ನೆಹರು ಮತ್ತು ಅವರ ಮಗಳು ಹೇಗೋ ಹಾಗೆ ಬಂಡಾರನಾಯಕೆ ದಂಪತಿಗಳೂ ಆಗರ್ಭ ಶ್ರೀಮಂತ ಕುಲದಿಂದ ಬಂದವರು. ವಾಸ್ತವಿಕವಾಗಿ ಸಿರಿಮಾ ತಮ್ಮ ಗಂಡನಿಗಿಂತಲೂ ಉಚ್ಚ ಕುಲದವರು. ಅವರು ಸಿಂಹಳದ ಅತ್ಯಂತ ಕುಲೀನ ವಂಶಗಳಿರುವ ಕ್ಯಾಂಡಿಯ ತಿಪ್ಪಲು ಪ್ರದೇಶದ ರತವಟ್ಟೆ ಕುಟುಂಬದವರು. ಈ ಕುಟುಂಬ ಸಿಂಹಳವನ್ನು ಆಳುತ್ತಿದ್ದ ಕ್ಯಾಂಡಿಯ ರಾಜಕುಲಕ್ಕೆ ತಲೆಮಾರುಗಳಿಂದ ಸೇವೆ ಸಲ್ಲಿಸಿದ್ದು. ಅವರ ತಂದೆ ಬ್ರಿಟಿಶ್ ಕಾಲದ ಸಿಂಹಳ ಸಿನೇಟಿನ ಸದಸ್ಯರಾಗಿದ್ದರು. ಬಂಡಾರನಾಯಕೆಯವರೋ ಕಣಿವೆ ಪ್ರದೇಶದ, ಅಷ್ಟು ಪ್ರತಿಷ್ಠಿತವಲ್ಲದ ಸಂಪನ್ನ ಕುಲದವರು. ಅವರು ಬೌದ್ಧಧರ್ಮಕ್ಕೆ ಮರು-ಮತಾಂತರ ಹೊಂದಿದ ಕ್ರೈಸ್ತರಾಗಿದ್ದರು. ಆದ್ದರಿಂದ ೨೪ ವಯಸ್ಸಿನ ಸಿರಿಮಾ ೪೧ ವರ್ಷದ ಸೊಲೊಮನ್ ಬಂಡಾರನಾಯಕೆಯವರನ್ನು ಮದುವೆಯಾಗಲು ನಿಶ್ಚಯಿಸಿದಾಗ ಹಲವು ಆಗರ್ಭ ಶ್ರೀಮಂತರ ಗಂಭೀರ ಹುಬ್ಬುಗಳು ಮೇಲೇರಿದ್ದವು. ಆದರೆ ಸಿಂಹಳದಲ್ಲಿ ಎಂದೂ ಹೆಂಗಸರು ತೀರ ಅಧೀನಸ್ಥಿತಿಯಲ್ಲಿರಲಿಲ್ಲ. ಬಂಡಾರನಾಯಕೆಯವರು ಆಕ್ಸ್‌ಫರ್ಡಿನಲ್ಲಿ ಶಿಕ್ಷಣ ಹೊಂದಿದವರೂ ಆಗಲೇ (೧೯೪೧) ಮಂತ್ರಿಪದಕ್ಕೇರಿದವರೂ ಆಗಿದ್ದರು. ಆದ್ದರಿಂದ ಈ "ಪ್ರತಿಲೋಮ" ಸಂಬಂಧ ಕ್ಷಮಿಸಲ್ಪಟ್ಟಿತು.

ಸೊಲೊಮನ್ ಬಂಡಾರನಾಯಕೆ ಬಲು ಇಚ್ಛಾ[...] ವಂತ ರಾಜಕಾರಣಿಯಾಗಿದ್ದರು. ಅವರಿದ್ದಷ್ಟು[...] ಕಾಲ ಸಿರಿಮಾ ಗಂಡನ ಪಡಿನೆಳಲಾಗಿಯೇ[...] ಇದ್ದರು. ಆದರೆ ತಂದೆ ಸಿನೇಟರ್ ರತವಟ್ಟೆ[...] ಯವರು ಮಗಳಿಗೆ ಕೆಥೋಲಿಕ್ ಶಾಲೆಗಳಲ್ಲಿ[...] ಉತ್ತಮ ಶಿಕ್ಷಣ ಕೊಡಿಸಿದ್ದರು. ಮೂರು[...] ಮಕ್ಕಳ— ಎರಡು ಹೆಣ್ಣು, ಒಂದು ಗಂಡು— ತಾಯಿಯಾದ ಸಿರಿಮಾ ಮಾತೆ ಮತ್ತು ಗೃಹಿಣಿಯ[...] ಕರ್ತವ್ಯಗಳಲ್ಲಿ ಬಿಡುವು ಸಿಕ್ಕಾಗ ಅಷ್ಟಿಷ್ಟು ಟೆನಿಸ್[...] ಆಟ, ಸಾಮಾಜಿಕ ಸೇವಾಕಾರ್ಯಗಳಲ್ಲಿ ಆಸಕ್ತಿ ವಹಿ[...] ಸುತ್ತಿದ್ದರು. ಅವರು ಲಂಕಾ ಮಹಿಳಾ ಸಮಿತಿ[...] ಯಲ್ಲಿ ಸಕ್ರಿಯ ಸದಸ್ಯರಾಗಿ ಕೆಲಸಮಾಡಿದರು[...] ಅವರ ತಂದೆ ಸಮಿತಿಗೆ ಹೆರಿಗೆ ಮತ್ತು ಶಿಶುಸೇವ[...] ಸಂಸ್ಥೆಗಾಗಿ ದಾನವಿತ್ತಿದ್ದ ಭೂಮಿಯಲ್ಲಿ ಆಸ್ಪತ್ರೆ[...] ಕಟ್ಟಿಸುವುದರಿಂದ ಅವರ ಸೇವಾಕಾರ್ಯ ಆರಂಭ[...] ವಾಯಿತು. ಸಿಂಹಳದ ಉದ್ದಗಲಕ್ಕೂ ೨,೦೦[...] ಕ್ಕೂ ಹೆಚ್ಚು ಶಾಖೆಗಳುಳ್ಳ ಈ ಸಂಘದ ಸಂಘಟ[...] ಗಾಗಿ ಹಳ್ಳಿಹಳ್ಳಿ ಸುತ್ತಿದ ಸಿರಿಮಾ ಅದ[...] ಕೋಶಾಧಿಕಾರಿ, ಉಪಾಧ್ಯಕ್ಷ ಮತ್ತು[...] ಅನಂತರ ಅಧ್ಯಕ್ಷಪದಕ್ಕೇರಿದರು. ಜಾತಿ ಮ[...] ರಾಜಕೀಯ ಅಭಿಪ್ರಾಯ ಭೇದವಿಲ್ಲದೆ ಸಾರ್ವ[...] ತ್ರಿಕ ಸದಸ್ಯತ್ವವಿದ್ದ ಈ ಸಂಘದ ಕಾರ್ಯದ[...] ಅವರಿಗೆ ದೇಶಾದ್ಯಂತ ಮಿತ್ರರೂ ಬೆಂಬಲಿಗರ[...] ದೊರೆತರು. ಲಂಕಾ ಸ್ವಾತಂತ್ರ್ಯ ಪಕ್ಷದ ಅಧ್ಯಕ್ಷ[...] ಯನ್ನು ಸ್ವೀಕರಿಸಿದ ಮೇಲೆತಾನೇ ಅವರು ಲಂಕಾ[...] ಮಹಿಳಾ ಸಮಿತಿಯ ಪದಾಧಿಕಾರಕ್ಕೆ ರಾಜೀನಾಮೆ[...] ಕೊಟ್ಟದ್ದು. ಆದರೆ ಸಮಿತಿಯಲ್ಲಿದ್ದಾಗ ಸಂಪಾ[...] ಸಿದ ಜನಪ್ರಿಯತೆ ರಾಜಕಾರಣದಲ್ಲಿ ಅವರಿ[...] ತುಂಬಾ ಸಹಾಯಕವಾಯಿತು.

ಪ್ರಧಾನಮಂತ್ರಿ ಪದವನ್ನು ಸ್ವೀಕರಿಸಿ[...] ಮೇಲೆ ಸಿರಿಮಾ ದಿವಂಗತ ಪತಿಯ ಸಮಾಜವಾ[...] ನೀತಿಗಳನ್ನು ರಭಸದಿಂದ ಮುಂದೊತ್ತಿದರು[...] ಪ್ರಧಾನಮಂತ್ರಿಯಾಗಿ ಅವರು ಜಗತ್ತಿನ [...]

ಪ್ರಮುಖ ರಾಜಧಾನಿಗಳಿಗೂ ಭೇಟಿಕೊಟ್ಟು ಬಂದರು. ೧೯೬೨ ರಲ್ಲಿ ಚೀನ-ಭಾರತ ಘರ್ಷಣೆ ಆದಾಗ ಏಶಿಯದ ಎರಡು ಪ್ರಬಲ ರಾಷ್ಟ್ರಗಳ ನಡುವೆ ಇದ್ದ ಈ ಕಲಹವನ್ನು ಶಾಂತಗೊಳಿಸಲು ತಟಸ್ಥ ರಾಷ್ಟ್ರಗಳ ಪರಿಷತ್ತನ್ನು ಕರೆಯಲು ಅವರು ಶಕ್ತಿಮೀರಿ ದುಡಿದರು. ಚೀನ ಇದಕ್ಕೆ ಪ್ರೋತ್ಸಾಹ ಕೊಟ್ಟಿತು. ಆದರೆ ಎಂದಿನಂತೆ ಪರಿಷತ್ತಿನ ನಿರ್ಣಯಗಳಿಗೆ ಇತರರನ್ನು ಬದ್ಧರಾಗಿ ಮಾಡಿದರೂ ಚೀನ ಸ್ವತಃ ಅದರ ಬಂಧನಕ್ಕೊಳ ಪಡದೆ ನುಣುಚಿಕೊಂಡಿತೆಂಬ ಮಾತು ಬೇರೆ.

ವಿದೇಶಿ ಪ್ರಭಾವದಿಂದ ಸಿಂಹಳವನ್ನು ಪೂರ್ತಿಯಾಗಿ ಮುಕ್ತಗೊಳಿಸುವ ಉದ್ದೇಶದಿಂದ ಸೊಲೊಮನ್ ಬಂಡಾರನಾಯಕೆಯವರು ಬ್ರಿಟಿಶ್ ನೌಕಾಪಡೆಯನ್ನು ತ್ರಿಂಕಾಮಲೆ ಬಿಟ್ಟು ಹೋಗುವಂತೆ ಮಾಡಿದ್ದರು. ಶ್ರೀಮತಿ ಸಿರಿಮಾ ಇನ್ನೊಂದು ಹೆಜ್ಜೆ ಮುಂದೆ ಹೋಗಿ ವಿದೇಶಿ ಎಣ್ಣೆ ಕಂಪನಿಗಳನ್ನು ರಾಷ್ಟ್ರೀಕರಿಸುವ ಕ್ರಮ ಕೈಕೊಂಡರು. ಶಿಕ್ಷಣ ಮತ್ತು ವಿಮಾ ಕ್ಷೇತ್ರದಲ್ಲಿಯೂ ರಾಷ್ಟ್ರೀಕರಣ ಯೋಜನೆಗಳು ಬಂದವು. ಹೆಚ್ಚು ಹೆಚ್ಚು ಸಮಾಜವಾದಿ ಕ್ರಮಗಳು ಜಾರಿಗೆ ಬರುವುದನ್ನು ಸಿಂಹಳದ ಶ್ರೀಮಂತರ ಕೈಯಲ್ಲಿದ್ದ ಪ್ರಮುಖ ಪತ್ರಿಕೆಗಳು ವಿರೋಧಿಸುತ್ತಿದ್ದುದರಿಂದ ಪತ್ರಿಕೆಗಳನ್ನೇ ರಾಷ್ಟ್ರೀಕರಿಸುವ ಸಾಹಸಕ್ಕೆ ಸಿರಿಮಾ ಇಳಿದರು. ಆಗ ಮಾತ್ರ ಅವರ ಪಕ್ಷದಲ್ಲೇ ಕೆಲವರು ವಿದುರುಬಿದ್ದರು. ಅವರ ಸರಕಾರ ೧೯೬೫ರಲ್ಲಿ ಸೋಲು ತಿಂದಿತು. ಸಾರ್ವತ್ರಿಕ ಚುನಾವಣೆಗಳಾದವು. ಶ್ರೀ ಲಂಕಾ ಸ್ವಾತಂತ್ರ್ಯ ಪಕ್ಷ ಸೋತು ಸಿರಿಮಾ ಮುಂದಿನ ಐದು ವರ್ಷಗಳನ್ನು ವಿರೋಧಿ ಪಕ್ಷದ ಧುರೀಣರಾಗಿ ಕಳೆಯಬೇಕಾಯಿತು.

"ಗಂಡಸರೊಡನೆ ಸಮಾನಸ್ಕಂಧರಾಗಿ ಹೆಂಗಸರು ನಿರ್ವಹಿಸಲಾರದ ಹೊಣೆಯೇ ಇಲ್ಲ"— ಎಂದು ಸಿರಿಮಾ ತಮ್ಮ ಪ್ರಥಮ ಚುನಾವಣೆಯ ಕಾಲದಲ್ಲೇ ಸಾರಿದ್ದರು. ೧೯೬೦ರಲ್ಲಿ ಅವರು ಪ್ರಧಾನಮಂತ್ರಿಯಾದೊಡನೆಯೆ ಭಾರತಕ್ಕೆ ಬಂದಾಗ ಬೆಂಗಳೂರಿನಲ್ಲಿ ನೆಹರೂ ನಂತರ ಭಾರತದಲ್ಲಿಯೂ ಮಹಿಳಾ ಪ್ರಧಾನಮಂತ್ರಿ ಬರಲೆಂದು ಹಾರೈಸಿದ್ದರು. "ರಾಜಕಾರಣದಲ್ಲಿರುವ ಹೆಚ್ಚಿನ ಗಂಡಸರು ದುರ್ಬಲ ಮನಸ್ಸಿನವರು," ಎಂದು ಕೂಡ ಸಿರಿಮಾ ಅಭಿಪ್ರಾಯ. ಐದು ವರ್ಷಗಳ ವನವಾಸದಿಂದ ಸಮಾಜವಾದ ಮತ್ತು ಉಗ್ರ ತಟಸ್ಥ ನೀತಿಯ ವಿಷಯದಲ್ಲಿ ಅವರಿಗಿದ್ದ ದೃಢ ನಿಷ್ಠೆ ಸಡಿಲಾಗಿಲ್ಲ. ಈ ಸಲ ಟ್ರಾಟ್‌ಸ್ಕಿವಾದಿ ಲಂಕಾ ಸಮಸಮಾಜ ಪಕ್ಷ ಮತ್ತು ಮಾಸ್ಕೋ ಪರ ಕಮ್ಯುನಿಸ್ಟ್ ಪಕ್ಷಗಳೊಡನೆ ಸಂಯುಕ್ತವಾಗಿ ಚುನಾವಣೆಯನ್ನು ಹೋರಾಡಿ ಗೆದ್ದರು. ಆಮೇಲೆ ಅವರು ತಮ್ಮ ನೀತಿಯನ್ನು ಇನ್ನೂ ಬಲವಾಗಿ ಮತ್ತು ವೇಗವಾಗಿ ಮುಂದೊತ್ತತೊಡಗಿದ್ದಾರೆ. ಅವರು ಹೊಸ ಸಮಾಜವಾದಿ ರಾಜ್ಯಸಂವಿಧಾನ ರಚನೆಗೆ ಪ್ರಥಮ ಕ್ರಮಗಳನ್ನು ಕೈಕೊಂಡಿದ್ದಾರೆ. ಬ್ಯಾಂಕು, ಮುಖ್ಯ ಪದಾರ್ಥಗಳ ವಾಣಿಜ್ಯ ಮೊದಲಾದವುಗಳ ರಾಷ್ಟ್ರೀಕರಣದ ನಿರ್ಣಯ ಮಾಡಿದ್ದಾರೆ. ಪತ್ರಿಕೆಗಳ ರಾಷ್ಟ್ರೀಕರಣವನ್ನಲ್ಲದಿದ್ದರೂ ತಮಗೆ ಒಲ್ಲದ ಪತ್ರಿಕೆಗಳ ಮೇಲೆ ಪ್ರತೀಕಾರ ಕೈಕೊಳ್ಳಲು ಅವರು ಉಪಕ್ರಮಿಸಿರುವುದು ಅಭಿಪ್ರಾಯಸ್ವಾತಂತ್ರ್ಯದ ಅಂತ್ಯಕಾಲವನ್ನು ಸೂಚಿಸುವಂತೆ ಕಾಣುತ್ತದೆ. ಅವರ ಪಕ್ಷವನ್ನು ವಿರೋಧಿಸಿ ಸೇನಾನಾಯಕೆಯವರನ್ನು ಬೆಂಬಲಿಸಿದ ಸಿಂಹಳದ ಅತಿ ದೊಡ್ಡ ಪತ್ರಿಕಾ ಗುಂಪಾದ "ಲೇಕ್ ಹೌಸ್" ಗುಂಪಿಗೆ ಸರಕಾರಿ ಜಾಹಿರಾತುಗಳನ್ನು ನಿಲ್ಲಿಸಿ ಸಿರಿಮಾ ಅದರ ಸ್ಥಿತಿಗತಿಗಳ ವಿಷಯದಲ್ಲಿ ವಿಚಾರಣೆಗೆ ಆಜ್ಞಾಪಿಸಿದ್ದಾರೆ.

ಟ್ರಾಟ್‌ಸ್ಕಿವಾದಿ ಮತ್ತು ಮಾಸ್ಕೋ ಪರ ಕಮ್ಯುನಿಸ್ಟರಿಗೆ ಪ್ರಮುಖ ಮಂತ್ರಿಶಾಖೆಗಳನ್ನು ಕೊಟ್ಟು ಅವರು ತಮ್ಮ ತಾಟಸ್ಥ್ಯವನ್ನು ಹೆಚ್ಚು ಕಮ್ಯುನಿಸ್ಟ್ ಪರವಾಗಿ ಮಾಡತೊಡಗಿದ್ದಾರೆ. ಅಧಿಕಾರಕ್ಕೆ ಬಂದ ಕೂಡಲೆ ಅವರು ಕೈಕೊಂಡ ಪ್ರಥಮ ಕ್ರಮಗಳೆಂದರೆ ಪೂರ್ವ ಜರ್ಮನಿಯ (ಕಮ್ಯುನಿಸ್ಟ್) ಸರಕಾರ, ಉತ್ತರ ಕೊರಿಯ ಸರಕಾರ, ಉತ್ತರ ವಿಯತ್ನಾಂ ಸರಕಾರಗಳಿಗೆ ಮಾತ್ರವಲ್ಲ, ದಕ್ಷಿಣ ವಿಯತ್ನಾಂನಲ್ಲಿ

ದಂಗೆಖೋರ ಎನಿಸಿದ ಕ್ರಾಂತಿಕಾರಿ ತಾತ್ಪೂರ್ತಿಕ ಸರಕಾರಕ್ಕೂ ಮನ್ನಣೆ ಕೊಟ್ಟು ರಾಯಭಾರ ಸಂಬಂಧ ಪ್ರಾರಂಭಿಸಿದ್ದು; ಅದಕ್ಕೂ ಹೆಚ್ಚಾಗಿ ಇಸ್ರೇಲಿನೊಡನೆ ರಾಜಕೀಯ ಸಂಬಂಧವನ್ನು ಕಡಿದುಕೊಂಡದ್ದು.

ಭಾರತಕ್ಕೆ ಸಿಂಹಳದೊಡನೆ ಇರುವ ದೀರ್ಘಕಾಲೀನ ಸಮಸ್ಯೆಯೆಂದರೆ ಅಲ್ಲಿನ ಹನ್ನೆರಡು ಲಕ್ಷ ಜನ ಭಾರತೀಯ ಮೂಲದ (ವಿಶೇಷವಾಗಿ ತಮಿಳು) ಪ್ರಜೆಗಳ ಭವಿಷ್ಯದ್ದು. ಬಂಡಾರನಾಯಕೆ ಸರಕಾರ ಸಮಾಜವಾದಿಯೇ ಆದರೂ ಅದರ ರಾಷ್ಟ್ರೀಯ ಭಾವನೆಯ ಸ್ವರೂಪ ಸಿಂಹಳೀಯ ಬೌದ್ಧಪರವಾದದ್ದು. ಭಾರತೀಯ ಮೂಲದ ಜನರು ಸಿಂಹಳವನ್ನೆಲ್ಲ ವ್ಯಾಪಿಸಿಬಿಡಬಹುದೆಂಬ ಭಯದಿಂದ ಸಿಂಹಳದಲ್ಲೇ ಹುಟ್ಟಿದ ಭಾರತೀಯ ಮೂಲದವರನ್ನೂ ಸಾಧ್ಯವಿದ್ದಷ್ಟು ಹೊರತಳ್ಳುವ ಯತ್ನ ಸಿಂಹಳೀ ಸರಕಾರಗಳ ಧೋರಣೆಯಾಗಿದೆ. ಹಿಂದಿನ ಸಲ ಶ್ರೀಮತಿ ಬಂಡಾರನಾಯಕೆ ಪ್ರಧಾನಮಂತ್ರಿಯಾಗಿದ್ದಾಗ ಪ್ರಧಾನಮಂತ್ರಿ ಶಾಸ್ತ್ರಿಗಳೊಡನೆ ಈ ವಿಷಯ ಚರ್ಚಿಸಿ ಸಿಂಹಳದಲ್ಲಿರುವ ಭಾರತೀಯ ಮೂಲದವರಲ್ಲಿ ೫.೨೫ ೦೦೦ ಜನರನ್ನು ಭಾರತ ಹಿಂದೆ ಕರೆಯಿಸಿಕೊಳ್ಳಬೇಕೆಂದೂ ಕನಿಷ್ಠ ೩.೦೦,೦೦೦ ಜನರಿಗೆ ಸಿಂಹಳ ನಾಗರಿಕತ್ವವನ್ನು ದಯಪಾಲಿಸಬೇಕೆಂದೂ ಒಪ್ಪಂದ ಮಾಡಿಕೊಂಡರು. ಆದರೆ ಈ ಒಪ್ಪಂದ ಕೃತಿಯಲ್ಲಿ ಬರುವುದು ತೀರ ಸಾವಕಾಶವಾಗಿದೆ. ಕೇವಲ ನಾಲ್ಕು ಸಾವಿರ ಜನರಿಗಷ್ಟೇ ಸಿಂಹಳೀ ನಾಗರಿಕತ್ವ ಸಿಕ್ಕಿದೆ. ಒಪ್ಪಂದದ ಅರ್ಥವಿವರಣೆಯಲ್ಲಿ ಮತಭೇದವಾಗಿದೆ. ಸಿರಿಮಾ ಮತ್ತು ಇಂದಿರಾ ಗಾಂಧಿಯವರಲ್ಲಿ ತುಂಬಾ ಸ್ನೇಹ ಇದೆ. ಅದರಿಂದ ಸಮಸ್ಯೆಗೆ ಏನಾದರೊಂದು ಉಭಯಸಮ್ಮತ ನಿವೃತ್ತಿ ಸಿಗಬಹುದು. ಆದರೂ ತಮಿಳರನ್ನೆಲ್ಲ ಭಾರತಕ್ಕೆ ಹೊತ್ತು ಹಾಕುವುದಾಗಿ ಶ್ರೀಲಂಕಾ ಪಕ್ಷ ಚುನಾವಣೆ ಕಾಲದಲ್ಲಿ ಹೇಳಿತ್ತು. ಈಗ ಅದರ ಸರಕಾರ ಆಗಲೇ ಭಾರತೀಯ ಮೂಲದವರ ಮೇಲೆ ಒತ್ತಡ ತರಲಾರಂಭಿಸಿದೆ. ಭಾರತೀಯ ಮೂಲದ ನಿವೃತ್ತ ಸಿಂಹಳೀ ಸರಕಾರಿ ನೌಕರರಿಗೆ ಪೆನ್ಶನ್ನುಗಳನ್ನು ಕೊಡಬೇಕಾದರೆ ಅವರು ಕೂಡಲೆ ಭಾರತೀಯ ನಾಗರಿಕತ್ವವನ್ನು ಪಡೆದುಕೊಳ್ಳಬೇಕು ಎಂದು ಅದು ಆಜ್ಞಾಪಿಸಿ ಭಾರತೀಯ ಮೂಲದವರನ್ನು ಸಿಂಹಳೀ ನಾಗರಿಕತ್ವಕ್ಕೆ ಅರ್ಜಿ ಹಾಕದ ಹಾಗೆ ಮಾಡುತ್ತಿದೆ. ತಮಿಳು ಭಾಷೆಯ ಜನರನ್ನು ನಿರುತ್ಸಾಹಗೊಳಿಸುವುದಕ್ಕಾಗಿ ಭಾರತದಿಂದ ತಮಿಳು ಪತ್ರಿಕೆಗಳನ್ನು ತರಿಸುವುದಕ್ಕೆ ತಡೆಗಳನ್ನು ಒಡ್ಡಲಾಗಿದೆ. ಸಿಂಹಳೀ ಭಾಷೆಯನ್ನು ಕಡ್ಡಾಯವಾಗಿ ಮಾಡಲಾಗುತ್ತಿದೆ. ತಮ್ಮ ಅಸ್ತಿತ್ವಕ್ಕೆ ಅಪಾಯ ತರುವ ಈ ಉಪಾಯಗಳನ್ನು ಎದುರಿಸಲು ತಮಿಳರು ನಿರ್ಧರಿಸಿದ್ದಾರೆ. ಅವರ ಸಂಖ್ಯೆ ಸಿಂಹಳದಲ್ಲಿ ಸೇಕಡಾ ೧೮ರಷ್ಟಿದೆ. ಸಿಂಹಳದ ಈ ನೀತಿ ಹಿಂಸಾಚಾರಕ್ಕೆ ಎಡೆಗೊಡಬಹುದು.

ಸಮಾಜವಾದಿ, ಜಾತಿ ಧರ್ಮಾತೀತ ಎಂದುಕೊಂಡರೂ ಸಿರಿಮಾ ಸ್ವತಃ ತುಂಬಾ ನಿಷ್ಠಾವಂತ ಬೌದ್ಧರಾಗಿದ್ದಾರೆ. ಅವರ ಪತಿಯನ್ನು ಕೊಂದವನು ಒಬ್ಬ ಬೌದ್ಧ ಭಿಕ್ಷು. ಆದರೂ ಸೊಲೊಮನ್ ಬಂಡಾರನಾಯಕೆಯ ಮರಣ ದಿನವಾದ ಪೌರ್ಣಿಮೆಯ ದಿನ ಪ್ರತಿ ತಿಂಗಳು ಸಿರಿಮಾ ಅವರ ಪ್ರೀತ್ಯರ್ಥ ಬೌದ್ಧ ಭಿಕ್ಷುಗಳಿಗೆ ಭೋಜನ ಮಾಡಿಸುತ್ತಾರೆಂದು ಪಂಡಿತ ಶಿವಶರ್ಮರು ಬರೆಯುತ್ತಾರೆ. ಬೌದ್ಧ ಧರ್ಮಕ್ಕೆ ಅವರ ಸಮಾಜವಾದಿ ಸರಕಾರ ವಿಶೇಷ ಪ್ರೋತ್ಸಾಹ ನೀಡುವುದಾಗಿ ಬಹಿರಂಗವಾಗಿಯೇ ಮಾತು ಕೊಟ್ಟಿದೆ. ಇದೆಲ್ಲದರಲ್ಲಿ ಒಳ್ಳೇ ಪತಿಭಕ್ತಿ, ಒಳ್ಳೆ ಧರ್ಮಭೀರುತ್ವಗಳ ಸಂಗಡ ಒಳ್ಳೇ ರಾಜಕಾರಣವೂ ಇದೆ ಎನ್ನಿ. ▲

ಮಾತು-ಮಾಣಿಕ್ಯ

ಕ್ಷೋಭೆಗೊಳ್ಳದಿರುವುದೇ ಮಹಾತ್ಮರ ಮಹಾತ್ಮೆಯ ಪ್ರಥಮ ಲಕ್ಷಣ.

—ಕಥಾಸರಿತ್ಸಾಗರ

ಮಹಾ ಆತ್ಮಗಳ ಮನಸ್ಸುಗಳಲ್ಲಿ ಸಂಕಲ್ಪಗಳು ಉದಯಿಸುತ್ತವೆ; ದುರ್ಬಲ ಆತ್ಮಗಳಲ್ಲಿ ಇಚ್ಛೆಗಳು ಮಾತ್ರ.

—ಚೀನೀ ಉಕ್ತಿ

ಅನಾವಶ್ಯಕ ವಸ್ತುಗಳನ್ನು ಕೊಳ್ಳತೊಡಗಿದರೆ ಆವಶ್ಯಕ ವಸ್ತುಗಳನ್ನು ಬೇಗನೆ ಮಾರಬೇಕಾಗುತ್ತದೆ.

—ಫ್ರ್ಯಾಂಕ್‌ಲಿನ್

ನೋಯದ ಬೇಯದ ಬಾಯದ ಕೀಯದ ಪೆಣನಲ್ತೆ ಕುಡದ ಕೊಳ್ಳದ ಕೃಪಣಂ?

—ನೇಮಿಚಂದ್ರ

ಕರ್ತವ್ಯಕ್ಕಿಂತ ಸುಖಕ್ಕೆ ಆದ್ಯತೆ ಕೊಡುವುದೇ ಅನೇಕರ ದೌರ್ಭಾಗ್ಯಗಳಿಗೆ ಕಾರಣವಾಗಿರುತ್ತದೆ.

—ಟಿ. ಟಿ. ಮುಂಗರ್

ಕುದುರೆಗೆ ನಿತ್ಯ ಓಡದಿರುವುದೇ ಮುಪ್ಪು.

—ಸಂಸ್ಕೃತದಿಂದ

ಒಳ್ಳೆಯವರನ್ನು ಬೇಡಿ ಇಲ್ಲೆನಿಸಿಕೊಳ್ಳುವುದು ಕೀಳರನ್ನು ಬೇಡಿ ಪಡೆಯುವುದಕ್ಕಿಂತ ವಾಸಿ.

—ಕಾಳಿದಾಸ

ಫಲದ ಸವಿಯು ವೃಕ್ಷವರಿದೊಡೆ ಕೊಡುವುದೇ ಇತರರಿಗೆ? ಅಶನದ ಸವಿಯ ಕುಡಿಕೆಯರಿದೊಡೆ ಮಿಗುವುದೇ ಅನ್ನ?

—ಮೋಳಿಗಯ ಮಾರಯ್ಯ

ಪ್ರತಿಯೊಂದು ಮಹಾಕಾರ್ಯವೂ ಪ್ರಾರಂಭದಲ್ಲಿ ಅಸಾಧ್ಯವೇ ಆಗಿರುತ್ತದೆ.

—ಕಾರ್ಲೈಲ್

ಕ್ಷಣಕ್ಷಣಕ್ಕೂ ಹೊಸಹೊಸದಾಗಿ ಕಾಣುವುದನ್ನೇ ರಮಣೀಯತೆ ಎನ್ನುವುದು.

—ಮಾಘ

ಮಾನವ ಶರೀರವೊಂದು ತಂಬೂರಿ. ಮನ, ವಚನ, ಕರ್ಮ ಇವು ಅದರ ಮೂರು ತಂತಿಗಳು.

—ತ್ರಿಪಿಟಕ

ಹಳೇ ಸಾಮುದ್ರಿಕ ಶಾಸ್ತ್ರದ ಬದಲು
ಹೊಸದೊಂದು ತಲೆಯೆತ್ತುತ್ತಿದೆ

ಹಸ್ತ 'ಸಾಮುದ್ರಿಕ': ವೈದ್ಯಶಾಸ್ತ್ರದ ಹೊಸ ಅಸ್ತ್ರ


ವೈಜ್ಞಾನಿಕ ಸಂಶೋಧನೆಗಳಲ್ಲಿ ಒಂದು ಸಂಗತಿ ಆಗಾಗ್ಗೆ ಕಾಣಿಸಿಕೊಳ್ಳುತ್ತದೆ. ಅಂಧಶ್ರದ್ಧೆಗಳ ರೂಪದಲ್ಲಿ ಜನರಲ್ಲಿ ಹರಡಿದ್ದ ನಂಬಿಕೆಗಳಿಗೆ ಒಂದಲ್ಲ ಒಂದು ರೀತಿಯ ಆಧಾರವುಂಟೆಂದು ವಿಜ್ಞಾನಿಗಳಿಗೆ ಅಕಸ್ಮಾತ್ತಾಗಿ ಕಂಡುಬರುತ್ತದೆ. ತೀರ ಇತ್ತೀಚಿನ ಅಂಥ ಉದಾಹರಣೆಯೆಂದರೆ ಹಸ್ತಸಾಮುದ್ರಿಕ.

ನಿಮ್ಮ ಭವಿಷ್ಯ ನಿಮ್ಮ ಅಂಗೈಲಿದೆ ಎಂದು ಹಸ್ತಸಾಮುದ್ರಿಕ ಶಾಸ್ತ್ರ ಹೇಳುತ್ತದೆ. ಬೆರಳುಗಳ ತುದಿಗಳಲ್ಲಿ ಇರುವ 'ಶಂಖ' ಮತ್ತು 'ಚಕ್ರ' ಅಂಗೈಯಲ್ಲಿರುವ ನಾನಾ ರೇಖೆಗಳು ಇವುಗಳಿಗೆಲ್ಲ ನಿಮ್ಮ ಭವಿಷ್ಯದ ದೃಷ್ಟಿಯಿಂದ ಅರ್ಥವಿದೆ. ಎಂಬುದು ಸಕಲ ದೇಶಗಳಲ್ಲಿಯೂ ಹಬ್ಬಿರುವ ಒಂದು ನಂಬಿಕೆ. ಇದೆಲ್ಲಾ ಬರಿ ಕಲ್ಪನಾವಿಲಾಸ-ಅಥವಾ ವಂಚಕರ ಸೃಷ್ಟನೆ ಎಂದು ವಿಜ್ಞಾನಿಗಳು ಹೇಳುತ್ತ ಬಂದಿದ್ದರು.

ಈಗ ಅವರಿಗೆ ಹಸ್ತಸಾಮುದ್ರಿಕ ಅಷ್ಟು ವಂಚಕ ವಿದ್ಯೆಯಾಗಿ ಕಾಣಿಸುತ್ತಿಲ್ಲ. ಅಂಗೈಯಲ್ಲಿ ತೋರಿಬರುವ ಕೆಲ ಲಕ್ಷಣಗಳು ನಿಮ್ಮ ಭವಿಷ್ಯವನ್ನು ಸೂಚಿಸುತ್ತವೆಂಬುದಕ್ಕೆ ಅವರಿಗೆ ಆಧಾರ ಸಿಕ್ಕಿಲ್ಲವಾದರೂ ಅವು ನಿಮ್ಮ ಬುದ್ಧಿಯ ಮತ್ತು ಹೃದಯದ ಆಪ್ತತ್ವವನ್ನು ಒಳಗೊಂಡಿರಬಹುದು ಎಂದು ಅವರಿಗೆ ಅನಿಸತೊಡಗಿದೆ. ಹುಟ್ಟಿದ ಮಗುವಿನ 'ಹಸ್ತಸಾಮುದ್ರಿಕ'ದಿಂದ ಅದು ಮುಂದೆ ಹೃದಯರೋಗಿಯಾಗಬಹುದೇ ಮಂದಮತಿ ಅಥವಾ ಕೊಲೆಪಾತಕಿಯಾಗಬಹುದೇ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವುಂಟು.

ಈ ಹೊಸ ವಿಜ್ಞಾನ ಶಾಖೆಗೆ ಹಸ್ತಸಾಮುದ್ರಿಕವೆಂದು ಹೆಸರಿಡದೆ ಚರ್ಮರೇಖಾಶಾಸ್ತ್ರ (Dermatoglyphics) ಎಂದು ಕರೆಯಲಾಗಿದೆ.

ಕಳೆದ ವರ್ಷ ಬಾಸ್ಟನ್ನಿನಲ್ಲಿ ಸೇರಿದ ಅಮೇರಿಕದ ವಿಜ್ಞಾನಪ್ರಗತಿ ಸಂಘದ ೧೩೬ ನೇ ಪರಿಷತ್ತಿನಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯ ಮತ್ತು ಮಸಾಚುಸೆಟ್ಸ್ ಆಸ್ಪತ್ರೆಯ ವಿಜ್ಞಾನಿಯಾದ ಡಾ. ಫ್ರಾಂಕ್ ಆರ್. ಅರ್ವಿನ್ನರೂ ಸ್ಟಾನ್‌ಫರ್ಡ್ ಮೆಡಿಕಲ್ ಸ್ಕೂಲಿನ ಡಾ. ಲಾರೆನ್ಸ್ ರಜವಿಯವರೂ ಒಂದು ವರದಿ ಒಪ್ಪಿಸಿದರು. ಸ್ತ್ರೀಯರ ಮೇಲೆ ಬಲಾತ್ಕಾರ ಮಾಡಿದ ಮತ್ತು ಕೊಲೆಯ ಅಪರಾಧಗಳಿಗಾಗಿ ಶಿಕ್ಷೆ ಅನುಭವಿಸುತ್ತಿರುವ ೧೬೭ ಅಪರಾಧಿಗಳ ಕೈಬೆರಳ ಮುದ್ರೆಗಳನ್ನು


೧. ಶಂಖ ೨. ಚಕ್ರ


ಅವರು ಪರೀಕ್ಷಿಸಿದರು. ಸ್ತ್ರೀಯರ ಮೇಲೆ ಅತ್ಯಾಚಾರ ಮಾಡಿದ ೮೩ ಜನರ ಒಂದು ಗುಂಪಿನಲ್ಲಿ ಆರು ಜನರ ಬೆರಳ ಮುದ್ರೆಗಳು ವಿಚಿತ್ರವಾಗಿರುವುದನ್ನವರು ಗಮನಿಸಿದರು.

ಸಾಮಾನ್ಯವಾಗಿ ಮನುಷ್ಯರ ಹತ್ತೂ ಕೈಬೆರಳುಗಳಲ್ಲಿ 'ಶಂಖ' (loop) ಅಥವಾ 'ಚಕ್ರ' (whorl) ಗುರುತುಗಳಿರುತ್ತವೆ (ಚಿತ್ರ ೧ ಮತ್ತು ೨). ಲಕ್ಷಾಂತರ ಜನರ ಬೆರಳು ಮುದ್ರೆಗಳನ್ನು ಪರೀಕ್ಷಿಸಿ ಸಾಮಾನ್ಯವಾಗಿ ಪ್ರತಿ ಗಂಡಸಿನ ಹತ್ತೂ ಬೆರಳುಗಳ ಶಂಖ ಚಕ್ರಗಳು ಸರಾಸರಿ ೧೬೮ ಗೆರೆಗಳಿಂದಲೂ ಹೆಂಗಸಿನ ಶಂಖ ಚಕ್ರಗಳು ೧೨೭ ಗೆರೆಗಳಿಂದಲೂ ಕೂಡಿವೆಯೆಂದು ಗೊತ್ತುಮಾಡಿಕೊಂಡಿದ್ದಾರೆ. ಆದರೆ ಈ ಆರು ಜನ ಕೈದಿಗಳ ಬೆರಳುಗಳ ಶಂಖ ಚಕ್ರಾಂಕಿತಗಳಲ್ಲಿ ಸರಾಸರಿ ೧೧೮ ಗೆರೆಗಳು ಮಾತ್ರ ಇದ್ದವು. ಮಾತ್ರವಲ್ಲ, ಸಾಮಾನ್ಯರ ಬೆರಳುಗಳಲ್ಲಿ ಕಾಣಿಸುವ, ಶಂಖಚಕ್ರಗಳನ್ನು ಹೋಲುವ ಅಂಕಿತಗಳ ಬದಲು ಈ ಜನರ ಬೆರಳ ಮುದ್ರೆಗಳ ಗೆರೆಗಳು ಚಿಕ್ಕ ಚಿಕ್ಕ ಕಮಾನು (ಚಿತ್ರ ೩ ಮತ್ತು ೪) ಗಳಂತಿದ್ದವು. ಡಾ. ರಜವಿಯರು ಈ ವೈಚಿತ್ರ್ಯವುಳ್ಳವರ ಶರೀರ ಕಣ (ಕೋಶ)ಗಳನ್ನೂ ಪರೀಕ್ಷಿಸಿದರು. ಈ ಕಣಗಳಲ್ಲಿ ಲಿಂಗನಿರ್ಣಯಕ್ಕೆ ಕಾರಣವಾದ ಅಂಶದಲ್ಲಿ ಒಂದು ಹೆಚ್ಚಿನ ಕ್ರೊಮೊಸೋಮು (XY ಬದಲು XYY) ಇದ್ದದ್ದನ್ನು ಅವರು ಗಮನಿಸಿದರು. ಹೀಗೆ ಅತಿರಿಕ್ತ ಕ್ರೊಮೊಸೋಮು ಇರುವ ಜನರಲ್ಲಿ ಹಿಂಸಾಪ್ರವೃತ್ತಿ ಅತಿರೇಕವಾಗಿರುವುದು ಇತರರ ಪರಿಶೀಲನೆಗಳಲ್ಲಿ ಕಂಡುಬಂದಿತ್ತು. ಡಾ.

೩. ಕಮಾನ್

೪. ಕಮಾನ್





೫. ಸಾಮಾನ್ಯ ಹಸ್ತ

೬. ಮಂಗೋಲಿಯನ್ ಪೆದ್ದನ ಹಸ್ತ


ರಜವಿಯುವರ ಪರಿಶೀಲನೆಯಿಂದ ಬೆರಳು ಮುದ್ರೆಯ ಈ ವೈಚಿತ್ರ್ಯ ಹಿಂಸಾಪ್ರವೃತ್ತಿಯನ್ನು ಸೂಚಿಸುತ್ತದೆಂಬುದು ಇಮ್ಮಡಿ ದೃಢಪಟ್ಟಂತಾಯಿತು.

ಕೊಲೆ ಮತ್ತು ಸ್ತ್ರೀಯರ ಮೇಲೆ ಅತ್ಯಾಚಾರ ಇವೆರಡೂ ಅಪರಾಧಗಳನ್ನು ಮಾಡಿದವರನ್ನೊಳಗೊಂಡ ಜನರ ಇನ್ನೊಂದು ಗುಂಪಿನಲ್ಲಿ ಡಾ. ಅರ್ವಿನ್ನರು ನಡೆಸಿದ ಪರಿಶೀಲನೆಯಲ್ಲಿಯೂ ಅನೇಕರು ಇದೇ ತರಹದ ಬೆರಳ ಮುದ್ರೆಯ ವೈಚಿತ್ರ್ಯವನ್ನು ಪ್ರದರ್ಶಿಸಿದರು. ಡಾ. ಅರ್ವಿನ್ನರು ಬೆರಳ ಮುದ್ರೆಯ ಪರೀಕ್ಷೆಯನ್ನು ಮಾತ್ರವಲ್ಲದೆ ಮೆದುಳಿನ ವಿದ್ಯುತ್ತರಂಗಗಳ ಮತ್ತು ಶರೀರದ ಕಣ (ಕೋಶ)ಗಳ ಅನುಸಂಧಾನವನ್ನೂ ಮಾಡಿದರು. ೮೪ ರಲ್ಲಿ ಸುಮಾರು ಅರ್ಧ ಜನರು ಈ ಮೂರು ಪರೀಕ್ಷೆಗಳ ಪೈಕಿ ಒಂದಲ್ಲ ಒಂದರಲ್ಲಿ ವೈಚಿತ್ರ್ಯವನ್ನು ತೋರ್ಪಡಿಸಿದರು. ಸೇಕಡಾ ೭ ರಷ್ಟು ಜನರಲ್ಲಂತೂ ಮೂರೂ ಪರೀಕ್ಷೆಗಳಲ್ಲಿ ವೈಚಿತ್ರ್ಯ ಕಂಡುಬಂತು.


ಬೆರಳ ಮುದ್ರೆಗಳಲ್ಲಿ ವೈಚಿತ್ರ್ಯವುಳ್ಳವರೆಲ್ಲರೂ ಹಿಂಸಾ ಅಥವಾ ಲೈಂಗಿಕ ಅಪರಾಧಗಳನ್ನು ಮಾಡುತ್ತಾರೆಂದು ಇದರ ಅರ್ಥವಲ್ಲವೆಂದು ಈ ಇಬ್ಬರು ವಿಜ್ಞಾನಿಗಳು ಒತ್ತಿ ಹೇಳುತ್ತಾರೆ. ಅಥವಾ ಈ ವೈಚಿತ್ರ್ಯವುಳ್ಳವರು ಮಾತ್ರವೇ ಈ ಅಪರಾಧಗಳನ್ನು ಮಾಡುತ್ತಾರೆಂದೂ ಅಲ್ಲ. ಆದರೆ ಈ ವೈಚಿತ್ರ್ಯವುಳ್ಳವರು ಇನ್ನೂ ಸರಿ

ಯಾಗಿ ಅರ್ಥವಾಗದ ಶಾರೀರಿಕ ಕ್ರಿಯೆಗಳಿಂದಾಗಿ ನಿಕರದ ಸಂದರ್ಭದಲ್ಲಿ ಕೋಪವನ್ನೂ ಲೈಂಗಿಕ ವಿಕಾರವನ್ನೂ ತಡೆದುಕೊಳ್ಳಲು ಅಸಮರ್ಥರಾಗುವರೆಂದು ತೋರುತ್ತದೆ.

'ಸಾಮುದ್ರಿಕ' ಲಕ್ಷಣಗಳು ಅಪರಾಧ ಪ್ರವೃತ್ತಿಯನ್ನು ಮಾತ್ರವಲ್ಲದೆ ಜನ್ಮಸಿದ್ಧ ರೋಗಗಳನ್ನೂ ಸೂಚಿಸುತ್ತಿರಬಹುದೆಂಬುದು ಅಮೇರಿಕದ ಮಿನಿಯಾ-ಪೋಲಿಸ್‌ನ ನಿವೃತ್ತ ಸೈನಿಕರ ಆಸ್ಪತ್ರೆಯಲ್ಲಿರುವ ಡಾ. ಮಿಲ್ಟನ್ ಅಲ್ಟಿನ್ ಮತ್ತು ಡಾ. ರೋಬರ್ಟ್ ಶೂಲೆನ್‌ಬರ್ಗ್ ಎಂಬವರು ನಡೆಸಿದ ಪರಿಶೀಲನೆಗಳಿಂದ ವ್ಯಕ್ತವಾಗಿದೆ. ಅವರು ಮುಖ್ಯವಾಗಿ ಹಸುಳೆಗಳ ಅಂಗೈ ರೇಖೆಗಳನ್ನು ಪರೀಕ್ಷಿಸಿದರು. ರೇಖೆಗಳಿಗೂ ಜನ್ಮಸಿದ್ಧ



೨. ಸಾಮಾನ್ಯ ಅಂಗೈ. ಕೈಯ ಕೆಳಭಾಗದಲ್ಲಿ ದಪ್ಪ ರೇಖೆಯಿಂದ ಸೂಚಿತವಾದಂತೆ ಶಂಖ ಚಕ್ರಾಂಕಿತಗಳ ನಕ್ಷತ್ರಾಕೃತಿ ಸಂಧಿ



೩. ಹೃದಯ ದೋಷವುಳ್ಳವರ ಅಂಗೈ: ಸಂಧಿಸ್ಥಾನ ಹಸ್ತದ ಮಧ್ಯದಲ್ಲಿ (ದಪ್ಪರೇಖೆ) ಇದೆ.

ಇಲ್ಲವೇ ಅನುವಂಶಿಕ ಮಿದುಳಿನ ಮತ್ತು ಹೃದಯದ ವಿಕಾರಗಳಿಗೂ ಸಂಬಂಧವಿದೆಯೆಂಬುದಕ್ಕೆ ಅವರಿಗೆ ಆಧಾರ ಸಿಕ್ಕಿತು.

ಅಂಗೈಯಲ್ಲಿ ಕಿರಿಬೆರಳಿನ ಕೆಳಭಾಗದಿಂದ ಸುಮಾರು ನಡುಬೆರಳಿನ ವರೆಗೂ ಅಡ್ಡಲಾಗಿ ಹಾಯ್ದು ರೇಖೆ ಎಲ್ಲರಿಗೂ ಇದೆ. ಇದನ್ನು ಪಾಶ್ಚಾತ್ಯ ಸಾಮುದ್ರಿಕದಲ್ಲಿ ಹೃದಯ ರೇಖೆ (line of the heart) ಎಂದೂ ಭಾರತೀಯ ಸಾಮುದ್ರಿಕದಲ್ಲಿ ಆಯುಷ್ಯ ರೇಖೆಯೆಂದೂ ಕರೆಯಲಾಗುತ್ತದೆ. ಹಾಗೆಯೇ ತೋರು ಬೆರಳಿಗೂ ಹೆಬ್ಬೆರಳಿಗೂ ನಡುವೆ

ಪ್ರಾರಂಭವಾಗಿ ಅಡ್ಡಲಾಗಿ ಹೃದಯ ರೇಖೆಯ ಕೆಳಗಡೆ (ಮುಕ್ಕಾಲು ಭಾಗ ಅಂಗೈವರೆಗೆ ವ್ಯಾಪಿಸಿದ ಇನ್ನೊಂದು ರೇಖೆಯನ್ನು ಪಾಶ್ಚಾತ್ಯರು ಶಿರೋರೇಖೆ (Line of head) ಎನ್ನುತ್ತಾರೆ. (ಚಿತ್ರ ೫.)

ಮಂಗೋಲಿಸಂ ಅಥವಾ ಪೆದ್ದುತನ ಎಂಬ ಜನ್ಮಸಿದ್ಧ ರೋಗವಿದೆ. ಇಂಥ ಮಕ್ಕಳು ಎಷ್ಟು ದೊಡ್ಡವರಾದರೂ ಯಾವ ತರದ ಮನುಷ್ಯ ಸಹಜ ಬುದ್ಧಿಯನ್ನೂ ಪಡೆಯುವುದಿಲ್ಲ. ಈ ಮಕ್ಕಳ ಅಂಗೈಯಲ್ಲಿ ಸಾಮಾನ್ಯವಾಗಿ ಹೃದಯ ರೇಖೆಯೇ ಇರುವುದಿಲ್ಲವೆಂದು ಗೊತ್ತಾಗಿದೆ. ಈ ರೋಗವೂ ಶರೀರ ಕಣದಲ್ಲಿ ಒಂದು ಅತಿರಿಕ್ತ ಕ್ರೋಮೊಸೋಮಿನ ಅಸ್ತಿತ್ವದಿಂದ ಉಂಟಾಗುತ್ತದೆ. ಸಾಲದ್ದಕ್ಕೆ ಇಂಥ ಮಕ್ಕಳ ಅಂಗೈ ನಡುವಿನ ಶಿರೋರೇಖೆ ಅಡ್ಡವಾಗಿ ಆ ತುದಿಯಿಂದ ಈ ತುದಿಯ ವರೆಗೂ ವ್ಯಾಪಿಸಿರುತ್ತದೆ. (ಚಿತ್ರ ೬.)

ಹುಟ್ಟುವಾಗಲೇ ಹೃದಯ ದೋಷವಿದ್ದ ೨೨೫ ಮತ್ತು ಅಂಥ ದೋಷವಿಲ್ಲದ ೪೦೦ ಮಕ್ಕಳ ಹಸ್ತ ರೇಖೆಗಳನ್ನು ಡಾ. ಅಲ್ಟರ್ ಮತ್ತು ಡಾ. ಶೂಲೆನ್ ಬರ್ಗ್ ರು ಪರೀಕ್ಷಿಸಿದರು. ಹೋಲಿಸಿದಾಗ ಹೃದಯದೋಷವಿದ್ದ ಹೆಚ್ಚು ಕಡಿಮೆ ಎಲ್ಲ ಶಿಶುಗಳ ಅಂಗೈಯ ಶಂಖ ಚಕ್ರ ರೇಖೆಗಳಲ್ಲಿ ಒಂದು ವೈಚಿತ್ರ್ಯವನ್ನು ಅವರು ಕಂಡರು. ಸಾಮಾನ್ಯವಾಗಿ ಎಲ್ಲರ ಅಂಗೈಯ ಬುಡದಲ್ಲಿ, ಮೂರು ಬೇರೆಬೇರೆ ಶಂಖ ಚಕ್ರಾಕೃತಿಗಳು ಒಂದೆಡೆ ಸಂಧಿಸಿ ಮೂರು ಕಿರಣಗಳುಳ್ಳ ನಕ್ಷತ್ರಾಕೃತಿಯನ್ನು ಮಾಡುತ್ತವೆ. (ಚಿತ್ರ ೭ ನೋಡಿರಿ). ಆದರೆ ಹೃದಯದೋಷವುಳ್ಳ ಮಕ್ಕಳಲ್ಲಿ ಈ ಆಕೃತಿಗಳ ಸಂಪಾತಸ್ಥಾನ ಅಂಗೈ ಬುಡದಲ್ಲಿರದೆ ಅಂಗೈ ಮಧ್ಯದಲ್ಲಿರುತ್ತದೆ. (ಚಿತ್ರ ೮).

ಈ ಹೊಸ ಜ್ಞಾನ ಬಹಳ ಉಪಯುಕ್ತವಾಗಿದೆಯೆಂದು ಈ ಡಾಕ್ಟರರ ಅಭಿಪ್ರಾಯ. ಅನೇಕ ಮಕ್ಕಳು ಹೃದಯ ದೋಷದೊಡನೆ ಹುಟ್ಟುತ್ತವೆ. ಆದರೆ ಪ್ರಾರಂಭದಲ್ಲಿ ದೋಷದ ಯಾವ ಲಕ್ಷಣವೂ ಹೊರಗೆ ತೋರುವುದಿಲ್ಲ. ಹೀಗಾಗಿ ರೋಗ ಉಲ್ಬಣಿಸುವ ವರೆಗೆ ದೋಷ ಪತ್ತೆಯಾಗದೆ ಹೋಗುತ್ತದೆ. ಪ್ರತಿಯೊಂದು ಮಗುವೂ ಹುಟ್ಟಿದೊಡನೆ ಅಂಗೈಯ ಶಂಖ ಚಕ್ರಾಂಕಿತಗಳನ್ನು ಪರೀಕ್ಷಿಸಿದರೆ ಕೂಡಲೇ ಹೃದಯ ದೋಷವನ್ನು ಪತ್ತೆ ಹಚ್ಚಿ ಶಸ್ತ್ರಕ್ರಿಯೆಯಿಂದ ಅದನ್ನು ಸರಿಪಡಿಸಲು ಸಾಧ್ಯವಿದೆ.

ವೈದ್ಯಕೀಯ ಹಸ್ತ ಸಾಮುದ್ರಿಕ ಒಂದು ಹೊಸ ವಿಜ್ಞಾನ ಶಾಖೆಯಾಗಿ ಇನ್ನೂ ಬೆಳೆಯುವ ಲಕ್ಷಣಗಳು ಕಾಣಿಸುತ್ತಿವೆ. ▲



ಕಾಡುಪ್ರಾಣಿಗಳು ಪ್ರಾಣಭಯವಿಲ್ಲದೆ ಮನುಷ್ಯನನ್ನು ಅವಲೋಕಿಸಬಹುದಾದ ಏಕಮಾತ್ರ ಸ್ಥಳ ಜೂ.

* * *

ಸಮಾಧಾನ ಎಂದರೆ ನೆರೆಮನೆಯವನ ದೋಸೆಯೂ ತೂತೇ ಎಂದು ತಿಳಿದು ಬಂದಾಗ ನಿಮಗಾಗುವ ಭಾವನೆ.



ದೇ. ಜವರೇಗೌಡರು:
ವ್ಯಕ್ತಿ ಮತ್ತು ವಿಚಾರಗಳು

ಜಿ. ಎಸ್. ಭಟ್

೧೯೬೯ ನವೆಂಬರ್ ೧ ರಂದು ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯ ಸೌಧದಲ್ಲಿ ನಡೆದ ಆಡಂಬರಿಯ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸುತ್ತಿದ್ದಾಗ, ಉಪಕುಲಪತಿ ಪ್ರೊ. ಜವರೇಗೌಡ ಅವರು ಹೋರಾಟದ ಬದುಕಿನಲ್ಲಿ ಒಂದು ಉನ್ನತ ಘಟ್ಟ ಮುಟ್ಟಿದಂತಾಯಿತು. ಚನ್ನಪಟ್ಟಣ ತಾಲೂಕಿನ ಚಕ್ಕೆರೆ ಹಳ್ಳಿಯ ದೈವಭಕ್ತ, ಒಡ ರೈತ ಕುಟುಂಬವೊಂದರಲ್ಲಿ ಅವರ ಜನನ. (ಜುಲೈ ೬–೧೯೧೮). ತಂದೆ ದೇವೇಗೌಡರು ಮತ್ತು ತಾಯಿ ಚೆನ್ನಮ್ಮ. ಇಬ್ಬರಿಗೂ ವಿದ್ಯೆಯಿಲ್ಲ. ಹಿರಿಯ ಮಗನನ್ನು ಶಾಲೆಗೆ ಕಳುಹಿದ ದೇವೇಗೌಡರಿಗೆ ಆರನೇ ಮಗನಾದ ಜವರೇಗೌಡರನ್ನು ಆಡು ಕಾಯಲು ಕಳಿಸುವುದು ಅನಿವಾರ್ಯವೆನಿಸಿತು. ಆದರೆ ತಮ್ಮ ಸಮವಯಸ್ಕರೆಲ್ಲ ಶಾಲೆಗೆ ಹೋಗುತ್ತಿರುವುದನ್ನು ನೋಡಿ ಜವರೇಗೌಡರು ತಂದೆಯ ಕಣ್ಣು ತಪ್ಪಿಸಿ ಶಾಲೆಗೆ ಹೋಗಲಾರಂಭಿಸಿದರು. ಒಂದು ದಿನ ಆಡುಗಳು ಯಾರದೋ ಹೊಲವನ್ನು ಹೊಕ್ಕು ಸ್ವೇಚ್ಛೆಯಾಗಿ ಮೇಂದು ಬಿಟ್ಟವು. ದೂರು ತಂದೆಯ ಕಿವಿಗೆ ತಲುಪಿತು. ಅವರು ಶಾಲೆಗೆ ಹೋಗಿ ಮಗನಿಗೆ ಬಾಸುಂಡೆಗಳೇಳುವಂತೆ ಏಟು ಕೊಟ್ಟರು. ಮುಂದೆ ಪ್ರಮುಖ ಮೈಸೂರು ರಾಜಕಾರಣಿಯಾದ ಶ್ರೀ ಎಚ್. ಕೆ. ವೀರಣ್ಣಗೌಡರು ಆಗ ಶಾಲೆಯ ಮುಖ್ಯಾಧ್ಯಾಪಕರಾಗಿದ್ದರು. ದೇವೇಗೌಡರಿಗೆ ಅವರು ಬುದ್ಧಿ ಹೇಳಿದರು. ಆದರೆ ದೇವೇಗೌಡರಿಗೆ ಇಬ್ಬರು ಮಕ್ಕಳನ್ನು ಓದಿಸುವ ಸಾಮರ್ಥ್ಯವಿರಲಿಲ್ಲ. ಮುಖ್ಯೋಪಾಧ್ಯಾಯರೇ ಬಟ್ಟೆ-ಬರೆ, ಪಠ್ಯ-ಪುಸ್ತಕಗಳ ಜವಾಬ್ದಾರಿ ಹೊರಲು ಸಿದ್ಧರಾದರು. ವಿದ್ಯಾರ್ಥಿ ಜೀವನದುದ್ದಕ್ಕೂ ಜವರೇಗೌಡರು ವಿದ್ಯಾರ್ಥಿ ವೇತನವನ್ನವಲಂಬಿಸಿದವರೇ.

ಭಾರತದಾದ್ಯಂತ ಪ್ರವಾಸ ಕೈಗೊಂಡಿದ್ದ ಮಹಾತ್ಮಾ ಗಾಂಧಿಯವರು ಚೆನ್ನಪಟ್ಟಣಕ್ಕೆ ಬಂದಾಗ ಜವರೇಗೌಡರು ಅಲ್ಲಿ ಹೈಸ್ಕೂಲಲ್ಲಿದ್ದರು. ಬಾಪೂವಿನ ದರ್ಶನ ಪಡೆದು ಅವರಿಂದ ಪ್ರಭಾವಿತರಾದರು. ಬೆಂಗಳೂರಲ್ಲಿ ಇಂಟರ್ಮೀಡಿಯೇಟ್‌ನಲ್ಲಿದ್ದಾಗ ಅವರು ಕುವೆಂಪು ಅವರ ಎಲ್ಲ ಕೃತಿಗಳನ್ನೂ ಓದಿದರು. "ನನ್ನ ಸಾಹಿತ್ಯದ ಜೀವನ ಮಾತ್ರವೇ ಅಲ್ಲ, ನನ್ನ ವ್ಯಕ್ತಿತ್ವವೂ ಕುವೆಂಪು ಜೀವನದ ಬೆಳಕಿನಿಂದಲೇ ರೂಪುಗೊಂಡಿದ್ದು," ಎಂದವರು ಹೇಳುತ್ತಾರೆ.

೧೯೩೮ ರಲ್ಲಿ ಅವರು ಆನರ್ಸ್ ತರಗತಿಗೆ ಸೇರಿಕೊಂಡರು. ಕುವೆಂಪು., ತೀನಂಶ್ರೀ., ಎ. ಆರ್.

ಕೃಷ್ಣ ಶಾಸ್ತ್ರಿಗಳಂಥವರು ಅವರಿಗೆ ಗುರುಗಳಾಗಿ ದೊರೆತರು. ಶ್ರೀ ರಾಮಕೃಷ್ಣ ಆಶ್ರಮದ ವಿದ್ಯಾರ್ಥಿ ನಿಲಯದ ಪವಿತ್ರ ಪರಿಸರದಲ್ಲಿ ಗೌಡರ ಬಾಳಿನ ಆದರ್ಶ ರೂಪುಗೊಂಡಿತು. ಅವರು ಶ್ರೀ ರಾಮಕೃಷ್ಣ ಪರಮಹಂಸ ಸ್ವಾಮಿ ವಿವೇಕಾನಂದ ಮತ್ತು ಗಾಂಧೀಜಿಯವರಿಗೆ ಸಂಬಂಧಿಸಿದ ಸಾಹಿತ್ಯವನ್ನೆಲ್ಲ ಅರಗಿಸಿಕೊಂಡರು.

೧೯೪೧ರಲ್ಲಿ ಅವರು ಬಿ.ಎ. (ಆನರ್ಸ್) ಪದವಿ ಪಡೆದರು. ಎಂ. ಎ., ಎಲ್‌ಎಲ್. ಬಿ. ಗಳನ್ನು ಏಕಕಾಲದಲ್ಲಿ ಮಾಡಬೇಕೆಂದು ಕೊಲ್ಹಾಪುರದ ಕಾಲೇಜಿಗೆ ಅರ್ಜಿ ಹಾಕಿದರು. ಅರ್ಜಿ ಹಾಕಿದ್ದು ವಿಳಂಬವಾದ್ದರಿಂದ ಆ ವರ್ಷ ವಿದ್ಯಾ ಇಲಾಖೆಯಲ್ಲಿ ಗುಮಾಸ್ತರಾದರು. ಸಹೋದ್ಯೋಗಿಗಳ ನೀತಿ-ನಡವಳಿಕೆಗಳಿಂದ ಅವರ ಮನ ನೊಂದಿತು. ರಾಜೀನಾಮೆಯನ್ನಿತ್ತು ಎಂ. ಎ. ಮುಗಿಸಿದರು (೧೯೪೬). ಪುನಃ ಅತಾರಾ ಕಚೇರಿಯಲ್ಲಿ ಗುಮಾಸ್ತಗಿರಿ ಅವರಿಗಾಗಿ ಕಾದಿತ್ತು. ಈ ಹುದ್ದೆ ಬೇಸರ ತಂದು ಜಮೀನು ಮಾಡುವ ನಿರ್ಧಾರ ಕೈಗೊಂಡರು. ಜಮೀನು ಸಂಪಾದಿಸಿದಾಗ ಅಣ್ಣನ ಮನಸ್ಸು ಕಹಿಯಾಗಿದೆಯೆಂಬುದರ ಅರಿವಾಗುತ್ತಲೇ ಎಲ್ಲವನ್ನೂ ಅವರಿಗೇ ಬಿಟ್ಟುಕೊಟ್ಟು ಬಂದ ಉದಾರತನ ಅವರದು. ಮೂರು ವರ್ಷಗಳ ಕಾಲ ಸರ್ಕಾರಿ ಫೈಲುಗಳ ಮಧ್ಯೆ ಜೀವನ ಸವೆಸಿದ ನಂತರ ಏಕಕಾಲಕ್ಕೆ ಸರ್ಕಾರದ ಸಬ್ ರಜಿಸ್ಟ್ರಾರ್ ಕೆಲಸ ಮತ್ತು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕನ ಕೆಲಸಕ್ಕೆ ಕರೆ ಬಂತು. ಆಗ ಕನ್ನಡ ಅಧ್ಯಾಪಕ ಹುದ್ದೆಯೇನೂ ಆಕರ್ಷಕವಾಗಿರಲಿಲ್ಲ. ಆದರೆ ಸಬ್ ರಿಜಿಸ್ಟ್ರಾರ್ ಕಚೇರಿ ಅಂದರೆ ಲಂಚದ ತವರು ಎಂದು ಅವರು ಅಧ್ಯಾಪಕ ಹುದ್ದೆಯನ್ನೇ ಸ್ವೀಕರಿಸಿದರು.

ಜವರೇಗೌಡರು ತಮ್ಮ ನಿಸ್ಪೃಹ ಸೇವೆಗೆ ತಕ್ಕಂತೆ ಉನ್ನತ ಹುದ್ದೆಗಳಿಗೆ ಏರುತ್ತ ಹೋಗಿದ್ದಾರೆ. ೧೯೫೫ ರಲ್ಲಿ ಅವರು ಕನ್ನಡದ ಅಸಿಸ್ಟೆಂಟ್ ಪ್ರೊಫೆಸರ್ ಆದರು. ಅದೇ ವರುಷ ವಿಶ್ವವಿದ್ಯಾನಿಲಯದ ಪ್ರಕಟನ ಶಾಖೆಯ ಕಾರ್ಯದರ್ಶಿಗಳೂ ಆದರು. ೧೯೫೭ ರಲ್ಲಿ ವಿಶ್ವವಿದ್ಯಾನಿಲಯದ ಪರೀಕ್ಷಾಧಿಕಾರಿಗಳಾಗಿಯೂ ೧೯೬೦ರಲ್ಲಿ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ನೇಮಕಗೊಂಡರು. ಅದೇ ವರ್ಷ ಕನ್ನಡ ರೀಡರ್ ಆಗಿ ಪುನಃ ಮೈಸೂರಿಗೆ ಮರಳಿದ ಅವರು ೧೯೬೪ ರಲ್ಲಿ ಕನ್ನಡ ಪ್ರಾಧ್ಯಾಪಕರೂ ಕನ್ನಡ ವಿಭಾಗದ ಮುಖ್ಯಸ್ಥರೂ ಆದರು. ಅನಂತರ ಅವರು ಕಲಾ ವಿಭಾಗದ ಡೀನ್ ಆಗಿಯೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿಯೂ ಚುನಾಯಿತರಾದರು.

ಇಂದಿನ ಕನ್ನಡ ಅಧ್ಯಯನ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದ ಶ್ರೇಯಸ್ಸು ಅವರದೇ. ಕನ್ನಡಿಗರಲ್ಲದ ಉಪಕುಲಪತಿ ಡಾ. ಶ್ರೀಮಾಳಿಯವರಿಂದ ನೆರವು ಪಡೆದು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಒಂದು ಮಹಾಸಂಸ್ಥೆ ಕಟ್ಟಿದ್ದು ಸುಲಭದ ಕೆಲಸವೇನಲ್ಲ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಥಮ ನಿರ್ದೇಶಕರಾಗಿ ಅವರು ನೇಮಕಗೊಂಡರು (೧೯೬೬). ಜಾನಪದ ವಸ್ತು ಸಂಗ್ರಹಾಲಯವೊಂದನ್ನು ಪ್ರಾರಂಭಿಸಿ ತಮ್ಮ ಹೆಂಡತಿಯ ಅಮೂಲ್ಯ ಆಭರಣಗಳನ್ನೇ ಅದಕ್ಕೆ ಕಾಣಿಕೆಯನ್ನಿತ್ತರು. 'ಸೋವಿಯತ್ ಲ್ಯಾಂಡ್' ಪತ್ರಿಕೆ ಅವರು ಭಾಷಾಂತರಿಸಿದ 'ಪುನರುತ್ಥಾನ' (ಟಾಲ್‌ಸ್ಟಾಯನ—Resurrection)ಕ್ಕೆ ಸಾವಿರ ರೂಪಾಯಿಗಳ ಬಹುಮಾನ ನೀಡಿದಾಗಲೂ ಅದನ್ನವರು ಜಾನಪದ ವಸ್ತು ಸಂಗ್ರಹಾಲಯಕ್ಕೇ ನೀಡಿದರು.

೧೯೬೯ ರಲ್ಲಿ ಅವರನ್ನು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಿಸಲಾಯಿತು. ಶಿಕ್ಷಣ–ಸಾಹಿತ್ಯ ರಂಗಗಳೆರಡರಲ್ಲೂ ಅನುಭವವುಳ್ಳ ವ್ಯಕ್ತಿ ಪ್ರೊ. ಜವರೇಗೌಡರು. ಅವರು ೪೫ಕ್ಕೂ ಮಿಕ್ಕ ಗ್ರಂಥಗಳನ್ನೂ ಅನೇಕ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಅವರಂತೆ ಜೀವನ ಚರಿತ್ರೆಗಳನ್ನು ಚಿತ್ರಿಸುವವರು ಬಹುಶಃ ಕನ್ನಡದಲ್ಲಿ ಅಪರೂಪ. 'ಆಲ್‌ಬರ್ಟ್ ಐನ್‌ಸ್ಟೀನ್.' 'ವಿಶ್ವಕವಿ ರವೀಂದ್ರರು' 'ಕಡುಗಲಿ ಕುಮಾರರಾಮ.' 'ಕನ್ನಡ ನಾಡಿನ ಕಲಿ.' 'ಗೋಪಾಲಕೃಷ್ಣ ಗೋಖಲೆ.' 'ತೀನಂಶ್ರೀ.' 'ನಮ್ಮ ನೆಹರು.' 'ಬೆಂಗಳೂರು ಕೆಂಪೇಗೌಡ.' 'ಮೇಡಂ ಕ್ಯೂರಿ.' 'ಮೋತೀಲಾಲ ನೆಹರು.' 'ರಾಷ್ಟ್ರಕವಿ ಕುವೆಂಪು'–ಇವು ಜವರೇಗೌಡರು ರಚಿಸಿದ ಮುಖ್ಯ ಜೀವನ ಚರಿತ್ರ ಗ್ರಂಥಗಳು. ನಂಜುಂಡ ಕವಿ ಮತ್ತು ಷಡಕ್ಷರ ದೇವ–

ಕವಿ–ಕಾವ್ಯ–ಪರಿಚಯ. ಹತ್ತು ಜನ ಲೇಖಕರ ಜೀವನ–ಸಾಹಿತ್ಯ–ಪರಿಚಯ ಮಾಡಿಕೊಡುವ 'ಸಾಹಿತಿಗಳ ಸಂಗದಲ್ಲಿ'– ಒಂದು ಅಪೂರ್ವ ಸಂಕಲನ. 'ಅಕ್ಬರ್,' 'ನೆನಪು ಕಹಿಯಲ್ಲ,' 'ಪುನರುತ್ಥಾನ,' 'ಹಮ್ಮು ಬಿಮ್ಮು' ಅವರ ಭಾಷಾಂತರ ಕೃತಿಗಳು. ಕುವೆಂಪು ಅವರ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಅವರು 'ವಚನ ಚಂದ್ರಿಕೆ' ಎಂಬ ಹೆಸರಿನಲ್ಲಿ ಸುಲಭ ಸರಳ ಕನ್ನಡ ಗದ್ಯಕ್ಕೆ ಅನುವಾದಿಸಿದ್ದಾರೆ. 'ಐಬ್ಬಿಗರ ಕಾಪಂ,' 'ಕವಿ ದರ್ಶನ,' 'ಜೈಮಿನಿ ಭಾರತ ಸಂಗ್ರಹ,' 'ಧರ್ಮಾಮೃತ ಸಂಗ್ರಹ,' 'ನಳ ಚರಿತ್ರೆ,' 'ರಾಮಧಾನ್ಯ ಚರಿತ್ರೆ,' 'ಶ್ರೀ ರಾಮಾಯಣ ದರ್ಶನಂ ಉಪನ್ಯಾಸ ಮಾ ಲೆ.' 'ಹೊಸಗನ್ನಡ—ಕಥಾ ಸಂಗ್ರಹ' ಇವು ಅವರ ಸಂಪಾದಿತ ಕೃತಿಗಳು. ಇತರರೊಡನೆ ಸೇರಿ ೧೨ ಕ್ಕೆ ಮೀರಿ ಪುಸ್ತಕಗಳನ್ನು ಅವರು ಸಂಪಾದಿಸಿದ್ದಾರೆ. ಅವರ ಆತ್ಮಕಥೆ 'ಹೋರಾಟದ ಬದುಕು'—ಅವರು ಕನ್ನಡಕ್ಕಾಗಿ, ಕೋಮುವಾರು ಭೂತದ ವಿರುದ್ಧ, ನಡೆಸಿದ ಹೋರಾಟದ ಕಥೆ. ತಮ್ಮ ಆತ್ಮಕಥೆ ಯಲ್ಲಿ ಹೇಳಿಕೊಂಡಂತೆ ಅವರ ಬಾಳೇ ಒಂದು ಪವಾಡ. ಅದನ್ನು ಅವರು ಕನ್ನಡದ ಪವಾಡ ವಾಗಿ ಮಾಡಿದ್ದಾರೆ.

ಇಂದಿನ ಉತ್ಪಾತ ಕಾಲದ ಶಿಕ್ಷಣ ಸಮಸ್ಯೆಗಳನ್ನು ಕುರಿತು ನಾನು ಅವರ ಸಂಗಡ ನಡೆಸಿದ ದೀರ್ಘ ಸಂದರ್ಶನದ ಮುಖ್ಯಾಂಶಗಳು ಇಲ್ಲಿ ಇವೆ.

"ನಮ್ಮ ಶಿಕ್ಷಣ ಪದ್ಧತಿ ಸಮರ್ಪಕವಾಗಿದೆ ಎಂದು ನೀವು ಭಾವಿಸಿದ್ದೀರಾ? ಹಾಗಿಲ್ಲದಿದ್ದರೆ ಇದರ ಸುಧಾರಣೆಗೆ ನೀವು ಸೂಚಿಸುವ ಸಲಹೆಗಳೇನು?" ನಾನು ಮಾತಿಗಾರಂಭಿಸಿದೆ.

"ಎಲ್ಲ ಕಾಲಕ್ಕೂ ಯಾವ ಒಂದು ಪದ್ಧತಿ ಸಮರ್ಪಕವಾಗಿರುವುದಿಲ್ಲ. ಕಾಲಕ್ಕೆ ತಕ್ಕ ಬದಲಾವಣೆಯಾಗಬೇಕು. ಇಂದಿನ ಶಿಕ್ಷಣ ಪದ್ಧತಿ ಪಾಶ್ಚಾತ್ಯರಿಂದ ಆರಂಭವಾದದ್ದು. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅದು ರೂಪಿತವಾಗಿಲ್ಲ. ಅದು ಆಗಿದ್ದಲ್ಲಿ ಬಂಗಾಳದಲ್ಲಿ ವಿವೇಕಾನಂದ, ಗಾಂಧಿಯವರ ಭಾವಚಿತ್ರ ಹಾಳುಮಾಡಿ ಪ್ರತಿಮೆಗಳನ್ನು ನಾಶಮಾಡುತ್ತಿರಲಿಲ್ಲ. ಇಂದಿನ ಅಶಿಸ್ತಿಗೆ ಕೂಡ ಇದೊಂದು ಕಾರಣ ನಮ್ಮ ಮಕ್ಕಳಿಗೆ ರಾಮಾಯಣ, ಮಹಾಭಾರತಗಳ ಪರಿಚಯವಿಲ್ಲ. ವೇದೋಪನಿಷತ್ತುಗಳ ಗಂಧವಿಲ್ಲ. ವೈಜ್ಞಾನಿಕ ವಿಷಯಗಳ ಜೊತೆಗೆ ಸಾಂಸ್ಕೃತಿಕ ವಿಷಯಗಳನ್ನೂ ಅಳವಡಿಸಬೇಕು; ಅದರಲ್ಲೂ ಕೆಳಗಿನ ಹಂತಗಳಲ್ಲಿ. ಹಿಂದಿನ ನಿಕಟವಾದ ಗುರು–ಶಿಷ್ಯ ಬಾಂಧವ್ಯ ಮತ್ತೆ ಏರ್ಪಡಬೇಕು. ಮೂಲಭೂತವಾದ ಬದಲಾವಣೆಯೆಂದರೆ ಶಿಕ್ಷಣ ಮಾಧ್ಯಮದ ಬದಲಾವಣೆ. ದೇಶಭಾಷೆ ಶಿಕ್ಷಣ ಮಾಧ್ಯಮವಾಗುವ ತನಕ ನಮ್ಮ ವಿದ್ಯಾರ್ಥಿಗಳ ಪ್ರತಿಭೆ ವಿಕಾಸಗೊಳ್ಳುವುದಿಲ್ಲ. ನಾವು ಕಲಿಸುವುದು ಸಾರ್ಥಕವಾಗುವುದಿಲ್ಲ. ಜೊತೆಗೆ ನಮ್ಮ ಶಿಕ್ಷಣ ವೃತ್ತಿ ಸಂಬಂಧವಾಗಿರಬೇಕು (work-oriented.)"

"ರಾಜ್ಯದ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪದ ಶಿಕ್ಷಣವಿರಬೇಕು ಎಂಬುದರ ಬಗ್ಗೆ ನೀವೇನೆನ್ನುತ್ತೀರಿ? ಏಕರೂಪದ ಅಭ್ಯಾಸ ಪತ್ರಿಕೆ ತರುವುದರಲ್ಲಿ ಇರುವ ತೊಂದರೆಗಳೇನು?"

"ಮೂರೂ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪತೆ ಅವಶ್ಯವಿಲ್ಲ. ವಿಶ್ವವಿದ್ಯಾನಿಲಯಗಳು ಬೇರೆ ಬೇರೆಯಾಗಿರಬೇಕು ಎನ್ನುವುದರ ಉದ್ದೇಶ ಆಯಾ ಪ್ರದೇಶದ ಆವಶ್ಯಕತೆ, ಅದರ ಹಿನ್ನೆಲೆಗೆ ತಕ್ಕಂತೇ ಅವು ರೂಪುಗೊಂಡಿರಬೇಕೆನ್ನುವುದು. ಅವು ಒಂದೇ ಅಚ್ಚಿನಲ್ಲಿ ಎರಕ ಹೊಯ್ದ ಇಟ್ಟಿಗೆಗಳಂತಿರಬಾರದು. ಕೇವಲ ಕೆಲವು ಅಧಿಕಾರಿಗಳ ಮಕ್ಕಳಿಗೆ, ತಂದೆಗೆ ವರ್ಗಾವಣೆಯಾದಾಗ ತೊಂದರೆಯಾಗುತ್ತದೆ ಎಂದ ಮಾತ್ರಕ್ಕೆ ಏಕರೂಪತೆ ಬೇಕೆಂದು ಕೆಲವರು ಹೇಳುವುದುಂಟು. ಅಂಥವರ ಸಂಖ್ಯೆ ಸಾವಿರಕ್ಕೆ ಒಂದೋ. ಎರಡೋ. ಅಂಥವರ ಮಕ್ಕಳು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮುಂದುವರಿಸಲು ಅವಕಾಶ ಕಲ್ಪಿಸಿಕೊಡಬೇಕು. ಮೈಸೂರು ವಿಶ್ವವಿದ್ಯಾನಿಲಯ ಈ ದಿಶೆಯಲ್ಲಿ ಮುಂದಡಿಯಿಟ್ಟಿದೆ."

"ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಅಶಿಸ್ತು, ಹಿಂಸಾವೃತ್ತಿಗೆ ಕಾರಣವೇನು?"

"ಜ್ಞಾನಾರ್ಜನೆಯಲ್ಲಿ ಆಸಕ್ತಿ ಇಲ್ಲದೇ ಇರುವುದು. ಸಮಾಜದಲ್ಲಿ ಏನು ಅಶಿಸ್ತಿದೆಯೋ ಅದು ವಿದ್ಯಾರ್ಥಿ ಜೀವನದಲ್ಲಿ ಪ್ರತಿಬಿಂಬಿತವಾಗುತ್ತದೆ. ಜ್ಞಾನಾರ್ಜನೆಯಲ್ಲಿ ಆಸಕ್ತಿ ಇರುವವರು ಇಂದಿಗೂ ದುಷ್ಕರ ಚಳವಳಿಗಳಲ್ಲಿ ಭಾಗವಹಿಸುವುದಿಲ್ಲ. ವಿದ್ಯಾರ್ಥಿಗಳು ಸಹಜವಾಗಿ ಒಳ್ಳೆಯವರು. ಆದರೆ ಆ ಒಳ್ಳೆಯತನಕ್ಕೆ ಹುಳಿ ಹಿಂಡತಕ್ಕವರು ದೊಡ್ಡವರು. ದೊಡ್ಡವರ ಸ್ವಾರ್ಥಕ್ಕೆ ಇವರು ಪಶುಗಳಾಗುತ್ತಾರೆ. ತಮ್ಮ ಭವಿಷ್ಯದ ಬಗ್ಗೆ ನಿರಾಶೆ ಇರುವುದರಿಂದಲೂ ವಿದ್ಯಾರ್ಥಿಗಳು ಹಿಂಸಾಪರರಾಗುವುದುಂಟು. ಸರಿಯಾದ ಮಾರ್ಗದರ್ಶನವೊಂದಿದ್ದರೆ ಅವರನ್ನು ಆಶಾವಾದಿಗಳನ್ನಾಗಿ ಮಾಡಬಹುದು."

"ಹಿಂದೀ ಮಾಧ್ಯಮದ ವಿಶ್ವವಿದ್ಯಾನಿಲಯವೊಂದನ್ನು ರಾಜ್ಯದಲ್ಲಿ ಸ್ಥಾಪಿಸುವುದರ ಬಗ್ಗೆ ಎದ್ದಿರುವ ವಿವಾದದ ಬಗ್ಗೆ ನೀವೇನೆನ್ನುತ್ತೀರಿ?"

"ರಾಜ್ಯದಲ್ಲಿ ಹಿಂದೀ ಮಾಧ್ಯಮದ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬುದು ಮೂರ್ಖತನ. ಇದರ ಅವಶ್ಯಕತೆ ಇಲ್ಲ. ಬೆಂಗಳೂರಿನಲ್ಲಿರುವ ಉತ್ತರದವರಿಗೋಸ್ಕರ ಒಂದೋ ಎರಡೋ ಕಾಲೇಜುಗಳಲ್ಲಿ ಹಿಂದೀ ತರಗತಿ ತೆರೆಯಬಹುದು ಅಷ್ಟೇ. ಅವರೂ ಅಂಥವರಿಗೂ ಕನ್ನಡ ಭಾಷೆಯ ಕಲಿಕೆ ಕಡ್ಡಾಯವಾಗಬೇಕು. ಹಿಂದೀ ಮಾಧ್ಯಮದ ವಿಶ್ವವಿದ್ಯಾನಿಲಯದ ಸ್ಥಾಪನೆ ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಮಾರಕವಾಗುತ್ತದೆ. ಇದರಿಂದ ಭಾಷಾಸಂಬಂಧವಾದ ಅನೇಕ ಸಮಸ್ಯೆಗಳು ಸದಾಕಾಲ ಇಲ್ಲಿ ಇರಲು ಅವಕಾಶವಾಗುತ್ತದೆ."

"ಭಾರತೀಯ ಭಾಷೆಗಳಿಗೆಲ್ಲ ಒಂದೇ ಲಿಪಿ ಇರಬೇಕೆಂದು ಇತ್ತೀಚೆಗೆ ಹೇಳಿದ್ದೀರಿ. ಅದು ಯಾವ ಲಿಪಿ? ಇದರಿಂದ ನಮ್ಮ ವ್ಯಕ್ತಿತ್ವವನ್ನೇ ಕಳೆದುಕೊಂಡಂತಾಗುವುದಿಲ್ಲವೆ?

"ದೇವನಾಗರಿ ಲಿಪಿ. ದೇವನಾಗರಿಯಲ್ಲಿ ಕೆಲವು ವ್ಯತ್ಯಾಸ ಮಾಡಿಕೊಳ್ಳಬಹುದು. ಭಾಷೆಗೂ ಲಿಪಿಗೂ ಸಂಬಂಧವಿಲ್ಲ. ಕನ್ನಡ ಲಿಪಿಯೂ ನಾಗರಿಯಂತೆ ಬ್ರಾಹ್ಮೀ ಲಿಪಿಯಿಂದಲೇ ಹುಟ್ಟಿದ್ದು."

"ವಿಶ್ವವಿದ್ಯಾನಿಲಯದ ಈಗಿನ ಪರೀಕ್ಷಾ ಪದ್ಧತಿ ಸಮರ್ಪಕವಾಗಿದೆ ಎನಿಸುತ್ತದೆಯೇ?"

"ಸಮರ್ಪಕವಾಗಿಲ್ಲ. ಈಗಿನ ಪರೀಕ್ಷಾ ಪದ್ಧತಿ ಸ್ಮೃತಿಪರೀಕ್ಷೆಯಾಗಿದೆ. ವಾರ ವಾರಕ್ಕೂ ತಿಂಗಳಿಗೂ ಪರೀಕ್ಷೆಯಾಗಬೇಕು ಅದರ ಆಧಾರದ ಮೇಲೆ ವಿದ್ಯಾರ್ಥಿಗಳ ಶಕ್ತಿ, ಸಾಮರ್ಥ್ಯ ನಿರ್ಧರಿಸಬೇಕು. ಆದರೆ ನಮ್ಮ ಸಮಾಜ ಅಂಥ ಬದಲಾವಣೆಗೆ ಸಿದ್ಧವಾಗಿಲ್ಲ"

"ಈಗಿನ ಶಿಕ್ಷಣ ಪದ್ಧತಿ ಶ್ರೇಷ್ಠ ಬುದ್ಧಿಶಾಲಿಗಳಿಗೂ ಕನಿಷ್ಠ ಬುದ್ಧಿಶಾಲಿಗಳಿಗೂ ಏನೂ ಲಕ್ಷ್ಯ ಕೊಡದೆ ಕೇವಲ ಸಾಮಾನ್ಯ ಬುದ್ಧಿಯವರನ್ನಷ್ಟೇ ಗಮನದಲ್ಲಿಟ್ಟುಕೊಂಡಿದೆಯೆನಿಸುತ್ತದೆ."

"ಇದು ನಿಜ. ಪ್ರಜಾಪ್ರಭುತ್ವ ಬಂದುದು ಈಚೆಗೆ. ಪ್ರತಿಯೊಬ್ಬನೂ ಪದವೀಧರನಾಗಬೇಕೆಂದು ಹೋಗುತ್ತಾನೆ. ಅಮೇರಿಕದಲ್ಲಿ ವಿಷಯ ಆಯ್ದುಕೊಳ್ಳುವ ಮುಂಚೆ ಆತ ಹಿರಿಯರನ್ನು ಕೇಳುತ್ತಾನೆ—ನಾನು ಈ ವಿಷಯ ತೆಗೆದುಕೊಳ್ಳಬಹುದೇ ಎಂದು. ತಾನು ಆರಿಸಿಕೊಂಡ ವಿಷಯದಲ್ಲಿ ಶಕ್ತನಲ್ಲ ಎಂದಾದ ಕೂಡಲೇ ಬಿಟ್ಟು ಬೇರೆ ಕಡೆ ಹೊರಟು ಹೋಗುತ್ತಾನೆ. ನಾನು ಆಸ್ಟ್ರೇಲಿಯದ ತಜ್ಞರನ್ನು ಕೇಳಿದೆ. ಅಲ್ಲಿಯೂ 50% ಫೇಲಾಗುತ್ತಾರೆ. ಅಲ್ಲಲ್ಲಿ ಆಯಾ ಜನರ ಅಭಿರುಚಿಗೆ ತಕ್ಕಂತೇ ಶಿಕ್ಷಣ ಏರ್ಪಡಬೇಕು. ಎವರೇಜ್ ಇಂಟೆಲಿಜನ್ಸ್ ಸಾಕು. ಬುದ್ಧಿಮಟ್ಟ ನಮ್ಮ ಪರೀಕ್ಷೆಗಳ ಮೇಲೆ ಹೋಗುವುದಿಲ್ಲ. ಬುದ್ಧಿಮಟ್ಟಕ್ಕೂ ನಮ್ಮ ಪರೀಕ್ಷೆಯಲ್ಲಿ ಪಾಸಾಗುವುದಕ್ಕೂ ಸಂಬಂಧವಿಲ್ಲ. ತರಗತಿಯ ಚೌಕಟ್ಟು ಕೆಲವರಿಗೆ ಆಗುವುದಿಲ್ಲ"

"ವಿಶ್ವವಿದ್ಯಾಲಯ ಮಟ್ಟಗಳು ಇಳಿಯುವುದಕ್ಕೆ ವಿದ್ಯಾರ್ಥಿ ದಟ್ಟಣೆ ಮುಖ್ಯ ಕಾರಣವೆಂದು ಒಂದು ಮತವಿದೆ. ಸರ್ಕಾರಿ ಕೆಲಸಕ್ಕೆ ಎಸ್. ಎಸ್. ಎಲ್. ಸಿ. ತೇರ್ಗಡೆಯನ್ನು ಕನಿಷ್ಠ ಅರ್ಹತೆಯೆಂದು ಗಣಿಸಿ, ಸ್ನಾತಕ ಪದವಿಗಳನ್ನು ಕ್ಲಾರ್ಕ್ ಮೊದಲಾದ ಆಡಳಿತಾತ್ಮಕ ಕೆಲಸಗಳಿಗೆ ಮಿತಿಮೀರಿದ ಅರ್ಹತೆಯಾಗಿ ಸಾರಿದರೆ ಕಾಲೇಜು ವಿಶ್ವವಿದ್ಯಾನಿಲಯಗಳ ಮೇಲೆ ಒತ್ತಡ ಕಡಿಮೆಯಾದೀತೆಂದು ಹಿಂದೆ ಶಿಕ್ಷಣ ಆಯೋಗಗಳು

ಶಿಫಾರಸು ಮಾಡಿದ್ದವು. ಈಗಾದರೂ ಇವನ್ನು ಜಾರಿಗೆ ತಂದರೆ ಚೆನ್ನಾಗಿರುವುದಿಲ್ಲವೇ? ಈ ವಿಷಯದಲ್ಲಿ ಏನು ತೊಂದರೆಗಳಿವೆಯೆಂದು ನಿಮ್ಮ ಅಭಿಪ್ರಾಯ?"

"ಇದು ನಿಜ. ಧಾರಾಳವಾಗಿ ಮಾಡಬಹುದು. ತೊಂದರೆ ಎಂದರೆ, ಜನ ಕೇಳುವುದಿಲ್ಲ. ಸೀಟ್ ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ ಗಲಾಟೆ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಮುಷ್ಕರಕ್ಕೆ ಬಾಗಿ ನಾವು ನಡೆಯಬೇಕಾಗಿದೆ. ಇದರ ತಿರುಳನ್ನು ಒಪ್ಪಿಕೊಳ್ಳಬಹುದು."

"ವಿಶ್ವವಿದ್ಯಾನಿಲಯಗಳು ಅಧೀನ ಕಾಲೇಜುಗಳ ಮೇಲೆ ಉನ್ನತ ಸಾಧನಾಮಟ್ಟಗಳನ್ನು ಹೇರುವುದಕ್ಕೆ ಏಕೆ ಸಮರ್ಥವಾಗುವುದಿಲ್ಲ? ತದ್ವಿಪರೀತವಾಗಿ ಫಲಿತಾಂಶಗಳ ಸೇಕಡಾವಾರನ್ನು ಹೆಚ್ಚಿಸುವುದಕ್ಕೆ ಅಸ್ವಾಭಾವಿಕವಾದ ಮಾಡರೇಶನ್ ವಿಧಾನಗಳನ್ನು ಏಕೆ ಅನುಸರಿಸುತ್ತವೆ? ಕಾಲೇಜುಗಳ ಪ್ರವೇಶಕ್ಕೆ ಉನ್ನತಮಟ್ಟವನ್ನು ಗೊತ್ತುಪಡಿಸುವಲ್ಲಿ ಏನು ಅಡ್ಡಿ ಇದೆ?"

"ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮಾಡರೇಶನ್ ಪದ್ಧತಿ ಇಲ್ಲ. ೩೪ ಬಂದಲ್ಲಿ ೩೫ ಕೊಡಬಹುದು ಎಂದಿದೆ. ಅದನ್ನು ನಾವು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ. ಉನ್ನತ ಶೈಕ್ಷಣಿಕ ಮಟ್ಟ ಏರ್ಪಡಿಸಲು ಜನತೆಯದೇ ಅಡ್ಡಿ."

"ಇಂಗ್ಲೀಷಿನ ಜ್ಞಾನ ಅನಿವಾರ್ಯವೆಂದು ಈಗ ಗ್ರಹಿಸಲ್ಪಟ್ಟಿದೆ. ಆದರೆ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಮಹತ್ತ್ವ ಕೊಡುವ ಬದಲು ಅದರ ಕಾವ್ಯಾದಿ ಕಠಿನ ಸಾಹಿತ್ಯ ಕಲಿಸುವುದಕ್ಕೆ ಪ್ರಾಧಾನ್ಯ ಕೊಡಲಾಗುತ್ತಿದೆ ಇದು ಅರ್ಥಶಾಸ್ತ್ರ, ವಿಜ್ಞಾನ–ವಾಣಿಜ್ಯ ಶಾಸ್ತ್ರಗಳ ವಿದ್ಯಾರ್ಥಿಗಳ ಮೇಲೂ ಹೇರಲ್ಪಡುತ್ತಿದೆ ಆಧುನಿಕ ಇಂಗ್ಲೀಷ್ ಗದ್ಯವನ್ನಷ್ಟೇ ಸಘನವಾಗಿ (intensively) ಕಲಿಸಿ ಸಾಹಿತ್ಯ ವಿದ್ಯಾರ್ಥಿಗಳಿಗಷ್ಟೇ ಕಾವ್ಯಗಳನ್ನು ಕಲಿಸಲು ವ್ಯವಸ್ಥೆಯಾದರೆ ವಿದ್ಯಾರ್ಥಿಗಳ ಮೇಲಿನ ಭಾರವೂ ಇಳಿದು ಶಿಕ್ಷಣ ಮಟ್ಟಗಳು ಏರಬಹುದಲ್ಲವೇ? ಈ ಬದಲಾವಣೆ ಏಕೆ ಸಾಧ್ಯವಾಗುತ್ತಿಲ್ಲ?"

"ಪ್ರಯೋಜನ ದೃಷ್ಟಿಯಿಂದ ಇಂಗ್ಲೀಷ್ ಕಲಿಸಬೇಕೆನ್ನುವುದು ಇವತ್ತಿನ ದೃಷ್ಟಿ. ಇದಕ್ಕೆ ಇಂಗ್ಲೀಷ್ ಪ್ರಾಧ್ಯಾಪಕರು ಒಪ್ಪುತ್ತಿಲ್ಲವಾದ್ದರಿಂದಲೇ ಸಾಧ್ಯವಾಗುತ್ತಿಲ್ಲ."

"ನಿಮ್ಮ ಜೀವನ ಚರಿತ್ರೆಯಲ್ಲಿ ಜಾತೀಯ ಭಾವನೆಗಳಿಂದ ನಿಮ್ಮ ಎಳೆಯ ಮನಸ್ಸಿಗೆ ನೋವಾದಂತೆ ಧ್ವನಿತವಾಗುತ್ತದೆ. ವಿದ್ಯೆಯಲ್ಲಿ ಹಿಂದೆ ಬಿದ್ದ ವರ್ಗಗಳಿಗೆ ಈಗ ಎರಡು ತಲೆಮಾರುಗಳಿಂದ ಸಮಾನಾವಕಾಶಗಳು ದೊರೆತಿವೆ. ಈ ಅವಧಿಯಲ್ಲಿ ಈ ವರ್ಗಗಳು ಸಾಧಿಸಿದ ಪ್ರಗತಿ ತೃಪ್ತಿಕರವೆಂದು ನಿಮಗೆ ಅನಿಸುತ್ತದೆಯೋ? ಆಗಿಲ್ಲವಾದರೆ ಇನ್ನೂ ಅವರಿಗೆ ತೊಡಕುಂಟುಮಾಡುವ ತಥ್ಯಗಳು ಯಾವುವು? ಅವುಗಳ ನಿವೃತ್ತಿಗೆ ಉಪಾಯವೇನು? ಕೆಲವರಿಗೆ ವಿದ್ಯಾಧಿಕಾರವಿಲ್ಲ ಎನ್ನುತ್ತಿದ್ದ ವರ್ಗಗಳಲ್ಲಿ ಈಗ ಮಾನಸಿಕ ಬದಲಾವಣೆಯಾದಂತೆ ಕಾಣುತ್ತದೆಯೋ?"

"ಸಮಾನಾವಕಾಶಗಳು ದೊರೆತಿವೆ. ಆದರೆ ಸಮಾನ ವಾತಾವರಣವಿಲ್ಲ. ಹಿಂದೆ ಬಿದ್ದ ವರ್ಗಗಳು ಸಾಧಿಸಿದ ಪ್ರಗತಿ ತೃಪ್ತಿಕರವಾಗಿಲ್ಲ. ಅವಕಾಶ ಹೆಚ್ಚಿದ ಹಾಗೆ, ಹೊಸ ವಾತಾವರಣ ಸೃಷ್ಟಿಯಾದ ಹಾಗೆ ಅವರೂ ಮುಂದಕ್ಕೆ ಬರುತ್ತಾರೆ. ಕೊನೆಯ ಪ್ರಶ್ನೆಗೆ 'ಹೌದು, ಮಾನಸಿಕ ಬದಲಾವಣೆ ಅತ್ಯದ್ಭುತವಾಗಿ ಆಗಿದೆ' ಎಂದೇ ಉತ್ತರ. ಇವರು ಓದಬೇಕು ಇವರು ಓದಬಾರದು ಎಂಬ ಭಾವನೆ ಯಾರಲ್ಲೂ ಇಲ್ಲ."

"ವಿದ್ಯಾ ಪ್ರಸಾರದೊಡನೆ ಜಾತೀಯ ಮತೀಯ ಕಲ್ಮಷಗಳು ತಣಿಯುವ ಬದಲು ತೀವ್ರವಾಗುತ್ತಿವೆ. ಈ ವಿಪರೀತ ಲಕ್ಷಣಕ್ಕೆ ವಿಶ್ವವಿದ್ಯಾಲಯಗಳಿಂದ ಪರಿಹಾರ ನಿರೀಕ್ಷಿಸಬಹುದೇ?"

"ರಾಜಕೀಯ ಕಾರಣಕ್ಕಾಗಿ ಹೆಚ್ಚುತ್ತಿವೆ. ರಾಜಕೀಯದಲ್ಲಿ ಜಾತೀಯತೆ ಉಲ್ಬಣಗೊಳ್ಳುತ್ತಿದೆ. ರಾಜಕೀಯತೆಯನ್ನು ಬಿಟ್ಟರೆ ಎಲ್ಲವೂ ಸರಿ ಹೋಗುತ್ತದೆ. ಈಗೀಗ ಎಲ್ಲ ಕಡೆ ಜಾತೀಯತೆ ಹೋಗುತ್ತಿದೆ. ವಿದ್ಯಾವಂತರಲ್ಲಿ ಇದು ಇದೆ ಎಂದು ನಾನು ಹೇಳುವುದಿಲ್ಲ. ವಿದ್ಯಾಪ್ರಸಾರದಿಂದ ಇದು ಹೆಚ್ಚುತ್ತಿದೆ ಎಂಬ ವಾದವನ್ನೂ ನಾನು ಒಪ್ಪುವುದಿಲ್ಲ. ವಿದ್ಯಾ ಪ್ರಸಾರದಿಂದ ಜಾತೀಯತೆ ಕಡಿಮೆ ಆಗುತ್ತಿದೆ. ರಾಜಕೀಯ

ಕ್ಷೇತ್ರದಲ್ಲಿ ಇದನ್ನು ತಪ್ಪಿಸುವುದು ಸಾಧ್ಯವಿಲ್ಲ."

"ಹೊಸಗನ್ನಡದ ಬೆಳವಣಿಗೆಗೆ ಭಾಷಾಂತರ ಹೇಗೆ ಸಹಾಯಕಾರಿ?

"ಯಾವ ಭಾಷೆಗಾದರೂ ಕೂಡ ಭಾಷಾಂತರ ಗ್ರಂಥಗಳು ಸಹಾಯಕವೇ. ಪ್ರಪಂಚದ ಯಾವ ಭಾಷೆಯ ಸಾಹಿತ್ಯವನ್ನು ಗಣನೆಗೆ ತೆಗೆದು ಕೊಂಡರೂ ಅಲ್ಲಿ ಭಾಷಾಂತರ ಸಾಹಿತ್ಯವೇ ಮೂಲ ಸಾಹಿತ್ಯಕ್ಕಿಂತ ಹೆಚ್ಚಾಗಿರುತ್ತದೆ. ಭಾಷಾಂತರ ದಿಂದ ಭಾಷೆ ಸರ್ವಾಂಗಸುಂದರವಾಗಿ ಹೊಸ ಹೊಸ ನವರಂಗಗಳನ್ನು ತಾಳಿ ಬೆಳೆಯುತ್ತದೆ. ಭಾಷಾಂತರದ ಮೂಲಕ ಹೊಸ ವಿಚಾರಧಾರೆ ಪ್ರವಹಿಸಿ ಮೂಲ ಸಾಹಿತ್ಯವೂ ಹೊಸದಾಗುತ್ತದೆ."

"ಕನ್ನಡದಲ್ಲಿ ನಿರ್ಭಯವಾಗಿ ಸಾಹಿತ್ಯ ವಿಮರ್ಶೆ ಮಾಡುವ ಪ್ರವೃತ್ತಿ ಇನ್ನೂ ಬೆಳೆದಿಲ್ಲ ಎಂಬುದರ ಬಗ್ಗೆ ನೀವೇನೆನ್ನುತ್ತೀರಿ?"

"ಸಾಹಿತ್ಯ ವಿಮರ್ಶಕರೇ ನಮ್ಮಲ್ಲಿ ಕಡಿಮೆ. ಹಳಗನ್ನಡ, ನಡುಗನ್ನಡ ವಿಮರ್ಶೆ ಮಾಡುವಷ್ಟು ಹೊಸ ಗ್ರಂಥಗಳ ವಿಮರ್ಶೆ ಕಡೆ ಜನರ ಮನಸ್ಸು ಒಲಿದಿಲ್ಲ."

"ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕೂಡ ಕನ್ನಡ ಪಠ್ಯ-ಪುಸ್ತಕಗಳ ಆಯ್ಕೆ, ಅವುಗಳ ಸಂಪಾದನೆ ಮತ್ತು ಅವುಗಳಲ್ಲಿ ಸೇರಿಸಲ್ಪಡುವ ವಿಮರ್ಶಾ ವಿಭಾಗಗಳು ಅನೇಕ ವೇಳೆ ತತ್ಸಮಾನ ಇಂಗ್ಲಿಷ್ ಪಠ್ಯಗಳ ತತ್ಸಮಾನ ಅಂಶಗಳಿಗಿಂತ ತೀರ ಕೆಳ ಮಟ್ಟದಲ್ಲಿರುತ್ತವೆ. ಕನ್ನಡ ಅಭ್ಯಾಸದಲ್ಲಿ ವಿಮರ್ಶೆ ಸಮಕಾಲೀನ ಗ್ರಂಥಗಳ ವಿಷಯದಲ್ಲಿ ರಲಿ, ಪ್ರಾಚೀನ ಕವಿಗಳ ವಿಷಯದಲ್ಲೂ ನಿರ್ಭಯ ವಿಸ್ಮಯ ಸಾಗೆ ಕಾಣುವುದಿಲ್ಲ ಎಂಬ ಆಕ್ಷೇಪ ಕೇಳಿಸುತ್ತಿದೆ. ಅದರ ಬಗ್ಗೆ ನಿಮ್ಮ ವಿಚಾರವೇನು?"

"ಇದನ್ನು ನಾನು ಒಪ್ಪುವುದಿಲ್ಲ. ಸಮಕಾಲೀನರ ವಿಷಯದಲ್ಲಿ ನಿರ್ಭಯತೆ ಬರುವುದಿಲ್ಲ. ಮತೀಯತೆ ಮುಂದೆ ಬಂದಿದೆ. ವಿಮರ್ಶೆ ಮಾಡುವವರಲ್ಲಿ ಧೈರ್ಯವಿಲ್ಲ. ಇದನ್ನು ಒಪ್ಪಿಕೊಳ್ಳಲೇ ಬೇಕು."

"ಕನ್ನಡನಾಡು ಒಂದಾದರೂ ಅದರ ಭಾಗಗಳಲ್ಲಿ ಇನ್ನೂ ಮನೋಮೇಲ ಆಗಿಲ್ಲ. ಇದಕ್ಕೆ ಏನು ಕಾರಣ? ಏನು ಪರಿಹಾರ?"

"ಇದಕ್ಕೂ ರಾಜಕೀಯವೇ ಕಾರಣ. ನನಗೆ ಈ ಭಿನ್ನಭಾವ ಕಾಣುತ್ತಿಲ್ಲ. ರಾಜಕೀಯ ದೃಷ್ಟಿಯಿಂದ ನಿಮಗೆ ಅನಿಸುತ್ತಿದೆ. ಎಲ್ಲೆಲ್ಲೂ ರಾಜಕೀಯವಿರುವುದರಿಂದ ಮನೋಮೇಲ ಆಗಿಲ್ಲ."

"ಕನ್ನಡ ಮಾಧ್ಯಮದ ಯೋಜನೆಗೆ ಆಶಾದಾಯಕ ಪ್ರತಿಕ್ರಿಯೆ ಇದೆಯೇ?"

"ಅದರಲ್ಲಿ ಅನುಮಾನವೇ ಇಲ್ಲ. ಪ್ರತಿ ವರ್ಷವೂ ಕನ್ನಡ-ಮಾಧ್ಯಮ ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ. ವಿಶ್ವವಿದ್ಯಾನಿಲಯದ ಸೆನೆಟ್‌ನಲ್ಲಿ 80% ರಷ್ಟು ಕಾರ್ಯಕಲಾಪಗಳು ಕನ್ನಡದಲ್ಲಿಯೇ ನಡೆಯುತ್ತಿವೆ. ಶಿಕ್ಷಣ ಮಾಧ್ಯಮದ ಪ್ರಗತಿ ಆಡಳಿತ ಭಾಷೆಯ ಮೇಲೆ ಅವಲಂಬಿಸಿದೆ."

"ನಿಮಗಿರುವ ಕನ್ನಡ ಪ್ರೇಮ ಅತಿ ಅಭಿಮಾನವೆಂದು ಕೆಲವರು ಹೇಳುತ್ತಾರೆ— ಏನನ್ನುತ್ತೀರಿ?"

"ಅತಿ ಅಭಿಮಾನವಿರಬಹುದು, ಆದರೆ ಅಂಧ ಅಭಿಮಾನವಲ್ಲ. ಭಾಷಾಭಿಮಾನ ದೇಶಾಭಿಮಾನವಿಲ್ಲದವನು ನನ್ನ ದೃಷ್ಟಿಯಲ್ಲಿ ಪಶು."

ಪ್ರೊ. ಜವರೇಗೌಡರು ಉತ್ತಮ ವಾಗ್ಮಿಗಳು. ಸರಳ ಜೀವಿಗಳು. ಅವರ ಕಷ್ಟ-ಸುಖಗಳೆರಡರಲ್ಲೂ ಸಮಭಾಗಿನಿ-ಧರ್ಮಪತ್ನಿ ಸಾವಿತ್ರಿಯವರು. ಅವರಿಗೆ ಇಬ್ಬರು ಮಕ್ಕಳು. ಮಗ ಶಶಿಧರ ಸಂಶೋಧನೆ ನಡೆಸಿದ್ದಾರೆ. ಮಗಳು-ಶಶಿಕಲಾ ಎಂ. ಎ. ಪದವೀಧರೆ. ಜವರೇಗೌಡರು ಧಾರಾಳಿಗಳು, ಸ್ನೇಹಪರರು. ತಮ್ಮ ಬಡತನದ ಬಾಳುವೆ ಸ್ಮರಿಸಿಕೊಂಡು ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅವರು ಸಹಾಯ ಮಾಡಿದ್ದಾರೆ; ಮಾಡುತ್ತಿದ್ದಾರೆ. ಕೆಲಸ ಮಾಡುವುದು ಅವರಿಗೆ ಅತ್ಯಂತ ಪ್ರಿಯವಾದದ್ದು. ಕುವೆಂಪು ಅವರು ಪ್ರೊ. ದೇ.ಜ. ಗೌಡ ಅವರನ್ನು ಕುರಿತು ಒಂದೆಡೆ ಹೀಗೆ ಹೇಳಿದ್ದಾರೆ— "ಕನ್ನಡದ ಕೆಲಸ ನನಗೆ ಬಹಳ ಪ್ರಿಯವಾದದ್ದು; ಈ ವಿಚಾರದಲ್ಲಿ ನನಗೆ ಬಹಳ [illegible] ಆದರೆ ಅವರಲ್ಲಿ [illegible] ಕೊಂಡಿದೆ."



ಒಂದು ವಿಚಿತ್ರ ಪ್ರಕರಣ

[illegible]ನು ನಿಜವಾಗಿ ಅಂತರ್ಧಾನವಾದನೆ?

ಶ್ರೀಕಾಂತ

೧೮೯೭ ರಲ್ಲಿ ಖ್ಯಾತ ಬ್ರಿಟಿಶ್ ಲೇಖಕ ಎಚ್. ಜಿ. ವೆಲ್ಸ್ ಪ್ರಕಟಿಸಿದ 'ಅದೃಶ್ಯ ಮಾನವ' ಎಂಬ ವೈಜ್ಞಾನಿಕ ಕಾದಂಬರಿಯಲ್ಲಿ ಒಬ್ಬ ವಿಜ್ಞಾನಿ ಅದೃಶ್ಯನಾಗುವ ವಿದ್ಯೆ ಸಾಧಿಸುತ್ತಾನೆ. ಆದರೆ ಅದೃಶ್ಯನಾದ ಮೇಲೆ ತಿರುಗಿ ದೃಶ್ಯನಾಗುವ ಉಪಾಯ ಅವನಿಗೆ ಗೊತ್ತಿಲ್ಲದ್ದರಿಂದ ಅವನು ಹಾಗೆಯೇ ಪಿಶಾಚಿಯ ಹಾಗೆ ಅಲೆಯಬೇಕಾಗುತ್ತದೆ. ಆತ ಅದೃಶ್ಯನಾಗಿದ್ದುಕೊಂಡು ಜನರಿಗೆ ನಾನಾ ರೀತಿಯ ಉಪಟಳ ಕೊಡಲು ಪ್ರಾರಂಭಿಸುತ್ತಾನೆ. ವೆಲ್ಸ್ ಇನ್ನೂ ಆರು ವರ್ಷ ಹಿಂದೆ ಪ್ರಕಟಿಸಿದ 'ಕಾಲಯಂತ್ರ' ಕಾದಂಬರಿಯಲ್ಲಿ ಇನ್ನೊಬ್ಬ ವಿಜ್ಞಾನಿಗೆ ನಾವು ಅವಕಾಶದಲ್ಲಿ ಹಿಂದೆ ಮುಂದೆ ಸಾಗುವ ಹಾಗೆಯೇ ಕಾಲದಲ್ಲಿ ಕೂಡ ಹಿಂದೆ ಮುಂದೆ ಸಾಗಲು ಸಾಧ್ಯವಿದೆಯೆಂದು ನಂಬಿಕೆಯಾಗುತ್ತದೆ. ಆತ ಭೂತ ಕಾಲದಲ್ಲಿಯೂ ಭವಿಷ್ಯತ್ತಿನಲ್ಲಿಯೂ ಸಂಚರಿಸಬಲ್ಲ ಒಂದು ಯಂತ್ರ ಕಟ್ಟುತ್ತಾನೆ. ಈ ಯಂತ್ರದ ಮೇಲೇರಿ ಆತ ಭವಿಷ್ಯತ್ ಅಥವಾ ಭೂತ ಕಾಲಕ್ಕೆ ಯಾತ್ರೆ



ಬೆಳಸಿದೊಡನೆ ವರ್ತಮಾನ ಕಾಲದಲ್ಲಿ ಆತ ತನ್ನ ಯಂತ್ರ ಸಹಿತ ಅದೃಶ್ಯನಾಗಿ ಬಿಡುತ್ತಾನೆ. ಎಚ್. ಜಿ. ವೆಲ್ಸ್‌ನ ಕಲ್ಪನಾವಿಲಾಸದಿಂದ ಈ ಪಾತ್ರಗಳು ರೂಪುಗೊಳ್ಳುವ ಮೊದಲೇ ಒಂಗಾಲ ದಲ್ಲಿ ನಿಜವಾಗಿ ಇಂಥ ಘಟನೆಯೊಂದು ಜರುಗಿತೆ? ಬಂಗಾಲದ ಜಮೀನ್ದಾರ ಶರತ್‌ಕುಮಾರ ಘೋಷನ ಹೇಳಿಕೆಯನ್ನು ನಂಬಬಹುದಾದರೆ ಆತನ ಅಣ್ಣ ಶಿಶಿರಕುಮಾರ ಘೋಷ ೧೮೯೦ ರಲ್ಲಿ ಎಂದರೆ ವೆಲ್ಸ್‌ನ ಕಾದಂಬರಿಗಳು ಪ್ರಕಟವಾಗುವು ದಕ್ಕಿಂತ ಎಷ್ಟೋ ಮೊದಲು, ಕಾಲವನ್ನು ದಾಟುವ ಅದ್ಭುತ ವಿದ್ಯೆ ಸಾಧಿಸಿ ಏಕಾಏಕಿ ಅದೃ ಶ್ಯನಾದ—ಮತ್ತು ಅವನಿಗೆ ತಿರುಗಿ ಬರುವುದಕ್ಕೆ ಸಾಧ್ಯವೇ ಆಗಲಿಲ್ಲ.

ಬರದ್ವಾನದ ಸುಪ್ರತಿಷ್ಠಿತ ಜಮೀನುದಾರರ ಮನೆತನಕ್ಕೆ ಸೇರಿದ ಶರತ್‌ಕುಮಾರನೂ ಅವ ನಣ್ಣ ಶಿಶಿರಕುಮಾರನೂ ಸದಾಚಾರ ಸದಸದ್ವಿವೇ ಕಗಳಿಗಾಗಿ ಹೆಸರಾದವರು. ಎಮ್. ಎ. ಮುಗಿ ಸಿದ ನಂತರ ಶಿಶಿರಕುಮಾರನು ತತ್ವಜ್ಞಾನದಲ್ಲೂ ಯೋಗಸಾಧನೆಯಲ್ಲೂ ವೇಳೆ ಕಳೆಯತೊಡಗಿದ. ಆದರೆ ಅವನ ತಮ್ಮನ ಸ್ವಭಾವವೇ ಬೇರೆ. ದೇಶ ದೇಶಗಳನ್ನು ಸುತ್ತುವುದರಲ್ಲಿಯೇ ಅವನಿಗೆ ಆಸಕ್ತಿ. ಹತ್ತು ವರ್ಷ ಪ್ರಪಂಚಪರ್ಯಟನ ಮಾಡಿದರೂ ಅವನ ಪ್ರವಾಸದ ಪಿಪಾಸೆ ಹಿಂಗಿರ ಲಿಲ್ಲ. ಶರತ್‌ಕುಮಾರ ನ್ಯೂಯಾರ್ಕಿನಲ್ಲಿದ್ದಾಗ, ಕೂಡಲೇ ಹೊರಟುಬರಬೇಕೆಂದು ಶಿಶಿರಕುಮಾರ ನಿಂದ ಆದೇಶ ಬಂತು. ಭ್ರಾತೃಪ್ರೇಮಿಯಾದ ಆತ ಕೂಡಲೇ ಗಡಬಡಿಸಿಕೊಂಡು ಬರದ್ವಾನಕ್ಕೆ ಹಿಂದಿರುಗಿದ. ಅಲ್ಲಿ ಏನೂ ಅವಘಡ ಸಂಭವಿಸಿರ ಲಿಲ್ಲ. "ತಮ್ಮಾ, ನನ್ನ ಅಧ್ಯಾತ್ಮ ಸಾಧನೆಯಲ್ಲಿ ಈ ಹೊಲಮನೆಗಳನ್ನು ನೋಡಿಕೊಳ್ಳಲು ಆಗು ತ್ತಿಲ್ಲ, ನೀನೇ ಇವೆಲ್ಲವನ್ನು ನಿಭಾಯಿಸು," ಎಂದು ಶಿಶಿರಕುಮಾರ ಹೇಳಿದ. ಮನೆಯಲ್ಲಿ ಬೇಕಾದಷ್ಟು ದುಡ್ಡಿತ್ತು. ಕೇಳಿದಷ್ಟು ದುಡ್ಡನ್ನು ಅಣ್ಣ ಶಿಶಿರ ಕುಮಾರ ಕಳಿಸುತ್ತಿದ್ದ. ಅಂತಹುದರಲ್ಲಿ ಪರ್ಯ ಟನ ಪ್ರೇಮಿಯ ಮನಸ್ಸು ಒಂದೇ ಕಡೆ ಇದ್ದು ಜವಾಬ್ದಾರಿ ಹೊರಲು ಸುಲಭವಾಗಿ ಒಪ್ಪೀತೆ? ಆದರೂ ಶರತ್‌ಕುಮಾರ ಅಣ್ಣನೊಂದಿಗೆ ಇದ್ದು ವ್ಯವಹಾರವನ್ನು ನಿಭಾಯಿಸತೊಡಗಿದ.

ಶಿಶಿರಕುಮಾರನ ಬಂಗಲೆ ಭವ್ಯವಾಗಿತ್ತು. ನಿಸ ರ್ಗಪ್ರೇಮಿಯಾದ ಅವನು ಘನ ಅರಣ್ಯದ ಬಳಿಯೇ ಅದನ್ನು ಕಟ್ಟಿಸಿಕೊಂಡಿದ್ದ. ಬಂಗಲೆಯ ಸುತ್ತಲೂ ಚೇತೋಹಾರಿಯಾದ ತೋಟವಿತ್ತು. ದಿನಾಲೂ ಸಂಜೆಯ ಮುಂದೆ ಮನೆಯವರೂ ಮಿತ್ರಬಾಂಧವರೂ ದಿವಾನಖಾನೆಯಲ್ಲಿ ರಾತ್ರಿ ಮೀರುವ ವರೆಗೂ ಆ ಮಾತು ಈ ಮಾತು ಆಡುತ್ತ ಕುಳಿತುಕೊಳ್ಳುತ್ತಿದ್ದರು. ಅನಂತರ ಶಿಶಿರಕುಮಾರನಿಂದ ಶಾಸ್ತ್ರೋಕ್ತವಾಗಿ ಪೂಜೆಯಾ ಗುತ್ತಿತ್ತು.

ದಿನಗಳು ಏಕಪ್ರಕಾರವಾಗಿ ಉರುಳುತ್ತಿದ್ದವು. ೧೮೯೦ ರ ಅಗಸ್ಟ ೧೮ ರ ಸಂಜೆ ಉಳಿದೆಲ್ಲ ಸಂಜೆಗಳಿಗಿಂತ ಭಿನ್ನವಾಗಿರಲಿಲ್ಲ. ಅಂದು ರಾತ್ರಿ ಹತ್ತೂವರೆಯ ಸುಮಾರಿಗೆ, "ತುಂಬಾ ಹೊತ್ತಾ ಯಿತು, ನಾನಿನ್ನು ಪೂಜೆಗೆ ಹೊರಡುತ್ತೇನೆ," ಎನ್ನುತ್ತ ಶಿಶಿರಕುಮಾರ ಪೂಜಾಗೃಹದತ್ತ ಹೊರಟ. ಜಮೀನಿನ ಬಗೆಗೆ ಏನೋ ಸಲಹೆ ಕೇಳ ಬೇಕೆಂದು ಶರತ್‌ಕುಮಾರನೂ ಅವನನ್ನು ಹಿಂಬಾ ಲಿಸಿದ. ಎಂದಿನಂತೆ ಆ ದಿನವೂ ಶಿಶಿರಕುಮಾರ ತನ್ನ ಅದ್ಭುತ ಯೌಗಿಕ ಪ್ರಯೋಗಗಳನ್ನೇ ತಲೆ ಯಲ್ಲಿ ತುಂಬಿಕೊಂಡಿದ್ದ.

ಇದುವರೆಗಿನ ಸಂಗತಿಗಳಿಗೆ ಅಲ್ಲಿ ನೆರೆದಿದ್ದವ ರೆಲ್ಲರೂ ಸಾಕ್ಷಿಯಾಗಿದ್ದರು. ಮುಂದಿನ ಘಟನೆಗ ಳಿಗೆ ಮಾತ್ರ ಅಣ್ಣತಮ್ಮ ಇಬ್ಬರೇ ಸಾಕ್ಷಿಯಾಗಿ ದ್ದರು. ಮುಂದೆ ಶರತ್‌ಕುಮಾರ ವಿದಿತಪಡಿಸಿದ ವಿವರಣೆಯ ಪ್ರಕಾರ ದೇವರ ಕೋಣೆಯಲ್ಲಿ ನಡೆದದ್ದು ಇಷ್ಟು:

ದೇವರ ಕೋಣೆಯಲ್ಲಿ ಶರತ್‌ಕುಮಾರನನ್ನು ಕಂಡೊಡನೆ ಅಣ್ಣ ಒಂದು ಕಾಗದವನ್ನು ತೆಗೆದು ಕೊಂಡು ಗಂಭೀರಭಾವದಿಂದ ಒಂದು ಸರಳರೇಖೆ ಯನ್ನೆಳೆದ. ನಂತರ ಅದರ ಕೆಳಗೆ ಒಂದು ವೃತ್ತಾ ಕೃತಿ ಹಾಗೂ ಕೊನೆಗೆ ಒಂದು ಘನಾಕೃತಿಯನ್ನು

ಒಲಿದೆ.

ಶಿಶಿರಕುಮಾರ ಮತ್ತೂ ಗಂಭೀರನಾಗಿ ಹೇಳಿದ:

"ತಮ್ಮಾ, ಇಲ್ಲಿ ನೋಡು. ಇದೊಂದು ಸರಳ ರೇಖೆ. ಸರಳ ರೇಖೆಗೆ ಅಗಲವೂ ಇಲ್ಲ ದಪ್ಪವೂ ಇಲ್ಲವೆಂದು ನೀನು ಬಲ್ಲೆ. ಇದರ ಮೇಲೆ ಒಂದು ಉದ್ದನೆಯ, ಒಂದೇ ಪರಿಮಾಣದ (ದಪ್ಪ ಅಗಲ ಇಲ್ಲದ) ಹುಳ ಸಂಚರಿಸುತ್ತದೆಂದು ತಿಳಿದುಕೋ. ಈ ಹುಳಕ್ಕೆ ಮುಂದೊಂದು ಹಿಂದೊಂದು ಹೀಗೆ ಎರಡು ಕಣ್ಣುಗಳಿವೆ. ಕಣ್ಣುಗುಡ್ಡೆಗಳನ್ನದು ಹೊರಳಿಸಲಾರದು. ಕೇವಲ ಸರಳರೇಖೆಗುಂಟ ಅದು ದೃಷ್ಟಿ ಹರಿಸುತ್ತಾ ಅನಂತಕಾಲದ ವರೆಗೂ ಮುಂದಕ್ಕೆ ಸಾಗಬೇಕಾಗುತ್ತದೆ. ಇಂತಹ ಪ್ರಾಣಿಗೆ ಅಗಲದ್ದಾಗಲಿ ಎತ್ತರದ್ದಾಗಲಿ ಕಲ್ಪನೆ ಬಂದೀತೇ? ಕೇವಲ ಉದ್ದವೆಂಬ ಒಂದು ಪರಿಮಾಣಕ್ಕೇ ಅದರ ಪ್ರಪಂಚ ಸೀಮಿತವಾದದ್ದು. ಉದ್ದ, ಅಗಲ, ಎತ್ತರಗಳ ಪರಿಧಿಯಲ್ಲಿ ನಾವು ಮನುಷ್ಯರು ಜೀವಿಸುತ್ತೇವೆ ಎಂಬುದನ್ನು ಬಿಟ್ಟರೆ ನಮಗೂ ಆ ಹುಳಕ್ಕೂ ಏನೂ ಭೇದವಿಲ್ಲ. ಉದ್ದವೆಂಬ ಪರಿಮಾಣವನ್ನು ಬಿಟ್ಟರೆ ಉಳಿದ ಪರಿಮಾಣಗಳನ್ನು ಹುಳ ಹೇಗೆ ಕಲ್ಪಿಸಿಕೊಳ್ಳಲಾರದೋ ಹಾಗೆಯೇ ಉದ್ದಗಲ ಎತ್ತರಗಳೆಂಬ ಮೂರು ಪರಿಮಾಣಗಳ ಪ್ರಪಂಚದಲ್ಲಿ ಬದುಕುವ ನಾವು ಈ ಮೂರನ್ನು ಬಿಟ್ಟು ನಾಲ್ಕನೆಯ ಪರಿಮಾಣವನ್ನು ಕಲ್ಪಿಸಿಕೊಳ್ಳಲಾರೆವು..."

ಇದರಲ್ಲಿ ಹೊಸತೇನೂ ಇರಲಿಲ್ಲ. ಗಣಿತ ಶಾಸ್ತ್ರಿಗಳು ಈಗಲೂ ಪರಿಮಾಣಗಳ ಕಲ್ಪನೆಯನ್ನು ವಿವರಿಸುವುದಕ್ಕೆ ಇದೇ ಉದಾಹರಣೆ ಕೊಡುತ್ತಾರೆ. ತ್ರಿಪರಿಮಾಣಕ್ಕೆ ಪ್ರಪಂಚ ಸೀಮಿತವಾಗಿರಬೇಕೆಂದಿಲ್ಲ. ನಾಲ್ಕು, ಐದು, ಆರು ಪರಿಮಾಣಗಳು ಇರಬಹುದು, ಎಂಬುದು ಅವರ ವಾದ. ನಮ್ಮ ಇಂದ್ರಿಯಗಳು ತ್ರಿಪರಿಮಾಣ ಪ್ರಪಂಚವನ್ನು ಗ್ರಹಿಸುವುದಕ್ಕೆ ನಿರ್ಮಿತವಾಗಿರುವುದರಿಂದ ಅದಕ್ಕೂ ಮೀರಿದ ಪರಿಮಾಣಗಳು ನಮಗೆ ಗೋಚರವಾಗುವುದಿಲ್ಲ.

ಆದರೆ ಶರತ್ ಕುಮಾರನಿಗೆ ಈ ಪರಿಮಾಣಗಳ ಚರ್ಚೆ ಬೇಕಾಗಿರಲಿಲ್ಲ; ಜಮೀನ್ದಾರಿಯ ವ್ಯವಹಾರದ ಬಗ್ಗೆ ಕೇಳಬೇಕಿತ್ತು. ಆತ, "ಇದ್ದೀತು. ಈ ವಿಷಯ ನೀನು ಎಷ್ಟೋ ಸಲ ಹೇಳಿದ್ದೀ. ಅದನ್ನು ತೆಗೆದುಕೊಂಡು ಈಗ ನಾವೇನು ಮಾಡಬೇಕು? ನಾನು ಬಂದಿದ್ದು ಜಹಗೀರಿನ ಬಗ್ಗೆ ಸಲಹೆಗೆ ಮಾತ್ರ."

"ಹಾಗಂದರೆ ಹೇಗೆ? ನಾನು ಚತುರ್ಥ ಪರಿಮಾಣವನ್ನು ಕಂಡು ಹಿಡಿದಿದ್ದೇನೆ. ಅದು ಎಷ್ಟು ಅದ್ಭುತವಾಗಿರುತ್ತದೆ ಗೊತ್ತಾ? ನಾನೀಗ ಈ ರಹಸ್ಯ ವಲಯವನ್ನು ಸೇರಬಲ್ಲೆ. ಸೃಷ್ಟಿಯ ಅಜ್ಞಾತ ಅದ್ಭುತಗಳನ್ನು ಅನುಭವಿಸಬಲ್ಲೆ," ಎಂದು ಅಣ್ಣ ತಮ್ಮನ ಮಾತನ್ನು ಗಣನೆಗೆ ತೆಗೆದುಕೊಳ್ಳದೆ ಹೇಳಿದ.

ಇದರಿಂದ ಶರತ್‌ಕುಮಾರನ ಮೇಲೇನೂ ಪರಿಣಾಮವಾಗದಿರುವುದನ್ನು ಕಂಡು ಶಿಶಿರಕುಮಾರ, "ಶರತ್, ಚತುರ್ಥ ಪರಿಮಾಣ ಇತ್ತ ಕಡೆ ಬರುತ್ತಿದೆ ನೋಡು," ಎಂದ. ಆತ ಮುಖ ತಿರುಗಿಸಿ ನೋಡುವಷ್ಟರಲ್ಲಿಯೆ ಭಯಂಕರವಾದ ಸಪ್ಪಳ ಕೇಳಿಬಂತು. ಕ್ಷಣಾರ್ಧದಲ್ಲಿ ಶಿಶಿರಕುಮಾರನ ಮುಂಗೈ ಮಾಯವಾಗಿತ್ತು. ಈ ಭಯಾನಕ, ಅದ್ಭುತ ಘಟನೆಯನ್ನು ನೋಡಿದ ಶರತ್‌ಕುಮಾರ ಗರಬಡಿದವನಂತೆ ನಿಂತ. ಶಿಶಿರಕುಮಾರ, "ಶರತ್, ಈಗ ಹೋದ ಕೈ ತಿರುಗಿ ಬರುವುದು ನೋಡು," ಎಂದು ಉತ್ತೇಜಿತನಾಗಿ ಹೇಳಿದ. ಮತ್ತೊಂದು ಆಸ್ಫೋಟನದೊಂದಿಗೆ ಶಿಶಿರಕುಮಾರನ ಕೈ ಮರಳಿ ಬಂತು.

ಈ ಅಲೌಕಿಕ ಘಟನೆಯಿಂದ ಚೇತರಿಸಿಕೊಳ್ಳಬೇಕಾದರೆ ಶರತ್‌ಕುಮಾರನಿಗೆ ಕೆಲ ಕ್ಷಣಗಳೇ ಹಿಡಿದವು. ಚೇತರಿಸಿಕೊಂಡ ನಂತರ ಈ ಅದ್ಭುತ ಕೈವಾಡವನ್ನು ಸಾಧಿಸಿದ್ದಕ್ಕಾಗಿ ಆತ ಅಣ್ಣನನ್ನು ಅಭಿನಂದಿಸಿದ. ಅದನ್ನು ಕೈವಾಡವೆಂದು ಶರತ್‌ಕುಮಾರ ಭಾವಿಸಿದ್ದನ್ನು ಕಂಡು ಶಿಶಿರಕುಮಾರನಿಗೆ ಕೊಂಚ ಸಿಟ್ಟೇ ಬಂತು. ಅನಂತರ ಆತ್ಮವಿಶ್ವಾಸದ ಮಿಂಚೊಂದು ಆತನ ಮುಖದ ಮೇಲೆ ಮೂಡಿತು. "ನೋಡು ಶರತ್, ಈ ದಿನ ನಾನು

ನಿನ್ನೆದುರಿಗೇ ನಾಲ್ಕನೆಯ ಪರಿಮಾಣದಲ್ಲಿ ಹೊಕ್ಕು ತೋರಿಸುತ್ತೇನೆ. ಆಗಲಾದರೂ ನಾಲ್ಕನೆಯ ಪರಿಮಾಣದ ಅಸ್ತಿತ್ವದ ಬಗ್ಗೆ ನಿನಗೆ ನಂಬಿಕೆಯುಂಟಾಗಬಹುದು," ಎಂದು ಹೇಳಿದ.

ಮತ್ತೊಂದು ಭಯಂಕರವಾದ ಶಬ್ದ ಕೇಳಿಬಂತು. ಆ ಸಪ್ಪಳದೊಂದಿಗೇ ಶಿಶಿರಕುಮಾರ ಮಾಯವಾದ. ಕ್ಷಣಾರ್ಧದಲ್ಲೆ, "ತಮ್ಮಾ. ಯಾವುದೋ ಶಕ್ತಿ ನನ್ನನ್ನು ಎಳೆದೊಯ್ಯುತ್ತಿದೆ. ತಿರುಗಿಬರಲಾಗುತ್ತಿಲ್ಲ ಹಿಡಿದುಕೋ. ಇತ್ತಕಡೆ ಬಾ" ಎಂಬ ಶಬ್ದ ಕೇಳಿಸಿತು. ಸನಿಯದಲ್ಲೆ ಕೇವಲ ಶಿಶಿರಕುಮಾರನ ಕೈ ಕಾಣಿಸುತ್ತಿತ್ತು. ಶರತ್ ಕೂಡಲೆ ಅದನ್ನು ಹಿಡಿದುಕೊಂಡ. ಮರುಕ್ಷಣದಲ್ಲೆ ಯಾವುದೋ ಅವ್ಯಕ್ತ ಶಕ್ತಿ ಅದನ್ನು ಬಲದಿಂದ ಕೈಯನ್ನು ಎಳೆಯಿತು. ಅಣ್ಣನ ಕೈ ತಪ್ಪಿಸಿಕೊಂಡು ಹೋಗಿತ್ತು. ಶರತ್‌ಕುಮಾರನ ಅಂಗಿ ಚಿಂದಿಚಿಂದಿಯಾಗಿತ್ತು. ದೂರದಲ್ಲಿ ಶಿಶಿರ-ಕುಮಾರನ ಕೈ ತೋಟದಲ್ಲಿ ಹೋಗುತ್ತಿರುವುದನ್ನು ಆತ ಕಂಡ ಶರತ್‌ಕುಮಾರ ಓಡಿ ಅದನ್ನು ಹಿಡಿಯಲು ಹೋದ. ಆದರೆ ಕಾಲ ಮೀರಿ ಹೋಗಿತ್ತು.

ಇದಿಷ್ಟು ಶರತ್‌ಕುಮಾರನ ಹೇಳಿಕೆಯಾಗಿತ್ತು.

ಇತ್ತ ದಿವಾನಖಾನೆಯಲ್ಲಿ ಮಾತನಾಡುತ್ತ ಕುಳಿತವರು ಸುಮಾರು ೧೧–೩೦ ಕ್ಕೆ ಮಲಗುವ ತಯಾರಿಯಲ್ಲಿ ತೊಡಗಿದರು. ಆಗ ಅವರಿಗೆ ದೇವರ ಕೋಣೆಯಲ್ಲಿ ಪಟಾಕ್ಷಿಯನ್ನು ಹಾರಿಸಿದಂತೆ ಸದ್ದಾಗುವುದು ಕೇಳಿಸಿತು. ಅದರ ಹಿಂದೆಯೇ. "ತಮ್ಮಾ ಹಾಗೆ ಮಾಡಬೇಡ. ದೇವರಾಣೆಗೂ ಹಾಗೆ ಮಾಡಬೇಡ," ಎಂಬ ಆರ್ತನಾದ ಕೇಳಿಸಿತು. ಅವರು ಕಿವಿ ನಿಮಿರಿಸಿಕೊಂಡು ಆಲಿಸಿದರು. ಹೌದು, ಅದು ಶಿಶಿರಕುಮಾರನ ಧ್ವನಿಯಾಗಿತ್ತು. ಹಾಗಾದರೆ ದುರಂತವೇನಾದರೂ ಸಂಭವಿಸುತ್ತಿರಬಹುದೇ? ಆಗಂತುಕರು ದೇವರ ಕೋಣೆಯ ಕಡೆ ಧಾವಿಸಿದರು. ಬಾಗಿಲು ಹಾಕಿತ್ತು. "ಶರತ್!" ಹೆಸರು ಹಿಡಿದು ಕೂಗಿದರು. ಉತ್ತರವಿಲ್ಲ. ಉದ್ವಿಗ್ನ ಸ್ಥಿತಿಯಲ್ಲಿಯೇ ಅವರು ಬಾಗಿಲನ್ನು ಮುರಿದು ತೆಗೆದಾಗ ಒಳಗೆ ಯಾರೂ ಇರಲಿಲ್ಲ. ಆಚೆ ಬದಿಯ ಬಾಗಿಲು ತೆರೆದಿತ್ತು. ದೂರದಲ್ಲಿ ಮಾನವಾಕೃತಿಯೊಂದು ಬಾಗಿಲ ಕಡೆ ನಡೆದು ಬರುವುದು ಗೋಚರಿಸಿತು. ಹೌದು. ಆತ ಶರತ್‌ಕುಮಾರನಾಗಿದ್ದ. ಅವನ ಶರ್ಟು ಹರಿದಿತ್ತು. ವೇಷ ಅಸ್ತವ್ಯಸ್ತವಾಗಿತ್ತು.

"ಅಣ್ಣನೆಲ್ಲಿ?" ಎಂದು ಕೇಳಿದರೆ ಆತ ಏನೂ ಮಾತಾಡದೆ ತೋಟದತ್ತ ಕೈತೋರಿಸಿದ. ಎಲ್ಲರೂ ಸೇರಿ ದೀಪಗಳನ್ನು ಹೊತ್ತಿಸಿಕೊಂಡು ಎಲ್ಲ ಕಡೆ ಹುಡುಕಿದರು. ಶಿಶಿರನ ಪತ್ತೆಯೇ ಆಗಲಿಲ್ಲ.

ಶರತ್ ಕುಮಾರ ಆಸ್ತಿಯ ಆಶೆಯಿಂದ ಅಣ್ಣನನ್ನು ಕೊಂದುಹಾಕಿದನೆಂಬ ವದಂತಿ ಹಬ್ಬಿಕೊಂಡಿತು.

ಪೋಲೀಸರು ಬಂದರು. ಅಣ್ಣ ಕಾಣೆಯಾದದ್ದನ್ನು ಆತ ಒಪ್ಪಿದ. ಆದರೆ ಆತ ಹೇಳಿದ ವಿವರಣೆಯನ್ನು ನಂಬುವುದು ಸಾಧ್ಯವಿರಲಿಲ್ಲ. ಪೋಲೀಸರು ಕೇಸು ದಾಖಲು ಮಾಡಿಕೊಂಡರು. ಸಾಂದರ್ಭಿಕ ಪ್ರಮಾಣಗಳಿಂದ ಕೊಲೆಯೇ ಸೂಚಿತವಾಗುತ್ತಿತ್ತು. ಆದರೆ ಎಷ್ಟು ಶೋಧಿಸಿದರೂ ಶಿಶಿರಕುಮಾರನ ಹೆಣ ದೊರೆಯುವುದಿರಲಿ, ಕೊಲೆಯಾದದ್ದಕ್ಕೆ ಒಂದು ಸುಳಿವು ಕೂಡ ದೊರೆಯಲಿಲ್ಲ. ಆದರೂ ಪೋಲೀಸರು ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿದರು. ಅವರ ಹತ್ತಿರ ಊಹೆ ಹೊರತು ಪ್ರಮಾಣಗಳೇನೂ ಇರಲಿಲ್ಲ. ಬದಲಿಗೆ ಅಣ್ಣತಮ್ಮಂದಿರ ಸಂಬಂಧ ಅನ್ಯೋನ್ಯವಾಗಿತ್ತೆಂದೂ ಶಿಶಿರಕುಮಾರನಾಗಲಿ ಶರತ್-ಕುಮಾರನಾಗಲಿ ಆಸ್ತಿಯ ಮೇಲೆ ಆಸಕ್ತಿ ಹೊಂದಿರಲಿಲ್ಲವೆಂದೂ ಶರತ್‌ಕುಮಾರನು ಆಸ್ತಿಗಾಗಿ ಕೊಲೆ ಮಾಡಿದನೆಂದು ನಂಬುವುದು ಕಠಿನವೆಂದೂ ನ್ಯಾಯಾಲಯದಲ್ಲಿ ಕೊಡಲ್ಪಟ್ಟ ಸಾಕ್ಷ್ಯಗಳಿಂದ ವ್ಯಕ್ತವಾಯಿತು. ಶರತ್‌ಕುಮಾರನನ್ನು ನಿರ್ದೋಷಿಯೆಂದು ನ್ಯಾಯಾಲಯ ಬಿಡುಗಡೆ ಮಾಡಿತು.

ಆದರೂ ಜನರ ಸಂಶಯ ಅಳಿಯಲಿಲ್ಲ.

ಗೌರವದಿಂದ ಕಾಣುತ್ತಿದ್ದ ಜನ ಈಗ ಅವನನ್ನು ಭಯದಿಂದ ಕಾಣಹತ್ತಿದರು. ಅತಿ ಸಾಮಾನ್ಯ ವ್ಯಕ್ತಿಯ ದೃಷ್ಟಿಯಲ್ಲೂ ಅವನು ಪತಿತನಾಗಿದ್ದನು. ಜನರ ಮರ್ಮಭೇದಕ ದೃಷ್ಟಿಯನ್ನು ಸಹಿಸುವುದು ಅವನಿಂದಾಗುತ್ತಿರಲಿಲ್ಲ. ಅಣ್ಣ ಕಣ್ಮರೆಯಾದಂದಿನಿಂದಲೂ ಅವನ ಮುಖದ ಮೇಲೆ ವೇದನೆಯ, ನಿರಾಶೆಯ ಛಾಯೆ ಆವರಿಸಿಕೊಂಡಿತ್ತು ಎಂದು ಈ ಬಗೆಗೆ ಲೇಖ ಬರೆದು 'ನವಭಾರತ ಟೈಮ್ಸ್'ದಲ್ಲಿ ಪ್ರಕಟಿಸಿದ ಶ್ರೀಹರಿ ಅವರು ಹೇಳುತ್ತಾರೆ.

"ಮುಂದೆ ನನ್ನ ಅಣ್ಣನ ದರ್ಶನ ಆಗಲೇ ಇಲ್ಲ. ನಾಲ್ಕನೆಯ ಪರಿಮಾಣದಲ್ಲಿ ಪ್ರವೇಶಿಸಿದ ನಂತರ ಆತನಿಗೇನಾಯಿತು, ಆತ ತಿರುಗಿ ಏಕೆ ಬರಲಿಲ್ಲವೆಂಬುದೂ ನನಗೆ ಗೊತ್ತಿಲ್ಲ. ನನ್ನಣ್ಣ ಶಿಶಿರಕುಮಾರ ಜೀವಂತರಾಗಿದ್ದಾರೋ ಇಲ್ಲವೋ ಎನ್ನುವುದು ಕೂಡ ನನಗೆ ತಿಳಿಯದು," ಎಂದು ಶರತ್ ಕುಮಾರ ತನ್ನ ಜೀವನದ ಕೊನೆಯ ದಿವಸಗಳಲ್ಲಿ ಬರೆದಿಟ್ಟ.

ಅಂತ್ಯಕಾಲದಲ್ಲಿಯೂ ಅಣ್ಣನ ನೆನಪು ಶರತ್ ಕುಮಾರನನ್ನು ಬಿಟ್ಟಿರಲಿಲ್ಲ. ಸಾವು ಸಮೀಪಿಸುತ್ತಿದ್ದಂತೆಯೇ ಆತ ತನಗೆ ಬಂದ ವಿಚಿತ್ರ ಅನುಭವಗಳನ್ನು ಬರೆದಿಡುತ್ತಿದ್ದ: "ಮರಣ ಕಾಲದಲ್ಲಿ ಶಿಶಿರಕುಮಾರನ ಧ್ವನಿಯನ್ನು ಕೇಳುತ್ತಿದ್ದೇನೆ. ಈಗ ಶಿಶಿರಕುಮಾರನೂ ಕಾಣುತ್ತಿದ್ದಾನೆ. 'ನಾನು ನಿನ್ನ ಅಣ್ಣ ಶರತ್' ಎಂದಾತ ಹೇಳುತ್ತಿದ್ದಾನೆ. 'ನೀನು ಹೇಳುತ್ತಿರುವುದು ಕೇಳಿಸುತ್ತಿದೆ ಶರತ್. ತಡೆ, ನಾನೂ ಬರುತ್ತೇನೆ. ಜಗತ್ತಿನ ಅಜ್ಞಾನಿ ಜನರೇ, ಚತುರ್ಥ ಪರಿಮಾಣದ ಅಸ್ತಿತ್ವ ನಿಜವಾಗಿಯೂ ಇದೆ...,"

"'ಇದೆ' ಎನ್ನುವ ಶಬ್ದದ ಮುಂದೆ ಶರತ್ ಕುಮಾರ ಅಸ್ಪಷ್ಟವಾಗಿ ಏನೋ ಗೀಚಿದ್ದ. ಅದೇನೆಂಬುದು ಯಾರಿಗೂ ಅರ್ಥವಾಗಲಿಲ್ಲ. ಆತ ಶಿಶಿರಕುಮಾರನನ್ನು ಕೊಂದಿದ್ದನೋ ಇಲ್ಲವೋ ಎಂಬುದನ್ನು ಜನರೇ ನಿರ್ಣಯಿಸಬೇಕು." ಎಂದು ಶರತ್ ಕುಮಾರನ ಸೋದರಿ ಸುಮತಿ ಬರೆದಿಟ್ಟಿದ್ದಾಳೆ.

ಆದರೂ ಇದು ಅಂತರ್ಧಾನವೋ ಕೊಲೆಯೋ ಎಂಬ ರಹಸ್ಯ ಹಾಗೆಯೇ ಉಳಿದಿದೆ. ಪುರಾವೆಗಳನ್ನು ಪರಿಶೀಲಿಸೋಣ.

ಎಚ್. ಜಿ. ವೆಲ್ಸ್ ಕಾದಂಬರಿ ಪ್ರಕಟವಾಗುವ ಮೊದಲೇ ಶರತ್‌ಕುಮಾರ ಯುರೋಪಿಯನ್ ದೇಶಗಳಲ್ಲಿ ಸಂಚರಿಸುತ್ತಿದ್ದ. ಆಗ ಅಲ್ಲಿ ನಾಲ್ಕನೆಯ ಪರಿಮಾಣದ ಬಗೆಗೆ ವೈಜ್ಞಾನಿಕ ವರ್ಗಗಳಲ್ಲಿ ಚರ್ಚೆಯಾಗುತ್ತಿರಬೇಕು. ಅಣ್ಣನನ್ನು ಕೊಂದು, ಕೊಲೆಯ ಆರೋಪದಿಂದ ಪಾರಾಗಲು ಆತ ನಾಲ್ಕನೆಯ ಪರಿಮಾಣದ ಬಗ್ಗೆ ಅತ್ಯದ್ಭುತವಾಗಿ ಕಥೆ ಕಟ್ಟಿರಬಹುದೆ?

ಶರತ್‌ಕುಮಾರ ಹೇಳಿದ ಕಥೆಗೂ ಹೊರಗಿದ್ದವರು ಕೊಟ್ಟ ಹೇಳಿಕೆಗಳಿಗೂ ಒಂದಿಷ್ಟು ವಿಸಂಗತಿ ಕಾಣಿಸುತ್ತದೆ. ಅಣ್ಣತಮ್ಮ ದೇವರ ಮನೆಗೆ ಹೋಗಿ ಪೂರ್ಣ ಒಂದು ಗಂಟೆಯ ನಂತರ ಶಬ್ದ ಮತ್ತು ಕೂಗು ಕೇಳಿಸಿತ್ತು. ಅವರಿಗೆ ಕೇಳಿಸಿದಂತೆ ಅಣ್ಣ "ನನ್ನನ್ನು ಹಿಡಿದುಕೋ" ಎಂದು ಒದರದೆ "ಹೀಗೆ ಮಾಡಬೇಡ. ದೇವರಾಣೆಯಾಗಿ ಹೀಗೆ ಮಾಡಬೇಡ!" ಎಂದು ಆರ್ತನಾದ ಮಾಡಿದ್ದ. ಈ ವಿಸಂಗತಿಯನ್ನು ಪೋಲೀಸರು ನ್ಯಾಯಾಲಯದ ಮುಂದೆ ಎತ್ತಿದ್ದರು.


ಹಾಗಾದರೆ ಶಿಶಿರಕುಮಾರನ ಹೆಣವೆಲ್ಲಿ ಮಾಯವಾಯಿತು? ಹೊರಗಿನಿಂದ ಜನ ಬಾಗಿಲನ್ನೊಡೆದು ಕೋಣೆಯನ್ನು ಪ್ರವೇಶಿಸುವುದರೊಳಗೆ ಹೆಣವನ್ನು ಬಚ್ಚಿಡುವುದು ಸಾಧ್ಯವಿತ್ತೆ? ಅಣ್ಣ-ತಮ್ಮಂದಿರ ಸಂಬಂಧ ಅನ್ಯೋನ್ಯವಾಗಿದ್ದಾಗ ಶರತ್‌ಕುಮಾರನಿಗೆ ಕೊಲೆಮಾಡುವ ಕಾರಣವಾದರೂ ಏನಿತ್ತು? ಆತ ಕೊಲೆ ಮಾಡಿದ್ದೇ ನಿಜವಾಗಿದ್ದಲ್ಲಿ ಕೊಲೆಯ ಹೊಳವು ಕೂಡ ಏಕೆ ದೊರೆಯಲಿಲ್ಲ? ಇದಕ್ಕೆ ಪೋಲೀಸರಲ್ಲಿ ಉತ್ತರವಿರಲಿಲ್ಲ.

ಮಾನವ ಮೂರ್ತಪ್ರಪಂಚದಿಂದ ಅಮೂರ್ತ ಪ್ರಪಂಚವನ್ನು ಪ್ರವೇಶಿಸುವುದು ಅಸಾಧ್ಯವೇನಲ್ಲ ಎಂದು ಅನೇಕ ಬ್ರಹ್ಮವಿದ್ಯಾಪಂಡಿತರು ಹೇಳಿ

ದ್ದಾರೆ. ಥಿಯಾಸಫಿಯ ಅಧ್ವರ್ಯು ಲೆಡ್‌ಬೀಟರ ನಂತಹರು ಅನೇಕ ಉದಾಹರಣೆ ಕೊಟ್ಟು ಈ ವಾದವನ್ನು ಪುಷ್ಟೀಕರಿಸಿದ್ದಾರೆ. "ಈ ಅದ್ಭುತ ಕಾರ್ಯ ಅನೇಕ ಕ್ರಿಯೆ-ಪ್ರಕ್ರಿಯೆಗಳನ್ನೊಳಗೊಂಡಿರುತ್ತದೆ. ಅಮೂರ್ತ ಪ್ರಪಂಚವನ್ನು ಪ್ರವೇಶಿಸಿದ ನಂತರ ತಿರುಗಿ ಮೂರ್ತಪ್ರಪಂಚವನ್ನು ಪ್ರವೇಶಿಸುವುದು ಸಾಧ್ಯವಾಗದೇ ಹೋಗಬಹುದು. ಆದ್ದರಿಂದ ನಿಜವಾದ ಯೋಗ್ಯತೆಯುಳ್ಳವನೇ ಈ ಅದ್ಭುತ ಪ್ರಯೋಗವನ್ನು ಮಾಡಬಹುದು," ಎಂದು ಲೆಡ್‌ಬೀಟರ್ ಹೇಳುತ್ತಾನೆ.

ಹಾಗಾದರೆ ಶಿಶಿರಕುಮಾರ ಬ್ರಹ್ಮವಿದ್ಯೆಯ ಈ ಮಹಾ ರಹಸ್ಯವನ್ನು ಭೇದಿಸಿದ್ದನೆ? ಅಥವಾ ಮಾನವನ ಅನುಭವಕ್ಕೆ ಮೀರಿದ ಅಮೂರ್ತ ಪ್ರಪಂಚವನ್ನು ಪ್ರವೇಶಿಸುವ ಹೊಸದೊಂದು ದಾರಿಯನ್ನೇ ಆತ ಕಂಡುಹಿಡಿದಿದ್ದನೆ? ಇಂತಹ ಮಹಾ ರಹಸ್ಯೋದ್ಘಾಟನೆ ಮಾಡಿದ ಆತ ಈ ಹೊಸ ದಾರಿಯನ್ನು ಪ್ರವೇಶಿಸುವ ವಿಧಾನದ ಬಗ್ಗೆ ಇತರರಿಗೆ ಏಕೆ ತಿಳಿಸಲಿಲ್ಲ? ಆತ ನಿಜವಾಗಿಯೂ ಅದೃಶ್ಯನಾದದ್ದು ನಿಜವಾಗಿದ್ದರೆ, "ತಮ್ಮಾ ಹಾಗೆ ಮಾಡಬೇಡ. ದೇವರಾಣೆಗೂ ಹಾಗೆ ಮಾಡಬೇಡ" ಎಂದು ಕೂಗಿಕೊಂಡದ್ದು ಏಕೆ?

ಬಹುಶಃ ಇವೆಲ್ಲ ಚಿರರಹಸ್ಯಗಳಾಗಿಯೇ ಉಳಿಯುವಂತಹವು. ▲



ಇರಾನಿನ ರಾಯಭಾರಿಯೊಬ್ಬ ಷಹಜಹಾನನ ಆಸ್ಥಾನಕ್ಕೆ ಭೇಟಿಕೊಟ್ಟಾಗ, ಷಹಜಹಾನ್ ಆತನನ್ನು ಪ್ರಶ್ನಿಸಿದ: "ಇರಾನ್ ಮತ್ತು ಭಾರತ ಇವುಗಳಲ್ಲಿ ಯಾವುದು ಹೆಚ್ಚು ಸಂಪದ್‌ಭರಿತ ದೇಶ- ಹೇಳುವಿಯಾ?" ರಾಯಭಾರಿಗೆ ಕ್ಷಣಕಾಲ ಏನು ಹೇಳಬೇಕೆಂದು ತಿಳಿಯಲಿಲ್ಲ. ಕೆಲಕ್ಷಣ ಯೋಚಿಸಿ ನಂತರ ನುಡಿದ: "ಬಾದಷಹಾ, ಇರಾನ್ ಚೌತಿಯ ಚಂದ್ರನಂತೆ ಕಂಡರೆ ಭಾರತ ಪೂರ್ಣಿಮೆಯ ಚಂದ್ರನಂತೆ ಕಂಗೊಳಿಸುತ್ತಿದೆ."

ಷಹಜಹಾನ್ ದೊರೆಗೆ ರಾಯಭಾರಿಯ ಉತ್ತರದಿಂದ ಸಂತೋಷವಾಯಿತು. ಆದರೆ ಇದನ್ನು ಅರಿತ ಇರಾನಿನ ದೊರೆ ಕೋಪಗೊಂಡು ಈ ರಾಯಭಾರಿಯನ್ನು ಹಿಂದಕ್ಕೆ ಕರೆಸಿ, "ಹೀಗೆ ತೆಗಳಬಹುದೆ?" ಎಂದು ಪ್ರಶ್ನಿಸಿದ. ರಾಯಭಾರಿ ತನ್ನನ್ನು ಹೀಗೆ ಸಮರ್ಥಿಸಿಕೊಂಡ :

"ಸಾರ್ವಭೌಮ! ನನ್ನ ಹೋಲಿಕೆ ಸರಿಯಾಗಿದೆ. ನಮ್ಮ ದೇಶದ ಗೌರವಕ್ಕೆ ಧಕ್ಕೆಯುಂಟಾಗದಂತೆ ನಾನು ಉತ್ತರಿಸಿದ್ದೇನೆ. ಪೂರ್ಣಿಮೆಯ ಚಂದ್ರನೆಂದರೆ, ಆತ ಮುಂದೆ ದಿನದಿನಕ್ಕೂ ಕ್ಷಯಿಸಿ ಕೊನೆಗೊಂದು ದಿನ ಸಂಪೂರ್ಣವಾಗಿ ಇಲ್ಲದಂತಾಗುತ್ತಾನೆ—ಷಹಜಹಾನರ ಸಾಮ್ರಾಜ್ಯವೂ ಹಾಗೇನೆ. ಚೌತೀ ಚಂದ್ರ ದಿನದಿನ ಪ್ರವರ್ಧಮಾನಕ್ಕೆ ಬರುವಂತೆ ನಮ್ಮ ಸಾಮ್ರಾಜ್ಯವೂ ಬೆಳೆಯುವುದು ಎಂದೇ ನಾನು ಹಾಗೆ ಹೋಲಿಸಿದೆ."

—ಎಂ. ಎನ್. ಜಯಪ್ರಕಾಶ

ಇದುವೆ ಜೀವ ಇದು ಜೀವನ

ನಮ್ಮ ಕೆಲಸದಾಳು ಬಿಟ್ಟುಹೋಗಿ ಒಂದು ವಾರವಾಗಿತ್ತು. ನಾನೇ ಕೆಲಸ ಮಾಡಿಕೊಳ್ಳುವುದನ್ನು ಕಂಡಾಗಲೆಲ್ಲ ನಮ್ಮ ಮನೆಯ ಔಟ್‌ಹೌಸಿನಲ್ಲಿರುವ ತಾತನಿಗೆ ಏನೋ ಅನುಕಂಪ. "ಏನಮ್ಮ, ಯಾರೂ ಸಿಗಲಿಲ್ಲವೇ ಕೆಲಸದೋರು?" ಎಂದು ಕೇಳುತ್ತಿದ್ದರು.

ಅಂದು ಹಿತ್ತಲಲ್ಲಿ ಬಟ್ಟೆ ಒಣಹಾಕಿ, ತಾತನೊಡನೆ ನನ್ನ ಮಾಮೂಲು ಸಂಭಾಷಣೆಯನ್ನು ಮುಗಿಸಿ ಒಳಗೆ ಬಂದಾಗ, ನನ್ನ ಸೋದರತ್ತೆಯ ಮಗ ಪ್ರಕಾಶ ಇದ್ದಕ್ಕಿದ್ದ ಹಾಗೆ ಊರಿನಿಂದ ಬಂದಿಳಿದ. ಹೆಸರಿಗೆ ಪ್ರಕಾಶ ಅಷ್ಟೆ. ಬಣ್ಣ ಅಚ್ಚಗಪ್ಪು. ಮುಟ್ಟಿದರೆ ಕೈಗೆ ಮೆತ್ತುತ್ತೆ ಅಂತಾರಲ್ಲ ಹಾಗೆ. ಆದರೆ ಪ್ರಚಂಡ ಬುದ್ಧಿ. ಎಲ್ಲ ಪರೀಕ್ಷೆಗಳಲ್ಲೂ ರ‍್ಯಾಂಕ್ ಗಳಿಸಿದ್ದಾನೆ. ಈಗ ಯಾವುದೋ ಭಾರಿ ಹುದ್ದೆಗೆ interviewಗಾಗಿ ಬಂದಿರುವುದಾಗಿ ತಿಳಿಸಿ, "ಸಾಕಮ್ಮ ಈ ಬಸ್ ಪ್ರಯಾಣ. ಬಟ್ಟೆಯೆಲ್ಲಾ ಕುಲಗೆಟ್ಟೋಯ್ತು. ಇವೆರಡನ್ನೂ ಒಗೆದು ಸ್ನಾನ ಮಾಡಿದ ಮೇಲೇ ಎರಡನೇ ಕೆಲಸ," ಎಂದು ಪ್ಯಾಂಟ್, ಷರಟುಗಳನ್ನು ಕಳಚಿ ಒಂದು ಮುಂಡು ಸುತ್ತಿದ. ನಾನವನಿಗೆ ಸಾಬೂನು ಬಕೇಟು ಎರಡನ್ನೂ ಕೊಟ್ಟು ಹಿತ್ತಲ ಕಡೆ ನಲ್ಲಿ ತೋರಿಸಿ ಒಳಗೆ ಬಂದು ಊಟದ ತಯಾರಿಗೆ ತೊಡಗುತ್ತಿದ್ದಂತೆ, ತಾತನ ಮನೆಯ ಬಾಗಿಲು ತೆಗೆದು ತಾತ ಅವನೊಡನೆ ಸಂಭಾಷಿಸುವುದು ಕೇಳಬಂದಿತು.

"ಯಾರಪ್ಪ? ಹೊಸದಾಗಿ ಇಲ್ಲಿಗೆ ಕೆಲಸಕ್ಕೆ ಬಂದಿದ್ದೀಯಾ?"

"ಹೌದು ಸ್ವಾಮಿ."

"ಸಂಬಳ ಎಷ್ಟು ಗೊತ್ತುಮಾಡಿದ್ದಾರೆ?"

"ಅದಿನ್ನೂ ಗೊತ್ತಿಲ್ಲ ಸ್ವಾಮಿ."

"ಗೊತ್ತಿಲ್ವಾ? ಪರವಾಗಿಲ್ಲ ಬಿಡು. ಕೈ ಬಾಯಿ ಎರಡೂ ಶುದ್ಧವಾಗಿಟ್ಟುಕೊಂಡು ದಣಿ ಮೆಚ್ಚೋಹಾಗೆ ಕೆಲಸ ಮಾಡಿದರೆ ನಿನ್ನ ಸಂಬಳಕ್ಕೇನೂ ಮೋಸವಿಲ್ಲ. ಏನಂತೀ?" ಎಂದು ತಾತ ನಶ್ಯ ಏರಿಸಿ ಬಾಗಿಲು ಮುಚ್ಚಿದ ಶಬ್ದ ಕೇಳಿಸಿತು.

ನಾನು ಹೊರಗೆ .ಬಂದು ಅನುತಾಪದಿಂದ, "ಅವರಿಗೆ ಗೊತ್ತಾಗಲಿಲ್ಲ, ಪ್ರಕಾಶ. ಆದರೆ ನೀನು ನಿಜ ಹೇಳಬಹುದಾಗಿತ್ತು," ಎನ್ನುತ್ತಲೇ, ಪ್ರಕಾಶ ನಕ್ಕು, "ನಾನು ಹೊಸದಾಗಿ ಕೆಲಸಕ್ಕೆ ಬಂದಿರೋದು, ಸಂಬಳ ಗೊತ್ತಿಲ್ಲದಿರುವುದು, ಎರಡೂ ನಿಜಾನೇ ತಾನೇ? ಇನ್ನು ತಾತ ಹೇಳಿದರಲ್ಲ, ಪ್ರಮಾಣಿಕತೆ ಬೇಕು ಮನುಷ್ಯನೀಗೆಂತ; ಮುತ್ತಿನಂಥ ಮಾತು ನಾಳೆ ನಾನು ಜೀವನದಲ್ಲಿ ಕ್ರಮಿಸಲಿರುವ ಹೊಸ ದಾರಿಗೆ ದಾರಿ ದೀಪ," ಎಂದಾಗ ಈ ಹುಡುಗನ ಭವಿಷ್ಯ ಖಂಡಿತ ಚೆನ್ನಾಗಿದೆ ಎಂದು ಮನಸಿನಲ್ಲೇ ಅಂದುಕೊಂಡೆ.

—ಬ್ರಹ್ಮಾಣಿ ಪಿ ರಾವ್

ಅಂದು ನಾನು ಬೆಂಗಳೂರಿಗೆ, ಮದರಾಸಿನಿಂದ ರಾತ್ರೆ ಹೊರಡುವ ಮೇಲ್‌ಗಾಡಿಯಲ್ಲಿ ಅದು ಹೊರಡುವ ಹೊತ್ತಿಗೆ ಅವಸರದಿಂದ ಹತ್ತಿದೆ. ಕುಳಿತು ಸುತ್ತಲೂ ನೋಡುವಾಗ ನಮ್ಮ ಕಂಪಾರ್ಟ್‌ಮೆಂಟಿನಲ್ಲಿ ಮೇಲೆ ಸಾಮಾನು ಇಡುವ ಜಾಗದಲ್ಲಿ ಭಾರೀ ಆಸಾಮಿ ಒಂದು ಮಲಗಿತ್ತು. ರೈಲು ರಭಸದಿಂದ ಸಾಗುತ್ತಿದ್ದಂತೆ ಕೂತಿದ್ದ ಜಾಗದಲ್ಲೇ ಎಲ್ಲರೂ ತೂಕಡಿಸುತ್ತಿದ್ದರು. ನನಗೆ ಮಾತ್ರ ನಿದ್ದೆ ಬರಲಿಲ್ಲ.

ರಾತ್ರೆ ೧೨ ರ ಸಮಯ. ರೈಲು ಯ ವುದೋ ನಿಲ್ದಾಣದಿಂದ ಸರಿಯುಡಗುತ್ತಲೇ ಯುವಕನೊಬ್ಬನು ಬಾಗಿಲು ಹಿಡಿದುಕೊಂಡು ಪ್ಲಾಟ್‌ಫಾರಂ ಮೇಲೆ ಓಡುತ್ತಾ, "ಸ್ವಾಮೀ, ಆ ಸೂಟ್‌ಕೇಸ್ ಸ್ವಲ್ಪ ಕೊಟ್ಟುಬಿಡಿ" ಎಂದು ಕೂಗುತ್ತಿದ್ದನು. ಕಿಡಕಿಯ ಬಳಿ ತೂಕಡಿಸುತ್ತಿದ್ದವರಲ್ಲಿ ಒಬ್ಬ ತರುಣ ಗಡಬಡಿಸಿ ಎದ್ದು ಎದುರಿಗಿದ್ದ ಸೂಟ್‌ಕೇಸನ್ನು ತೆಗೆದು ಆತನಿಗೆ ಕೊಟ್ಟ. ಆತ ಓಡುತ್ತಿದ್ದ ರೈಲು ಬಿಟ್ಟ ಕೃತಜ್ಞತೆಯಿಂದ ಕೈಬೀಸುತ್ತ ಕಣ್ಮರೆಯಾದನು. ನನಗೆ ಪುನಃ ಜೊಂಪು ಹತ್ತಿತು. ಎಚ್ಚರವಾದಾಗ ರೈಲು ಬೆಂಗಳೂರಿಗೆ ಬಂದಿತ್ತು. ಮೇಲೆ ಮಲಗಿದ್ದ ಆಸಾಮಿ ಎದ್ದು ಆ ಕಡೆ ಈ ಕಡೆ ನೋಡುತ್ತ, "ನನ್ನ ಸೂಟ್‌ಕೇಸ್, ನನ್ನ ಸೂಟ್‌ಕೇಸ್!" ಎಂದು ಕೂಗಾಡಹತ್ತಿದ. ಕಿಡಿಕಿಯ ಬಳಿ ಕೂತಿದ್ದ ತರುಣನ ಮುಖದಲ್ಲಿ ಗಾಬರಿ ಮೂಡಿತು. ಆತ ಸುತ್ತಲೂ ಕಣ್ಣು ಹಾಯಿಸಿದ. ಯಾರೂ ಏನನ್ನೂ ಗಮನಿಸಿದ್ದಂತೆ ಕಾಣಲಿಲ್ಲ. ಎಲ್ಲರೂ ಸೇರಿ ಸೂಟ್‌ಕೇಸನ್ನು ಹುಡುಕುತ್ತಿದ್ದ ಹಾಗೆ ಆತನ ಕಣ್ಣು ನನ್ನ ಮುಖದ ಮೇಲೆ ನಿಂತಿತು. ಅದರಲ್ಲಿ ದೈನ್ಯವಿತ್ತು. ನಾನು ಪಿಟ್ಟೆನ್ನಲಿಲ್ಲ. ಗಲಾಟೆ ಸ್ವಲ್ಪ ಶಾಂತವಾದ ಮೇಲೆ ನಾನು ಸೂಟ್‌ಕೇಸ್ ಕಳೆದುಕೊಂಡವನಿಗೆ ಸಹಾನುಭೂತಿ ವ್ಯಕ್ತಪಡಿಸಿ ಕೆಳಗಿಳಿದೆ. ನನ್ನ ಹಿಂದೆಯೇ ಆ ತರುಣನೂ ಇಳಿದು ಬಂದು, "ಸ್ವಾಮೀ, ನನ್ನನ್ನು ಬದುಕಿಸಿದಿರಿ. ನಿಮ್ಮ ಉಪಕಾರ ಮರೆಯಲಾರೆ. ರೈಲಿನಲ್ಲಿ ಇಂಥಾ ಕಳ್ಳರೂ ಇದ್ದಾರೆಂದು ನನಗೆ ಗೊತ್ತಿರಲಿಲ್ಲ," ಎಂದ.

—ಟಿ. ಆರ್. ನಾಗರಾಜು

ನಮ್ಮ ತಂದೆಯುವರದು ಸ್ವಲ್ಪ ಹಾಸ್ಯ ಪ್ರಕೃತಿ. ಅದರಲ್ಲೂ ನಮ್ಮ ತಾಯಿಯುವರನ್ನು ಅವಕಾಶ ಸಿಕ್ಕಿದಾಗಲೆಲ್ಲ ಛೇಡಿಸುವುದೆಂದರೆ ಅವರಿಗೆ ಮಹದಾನಂದ. ಅಂದು ನಮ್ಮ ಮನೆಗೆ ಅಪರೂಪದ ನೆಂಟರು ಬಂದಿದ್ದರು. ಮನೆಯಲ್ಲೆಲ್ಲಾ ಓಡಾಡುತ್ತಿದ್ದ ನನ್ನ ಚಿಕ್ಕ ತಂಗಿಯ ಚಟುವಟಿಕೆಗಳನ್ನು ಗಮನಿಸಿದ ಅವರು ನಮ್ಮ ತಂದೆಯುವರನ್ನು ಕುರಿತು, "ಪರವಾಗಿಲ್ಲ! ನಿಮ್ಮ ಮಗು, ಬಹಳ ಚೂಟಿಯಾಗಿದೆ. ಅಂದ ಹಾಗೆ ಮುಖಲಕ್ಷಣ ಕೂಡ ನಿಮ್ಮ ಹಾಗೆ," ಎಂದರು. ಅವರ ಮಾತನ್ನು ಅನುಮೋದಿಸುತ್ತ ತಂದೆಯುವರು, "ಹುಂ! ಕಣ್ಣು, ಕಿವಿ, ಮೂಗು, ಬಣ್ಣ ಎಲ್ಲಾ ನನ್ನ ಹಾಗೆ. ಆದರೆ—" ಎಂದು ಅರ್ಧಕ್ಕೆ ನಿಲ್ಲಿಸಿದಾಗ ಅತಿಥಿಗಳು ಆಶ್ಚರ್ಯದಿಂದ— "ಯಾಕೆ ರಾಯರೆ? 'ಆದರೆ,' ಅಂತ ಅರ್ಧಕ್ಕೆ ನಿಲ್ಲಿಸಿಬಿಟ್ಟಿರಿ!" ಎಂದರು 'ಆದರೆ' ಅಂತ ಅರ್ಧಕ್ಕೆ ನಿಲ್ಲಿಸಿದ್ದ ನಮ್ಮ ತಂದೆ ಅಲ್ಲೇ ನಿಂತಿದ್ದ ನಮ್ಮ ತಾಯಿಯುವರ ಕಡೆಗೆ ಓರೆ ದೃಷ್ಟಿ ಬೀರಿ, ತಮ್ಮ ಮಾತನ್ನು ಮುಂದುವರಿಸಿ ಹೇಳಿದರು: "ಬಾಯಿ ಮಾತ್ರ ಅವರಮ್ಮನ ಹಾಗೆ!"

—ಎಂ. ಕೆ. ಮಂಜುನಾಥ್

ಬಹಳ ವರ್ಷಗಳ ನಂತರ ಚರ್ಮರೋಗ ತಜ್ಞನಾಗಿ ತನ್ನೂರಿಗೆ ಬಂದ ಡಾಕ್ಟರನಿಗೆ ಅವನ ಮಿತ್ರ ಕೇಳಿದ: "ಎಲ್ಲಾ ಬಿಟ್ಟು ಈ ಕ್ಷೇತ್ರವನ್ನು ಯಾಕಯ್ಯಾ ಆರಿಸಿಕೊಂಡೆ?"

"ಮೂರು ಕಾರಣಗಳಿಗಾಗಿ," ಎಂದನಾ ಡಾಕ್ಟರ್, "ಒಂದು, ರೋಗಿಗಳು ಬಂದು ಮಧ್ಯರಾತ್ರಿ ನನ್ನನ್ನು ಎಬ್ಬಿಸುವುದಿಲ್ಲ; ಎರಡು, ಅವರು ಸಾಯುವುದಿಲ್ಲ; ಮೂರು, ಅವರಿಗೆ ಪೂರ್ತಿ ಗುಣವಾಗುವುದಿಲ್ಲ."



ಸುಸ್ತು

ಆನಂದ ಟಿ. ಪೂಜಾರಿ

ಈಗ ತುಂಬಾ ಕ್ಷೀಣವಾಯಿತು—ಮಳೆ. ರಸ್ತೆಯ ದೀಪದ ಬೆಳಕಿಗೆ ಮಳೆಯ ಹನಿ ಉಣ್ಣೆಯ ಎಳೆಯಂತೆ ತೂಗಾಡತೊಡಗಿದಾಗ ಅವನು ಮನೆಯ ಕಡೆ ಬರುತ್ತಿದ್ದ. ಟವೆಲನ್ನು ಕಿಸೆಯಿಂದ ಹೊರತೆಗೆದು ತಲೆ ಒರಸಿಕೊಳ್ಳುವ ಎಂದರೆ ಅದೂ ಒದ್ದೆ. ದಾದರಿನಲ್ಲಿ ಟ್ರೇನು ಎರಡು ಗಂಟೆಗೇನೆ ನಿಂತಿದೆಯಂತೆ—ವರ್ತಮಾನ. ಪರೇಲಿನಲ್ಲಿ, ಚೀಚ್‌ಪೋಕ್ಲಿಯಲ್ಲಿ, ಸಯಾನ್‌ನಲ್ಲಿ ಎಷ್ಟೆಷ್ಟು ನೀರು ನಿಂತಿದ್ದಿರಬಹುದೆಂದು ಎಣಿಕೆ ಹಾಕುತ್ತಲೇ ಅವನು ಇಲ್ಲಿಯವರೆಗೆ ಬಂದುಬಿಟ್ಟ. ಐದೂವರೆಗೆ ಮಳೆ ಸುರುವಾಗಿತ್ತು. ಅದೂ ದಬ್ಬ ಣಿಡಷ್ಟು ಜೂಪು, ದಪ್ಪ. ಭೋ ಎಂದು ಸುರಿದ ಮಳೆ ಒಂಭತ್ತರ ವರೆಗೂ ಮೌನಿಯಾಗುವ ಲಕ್ಷಣ ಇಲ್ಲ. ಈಗ ಮಾತ್ರ ಬಿಟ್ಟುಕೊಟ್ಟಿತು. [illegible] ಬಿಟ್ಟು, ವಿಕ್ಟೋರಿಯಾ ಟರ್ಮಿನಸ್ಸಿನ [illegible] ನುಗ್ಗಾಟಕ್ಕೆ ಮೈ ಕೊಟ್ಟು, ಪ್ಯಾಂಟಿಗೆ, ಅಷ್ಟಷ್ಟು ಕೆಸರು ಲೇಪಿಸಿಕೊಂಡು, ಗಾಡಿ ಹಿಡಿದು, ಅವನ ಮಿತ್ರನ ಬಳಿಗೆ ಹೋಗಿ, ಹಣ ಕೊಟ್ಟು, ಅವನು ಅಲ್ಲೇ ಮಲಗೆಂದು ಎಷ್ಟು ಹಠ ಮಾಡಿದರೂ ಕೇಳದೆ, ಬಸ್ಸು ಹಿಡಿದು, ಭಾರ ವಾಗಿ ಇಳಿದು, ಮನೆಯ ಕಡೆ ಬಂದಾಗ ಅವನ ಅವಸ್ಥೆ ನನೆದ ಬಟ್ಟೆಯಂತಾಗಿತ್ತು. ಗಮ್ ಬೂಟ್ಸಿನೊಳಗೆ ವೈತರಣಿ ಹರಿಯುತಿತ್ತು. ಅಂಗಿ–ಪ್ಯಾಂಟುಗಳ ಚಿಂತೆ ಸುರುವಾದಾಗ ಪೆಟ್ಟಿಗೆ ಯೊಳಗೆ ಇನ್ನೂ ಮೂರು ಫ್ರೆಶ್ ಜೊತೆಗಳು ಇವೆಯೆಂದಾಯ್ತು. ಸುತ್ತಣದ ಹವೆಯಂತೆ ಮನಸ್ಸೂ ತಂಪಾಗಿತ್ತು. ಸಂಬಳ ಆಗಿದ್ದ ಇತರ ದಿನಗಳಂತೆ ಇಂದೂ ಅವನು ಉಲ್ಲಾಸದಲ್ಲಿದ್ದ. ಮನಸ್ಸೂ ಹಾಗೇ ಅವನ ನಡಿಗೆ, ನಗು, ಪ್ರಕೃತಿಯೂ.

ಫಕ್ಕನೆ ಕೀಯ ನೆನಪಾಯಿತು. ಪ್ಯಾಂಟಿನ ಕಿಸೆಗೆ ಕೈಹಾಕಿದಾಗ ಅದು ಅಲ್ಲೇ ಒದ್ದೆಯಾಗಿ

ಮಂಜುಗಡ್ಡೆಯಂತೆ ಮುದುಡಿತ್ತು.

ಗಂಟೆ ಹೆಚ್ಚಾಗಿಲ್ಲ. ಬರೇ ಹತ್ತು. ಜೈ ಚಂದ್ ಟೆರೇಸಿನ ಮರದ ಮೆಟ್ಟಲೇರಿ ಬಾಲ್ಕನಿಯ ಕತ್ತಲಲ್ಲಿ ಗೋಡೆಗೆ ಕೈ ಹರಡಿಕೊಂಡು ಒಂದೊಂದೇ ರೂಮನ್ನು ಎಣಿಸುತ್ತಾ ತನ್ನ ರೂಮಿನ ಬಾಗಿಲ ಎದುರಿಗೆ ಬಂದು ನಿಂತಾಗ ಅವನ ಮನಸ್ಸು, ದೇಹ ಅಯ್ಯಮ್ಮ ಎಂದವು. ನೆರೆಯ ರೂಮುಗಳ ಬಾಗಿಲೆಲ್ಲಾ ಮುಚ್ಚಿದ್ದಾಗ ಬಾಲ್ಕನಿಯಲ್ಲಿ ಕಡುಕತ್ತಲೆ. ಕೀಯನ್ನು ಕಿಸೆಯಿಂದ ಹೊರತೆಗೆದವನು ಪುನಃ ಕಟಾಂಜನದ ಬದಿಯಲ್ಲಿ ನಿಂತು, ಕೆಳಗೆ ಗಲ್ಲಿಯ ಕಡೆಗೆ ನೋಡುತ್ತಾ ನಿಂತುಬಿಟ್ಟ. ಮಳೆ ಮತ್ತೆ ಹೊಡೆಯತೊಡಗಿತು. ಬಾಗಿಲು ತೆರೆಯದೆಯೇ ಹಾಗೆಯೇ ನಿಂತು ಎದುರಿನ ಕಟ್ಟಡದ ಕಡೆ ನೋಡುತ್ತಿದ್ದಾಗ ತನ್ನ ಬಳಿಯಿಂದ ಯಾರೋ ಹಾಯ್ದಂತೆ ಕಂಡಿತು. ನೆರೆಯವ--ಅವನೂ ಇವನಂತೆ ಕಟಾಂಜನಕ್ಕೆ ಕೈ ಊರಿ ನೋಡತೊಡಗಿದ. ಇವನ ಮೈಯಲ್ಲಿ ಚಳಿಯ ಛಳಕು ಹರಿಯಿತು. ಕೂಡಲೇ ಬೀಗ ತೆಗೆದು ಒಳಗೆ ಬಂದು, ಲೈಟು ಹಾಕಿ, ಬಾಗಿಲು ಜಡಿದ. ಒಂದು ನಿಮಿಷ ಮೌನಿಯಾಗಿ ತನ್ನ ಕೋಣೆಯನ್ನು ನೋಡಿ, ಅದೇ ಗೋಡೆಯ ಮೇಲಿದ್ದ ಬಾತ್ ರೂಮಿನ ದೀಪದ ಗುಂಡಿಯನ್ನು ಒತ್ತಿ, ಒಳ ಕೋಣೆಗೆ ನಡೆದ. ಅಂಗಿ-ಪ್ಯಾಂಟುಗಳ ಒಳಗೆ ಶೀತಲ ಗಾಳಿ ಸುಳಿಯುತ್ತಿತ್ತು. ಪ್ಯಾಂಟಿನ ಕಿಸೆಗೆ ಕೈಹಾಕಿ ಪರ್ಸ್ ತೆಗೆದು ಪೆಟ್ಟಿಗೆಯ ಮೇಲಿಟ್ಟು ಪೆನ್ನು, ಕಾಗದ, ಟವೆಲುಗಳನ್ನೆಲ್ಲಾ ತೆಗೆದು ಅದರ ಒಟ್ಟಿಗೇನೆ ಇಟ್ಟು, ಮತ್ತೊಮ್ಮೆ ಎಲ್ಲಾ ಕಿಸೆಗಳನ್ನೂ ತಡವಿ, ಬಟ್ಟೆ ಕಳಚತೊಡಗಿದ. ಇಂದು ಸಂಬಳದ ದಿನ. ಹೊಟ್ಟೆ ಬಿಗಿಯಾಗಿ ಬೆಚ್ಚಗಾಗಿತ್ತು. ಮನಸ್ಸೂ ಉಲ್ಲಾಸ. ಒದ್ದೆ ಪ್ಯಾಂಟು-ಶರ್ಟುಗಳನ್ನು ಸ್ನಾನದ ಮನೆಯ ಗಳಕ್ಕೆ ಎಸೆದು, ಇದರ ಆರೈಕೆ ನಾಳೆ ಮಾಡುವಾ ಎಂದು ಮುಖಕ್ಕೆ, ಕಾಲಿಗೆ ಒಂದಿನಿತು ನೀರನ್ನು ತಾಗಿಸಿ, ಸ್ನಾನದ ಆಲೋಚನೆ ಬದಿಗಿಟ್ಟು, ಬಾಗಿಲು ಮುಚ್ಚಿ ಒಂದು ಬೈರಾಸು ಹೊದೆದುಕೊಂಡು ಮಂಚದ ಮೇಲೆ ಕುಳಿತು ಮೌನಿಯಾದ.

ಇನ್ನೂ ಅವನ ಕೆಲಸ ತುಂಬಾ ಇದೆ. ತಾಯಿಗೆ ಕಳಿಸುವ ಹಣವನ್ನು ಎಣಿಸಿ ಬೇರೆ ಇಟ್ಟು, ಅದರೊಟ್ಟಿಗೆ ಮನಿಯಾರ್ಡರ್ ಫಾರ್ಮನ್ನು ತುಂಬಿ, ನಾಳೆ ಬೆಳಿಗ್ಗೆ ಆಫೀಸಿಗೆ ಹೋಗುವ ಮೊದಲು ಕಳಿಸಿಬಿಡಬೇಕು ಎಂದು ಆಲೋಚಿಸಿದ. ಮತ್ತೆ ಊಟದ ಹೋಟೇಲಿನ ಲೆಕ್ಕ-ಪೀಗೆಲ್ಲಾ ಇದೆ. ಪಾಕೀಟಿನಿಂದ ಐವತ್ತು ರೂಪಾಯಿ ಮೊದಲೇ ಅವನ ಮಿತ್ರನಲ್ಲಿಗೆ ಹೋಗಿದೆ. ಹೋದಸಲ ಅವನಿಂದ ಅಷ್ಟು ಸಾಲ ತೆಗೆದುಕೊಂಡಿದ್ದ. ಅದಿರಲಿ. ಆ ಹಣದ ಚಿಂತೆಯಲ್ಲೇ ಅವನ ತಲೆ ಕೆಟ್ಟು ಹೋಗುತ್ತದೆ. ನಾಲ್ಕಾರು ಮಂದಿಯ ಬಿಡಿಸಾಲ ಕೊಡುವುದೂ ಇದೆ. ಅದನ್ನು ದೂಡಿದರೂ ಸಾಗುತ್ತದೆ-ಎನ್ನುವ ಯೋಚನೆ.

ಟವೆಲ್ಲನ್ನು ಮಂಚದ ಸರಳಿಗೆ ಹಾಕಿ, ಪೆನ್ನು, ಕಾಗದ, ಪಾಕೀಟು ತೆಗೆದ. ನಾಲ್ಕುನೂರರಲ್ಲಿ ಐವತ್ತು ಹೋಗಿದೆ. ಮುನ್ನೂರಾಐವತ್ತು ಇದೆ. ತಾಯಿಗೆ ನೂರು-ತಿಂಗಳ ಲೆಕ್ಕದ್ದು. ಹೆಚ್ಚು ಕಳಿಸಬೇಕೆಂಬ ಕಾಗದವಿತ್ತು. ಸಾಧ್ಯವಿಲ್ಲ. ನೋಟುಗಳ ಕಂತೆ ತೆಗೆದು ಕೈಯನ್ನು ಪುನಃ ಒಂದು ಬಾರಿ ಬೈರಾಸಿಗೆ ಒರಸಿ, ಬೆರಳಿಗೆ ಬಾಯಿನೀರು ತಾಗಿಸಿ ಎಣಿಸಿ, ನೂರು ರೂಪಾಯಿಗಳನ್ನು ತೆಗೆದು ಪಾಕೀಟಿನ ಒಳಕವಚದಲ್ಲಿ ಇಟ್ಟ. ಫಕ್ಕನೆ ಫಾರ್ಮಿನ ನೆನಪಾಯ್ತು. ಅದೇ ಪೆಟ್ಟಿಗೆಯ ಒಳಗಡೆ ಕೈಹಾಕಿ ಫಾರ್ಮ್ ತೆಗೆದು ಮೇಲೆ ಇಟ್ಟ. ಇನ್ನು ಉಳಿದುದರಲ್ಲಿ ಬಾಡಿಗೆ, ಊಟದ ಬಿಲ್ಲು, ಹೊಸ ಅಂಗಿಯೊಂದರ ಖರೀದಿ, ಮುಗಿದ ಟೂತ್‌ಪೇಸ್ಟ್, ಬ್ಲೇಡ್, ಪೌಡರ್, ಕಾಲು ಚೀಲ...ಇನ್ನಿತರ ಪೂರೈಕೆ. ಕಾಗದದಲ್ಲಿ ಈ ರೀತಿ ಲೆಕ್ಕ ಹಾಕುತ್ತಾ ಇರುವಾಗ ಸಮಯದ ನೆನಪಾಯಿತು. ಗಂಟೆ ಹನ್ನೊಂದಾಗಿದೆ- ಫಾರ್ಮು ತೆಗೆದು ಬರೆಯತೊಡಗಿದ. ಬಳಿಕ ಕೆಳಗಿರುವ ಖಾಲಿ ಜಾಗದಲ್ಲಿ-ನಾನು ಸೌಖ್ಯ. ಮುಂಬಯಿ

ಯಲ್ಲಿ ತುಂಬಾ ಮಳೆ. ಬೇಗನೆ ಉತ್ತರ ಬರೆಯಿರಿ...ಕೆಳಗೆ—ಇತೀ ನಿಮ್ಮ ಮಗ ಸುಧಾಕರ.

ಮೆಟ್ರೋನಲ್ಲಿ ಎಡ್ವೆಂಚರರ್ ಪಿಕ್ಚರ್ ಬಂದಿದೆಯಂತೆ. ಆಫೀಸಿನಲ್ಲಿ ಯಾರೋ ಹೇಳಿದ ನೆನಪು. ಈಸ್ಟ್ವುಡ್ನ ಕೆಲಸ ಚೆನ್ನಾಗಿದೆಯಂತೆ. ಆರೂವರೆಯ ಶೋ—ನಾಳೆ—ನಿಶ್ಚಯವಾಯಿತು.

ಮೇಲೆದ್ದು, ನೈಟ್ ಪೈಜಾಮ ತೊಟ್ಟು ಒಂದು ಬಾರಿ ಕುರ್ಚಿಯ ಮೇಲೆ ಕುಳಿತು ಮೌನಿಯಾದ.

ಅವನ ಪ್ರಾಯ ಹೆಚ್ಚೆಂದರೆ ಇಪ್ಪತ್ತಾರು ದಾಟಿರದು. ಮೈಯೆಲ್ಲ ಕರಡಿಯ ರೋಮ. ಯೌವನದ ಕೆಂಪು ಚೈತನ್ಯ.

ಮಂಚದ ಮೇಲೆ ಗೋಡೆಯಲ್ಲಿ ಸಿಂಘಾಲನ ನೇಪಾಳಿ ಕನ್ಯೆಯ ಕೆಲೆಂಡರು. ಅದನ್ನು ದಿನಾಲೂ ನೋಡಿ ಮಲಗುತ್ತಾನೆ. ಇಂದೂ ಹಾಗೇ ಮೊಲೆ, ಸೊಂಟ ಇತ್ಯಾದಿ ಎಂದು...ಹತ್ತು ನಿಮಿಷ ನೋಡಿ ತನ್ನಷ್ಟಕ್ಕೆ ತುಟಿ ಚಪ್ಪರುವುದೂ ಇದೆ. ಅವನ ಸುತ್ತ ನಾಲ್ಕು ಗೋಡೆಗಳೂ ಭದ್ರ. ಬಾಗಿಲನ್ನು ಸರಿಯಾಗಿ ಜಡಿದಿದೆ. ಅವನೊಬ್ಬನೆ!

ಹೋದ ಸಲ ಅಲ್ಲ, ಅದರ ಮೊದಲ ಸಲ, ಊರಿಗೆ ಹೋದಾಗ ತಾಯಿ ಕೇಜಹಳ್ಳಿಗೆ ಅವನನ್ನು ಕರೆದುಕೊಂಡು ಹೋಗಿದ್ದಳು. ತಾಯಿಯ ಆಲೋಚನೆ ಬೇರೆಯಿತ್ತು ಎಂದು ಅವನಿಗೂ ಗೊತ್ತಿತ್ತು. ಕೆಲೆಂಡರು ಪಿಕ್ಚರ್, ಆಫೀಸಿನ ಹೆಣ್ಣುಗಳನ್ನು ನೋಡುವಾಗ ಅವನಿಗೆ ಆ ನೆನಪು ಬರುತ್ತದೆ—ದಿನಾಲು. ನಗುತ್ತಾನೆ. ಮಲಗಿದ ಮೇಲೂ ಅರ್ಧ ಗಂಟೆ ಅವನಿಗೆ ನಿದ್ದೆ ಹತ್ತುವುದಿಲ್ಲ. ಮಂಚದ ಉದ್ದಕ್ಕೆ ಕಾಲು ನೀಡಿ, ತಲೆದಿಂಬಿನಲ್ಲಿ ನೆಟ್ಟಗೆ ಮುಖ ಇಟ್ಟು ಅಂಗಾತ ಮಲಗಿದ. ಕಣ್ಣು ತೆರೆದೇ ಇದೆ. ಬೆರಳುದ್ದದ ವಸಂತಿಯ ಜಡೆಯನ್ನು ತೋರಿಸಲು ತಾಯಿ ಅವನನ್ನು ಕೇಜಹಳ್ಳಿಗೆ ಆ ಸಲ ಕರಕೊಂಡು ಹೋದದ್ದು. ಹುಡುಗಿ ಹತ್ತನೆಯಲ್ಲಿ ಕಲಿಯುತ್ತಿತ್ತು. ಆದರೆ ಏನು, ಎಷ್ಟೆಂದರೂ ಹಳ್ಳಿ ಗುಗ್ಗು. ಪಾದದ ಗಂಟಿನ ಮೇಲೆ ಸೀರೆ ಬಿಟ್ಟು—ಯ್ಯಾ—ಎಂದು ಬಾಯಗಲಿಸಿ ಬೊಂಬಾಯಿ ಇಡೀ ಅವನೊಡನೆ ತಿರುಗಾಡಿದರೆ ಆಯಿತೆ! ಅವನು ಎಷ್ಟೆಂದರೂ ಬೊಂಬಾಯಿಯವ. ಈ ಹುಡುಗಿ ಅಸ್ಸಾಮಿನ ಆದಿವಾಸಿಯಂತೆ ಗೇಟ್ವೇ ಆಫ್ ಇಂಡಿಯಾದ ಬಳಿ ಅವನ ಬಳಿ ನಿಂತು ಸಮುದ್ರ ನೋಡುವುದು......ನಾಚಿಕೆ......ಛೆ! ಹುಂ. ಎಷ್ಟೆಂದರೂ ಅಷ್ಟೆ. ಅವನಿಗೆ ಗುಜರಾತಿ ಹೆಣ್ಣುಗಳಲ್ಲಿ ಬಹಳ ಇಷ್ಟ. ಬಿಳಿಯ ತೊಗಲು ಇದೆ. ಪ್ರೀತಿ ಮಾಡುವ ರೀತಿ ಗೊತ್ತಿದೆ. ಮನೆ ತುಂಬ ಹಣ ಇದೆ. ಆ ಹೆಣ್ಣುಗಳ ಮೈ ಏನು! ಅವುಗಳ ಕಣ್ಣು, ಮುಖ, ತುಟಿ ಎಲ್ಲ ಕಡೆದಿಟ್ಟವುಗಳು. ಎಷ್ಟೊಂದು ಚೆಲುವು—ಸೊಂಟ—ಅಳತೆ! ಆ ನಡಿಗೆ. ಕಿವಿಯಲ್ಲಿ ಬಳೆಯಂತಹ ಉಂಗುರ......ದಿನ ಇದೆ. ಕಾದು ಇರುವ. ಇದೇ ರೂಮಿಗೆ ಬರ್ತಾಳೆ—ಬಾಗಿಲ ಬಳಿ ಒಬ್ಬಳು ಸುಂದರಿ—ಎಂದು ಎಣಿಸಿ ಸುಮ್ಮನಾದ. ನಿಲ್ಲಲಾರದ ನೆನಪಿನ ಸುಳಿ. ರಾತ್ರಿ ಮಲಗುವಾಗ ಮನಸ್ಸನ್ನಷ್ಟು ಅಲ್ಲೋಲಕಲ್ಲೋಲ ಮಾಡಿ ಓಡುತ್ತದೆ. ಅಂದ ಹಾಗೆ ಅಮ್ಮನಿಗೆ ಸೀರೆ ಒಂದು ಕಳಿಹಿಸುವ ಅಂದಾಜು ಮಾಡಿದ್ದೆನಲ್ಲಾ ಎಂದೆಣಿಸಿದ—ಉಳಿದ ನೆನಪುಗಳನ್ನು ಒತ್ತಿಟ್ಟು, ಫಕ್ಕನೆ ಏನೋ ಎನಿಸಿ ಪರ್ಸಿನ ಬಳಿಗೋಡಿ ಇನ್ನೂ ಇಪ್ಪತ್ತು ರೂಪಾಯಿ ತೆಗೆದು ಮುಂಚಿನ ನೂರು ರೂಪಾಯಿಯೊಟ್ಟಿಗೆ ಇಟ್ಟ.

ಮೊನ್ನೆ ಅವನ ಭಾವ—ನೀನು ಒಬ್ಬನೇ ಏಕೆ ಆ ಕೊಂಪೆಯಲ್ಲಿ ಇರುತ್ತೀಯಾ. ನನ್ನೊಟ್ಟಿಗೇನೆ ಇದ್ದುಬಿಡಬಾರದೇ—ಅಂದಿದ್ದ. ಆದರೆ ಅವನಿಗೆ ಅದೆಲ್ಲಾ ಖುಶಿ ಇಲ್ಲ. ಸ್ವಾತಂತ್ರ್ಯ, ಗೆಲವು ಇರುವ ಒಂದೇ ಒಂದು ಕೋಣೆ ತನಗೆ ಸಾಕು ಎಂದು. ಭಾವನಿಗೆ ನೂರು ಕಾರಣ ಹೇಳಿ ತಪ್ಪಿಸಿಕೊಂಡಿದ್ದ. ಅವನ ಅಕ್ಕನ ಗಂಡ—ಅವನ ಆ ಭಾವ. ಮಾಹೀಮ್ನಲ್ಲಿ ಇದ್ದಾನೆ. ಅಕ್ಕ, ಸುಧಾಕರ ಬಾ ಮಗು ಎಂದು ಪ್ರೀತಿಯಿಂದ ಕರೆದಿದ್ದಳು. ಅದಕ್ಕೂ ಅವನು ನಕಾರ ಮಾಡಿದ್ದ. ಅವನಿಗೆ ಅವನ ಈ

ಕೋಣೆಯೋ ಬಹಳ ಚೆಲುವು. ಆಫೀಸು ಬಿಟ್ಟು ಬಂದು ಬಾಗಿಲು ತೆರೆದು ಲೈಟು ಹಾಕಿ ಬಾಗಿಲು ಜಡಿದು ಮಂಚದಲ್ಲಿ ದೊಪ್ಪನೆ ಬೀಳುವುದು. ಎಷ್ಟು ಸುಖ! ಆ ಮಕ್ಕಳು. ಹೇಸಿಗೆ. ಐದು ಮಕ್ಕಳ ತಾಯಿ ಮಾಡಿದ ಅನ್ನ ಪದಾರ್ಥ. ನಿರ್ಮಲವಿಲ್ಲ–ಆರೋಗ್ಯವಿಲ್ಲ. ಹತ್ತು ಜನರೊಡನೆ ಮಾತು–ರಗಳೆ. ಇದನ್ನೆಲ್ಲಾ ಬೇಕಂತಲೇ ಅವನು ತಪ್ಪಿಸಿದ್ದು.

ಗಂಟೆ ಹನ್ನೆರಡಕ್ಕೆ ಹತ್ತಿರವಾಗಿದ್ದಿರಬೇಕು. ಫಕ್ಕನೆ ಅವನಿಗೆ ಬ್ಲೋ ಹಾಟ್ ಬ್ಲೋ ಕೋಲ್ಡ್ (Blow Hot Blow Cold) ಪಿಕ್ಚರಿನ ನಗ್ನ ನಾಯಿಕೆಯ ನೆನಪು ಬಂತು. ಇರೋಸಿನಲ್ಲಿ ಮೂರು ಸಲ ನೋಡಿದ್ದ. ಅದು ಯಾವಾಗಲೂ ನೆನಪು ಬರುತ್ತದೆ. ಅಡ್ಡ ಮಲಗಿ ತಲೆದಿಂಬನ್ನು ಅವಚಿ ಹಿಡಿದ. ಮನಸ್ಸೋ ತರಕಾರಿಯ ಬುಟ್ಟಿ. ಬಜಾರಿನ ಸರ್ವ ತರಕಾರಿ. ಬೇಡದ ಬೇಡದ ನೆನಪು. ಹುಡುಗಾಟ, ಹುಡುಕಾಟ. ಹೊರಗೆ ಗಾಳಿ ಜೋರಾಯಿತು. ಬಾಗಿಲೊಂದು ಬಾರಿ ಡಕ್ ಎಂದು ಶಬ್ದಮಾಡಿತು. ಮಳೆಗಾಲ. ಅವನಿಗೆ ಧೈರ್ಯವಿಲ್ಲವೆಂದೇನು ಇಲ್ಲ. ಆದರೆ ಒಬ್ಬನೇ ಅಲ್ಲವೇ. ಏಕಾಂಗಿ. ಸ್ವಲ್ಪ ಅಳುಕು. ಹೋದ ಸಲ ಅಲ್ಲವೇ ಗಿರ್‌ಗಾಂನಲ್ಲಿ ಐದು ಮಾಳಿಗೆಯ ಕಟ್ಟಡ ಬಿದ್ದು ಹದಿಮೂರು ಮಂದಿ ಚಟ್ನಿ ಆದುದು. ಅವನು ಪೇಪರಿನಲ್ಲಿ ಓದಿದ್ದ. ಅಲ್ಲಿಗೆ ಹೋಗಿ ನೋಡಿದ ಮೇಲೂ ಅವನಿಗೆ ಅಲ್ಲಿ ಸತ್ತವರ ಸಂಬಂಧಿಕರಿಗೆ ದುಃಖವಾದಷ್ಟು ದುಃಖವಾಗುತ್ತದೆಯೇ? ಇಲ್ಲ. ಹದಿಮೂರು ಸತ್ತಿತು, ಹದಿನಾಲ್ಕು ಸತ್ತಿತು—ಲೆಕ್ಕ ಅಷ್ಟೇ. ಸಂಜೆಯ ಬುಲೆಟಿನ್ ಪೇಪರಿನಲ್ಲಿ ದೊಡ್ಡ ಶಿರೋನಾಮೆ. Six people still under the debris ಎಂದು. ಅವನು ವೇದಾಂತಿಯ ನಗು ನಕ್ಕಿದ್ದ. ಪಾಪ! ಅಲ್ಲಿ ಮಲಗಿದ್ದ ಜನರು ನಾವು ನಾಳೆ ಬೆಳಿಗ್ಗೆ ಚಟ್ನಿಯಾಗುತ್ತೇವೆ, ನಮ್ಮ ಈ ಕಣ್ಣು ಮುಖ ತೊಡೆಯಲ್ಲಿ ಮಾಂಸ ಹೀಚಿದುದನ್ನು ನೂರು ಜನ ನೋಡಬರುತ್ತಾರೆ ಎಂದು ಎಣಿಸಿದ್ದರೆ? ಇಲ್ಲ. ಅವನು ನಕ್ಕುಬಿಟ್ಟ. ಇದರೊಟ್ಟಿಗೆ ಅವನ ಕಾಲೇಜುಮೇಟ್ ಜಯಂತ್ ಜೂಸ್‌ವಾಲಾ ಟ್ರೇನು ಹತ್ತುವಾಗ ಕಾಲು ಜಾರಿ ಸತ್ತುದೂ ನೆನಪು ಬಂತು. ಸಾವೆಂದರೆ ಏನಪ್ಪ—ಎಂದು ಅವನ ಹೃದಯ ತನ್ನಷ್ಟಕ್ಕೆ ಎಣಿಸಿತು. ನಮ್ಮ ಬಾಳೆಂದರೆ—ರಸ್ತೆಯಲ್ಲಿ ಹೋಗುವ ಮೋಟಾರು ಕಾರುಗಳ ಹಾಗೆ.

ಅವನಿಗೆ ಈಗ ಸ್ವಲ್ಪ ಜೊಂಪು ಹತ್ತುತ್ತಿದೆ. ಮನಸ್ಸಿಗೆ ಬೇನೆ ಆಗುವ ವಿಷಯ ನೆನಪಿಗೆ ಬಂದರೆ ಹೀಗೇನೆ. ಮುಖ ತುಂಬ ಗೆರೆಬಿದ್ದು ಕಣ್ಣು ಚಿಕ್ಕದಾಗುವುದು.

ಫಕ್ಕನೆ ಅವನಿಗೆ ನಾಳೆ ಯಾವ ಕಾಲುಚೀಲ ತೆಗೆದುಕೊಳ್ಳೋಣ ಎನ್ನುವ ಆಲೋಚನೆ. ಡಾನ್. ಅರವಿಂದ್. ಪರೋ. ಲಿಬರ್ಟಿ, ಕಮಲ್...ಡಾನ್ ಆದೀತು. ನಾಳೆ ಬೆಳಿಗ್ಗೆ ಏಳು ಗಂಟೆಗೆ ಎದ್ದವ ಸಿಗ್ನಲ್ ಟೂತ್‌ಪೇಸ್ಟ್, ಸ್ವಿಸ್ ಬ್ಲೇಡ್, ಡಾನ್ ಕಾಲುಚೀಲ...ಆಫೀಸಿಗೆ ನಾಳೆ ಲಿಬರ್ಟಿಯವರ ಕೆಂಪು ಚೌಕುಳಿಯ ಅಂಗಿ ತೊಟ್ಟು ಲೈಟ್ ಬ್ಲೂ ಪ್ಯಾಂಟು ಹಾಕಿಕೊಂಡು ಫ್ರೆಶ್ಶಾಗಿ ಹೋದರೆ ಕೇಳುವುದೇ ಬೇಡ. ಮೊದಲು ಫಿಲೋಮಿನಾ ಬಂದು ಲುಕಿಂಗ್ ನೈಸ್......ಲುಕಿಂಗ್ ನೈಸ್......ಮತ್ತೊಬ್ಬ ಪ್ರಭಾಕರ ಕುಂಟೆ ಇದ್ದಾನೆ. ಅವನಿಗೆ ದಿನದ ಸದಾ ವೇಳೆಯೂ ಹೊಟ್ಟೆಯಲ್ಲಿ ಬೆಂಕಿ. ಚೆನ್ನಾಗಿದೆ, ಚೆನ್ನಾಗಿದೆ ಎಂದು ಅಂಗಿಯ ಇಸ್ತ್ರಿ ಹೋಗುವ ವರೆಗೂ ಹೊಡೆದು ಬಿಡುತ್ತಾನೆ. ಅವನ ಕಣ್ಣರೆಪ್ಪೆ ಪೂರ್ಣ ಮುಚ್ಚಿ, ಒಳಗೆ ನಿದ್ದೆಯ ಅಮಲು ತುಂಬಿತ್ತು. ದೀರ್ಘ ಉಸಿರೆಳೆದು ನೆಟ್ಟಗೆ ಸುಖವಾಗಿ ಕಾಲು ನೀಡಿದ. ಅವನಿಗೆ ಈಗ ಸರಿಯಾಗಿ ನಿದ್ದೆ ಹತ್ತುತ್ತಾ ಇದೆ. ನಿಶ್ಶಬ್ದ. ಇಡೀ ಕೋಣೆಗೆ ಅವನೊಬ್ಬನೇ. ಮಾಹೀಮ್‌ನ ಭಾವನ ಮನೆಯಲ್ಲಿರುವಂತೆ ಮಕ್ಕಳ ಬೊಬ್ಬೆ, ನರಳಾಟ–ಏನೂ ಇಲ್ಲ. ಅವನದೇ ಕೋಣೆ. ಅವನೊಬ್ಬನೆ! ಪುನಃ ನಾಳೆ ಫಿಲೋಮಿನಾ... ಲುಕಿಂಗ್ ನೈಸ್...ಲುಕಿಂಗ್

ನೈಸ್...ಲುಕಿಂಗ್ ನೈಸ್...ಅವನ ಮೀಸೆಯ ಸುತ್ತ ಸಾಗರದಷ್ಟು ವಿಶಾಲ ನಗುವಿನ ಕಳೆ!

*

ಮಕ್ಕಳು ರಸ್ತೆಯ ಮತ್ತೊಂದು ಬದಿಯಲ್ಲಿ ನಿಂತು, ಹೋಗಿಬರುವ ಅಂಬುಲನ್ಸ್. ಫೈರ್ ಬ್ರಿಗೇಡ್‌ಗಳ ಎಣಿಕೆ ಮಾಡುತ್ತಿದ್ದರು. ನೋಡು, ಆರು ಬಂತು...ಏಳು ಬಂತು; ಕಟ್ಟಡ ಸಾಧಾರಣ ರಾತ್ರಿ ಒಂದೂವರೆ ಗಂಟೆಗೆ ಬಿದ್ದಿತ್ತು ಎಂದು ಪೇಪರಿನಲ್ಲಿ ಬಂದಿತ್ತು. ಶಬ್ದ ಕೇಳಿ ಪಕ್ಕದವರು ಅವರವರ ಮಾಳಿಗೆಗಳಿಂದ ಕೆಳಗಿಳಿದು ಬಂದಾಗ ಆ ಕಟ್ಟಡ ನೆಲಕ್ಕೆ ಕುಸಿದಿತ್ತಂತೆ. ಕಲ್ಲು, ಮರಗಳು ದೂರಕ್ಕೆ ಹಾರಿಬೀಳದೆ ಅಲ್ಲೇ ಸ್ಥಾನದಲ್ಲೇ ಗಕ್ಕನೆ ಕುಸಿದು ಬಿಳಿತವೆಯಾದ್ದರಿಂದ, ಗುಪ್ಪೆಯೊಳಗೆ ಇನ್ನೂ ಹಲವಾರು ಜೀವಗಳು ಇರಬಹುದೆಂದು ಪತ್ರಿಕೆಯವರ ಪ್ರಕಟನೆ. ಮಳೆ ಈಗಲೂ ನಿಂತಿಲ್ಲ. ಆಚೆ ಬಾಂದ್ರಾದಲ್ಲೋ ಖಾರಿನಲ್ಲೋ ಬೇರೊಂದು ಕಟ್ಟಡ ಬಿದ್ದಿದೆಯಂತೆ. ಪ್ರಾಣಹಾನಿ ಬರೇ ಒಂಭತ್ತಂತೆ. ಇಲ್ಲಿ ಇಷ್ಟರ ವರೆಗೇನೆ ಇಪ್ಪತ್ತೇಳು ಆಯಿತೆಂದು ಲೆಕ್ಕ. ಹಾಗೆ ಪೇಪರಿನಲ್ಲೂ ಬಂದಿತ್ತು. ರಾತ್ರಿ ಅಲ್ಲಿ ಮಲಗದಿದ್ದವರೇ ಬದುಕಿ ಉಳಿದದ್ದು. ಬಳಿಕ ಎಚ್ಚರವಿದ್ದು ಓಡಿದವರೂ ಕೆಲವರಿದ್ದರು. ಎಡಬದಿಯಲ್ಲಿ ಮೂರು ಮಾಳಿಗೆಗಳಲ್ಲೂ ಕೊನೆಯ ಒಂದೊಂದು ರೂಮು ಸ್ಥಿರವಾಗಿ ನಿಂತಿದೆಯೆಂದೂ ಆಯಿತು. ಏನು ಬೊಬ್ಬೆ! ಏನು ಅಳು! ಪೋಲೀಸರು ಮರಮುಟ್ಟು ಕಲ್ಲುಗಳನ್ನು ಸರಿಸಿ ಇನ್ನೂ ಒಂದೆರಡು ಜೀವಗಳನ್ನು ಹೊರತೆಗೆದು ಅಂಬುಲೆನ್ಸಿನ ಒಳಗೆ ಇಟ್ಟರು.

ಅವನನ್ನು ಹೊರತೆಗೆದರು. ಅಂಬುಲೆನ್ಸಿನ ಬಳಿಗೆ ಒಯ್ದಾಗ ಯಾರೋ ಬಳಿಯಲ್ಲಿ ಕ್ಷೀಣ ಸ್ವರದಲ್ಲಿ... ಹಾಯ್... ಸುಧಾಕರ್......ಡೆಡ್' ಎಂದರು. ಅವರಿಗೆ ಅವನ ಗುರುತು ಇದೆ. ಜಜ್ಜಿ ಹೋದ ಶರೀರವನ್ನು ಎತ್ತಿಕೊಂಡು ಅಂಬುಲೆನ್ಸಿನಲ್ಲಿ ಇಟ್ಟು ಪುನಃ ಮುರುಕಲು ಕುಪ್ಪೆಯ ಕಡೆ ಹೊರಟಾಗ ಪೋಲೀಸ್ ಅಫೀಸರನೊಬ್ಬ ಪತ್ರಿಕಾಕಾರನೊಬ್ಬನಿಗೆ ವರದಿ ನೀಡುತ್ತಿದ್ದ... ಐ ಥಿಂಕ್ ಸ್ಟಿಲ್ ದೇರ್ ಆರ್ ಸಮ್ ಅಂಡರ್ ದಿ ಡೆಬ್ರೀ.

ಅವನ ಕಟ್ಟಡ ಕುಸಿದಿದೆಯಾದ್ದರಿಂದ ಈಗ ಅದು ಮುರುಕಲು ಗುಪ್ಪೆ. ನಗರದಲ್ಲೆಲ್ಲಾ ಸುದ್ದಿ; ಜಯಚಂದ್ ಟೆರೇಸ್ ಕುಸಿದು ಬಿದ್ದಿದೆ... ಕುಸಿದು ಬಿದ್ದಿದೆ ಎಂದು. ▲

ಪತ್ರಿಕೆಯಲ್ಲಿ ಬಂದಿತ್ತು ಸುದ್ದಿ —

"ನಗರದ ಬಡಾವಣೆಯಲ್ಲಿ ಕಟ್ಟಲಾಗುತ್ತಿದ್ದ ನವೀನ ಮಾದರಿಯ ಆರು ಮನೆಗಳು ಇದ್ದಕ್ಕಿದ್ದಂತೆಯೇ ಕುಸಿದುಬಿದ್ದವು. ಮುಕ್ತಾಯದ ಹಂತದಲ್ಲಿದ್ದ ಆ ಮನೆಗಳು, ನಿನ್ನೆ ಮಧ್ಯರಾತ್ರಿ ಸುಮಾರು ಒಂದು ಘಂಟೆಗೆ ಭಾರೀ ಸಪ್ಪಳದೊಂದಿಗೆ ನೆಲಸಮವಾದವು. ಯಾರಿಗೂ ಅಪಾಯವಾಗಿಲ್ಲವೆಂದು ಅಧಿಕೃತವಾಗಿ ತಿಳಿದುಬಂದಿದೆ."

ತದೇಕ ದೃಷ್ಟಿಯಿಂದ ಅದೇ ಸುದ್ದಿಯನ್ನು ನೋಡುತ್ತಿದ್ದ ಸ್ಥಳೀಯ ಸಿವಿಲ್ ಇಂಜನಿಯರರಿಗೆ ಅವರ ಮಿತ್ರರೊಬ್ಬರು ನಗುತ್ತಾ ಪ್ರಶ್ನಿಸಿದರು:

"ಯಾಕೆ ಅಷ್ಟೊಂದು ನೋಡುತ್ತೀರಿ? ನೀವು ಅಥವಾ ನಿಮ್ಮ ಮಿತ್ರರಾದರೂ ಯೋಜನೆ ಹಾಕಿ ಕೊಟ್ಟಿದ್ದಿರಾ?"

"ಛೆ...ಛೆ...ಇಲ್ಲಾ," ತಲೆ ಅಲ್ಲಾಡಿಸಿದರು ಇಂಜಿನಿಯರರು.

"ಮತ್ತೆ?"

"ನಾನೂ ಅದನ್ನೇ ಯೋಚಿಸ್ತಾ ಇದ್ದೇನೆ. ನಾನಂತೂ ಯೋಜನೆ ಹಾಕಿ ಕೊಟ್ಟಿಲ್ಲಾ. ನನ್ನ ಮಿತ್ರರಾರೂ ಕೊಟ್ಟಿಲ್ಲಾ. ಆದರೂ ಅವು ಹೇಗೆ ಬಿದ್ದವೂ ಅಂತ?"

— ವಿ. ಎಂ. ಜೋಶಿ


ಅಭಿಮಾನ
ಹುಟ್ಟಿಸುವ
ಆನಂದಮಯ
ಸಿಗರೇಟ್!
Panama
20
ಪನಾಮಾ ಸಿಗರೇಟ್‌ಗಳು

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಅಪ್ರತಿಭ

(ಅ) ಸಾಧಾರಣ ಕವಿ (ಆ) ಹಿಂತಿರುಗದಿರುವ (ಇ) ಕುಂದಿದ (ಈ) ಏನೊಂದೂ ಹೊಳೆಯದ

೨. ತಡಕು

(ಅ) ಚೆನ್ನಾಗಿ ಥಳಿಸು (ಆ) ಪೊಳ್ಳು (ಇ) ತಡೆದು ನಿಲ್ಲಿಸು (ಈ) ಮುಳ್ಳಿನ ಬೇಲಿ

೩. ಹೊಸಕು

(ಅ) ತಾಜಾ (ಆ) ತಿಕ್ಕಿ ಹಾಕು (ಇ) ಅನುಭವವಿಲ್ಲದ (ಈ) ಹೊರಳಾಡು

೪. ಹತಪ್ರಭ

(ಅ) ತುಂಬಾ ತೇಜಸ್ವಿ (ಆ) ಹೆಡ್ಡ (ಇ) ಕಳೆಗುಂದಿದ (ಈ) ಕಣ್ಣು ಕುಕ್ಕದಂತಾದ

೫. ಅಕ್ರಮ

(ಅ) ಹೇಡಿತನ (ಆ) ಓಟ (ಇ) ನಿಯಮ ತಪ್ಪಿದ್ದು (ಈ) ಶೌರ್ಯ

೬. ಜನಾಂತಿಕ

(ಅ) ಯಮ (ಆ) ಜನರಿಗೆ ತಿಳಿಯದಂತೆ ಹೇಳಿದ (ಇ) ಎಲ್ಲರಿಗೂ ಗೊತ್ತಿರುವ (ಈ) ರಾಣೀವಾಸ

೭. ಸಮುದಾಯ

(ಅ) ಸಮೂಹ (ಆ) ರಾಜೀ ಪಂಚಾತಿಕೆ (ಇ) ಊಹೆ (ಈ) ಬೇಟೆ

೮. ಅಭುಂಜಿತ

(ಅ) ಹಿಂದೆ ಆಗದ (ಆ) ತುತ್ತು (ಇ) ಮನದಾಸೆ (ಈ) ಅನುಭವಿಸದ

೯. ಉನ್ಮತ್ತ

(ಅ) ತಲೆ ಕೆಟ್ಟವ (ಆ) ಯಾವ ನಿರ್ಬಂಧವೂ ಇಲ್ಲದ (ಇ) ದೇವತೆ (ಈ) ಒಳ್ಳೆಯ ಮುತ್ತು

೧೦. ಉಪಸಂಹಾರ

(ಅ) ಮುಗಿಸುವಿಕೆ (ಆ) ಸಾಯುವುದಕ್ಕೆ ಹತ್ತಿರ (ಇ) ಕಲೆಹಾಕುವುದು (ಈ) ಸಲಕರಣೆ

೧೧. ಉಲುಹು

(ಅ) ನೇಣು (ಆ) ಅಲುಗಾಟ (ಇ) ಶಬ್ದ (ಈ) ಸುರುಳಿ

೧೨. ಅನುವರ್ತಿ

(ಅ) ಶೂರ (ಆ) ಅರ್ಥಕ್ಕೆ ಸರಿಯಾದ ಮಾತು (ಇ) ಸುತ್ತಳತೆ (ಈ) ಅನುಸರಿಸುವವ

೧. ಅಪ್ರತಿಭ (ಈ) ಏನೊಂದೂ ಹೊಳೆಯದ, ಕಂಗೆಟ್ಟ; ನಾಚುಗುಳಿ; ದಿಟ್ಟನಲ್ಲದ; ಮುಖಹೇಡಿ. ಉದಾ—ಅವನ ಮಾತನ್ನು ಕೇಳಿ ಅಪ್ರತಿಭನಾದೆ. [ಸಂ. ಅ = ಇಲ್ಲ, ಪ್ರತಿಭಾ = ವಿಚಾರಗಳು ಹೊಳೆಯುವುದು]

೨. ತದಕು (ಅ) ಥಳಿಸು, ಕುಟ್ಟು, ಬಡಿ. ಉದಾ— ಚೆನ್ನಾಗಿ ತದಕಿದ ಮೇಲೆ ಬಾಯಿಬಿಟ್ಟ. [ಕನ್ನಡ, ತದೆ = ಬಡಿ + ತು]

೩. ಹೊಸಕು (ಅ) ತಿಕ್ಕಿಹಾಕು, ಒರೆದು ಹಾಕು; (ಹಗ್ಗದ ಹಾಗೆ) ಹುರಿಮಾಡಿ ತಿರುವು. ಉದಾ— ತಗಣೆಯ ಹಾಗೆ ಹೊಸಕಿಹಾಕಿಬಿಟ್ಟ. (ಕನ್ನಡ. ಹೊಸೆ = ತಿಕ್ಕು, ತಿರುವು + ಕು]

೪. ಹತಪ್ರಭ (ಇ) ಕಳೆಗುಂದಿದ, ನಿಸ್ತೇಜ. ಉದಾ— ಹೆಂಡತಿಯ ಮುಂದೆ ಹತಪ್ರಭನಂತೆ ಕಾಣುತ್ತಾನೆ. [ಸಂ. ಹತ = ಸತ್ತ, ಪ್ರಭಾ = ಬೆಳಕು, ಕಳೆ]

೫. ಅಕ್ರಮ (ಇ) ನಿಯಮ ತಪ್ಪಿದ್ದು; ಕ್ರಮವಿಲ್ಲದಿರುವುದು; ಅವ್ಯವಸ್ಥೆ; ಪಾಪ. ತಪ್ಪು. ಉದಾ— ಲೆಕ್ಕ ಪರಿಶೋಧಕರು ಅನೇಕ ಅಕ್ರಮಗಳನ್ನು ಕಂಡುಹಿಡಿದರು. [ಸಂ. ಅ = ಇಲ್ಲ, ಕ್ರಮ = ಹೆಜ್ಜೆ, ನಿಯಮ]

೬. ಜನಾಂತಿಕ (ಅ) ಜನರಿಗೆ ತಿಳಿಯದಂತೆ ನುಡಿದ, (ನಾಟಕದಲ್ಲಿ) ಎದುರಲ್ಲಿದ್ದ ಒಬ್ಬನಿಗೆ ಕೇಳದ ಇನ್ನೊಬ್ಬನಿಗೆ ಹೇಳುವ ಮಾತು; ಗೋಪ್ಯವಾಗಿ ನುಡಿದ. ಉದಾ— ಗಂಡಹೆಂಡತಿ ನಡುವೆ ಜನಾಂತಿಕ ಜಗಳ ನಡೆಯುತ್ತದೆ. [ಸಂ. ಜನ, ಅಂತಿಕ = ಗುಪ್ತ]

೭. ಸಮುದಾಯ (ಅ) ಸಮೂಹ, ರಾಶಿ, ಕೂಟ. ಉದಾ— ಸಮುದಾಯದ ಹಿತಕ್ಕಾಗಿ ಒಬ್ಬನ ಹಿತವನ್ನು ಬಲಿಕೊಡಬೇಕಾದೀತು. [ಸಂ.]

೮. ಅಭುಕ್ತ (ಈ) ಅನುಭವಿಸದ, ಭೋಗಿಸದ, ಉಪಯೋಗಿಸದೆ ಉಳಿದ. ಉದಾ— ಶಿಕ್ಷೆಯ ಅಭುಕ್ತ ಅವಧಿಯನ್ನು ರದ್ದು ಪಡಿಸಲಾಯಿತು; ಊಟ ಅಭುಕ್ತವಾಗಿಯೇ ಉಳಿಯಿತು. [ಸಂ. ಅ = ಇಲ್ಲ, ಭುಕ್ತ = ಉಂಡದ್ದು]

೯. ಉನ್ಮುಕ್ತ (ಅ) ಯಾವ ನಿರ್ಬಂಧವೂ ಇಲ್ಲದ, ತೆರವಾದ, ಅಡೆತಡೆ ಇಲ್ಲದ. ಉದಾ— ಕಮ್ಯೂನಿಜಂಗೆ ದಾರಿ ಉನ್ಮುಕ್ತವಾಗುತ್ತಿದೆ. [ಸಂ. ಉತ್ = ಮೇಲೆ, ಮುಕ್ತ = ಬಿಡುಗಡೆಯಾದ]

೧೦. ಉಪಸಂಹಾರ (ಅ) ಮುಗಿಸುವಿಕೆ, ಕೊನೆಗಾಣಿಸುವಿಕೆ, ಮುಕ್ತಾಯ ಮಾಡುವುದು; ಹಿಂದೆಗೆದುಕೊಳ್ಳುವುದು. ಉದಾ— ಭಾಷಣದ ಉಪಸಂಹಾರ ಮಾಡಿದನು; ಆಜ್ಞೆಯನ್ನು ಉಪಸಂಹಾರ ಮಾಡಿಕೊಂಡನು. [ಸಂ. ಉಪ = ಹತ್ತಿರ, ಸಂಹಾರ = ಸೇರಿಸಿಕೊಳ್ಳುವುದು]

೧೧. ಉಲುಹು (ಇ) ಶಬ್ದ, ಧ್ವನಿ, ಸ್ವರ. ಉದಾ— ಬೀದಿಯಲ್ಲಿ ಉಲುಹು ಕೇಳಿ ಎಚ್ಚತ್ತ. [ಕನ್ನಡ, ಉಲಿ = ಶಬ್ದ ಮಾಡು]

ಅನುವರ್ತಿ (ಈ) ಅನುಸರಿಸುವವ, ಅನುಯಾಯಿ, ಹಿಂದೆ ಹಿಂದೆ ಹೋಗುವವ. ಉದಾ.— ಅವಳು ಯಾವಾಗಲೂ ಗಂಡನ ಅನುವರ್ತಿ. [ಸಂ. ಅನು = ಹಿಂದಿನಿಂದ, ವರ್ತಿ = ಸಾಗುವ. ತಿರುಗುವ]

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಯನ್ನು ತಿಳಿಯಿರಿ

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

ಮೌಲಾಬಖ್ಷ್ ಮತ್ತು ಮಕ್ಕಳು

ನಾಯಿಕುನ್ನಿ, ಬೆಕ್ಕಿನ ಮರಿ, ಹಸುವಿನ ಕರುಗಳನ್ನು ಕಂಡರೆ ನಮಗೆ ಪ್ರೀತಿಯುಂಟಾಗುವುದಿಲ್ಲವೆ? ಹಾಗೆಯೇ, ಪ್ರಾಣಿಗಳಿಗೂ ಮನುಷ್ಯ ಮಕ್ಕಳನ್ನು ಕಂಡರೆ ಪ್ರೀತಿ ಅನ್ನಿಸುತ್ತದೆಯೇ? ದಿಲ್ಲಿ ಬಾದಶಹನ ಹತ್ತಿರವಿದ್ದ ಆನೆಯೊಂದರ ಕಥೆ ಕೇಳಿದರೆ ಕೆಲವು ಪ್ರಾಣಿಗಳಿಗಾದರೂ ಮನುಷ್ಯ ಮಕ್ಕಳ ಮೇಲೆ ಅತಿ ಪ್ರೀತಿ ಹುಟ್ಟಬಹುದು ಎಂಬುದು ಕಾಣಬರುತ್ತದೆ.



ದಿಲ್ಲಿ ಆಳಿದ ಕೊನೆಯ ಮೊಗಲ್ ಬಾದಶಹ ಬಹದೂರ್‌ಶಾಹನ ಹತ್ತಿರ ಮೌಲಾಬಖ್ಷ್ ಎಂಬ ಬಹು ಭಾರೀ ಆನೆ ಇತ್ತು. ಆ ಆನೆ ಎಷ್ಟು ಎತ್ತರ ಇತ್ತೆಂದರೆ, ದಿಲ್ಲೀ ಕೋಟೆಯ ಯಾವ ಬಾಗಿಲಲ್ಲೂ ಅದು ಹೊರಗೆ ಹೋಗುವುದಕ್ಕೆ ಆಗುತ್ತಿರಲಿಲ್ಲ. ಆ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಕೋಟೆಯ ಹೊರಗೆ ಹೋಗುವುದು ಸಾಧ್ಯವಾಗಲು ಬಹದೂರ್‌ಶಾಹ ಲಾಹೋರಿ ಹೆಬ್ಬಾಗಿಲನ್ನೇ ಒಡೆಸಿ ಎತ್ತರ ಮಾಡಿಸಿದ್ದ.


ಪ್ರಾಯಬಂದ ಆನೆಗಳಿಗೆ ಒಮ್ಮೊಮ್ಮೆ ಮತ್ತು ಬರುತ್ತದೆ. ಆಗ ಅವು ಹುಚ್ಚುಚ್ಚಾಗಿ ತಿರುಗಾಡುತ್ತ, ಘೀಳಿಡುತ್ತಾ ಕಾಲಿಗೆ, ಸೊಂಡಲಿಗೆ ಸಿಕ್ಕಿದ ವಸ್ತುಗಳನ್ನು ಧ್ವಂಸ ಮಾಡುತ್ತವೆ. ಹೀಗೆ ಮೌಲಾಬಖ್ಷನಿಗೂ ಒಂದು ಸಾರಿ ಮದ ಬಂದಾಗ ಅದು ತನ್ನ ಮಾವುತನನ್ನೇ ಸೊಂಡಿಲಿನಿಂದ ಎಳೆದು ಹಾಕಿ ಕಾಲಿನಿಂದ ಜಜ್ಜಿ ಸಾಯಿಸಿತು. ಗಂಡನ



ಈ ಭಯಂಕರ ಸಾವಿನಿಂದ ಹುಚ್ಚು ಹಿಡಿದಂತಾದ ಮಾವುತನ ಹೆಂಡತಿ ತನ್ನ ಎರಡು-ಮೂರು ವರ್ಷದ ಕೂಸನ್ನು ಎತ್ತಿಕೊಂಡು ಬಂದು ಆನೆಗೆ ತೋರಿಸುತ್ತಾ, "ಪಾಪಿ! ನನ್ನ ಗಂಡನನ್ನು ಸಾಯಿಸಿದೆಯಲ್ಲ, ಈ ನನ್ನ ಕೂಸನ್ನೂ ಕೊಂದುಬಿಡು!" ಎಂದು ದುಃಖದಿಂದ ಕಿರುಚಿಕೊಂಡಳು. ಮಗುವನ್ನು ಕಂಡ ತಕ್ಷಣವೇ ಮೌಲಾಬಖ್ಷ್ ನಾಚಿಕೊಂಡಂತೆ ಶಾಂತವಾಯಿತು. ಮೆಲ್ಲಗೆ ಸೊಂಡಿಲಿಂದ ಮಗುವನ್ನು ಎತ್ತಿಕೊಂಡು ತನ್ನ ಕತ್ತಿನ ಮೇಲೆ ಕೂಡಿಸಿಕೊಂಡಿತು! ಆಗಿನಿಂದ ಆ ಮಗು ಎದುರಿಗಿದ್ದಾಗ ಮೌಲಬಖ್ಷ್ ಸೌಮ್ಯವಾಗಿರುತ್ತಿತ್ತು; ಯಾರು ಏನು ಹೇಳಿದರೂ ಕೇಳುತ್ತಿತ್ತು. ಆ ಮಗುವಿನ ಜೊತೆಗೆ ಆಡುವುದರಲ್ಲೇ ಅದಕ್ಕೆ ಸಂತೋಷ. ಮಗು ಹತ್ತಿರವಿದ್ದರೆ ಸಾಕು ಇನ್ನೇನೂ ಬೇಡ.

ಮಗು ದೊಡ್ಡವನಾದ ಹಾಗೆ ಅವನ ಜೊತೆ

—೮೦ ನೇ ಪುಟಕ್ಕೆ



ಬೆರಳಿನ ಕರ್ಜೀಕಾಯಿ


ನನ್ನ ಬೆರಳುಗಳಿಂದ ಕರ್ಜೀಕಾಯಿ ಮಾಡಿ ತೋರಿಸುತ್ತೇನೆ ಎಂದು ಗೆಳೆಯರನ್ನು ಚೇಷ್ಟೆ ಮಾಡಿ. ಹೇಗೆ, ಹೇಗೆ ಎಂದು ಕೇಳಿದಾಗ ಈ ಆಟ ಮಾಡಿ ತೋರಿಸಿ.

ಗೋಡೆಯಿಂದ ಮೂರು, ನಾಲ್ಕು ಅಡಿ ದೂರ ನಿಂತುಕೊಂಡು, ಕಣ್ಣ ಮುಂದೆ ಒಂದು ಅಡಿ ದೂರದಲ್ಲಿ ಎರಡೂ ಕೈಗಳ ತೋರುಬೆರಳುಗಳನ್ನು

ಚಿತ್ರ ೧



ಒಂದರ ತುದಿ ಇನ್ನೊಂದಕ್ಕೆ ತಗುಲಿಕೊಂಡಿರುವಂತೆ ಇಟ್ಟುಕೊಳ್ಳುವುದು (ಚಿತ್ರ ೧ ನೋಡಿ). ದೃಷ್ಟಿ ಬೆರಳುಗಳನ್ನು ದಾಯ್ದು ಗೋಡೆಯ ಮೇಲೆ ಇರಲಿ. ಹಾಗೇ, ಮೆಲ್ಲಗೆ, ತೋರು ಬೆರಳುಗಳ ಮಧ್ಯ ಜಾಗ ಬಿಡುವಂತೆ ಕೈಗಳನ್ನು ಹಿಂದಕ್ಕೆ ಸರುಗಿಸಿಕೊಳ್ಳಿ. ಆಶ್ಚರ್ಯ! ಬೆರಳುಗಳ ಮಧ್ಯೆ ಇರುವ ಜಾಗದಲ್ಲಿ ಒಂದು ಸಣ್ಣ ಕರ್ಜೀಕಾಯಿ ಆಕಾರದಲ್ಲಿ ಬೆರಳಿನ ತುಂಡುಗಳು ಸೇರಿಕೊಂಡಿರುವುದು ಕಾಣುತ್ತದೆ (ಚಿತ್ರ ೨).



ಚಿತ್ರ ೨


ಮೊದಲು ನೀವು ಈ ಪ್ರಯೋಗವನ್ನು ಹಲವು ಬಾರಿ ಮಾಡಿ ನೋಡಿ ಮಿಕ್ಕವರ ಕೈಲಿ ಮಾಡಿಸಿ.

ಅಂಗೈಯಲ್ಲಿ ತೂತು!

ಇನ್ನೂ ಒಂದು ಕಣ್ಣಿನ ಆಟ!


ಎಕ್ಸರ್ ಸೈಜ್ ಪುಸ್ತಕದ ಹಾಳೆಯಿಂದ ಒಂದು ಕೊಳವೆ ಮಾಡಿಕೊಳ್ಳಿ. ಬಲಗಣ್ಣಿಗೆ ಕೊಳವೆಯ ಒಂದು ತುದಿ ಇಟ್ಟುಕೊಂಡು ಅದರ ಮೂಲಕ ನೇರವಾಗಿ ಗೋಡೆಯ ಕಡೆ ನೋಡಿ. ಎರಡು ಕಣ್ಣುಗಳೂ ತೆರೆದಿರಲಿ! ಈಗ ಎಡ ಅಂಗೈಯನ್ನು ಎಡ ಭಾಗದಿಂದ ಕೊಳವೆಯ ಹೊರ ತುದಿಯ ಹತ್ತಿರ ತಂದು (ಚಿತ್ರ ೩) ಮೆಲ್ಲಗೆ ಬಲಕ್ಕೆ ಸರುಗಿಸುತ್ತಾ ಬನ್ನಿ. ಎರಡು ಕಣ್ಣುಗಳೂ

ಚಿತ್ರ ೩



ಗೋಡೆಯನ್ನೇ ನೋಡುತ್ತಿರಬೇಕು. ಇದ್ದಕ್ಕಿದ್ದ ಹಾಗೆಯೇ ಎಡ ಅಂಗೈನಲ್ಲಿ ಕೊಳವೆಯ ರಂಧ್ರದಷ್ಟೇ ಆಕಾರದ ತೂತು ಕಾಣಿಸುವುದು! (ಚಿ. ೪)

ಗೆಳೆಯರ ಕೈಲಿ ಮಾಡಿಸಿ ಅವರನ್ನು ಆಶ್ಚರ್ಯಪಡಿಸಿ!



ಚಿತ್ರ ೪

ಇವೆರಡೂ ಚಮತ್ಕಾರಗಳು ಆಗುವುದು ನಮ್ಮ ಎರಡು ಕಣ್ಣುಗಳು ಒಂದೇ ದೃಶ್ಯವನ್ನು ಸ್ವಲ್ಪ ಅಂತರವಿರುವ ಸ್ಥಾನಗಳಿಂದ ನೋಡುವುದರಿಂದ. ಬಲಗಣ್ಣು ಕಾಣುವ ಚಿತ್ರಕ್ಕೂ ಎಡಗಣ್ಣು ಕಾಣುವ ಚಿತ್ರಕ್ಕೂ ಸ್ವಲ್ಪ ವ್ಯತ್ಯಾಸವಿರುತ್ತದೆ. ಮಿದುಳಿನಲ್ಲಿ ಈ ಚಿತ್ರ ಎರಡಾಗಿ ಕಾಣದೇ ಒಂದೇ ಆಗಿ ಕಾಣುತ್ತದೆ. ಆದರೆ ದೃಷ್ಟಿಯನ್ನು ದೂರದ ವಸ್ತುವಿನ ಮೇಲೆ ಇಟ್ಟು ಹತ್ತಿರದ ವಸ್ತುಗಳನ್ನು ಕಾಣುತ್ತಿರುವಾಗ ಎರಡು ಕಣ್ಣುಗಳು ಕಾಣುವ ಬೇರೆ ಬೇರೆ ಚಿತ್ರಗಳು ಸ್ವಲ್ಪ ಕಲಸುಮೇಲೋಗರವಾಗಿ ಒಂದರ ಒಳಗೊಂದು, ಒಂದರ ಮೇಲಿನ್ನೊಂದು ಕಾಣಿಸಿಕೊಂಡು ಮೇಲಿನ ಪ್ರಯೋಗಗಳಲ್ಲಿ ಕಂಡುಬಂದ ಚಮತ್ಕಾರಗಳಿಗೆ ಕಾರಣವಾಗುತ್ತವೆ. ▲


3
ಚತುರಮತಿ ಚಂದ್ರಲೇಖೆ
ಕಳ್ಳ ತಲೆ ಒಳಗಿಡುತ್ತಲೆ ಚಂದ್ರಲೇಖೆ ಅವನ ಮೂಗ
ಕತ್ತರಿಸಿ ಗಾಯದಮೇಲೆ ಮೆಣಸಿನ ಪುಡಿ ತುಂಬಿದಳು.
ಗಾಯಗೊಂಡ ಕಳ್ಳ ಉರಿ ತಾಳಲಾರದೆ ಓಡಿ ಹೋದ. ಕತ್ತಲಲ್ಲಿ ಇದನ್ನು ಕಾಣದೆ ಇನ್ನೊಬ್ಬ ಕಳ್ಳ ತಲೆ ರಂಧ್ರದ ಒಳಗೆ ತೂರಿಸಿದ. ಅವನಿಗೂ ಅದೇ ಗತಿ ಆಯ್ತು.
ಏಳು ಜನ ಕಳ್ಳರು ಓಡಿಹೋಗುತ್ತಿದ್ದಾರೆ. ಅವರ ಮೂಗುಗಳೆಲ್ಲ ಕತ್ತರಿಸಲ್ಪಟ್ಟಿವೆ. ರಕ್ತ ಸುರಿಯುತ್ತಿದೆ.
ರಾಜಕುಮಾರ! ಈ ಕಳ್ಳರಿಂದ ನನ್ನನ್ನು ರಕ್ಷಿಸಬೇಕು!
ಇವರು ದೇಶವ
ಕೊಳ್ಳೆಹೊಡೆಯುತ್ತಿದ್ದ
ನಿನಗೆ ಸಹಾಯ
ಮಾಡುತ್ತೇನೆ. ಅವರ
ಧ್ವಂಸ ಮಾಡೋಣ
ಮೂಗಿನ ಗಾಯ ವಾಸಿಯಾದಮೇಲೆ ಕಳ್ಳರು ತನ್ನನ್ನು ಕೊಲ್ಲಲು ಪ್ರಯತ್ನ ಮಾಡುವರೆಂದು ತಿ
ಚಂದ್ರಲೇಖೆ ಕೈವಲ್ಯ ಪಟ್ಟಣದ ರಾಜಕುಮಾರನನ್ನು ಸಹಾಯ ಕೇಳಿದಳು.


ನಾಳೆ ನಮ್ಮ ಯಜಮಾನರ ಮದುವೆ. ನೀನು ಬಂದು ನರ್ತಿಸುವುದಾದರೆ ನಿಮಿಷಕ್ಕೆ ಲಕ್ಷ ವರಾಹಗಳನ್ನು ಕೊಡುತ್ತಾರೆ
ಖಂಡಿತ
ಗಾಯವಾಸಿಯಾದ ಮೇಲೆ ಕಳ್ಳರು ಸೇವಕನ ಮೂಲಕ ವಜ್ರವೈಢೂರ್ಯಗಳನ್ನು ಚಂದ್ರ-
ಲೇಖೆಗೆ ಕಳಿಸಿ ಕಾಡಿನಲ್ಲಿನ ತಮ್ಮ ಮನೆಗೆ ನೃತ್ಯ ಮಾಡಲು ಬಾ ಎಂದು ಕರೆದರು.
ನೃತ್ಯ ಮಾಡುತ್ತಾ, ನಾನು 'ತಾ, ತೈ, ತೋಂ' ಎಂದಾಗ ಮರೆಯಲ್ಲಿರುವ ನಿಮ್ಮ ಸೈನಿಕರು ಬಂದು ಕಳ್ಳರನ್ನು ಹಿಡಿಯಲಿ.
ಅದೇ ಸರಿ! ಇನ್ನು ಕಳ್ಳರೆಲ್ಲಾ ಸಿಕ್ಕ ಹಾಗೆ!
ತಾ, ತೈ, ತೋಂ
ಮೊದಲೇ ತೀರ್ಮಾನಿಸಿಕೊಂಡಿದ್ದ ಹಾಗೆ ಚಂದ್ರಲೇಖೆ
ಸನ್ನೆ ಮಾಡುತ್ತಲೇ ರಾಜಕುಮಾರನ ಭಟರು ಜಡಿ
ಬಂದು ಕಳ್ಳರನ್ನು ಬಂಧಿಸಿದರು.
ಚಂದ್ರಲೇಖೆಯ ಧೈರ್ಯ, ಸಾಹಸ, ಬುದ್ಧಿವಂತಿಕೆಗೆ ಮೆಚ್ಚಿ ರಾಜ-
ಕುಮಾರ ಅವಳು ನರ್ತಕಿಯಾದರೂ ಸ್ತ್ರೀ ರತ್ನವೆಂದು ಬಗೆದು
ಅವಳನ್ನು ಮದುವೆಯಾದನು. (ಮುಗಿದುದು)

ವಿಜ್ಞಾನದಲ್ಲಿ
ಆಕಸ್ಮಿಕಗಳು

ಕಂಡ, ಕಂಡುಹಿಡಿದ



ವಿಜ್ಞಾನಿಗಳು ಹೊಸ ವಿಷಯಗಳನ್ನು ಹೇಗೆ ಕಂಡುಹಿಡಿಯುತ್ತಾರೆ ? ಪ್ರಯೋಗಶಾಲೆಗಳಲ್ಲಿ ಅನೇಕಾನೇಕ ವರ್ಷಗಳ ಕಾಲ ಸಂಶೋಧನೆ ಮಾಡಿದುದರ ಫಲವಾಗಿ ಹೊಸ ವಿಷಯಗಳು ಕಂಡುಹಿಡಿಯಲ್ಪಟ್ಟಿವೆ, ನಿಜ. ಆದರೆ ಅನೇಕ ವೇಳೆ ವಿಜ್ಞಾನಿ ಒಂದು ತೀರ ಸಾಮಾನ್ಯ ದೃಶ್ಯ ನೋಡಿ, ಅದರಲ್ಲಿ ಕುತೂಹಲ ಹುಟ್ಟಿ, ಅದರ ವಿಷಯ ವಿಚಾರಮಾಡಿ ಇದ್ದಕ್ಕಿದ್ದ ಹಾಗೆಯೇ ಹೊಸ ವಿಷಯಗಳನ್ನು ಕಂಡುಹಿಡಿದಿರುವುದೂ ಉಂಟು. ಈ ಕೆಲವು ನಿದರ್ಶನಗಳನ್ನು ನೋಡಿ :

ಸ್ಟೆಥೊಸ್ಕೋಪು

ಹತ್ತೊಂಬತ್ತನೇ ಶತಮಾನದ ಆದಿ ಭಾಗದಲ್ಲಿ ರೋಗಿಗಳನ್ನು ಪರೀಕ್ಷೆಮಾಡುವ ವಿಧಾನಗಳಲ್ಲಿ ಶೀಘ್ರ ಪ್ರಗತಿ ಆಗುತ್ತಿತ್ತು. ಲಾನೆಕ್ ಎಂಬ ಫ್ರಾನ್ಸಿನ ವೈದ್ಯನಿಗೆ ಎದೆ, ಬೆನ್ನುಗಳ ಒಳಭಾಗ ದಿಂದ ಹೊರಡುವ ಶಬ್ದಗಳನ್ನು ಆಲಿಸಿ ಅನೇಕ ಕಾಯಿಲೆಗಳನ್ನು ಗುರುತಿಸಬಹುದೆಂಬುದರಲ್ಲಿ ಅಪಾರ ನಂಬಿಕೆ. ಆದರೆ ಆಗಿನ್ನೂ ಸ್ಟೆಥೋ-ಸ್ಕೋಪು ಇರಲಿಲ್ಲ. ಶ್ವಾಸಕೋಶ, ಹೃದಯಗಳ ಶಬ್ದಗಳನ್ನು ಕೇಳಲು ವೈದ್ಯ ರೋಗಿಯ ಎದೆಗೆ,



ಬೆನ್ನಿಗೆ ತನ್ನ ಕಿವಿ ತಾಗಿಸಿಕೊಂಡು ಆಲಿಸಬೇಕಾ
ಗಿತ್ತು. ಹೀಗೆ ಮಾಡುವುದು ಎಲ್ಲ ರೋಗಿಗ
ವಿಷಯದಲ್ಲಿ ಸಾಧ್ಯವಿರಲಿಲ್ಲ! ಬೊಜ್ಜು ಬೆಳೆ
ಧಾಂಡಿಗರನ್ನಂತೂ ಈ ರೀತಿ ಪರೀಕ್ಷೆ ಮಾಡಿದ
ಪ್ರಯೋಜನವಾಗುತ್ತಿರಲಿಲ್ಲ. ಏಕೆಂದರೆ ಎ
ಬೆನ್ನಿನ ಮೇಲೆಲ್ಲ ತುಂಬಿಕೊಂಡ ಕೊಬ್ಬಿನಿಂದಾಗಿ
ಎದೆಬಡಿತದ ಸ್ಪಂದನವಾಗಲೀ, ಶ್ವಾಸಕೋಶಗ
ಸದ್ದುಗಳಾಗಲೀ ಬಹಳ ಕ್ಷೀಣವಾಗಿ ಕೇಳಿಬರ
ತ್ತಿದ್ದುವು.

ಒಂದು ಸಾರಿ ಲಾನೆಕ್ ಮನೆಮುಂದೆ ಮಕ್ಕಳ
ಆಡುತ್ತಿದ್ದುದನ್ನು ನೋಡುತ್ತ ನಿಂತಿದ್ದ. ಅ
ಬಿದ್ದಿದ್ದ ಒಂದು ಉದ್ದವಾದ ತೊಲೆಯ ಒಂದ
ತುದಿಯಲ್ಲಿ ಒಬ್ಬ ಹುಡುಗ ನಿಂತು ತೊಲೆಯನ
ಟೊಕ್ ;ಟೊಕ್ ಎಂದು ಕಲ್ಲಿನಿಂದ ಕುಟ್ಟಿ ಶಬ

ಮಾಡುತ್ತಿದ್ದ. ತೊಲೆಯ ಇನ್ನೊಂದು ತುದಿಗೆ ಕಿವಿಗೊಟ್ಟು ಇನ್ನೊಬ್ಬ ಹುಡುಗ ಕೇಳುತ್ತಿದ್ದ. ಮರದ ತೊಲೆಯ ಮೂಲಕ ಹರಿದು ಬಂದ ಟೊಕ್ ಟೊಕ್ ಶಬ್ದ ದೂರವಿದ್ದ ಆ ತುದಿಯಲ್ಲೂ ಚೆನ್ನಾಗಿ ಕೇಳಿಸುತ್ತಿತ್ತು. ಆಹ! ಎಂದು ವೈದ್ಯಶಾಲೆಗೆ ಹೋದವನೇ, ಲಾನೆಕ್ ಕಾಗದದ ಕೊಳವೆಯೊಂದನ್ನು ಮಾಡಿ, ಸ್ಥೂಲಕಾಯದ ರೋಗಿಯ ಎದೆಗೆ ಅದರ ಒಂದು ತುದಿ ಆನಿಸಿ, ಇನ್ನೊಂದು ತುದಿಯನ್ನು ತನ್ನ ಕಿವಿಗೆ ಜೋಡಿಸಿಕೊಂಡು ಕೇಳಿದ. ರೋಗಿಯ ಎದೆಬಡಿತ ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಅನಂತರ ಮರದಿಂದ ಮಾಡಿದ ಕೊಳವೆಗಳನ್ನು ಉಪಯೋಗಿಸಿದ. ಎದೆಯ ಶಬ್ದಗಳು ಇನ್ನೂ ಚೆನ್ನಾಗಿ ಕೇಳಿಸಿದುವು. ಸರಿ, ಈಗ ವೈದ್ಯರುಗಳೆಲ್ಲ ಉಪಯೋಗಿಸುವ ಸ್ಟೆಥೋಸ್ಕೋಪು ಹುಟ್ಟಿಕೊಂಡಿತು.

ತೂಗುದೀಪ ಮತ್ತು ಗಡಿಯಾರ

೧೫೮೧ ನೇ ಇಸವಿ. ಇಪ್ಪತ್ತು ವರ್ಷದ ತರುಣ ಗಣಿತಜ್ಞ ಗೆಲಿಲಿಯೋ ಇಟಲಿಯ ಪೀಸಾ ನಗರದ ಇಗರ್ಜಿಯಲ್ಲಿ ಕುಳಿತು ಏನೋ ಯೋಚನೆ ಮಾಡುತ್ತಿದ್ದ. ಎದುರಿಗೆ ಛಾವಣಿಯಿಂದ ಇಳಿಯಬಿಟ್ಟಿದ್ದ ತೂಗುದೀಪ ಉಯ್ಯಾಲೆಯಾಡುತ್ತಿತ್ತು. ಅದರ ಮೇಲೆ ದೃಷ್ಟಿ ಹಾಯ್ದ ಗೆಲಿಲಿಯೋಗೆ ತೂಗುದೀಪ ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗಿ ಮತ್ತೆ ಮೊದಲಿನ ತುದಿಗೆ ಬರುವುದಕ್ಕೆ ಎಷ್ಟು ಕಾಲ ಹಿಡಿಯಬಹುದು ಎಂಬ ವಿಷಯದಲ್ಲಿ ಕುತೂಹಲವಾಯಿತು. ಆಗಿನ್ನೂ ಗೋಡೆಗಡಿಯಾರಗಳಾಗಲೀ, ಕೈ ಗಡಿಯಾರಗಳಾಗಲೀ ಇರಲಿಲ್ಲವಲ್ಲ! ತನ್ನ ನಾಡಿಯ ಮೇಲೆ ಬೆರಳಿಟ್ಟುಕೊಂಡು ಗೆಲಿಲಿಯೋ ಬಡಿತಗಳನ್ನು ಎಣಿಸಲಾರಂಭಿಸಿದ. ಆರೋಗ್ಯದಿಂದಿರುವ ಮನುಷ್ಯನ ನಾಡಿ ನಿಯತ ಕಾಲಕ್ಕೆ ಸರಿಯಾಗಿ ಬಡಿಯುತ್ತದೆಯಷ್ಟೆ. ತೂಗುದೀಪ ಒಂದು ಸುತ್ತು ಬರುವುದಕ್ಕೆ ಇಷ್ಟೇ ಬಡಿತಗಳಷ್ಟು ಕಾಲ ಎಂಬುದನ್ನು ಗೆಲಿಲಿಯೋ ನಿರ್ಧರಿಸಿಕೊಂಡ. ದೀಪ ತೂಗುತ್ತಲೇ ಇತ್ತು. ತೂಗುತ್ತ ತೂಗುತ್ತ ಅದರ ಚಲನೆ ನಿಧಾನವಾಗುತ್ತಿತ್ತು. ಅದು ಕ್ರಮಿಸುತ್ತಿದ್ದ ವೃತ್ತಖಂಡವೂ ಕಮ್ಮಿಯಾಗುತ್ತ ಬರುತ್ತಿತ್ತು. ಆದರೆ ಆಶ್ಚರ್ಯ! ತೂಗು ದೀಪ ಎಷ್ಟೇ ನಿಧಾನವಾಗಿ ಚಲಿಸಲಿ, ವೃತ್ತಖಂಡ ಎಷ್ಟೇ ಸಣ್ಣದಿರಲಿ, ಒಂದು ಸುತ್ತು ಬರುವುದಕ್ಕೆ ಅದು ಮೊದಲಿನಷ್ಟೇ ವೇಳೆ ತೆಗೆದುಕೊಳ್ಳುತ್ತಿತ್ತು! ಇದನ್ನು ಗಮನಿಸಿದ ಗೆಲಿಲಿಯೋ ಮನೆಗೆ ಹೋಗಿ ವಿವಿಧ ಉದ್ದಗಳ ಲೋಲಕಗಳನ್ನು ಮಾಡಿ ವಿವಿಧ ವೃತ್ತ ಖಂಡಗಳಲ್ಲಿ ಅವುಗಳನ್ನು ತೂಗಿಸಿ, ಲೋಲಕಗಳು ತೂಗುವ ಸಮಯ ಅವುಗಳ ಉದ್ದ ಮತ್ತು ಸ್ಥಳದ ಗುರುತ್ವಶಕ್ತಿಯ ಮೇಲೆ ಆಧಾರವಾಗಿದೆಯೇ ಹೊರತು, ತೂಗುವ ವೃತ್ತಖಂಡದ ಮೇಲಾಗಲೀ, ಅದು ಹೋಗುವ ವೇಗದ ಮೇಲಾಗಲಿ ಅಲ್ಲ, ಎಂಬ ಬಹು ಮುಖ್ಯವಾದ ಸಿದ್ಧಾಂತವನ್ನು ಮಂಡಿಸಿದ. ಈ ಸಿದ್ಧಾಂತವನ್ನು ಉಪಯೋಗಿಸಿಕೊಂಡು ಲೋಲಕದ ಗಡಿಯಾರ ರಚಿಸುವ





ನಕ್ಷೆಗಳನ್ನೂ ಎಳೆದ. ನಂತರ ಹೈಗೆನ್ಸ್ ಎಂಬ ಹಾಲೆಂಡಿನ ವಿಜ್ಞಾನಿ ಈ ಲೋಲಕ ವಿಧಾನವನ್ನು ಪಯೋಗಿಸಿಕೊಂಡು ನಿಷ್ಕೃಷ್ಟವಾಗಿ ವೇಳೆ ತೋರಿಸುವ ಗಡಿಯಾರವನ್ನು ೧೬೫೬ ರಲ್ಲಿ ತಯಾರು ಮಾಡಿದ. ಅದೇ ಪ್ರಪಂಚದ ಪ್ರಪ್ರಥಮ ಲೋಲಕ ಗಡಿಯಾರ.

ಸಮುದ್ರವೇಕೆ ನೀಲಿ?

ಭಾರತದ ಭೌತ ವಿಜ್ಞಾನಿ ಚಂದ್ರಶೇಖರ ವೆಂಕಟರಾಮನ್ ಒಂದು ಸಾರಿ ಸಮುದ್ರಯಾನ ಮಾಡುತ್ತಿರುವಾಗ ನೀರು ಒಳ್ಳೇ ನೀಲಿ ಬಣ್ಣದ್ದಿರುವುದನ್ನು ಕಂಡರು. ನೀರು ಸೂರ್ಯನ ಬೆಳಕಿನಲ್ಲಿರುವ ನೀಲಿ ಬೆಳಕನ್ನು ಮಾತ್ರ ಪ್ರತಿಫಲಿಸಿ, ಮಿಕ್ಕ ಬಣ್ಣಗಳನ್ನೆಲ್ಲ ಹೀರಿಕೊಳ್ಳುವುದೇ ಅದಕ್ಕೆ ಕಾರಣ ಎಂಬ ಸಿದ್ಧಾಂತ ಆಗ ಇತ್ತು. ರಾಮನ್ ಅವರಿಗೆ ಈ ಸಿದ್ಧಾಂತ ಅಷ್ಟೊಂದು ತೃಪ್ತಿಕರವಾಗಿ ಕಾಣಲಿಲ್ಲ. ಅನೇಕ ಪ್ರಯೋಗಗಳನ್ನು ಮಾಡಿ ಕೊನೆಗೆ ವಿಶ್ವಪ್ರಸಿದ್ಧವಾದ ಮತ್ತು ಅವರಿಗೆ ನೋಬೆಲ್ ಪಾರಿತೋಷಕ ದೊರಕಿಸಿಕೊಟ್ಟ ರಾಮನ್ ಸಿದ್ಧಾಂತವನ್ನು ಅವರು ಪ್ರತಿಪಾದಿಸಿದರು. ಬೆಳಕು ಪಾರದರ್ಶಕ ವಸ್ತುಗಳಲ್ಲಿ ಹಾಯ್ದಾಗ ಅದು ಒಂದು ವಿಶೇಷ ರೀತಿಯಲ್ಲಿ ಚದುರಿಸಲ್ಪಡುತ್ತದೆ; ಆಗ ಬೆಳಕಿನ ತರಂಗಮಾನ ಲಂಬಿಸುತ್ತದೆ; ಕಂಪನವೇಗ ಕಮ್ಮಿಯಾಗುತ್ತದೆ ಎಂಬುದೇ ಆ ಸಿದ್ಧಾಂತದ ತಿರುಳು. ಈ ಸಿದ್ಧಾಂತ ವಸ್ತುಗಳ ಮೂಲ ರಚನೆಯ ಮೇಲೆ ಹೊಸ ತಿಳಿವಳಿಕೆಯನ್ನು ಬೀರಿದೆ. ▲

ಮೌಲಾಬಖ್ಷ್ ಮತ್ತು ಮಕ್ಕಳು

(೭೪ನೆಯ ಪುಟದಿಂದ ಮುಂದುವರಿದುದು)

ಆಡುವುದಕ್ಕೆ ಬರುತ್ತಿದ್ದ ಬಾಲಕರ ಹತ್ತಿರವೆಲ್ಲ ಮೌಲಾಬಖ್ಷ್ ಅತ್ಯಂತ ಪ್ರೀತಿಯಿಂದ ನಡೆದುಕೊಂಡಿತು. ಅವರ ಜೊತೆ ಏನೇನೋ ಆಟಗಳನ್ನು ಆಡುತ್ತಿತ್ತು. ಯಾರಾದರೂ ಒಬ್ಬ ಹುಡುಗ, "ಲೋ, ಮೌಲಾಬಖ್ಷ್, ನೋಡು, ನಿನ್ನ ಹೆಂಡತಿ ಬಂದಳು!" ಎಂದು ಗೇಲಿ ಮಾಡಿದರೆ, ಮಿಕ್ಕೆಲ್ಲ ಹುಡುಗರನ್ನು ಬಿಟ್ಟು ತಮಾಷೆ ಮಾಡಿದ ಹುಡುಗನ ಬೆನ್ನು ಹಿಡಿದು ಹೋಗಿ ತಾನು ತಿನ್ನುತ್ತಿದ್ದ ಕಬ್ಬಿನ ಜಲ್ಲೆಯನ್ನು ಅವನ ಮೇಲೆ ಗುರಿ ಇಟ್ಟು ಎಸೆಯುತ್ತಿತ್ತು.

ಯಾರಾದರೂ ಗಟ್ಟಿರೊಟ್ಟಿ ಕೊಟ್ಟರೆ ಅದನ್ನು ಬಾಯಲ್ಲಿ ಅರ್ಧ ಕಚ್ಚಿಕೊಂಡು ಹತ್ತಿರವಿದ್ದ ಹುಡುಗರಿಗೆ ಮಿಕ್ಕರ್ಧವನ್ನು ಕಿತ್ತುಕೊಳ್ಳಲು ಸಂಜ್ಞೆ ಮಾಡುತ್ತಿತ್ತು. ಹುಡುಗರೂ ತಮಾಷೆಗೆ ಬಾಯಿ ಹೊರಗೆ ಕಾಣುತ್ತಿದ್ದ ಅರ್ಧ ರೊಟ್ಟಿಯನ್ನು ತಮ್ಮ ಬಾಯಲ್ಲಿ ಕಚ್ಚಿಕೊಂಡು ಎಳೆಯುತ್ತಿದ್ದರು. ಅದೊಂದು ಆಟ ಎಂಬಂತೆ ಆನೆಯೂ ಎಳೆಯುತ್ತಿತ್ತು. ಈ ಎಳೆದಾಟದಿಂದ ರೊಟ್ಟಿ ತುಂಡಾಗಿ ಆ ಅರ್ಧ ಭಾಗವನ್ನು ಹುಡುಗರು ತಿನ್ನುವವರೆಗೂ ಮೌಲಾಬಖ್ಷ್ ತನ್ನರ್ಧವನ್ನು ನುಂಗುತ್ತಿರಲಿಲ್ಲ.

ಯಾವನಾದರೂ ಹುಡುಗ 'ನಕ್ಕೀ' ಆಟ ಆಡುತ್ತಾ 'ನಕ್ಕೀ ಆವೆ' ಎಂದು ಹೇಳಿದ ತಕ್ಷಣ, ಮೌಲಾಬಖ್ಷ್ ತನ್ನ ಒಂದು ಕಾಲನ್ನು ಮಡಿಸಿ ನಿಲ್ಲುತ್ತಿತ್ತು. ಅದೇ ಹುಡುಗ 'ಘಂಟಿಕೀ' ಎಂದು ಹೇಳುವ ವರೆಗೆ ಅದು ಮಡಿಸಿದ ಕಾಲನ್ನು ನೆಲಕ್ಕೆ ಇಳಿಸುತ್ತಿರಲಿಲ್ಲ. ಒಂದೊಂದು ಸಾರಿ ಹೀಗೆ ಮೌಲಾಬಖ್ಷ್ ಕಾಲು ಮಡಿಸಿ ನಿಂತ ಮೇಲೆ ಗಜಶಾಲೆಯ ಆಳು ಆಟವಾಡುತ್ತಿದ್ದ ಹುಡುಗರನ್ನೆಲ್ಲಾ ಓಡಿಸಿ ಕಳಿಸುತ್ತಿದ್ದ. ಆಗ, "ಹುಡುಗರೆಲ್ಲ ಹೊರಟುಹೋದರು, ಕಾಲು ಬಿಡು," ಎಂದು ಆಳು ಎಷ್ಟು ಹೇಳಿದರೂ ಮೌಲಾಬಖ್ಷ್ ಕಾಲನ್ನು ಇಳಿಸುತ್ತಿರಲಿಲ್ಲ. "ನಕ್ಕೀ ಆವೆ" ಎಂದು ಹೇಳಿದ ಹುಡುಗನೇ ಬಂದು "ಘಂಟಿಕೀ" ಎಂದ ಮೇಲೇ ಅದು ಕಾಲನ್ನು ಊರುತ್ತಿತ್ತು. ▲



ಕಥೆ

ಶೀವ ಸಮಿರಾಜ ಮಲ್ಲ

ಸ್ತ್ರೀಪಾರ್ಟಿ

ಶೀನಪ್ಪ, ವಕೀಲರ ಆಫೀಸಿಗೆ ಬಂದು ವಕೀಲರ ಗುಮಾಸ್ತರ ಮುಂದೆ ನಸ್ಯದ ಬಾಟಲಿ ಯನ್ನಿಟ್ಟರು. ಗುಮಾಸ್ತರು ಕಟಕಟೆಂದು ಒಂದೇ ಸಮನೆ ಟೈಪು ಮಾಡುತ್ತಿದ್ದರು. ಶಾರ್ಟ್-ಹೇಂಡ್ ನೋಟ್ಸಿನಿಂದ ಅವರು ಶೀನಪ್ಪನ ಕಡೆ ಕಣ್ಣು ಹಾಯಿಸಲಿಲ್ಲ. ಆಗತಾನೇ ವಕೀಲರು ಹಲವು ಅರ್ಜಿಗಳನ್ನು ಡಿಕ್ಟೇಟ್ ಮಾಡಿದ್ದರು.

“ಹನ್ನೊಂದು ಗಂಟೆಗೇ ಫೈಲ್ ಮಾಡಬೇಕು ಅವುಗಳನ್ನು. ಮುಂದಿನ ವರ್ಷ ಮಾಡಬಹುದೆಂದು ಎಲ್ಲಾದರೂ ಕಟ್ಟಿಟ್ಟುಬಿಟ್ಟೀ, ಜಾಗ್ರತೆ.” ಎಂದು ವಕೀಲರು ಆಗಲೇ ವ್ಯಂಗ್ಯವಾಗಿ ಕಣ್ಣರಳಿಸಿದ್ದರು.

ವಕೀಲರು ಹೀಗೆ ಕಟ್ಟಪ್ಪಣೆಯನ್ನಿತ್ತುದು, ಅಂದೇನೂ ಮೊದಲ ಬಾರಿಯಾಗಿರಲಿಲ್ಲ. ಗುಮಾಸ್ತರು ಅವರಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಕೆಲಸಕ್ಕೆ ಸೇರಿದಂದೇ ಇಂಥಾ ಕಟ್ಟಪ್ಪಣೆ ಮಾಡಿದ್ದರು. ಆದರೂ ಗುಮಾಸ್ತರು ಅಂದಿನಿಂದಲೇ ಅನುಕೂಲ ಶಾಸ್ತ್ರವನ್ನು ಆರಂಭಿಸಿದ್ದರು. ಇವತ್ತೇ ಆಗಬೇಕೆಂದುದು ಕೆಲವು ಬಾರಿ ಮರು-ದಿನ ಇಲ್ಲವೇ ಮುಂದಿನ ವಾರ ಸಿದ್ಧವಾಗುತ್ತಿತ್ತು; ಕೆಲವು ವೇಳೆ ಮುಂದಿನ ತಿಂಗಳ ವರೆಗೂ ಮುಂದರಿಯುತ್ತಿತ್ತು. ಈ ಸಂಬಂಧ ಮತ್ತೆ ವಕೀಲರು ಖಾರವಾಗಿ ಮಾತಾಡುವರೆಂಬುದೂ ಗುಮಾಸ್ತರಿಗೆ ಗೊತ್ತಿಲ್ಲದಿಲ್ಲ. (“ಆದರೆ ನಮ್ಮ ವಕೀಲರ ಒಂದು ಸದ್ಗುಣವೆಂದರೆ ಅವರಿಗೆ ಎಷ್ಟು ಕೋಪ ಬಂದರೂ ಮೈಗೆ ಕೈಹಾಕುವವರಲ್ಲ. ಇಲ್ಲವೇ ಕೆಲಸದಿಂದ ತೆಗೆದು ಹಾಕುವವರಲ!”) ಆದರೆ ವಕೀಲರ [illegible]

ಅದೊಂದು ದೊಡ್ಡ ಆಸ್ಪತ್ರೆಯಂತೆ: ಅಲ್ಲಿ ಹೊಸ ಕೇಸುಗಳು ಹುಟ್ಟುತ್ತಿದ್ದುವು; ಹುಟ್ಟಿದ ಕೇಸುಗಳು ಮುಂದೆ ಚಿಕಿತ್ಸೆಗೊಳಗಾಗುತ್ತಿದ್ದುವು; ಕೊನೆಗೆ ಅವು ಹೇಳಹೆಸರಿಲ್ಲದೆ ಸತ್ತೂ ಹೋಗುತ್ತಿದ್ದುವು. ಇಂಥ ವೈವಿಧ್ಯಮಯ ವ್ಯವಹಾರದ ಕಚೇರಿಯಲ್ಲಿ ಯಾವ ಒಂದು ವ್ಯವಹಾರಕ್ಕೂ ಕುರಿತಾದ ಗಮನವನ್ನೀಯುವುದು ಸಾಧ್ಯವಿಲ್ಲವೆಂಬುದು ಗುಮಾಸ್ತರ ಅನುಭವವಾಗಿತ್ತು. ಒಂದರ ಹಿಂದೋ ಮುಂದೋ ಎಂಬಂತೆ ಅಲ್ಲಿನ ವ್ಯವಹಾರಗಳು ಯಾವ ವೇಳಾಪಟ್ಟಿಯ ಕಟ್ಟುನಿಟ್ಟಿಗೂ ಒಳಗಾಗದೆ ಮುಂದರಿಯುತ್ತಿದ್ದುದು ಅನಿವಾರ್ಯವೇ ಎಂಬುದು ವಕೀಲರಿಗೂ ತಿಳಿಯದ ವಿಷಯವಲ್ಲ. ("ಏನೋ ಪಾಪ, ಕೂಡಿದಷ್ಟು ದುಡಿಯುತ್ತಿದ್ದಾನೆ, ಕತ್ತೆಯಂತೆ. ನಾನಾದ್ರು ಕೊಡೋದು ಅವನಿಗೆ ಬೀಡಾ ತಿನ್ನಲೂ ಸಾಕಾಗದು. ಆದರೆ ಇತರ ಗುಮಾಸ್ತರಿಗಿಂತ ಅರ್ನೆಸ್ಟ್ ಇದ್ದಾನೆ. ಎಷ್ಟೋ ಪಾಲು ವಾಸಿ! ಏನು ಇವರಲ್ಲಿ ಆನೆ ತಿನ್ನುವವರು, ಸಿಂಹ ತಿನ್ನುವವರೇ ಎಲ್ಲಾ!")

ಶೀನಪ್ಪನಿಗೆ ಗುಮಾಸ್ತರ ಸ್ವಭಾವ ಗೊತ್ತಿಲ್ಲದಿಲ್ಲ. ನಸ್ಯ, ಬೀಡಿ, ಬೀಡಾ, ಸಿಗರೇಟು ಮತ್ತು ಕಾಫಿ ಗುಮಾಸ್ತರ ಸ್ಥಿತಪ್ರಜ್ಞೆಯನ್ನು ಭಂಗಗೊಳಿಸಬಲ್ಲ ವಸ್ತುಗಳೆಂಬುದನ್ನು ಅವರು ಅರಿತಿದ್ದರು. ಅವರಿಗೆ ಈ ಗುಮಾಸ್ತರಲ್ಲದೆ ಅವರ ಹಿಂದಿನ ಇಬ್ಬರು ಗುಮಾಸ್ತರ ಪರಿಚಯವೂ ಇತ್ತು. ಕೇವಲ ಹದಿನೆಂಟನೇ ವಯಸ್ಸಿನಲ್ಲೇ ಕೋರ್ಟಿನ ಕಟ್ಟೆ ಹತ್ತಿದ ಆಸಾಮಿ ಅವರು.

ನಸ್ಯದಿಂದ ಗುಮಾಸ್ತರ ಗಮನ ಸೆಳೆಯಲು ಅಸಮರ್ಥನಾದೆನೆಂದು ತಿಳಿದ ಅವರು ಹೊರಗೆ ಹೋಗಿ ಒಂದು ಪ್ಯಾಕೆಟ್ ಸಿಗರೇಟನ್ನೂ ನಾಲ್ಕು ಬೀಡಾಗಳನ್ನೂ ತಂದು ಅವರ ಮುಂದಿಟ್ಟರು.

"ಹ್ಹೊ! ಶೀನಪ್ಪಣ್ಣ!" ಎಂದರು ಗುಮಾಸ್ತರು ಗೊಳ್ಳನೆ ನಗುತ್ತ. "ಏನು ನಿನ್ನೆಯೇ ಬಂದಿರಾ? ಹೋಟೆಲಿನ ಸೊಳ್ಳೆ ಕಚ್ಚಿದ್ದು ಮುಖದಲ್ಲಿ ಚೆನ್ನಾಗಿ ಕಾಣುತ್ತದಲ್ಲ!"

"ಒಂದು ಸಿಗರೇಟು ಸೇದಿ. ಮತ್ತೆ ಎಲ್ಲ ಹೇಳುತ್ತೇನೆ"

"ಈಗ ಪುರಸೊತ್ತು ಇಲ್ಲ ನೋಡಿ. ಇಷ್ಟು ಕೆಲಸ ಈಗ ಕೋರ್ಟಿಗೆ ಹೋಗುವುದರೊಳಗೆ ನನ್ನೊಬ್ಬನಿಂದಲೇ ಆಗಬೇಕು. ರಾವಣನಂತೆ ಇಪ್ಪತ್ತು ಕೈ ಇದ್ದರೆ ಈ ದರಿದ್ರ ಆಫೀಸಿನಲ್ಲಿ ಒಳ್ಳೇದಿತ್ತು."

"ಅಲ್ಲ. ನಮ್ಮ ವ್ಯಾಜ್ಯದ ತೀರ್ಪು ಇವತ್ತೆಂದಿದ್ದಿರಲ್ಲ?" ಎಂದು ಶೀನಪ್ಪ ತುಸು ರಹಸ್ಯದ ಧ್ವನಿಯಲ್ಲೇ ಪ್ರಶ್ನಿಸಿದರು. "ಏನಾದರೂ ಗೊತ್ತಾಗಿದೆಯೋ?"

"ಪ್ಚ! ಆ ಬಕಪಕ್ಷಿಗಳು ನನ್ನನ್ನೇ ಸುಲಿದು ತಿನ್ನಲು ನೋಡುತ್ತಿವೆ. ಡಿಕ್ಟೇಶನ್ ಆರಂಭವಾದ ಸುದ್ದಿ ನನಗೆ ಸಿಕ್ಕಿತ್ತು. ನಿನ್ನೆ ಸಂಜೆ ಸ್ಟೆನೋಗ್ರಾಫರನನ್ನು ಕೇಳಬೇಕೆಂದು ಹುಡುಕಾಡಿದರೆ ಅವನು ಒಬ್ಬ ರಂಭೆಯೊಡನೆ ಎಲ್ಲಿಗೋ ಹೋಗಿಬಿಟ್ಟಿದ್ದ. ಕಾದು ಕಾದು ಸಾಕಾಯಿತು. ಮತ್ತೆ ಕೋರ್ಟಿಗೆ ಬನ್ನಿ. ನೋಡುವ."

"ಅಲ್ಲ, ನಮಗೆ ಮುಂದಾಗಿ ತಿಳಿಯದೆ?"

"ಅದಕ್ಕೇ ನಾನು ಯತ್ನಿಸಿದ್ದು. ಸ್ಟೆನೋಗ್ರಾಫರನಿಗೆ ಜಜ್‌ಮೆಂಟ್ ಆದ ಕೂಡಲೇ ತಿಳಿಸಬೇಕೆಂದು ಮೊನ್ನೆ ಕಾಫಿ ಕುಡಿಸಿಯೂ ಇದ್ದೆ. ಮತ್ತೆ ಕೋರ್ಟಿಗೆ ಬನ್ನಿ."

ಶೀನಪ್ಪನಿಗೆ ನಿರಾಶೆಯಾಯಿತು. ಬೇಕಿದ್ದರೆ ಆಗಲೇ ಅವರು ತೀರ್ಪು ತಿಳಿದುಕೊಳ್ಳಲು ಹತ್ತು ರೂಪಾಯಿ ವರೆಗೂ ಕೈಬಿಡಲು ಸಿದ್ಧರಿದ್ದರು. ಗುಮಾಸ್ತರಿಗೂ ಇದು ಗೊತ್ತಿಲ್ಲದಿಲ್ಲ.

ಅದರಲ್ಲೂ ಈ ಕೇಸೆಂದರೆ ಸಾಮಾನ್ಯವಾದುದಲ್ಲ. ಇದು ಅವರಂತೆ ಆದರೆ ತತ್ಕಾಲಕ್ಕೆ ಕುಬೇರನು ಕೂಡಾ ಶೀನಪ್ಪನನ್ನು ಕಂಡು ಅಸೂಯೆ ಪಡಬಹುದಿತ್ತು. ಆದರೆ ತದ್ವಿರುದ್ಧವಾದರೆ ಅವರ ಇದ್ದ ಮನೆಮಠಗಳೂ ಕೈಬಿಡಬಹುದಿತ್ತು.

ವಕೀಲರ ಆಫೀಸಿನಿಂದ ಶೀನಪ್ಪ ಹೊರಗೆ ಹೆಜ್ಜೆ ಹಾಕಿದರು. ಹನ್ನೊಂದು ಗಂಟೆಯ ವರೆಗೆ

ಅವರಿಗೆ ಏನು ಮಾಡಬೇಕೆಂಬುದೇ ತಿಳಿಯದು. ಕೋರ್ಟಿಗೆ ಹೋಗಲಿದೆಯೆಂದಾದ ಹಿಂದಿನ ರಾತ್ರಿ ಎಂದಿನಂತೆ ಅವರಿಗೆ ನಿದ್ದೆಯೇ ಹತ್ತದು. ಮಧ್ಯ ರಾತ್ರಿಯ ಅಂದಾಜಿಗೇ ಹಾಸಿಗೆಯಿಂದೆದ್ದು ಪ್ರಾತ ರ್ವಿಧಿಗಳನ್ನು ತೀರಿಸಿ ಕೋಳಿ ಕೂಗುವ ಮುನ್ನ ಬಸ್ಸು ಹಾದುಹೋಗುವ-ಮನೆಯಿಂದ ನಾಲ್ಕು ಮೈಲು ದೂರದ-ರಸ್ತೆಯಲ್ಲಿ ಅವರು ಹಾಜರಾಗು ತ್ತಿದ್ದರು. ಹೆಚ್ಚಾಗಿ ಅವರ ಒಳಗೆ ಒಂದಿಷ್ಟು ಅವಲಕ್ಕಿ ಮೊಸರನ್ನು ತಿನ್ನುತ್ತಿದ್ದರೂ ಇಂದು ಅದನ್ನು ತಿನ್ನಲು ಅವರಿಗೆ ಮನಸ್ಸಾಗಿರಲಿಲ್ಲ.

ಸ್ವಲ್ಪ ಮುಂದೆ ಹೋಗುವಾಗ ಕೋರ್ಟಿನ ಪೇದೆ ಅಂತೋನಿ ಅವರಿಗೆ ಕಾಣಸಿಕ್ಕಿ ನಮಸ್ಕರಿ ಸಿದ. ಶೀನಪ್ಪನಿಗೆ ಅವನನ್ನು ಸಂಧಿಸಿದುದು ಒಂದು ಲೋಕವನ್ನೇ ಗೆದ್ದ ಹಾಗಾಯಿತು. ಕೋರ್ಟಿನ ಅನೇಕ ವ್ಯವಹಾರಗಳ ಗುಟ್ಟು ಅವ ರಿಗೆ ಅವನ ಮೂಲಕವೇ ಸಿಗುತ್ತಿತ್ತು. ಅದಕ್ಕೆ ಪ್ರತಿಫಲವಾವರೂ ಹೆಚ್ಚಿಲ್ಲ, ಕಾಫಿಗಾಗಿ ಒಂದೆಂಟಾಣೆ ಕಾಸು ಕೊಟ್ಟರಾಯಿತು. ಕೇಸ್ ಗುಣವಾದಂಥ ಹರ್ಷದ ಸಂದರ್ಭಗಳಲ್ಲಿ ಅವನು ಅವರಿಂದ ಐದು ರೂಪಾಯಿ ವರೆಗೂ ಖುಷಿ ಹೊಡೆದುದಿತ್ತು.

"ಬಾ! ಬಾ!" ಎನ್ನುತ್ತ ಶೀನಪ್ಪ ಅಂತೋನಿ ಯನ್ನು ಬಳಿಯ ಹೋಟೆಲಿಗೆ ಕರೆದುಕೊಂಡು ಹೋದರು.

"ಬಹಳ ಗಡದ್ದಾಗಬೇಕು ರಾಯರೆ." ಎಂದ ಅಂತೋನಿ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ. "ತೀರ್ಪು ಇವತ್ತು ಬರುತ್ತದೆ."

"ಏನಾಗಿದೆ ಗೊತ್ತೆ?"

"ಆಗುವುದೇನು, ಈ ವರೆಗೆ ನಮ್ಮಂತೆ," ಎಂದ ಅಂತೋನಿ. "ನಿನ್ನೆ ಆರು ಗಂಟೆಯವರೆಗೆ ಡಿಕ್ಟೇಶನ್ ನಡೆಯಿತು. ನಮ್ಮಂತೆಯೇ ತೀರ್ಪು ಆಗುತ್ತಿದೆಯೆಂದು ಸ್ಟೆನೋ ಹೇಳಿದರು. ಏನೋ ಕೊನೆಯ ಭಾಗ ಇವತ್ತು ಡಿಕ್ಟೇಶನ್ ಅಂತೆ. ಈಗ ಜಡ್ಜರ ಮನೆಗೆ ಹೋಗಿದ್ದಾರೆ."

"ನಮಗೆ ಹಾಗಾದರೆ ಗುಣ ಖಂಡಿತವೆ?"

"ಮತ್ತೆ ನಾನು ಸುಳ್ಳು ಹೇಳ್ತೇನೆಯೆ?"

ಎರಡು ಮೂರು ಸಿಹಿ ತಿಂಡಿಗಳು, ಬೇಕಾ ದಷ್ಟು ಖಾರದ ತಿಂಡಿಗಳನ್ನು ತಿಂದು ಇಬ್ಬರೂ ಕಾಫೀ ಕುಡಿದರು. ಬಿಲ್ಲು ಆರು ರೂಪಾಯಿ ಆಗಿತ್ತು. ಹತ್ತು ರೂಪಾಯಿ ನೋಟನ್ನು ಶೀನಪ್ಪ ವಟಾಯಿಸಿ ಉಳಿದ ಹಣವನ್ನು ಅಂತೋನಿಗೆ ಕೊಟ್ಟು ಅವನಿಂದ ಉದ್ದವಾದ ಸಲಾಮನ್ನು ಪಡೆದರು.

ಶೀನಪ್ಪನ ಮಗಳನ್ನು ಸುಬ್ಬಣ್ಣನಿಗೆ ಮೂರ ನೆಯ ಸಂಬಂಧವಾಗಿ ವಿವಾಹವಾಗಿತ್ತು. ಸುಬ್ಬಣ್ಣ ಶೀನಪ್ಪನ ಊರಲ್ಲೇ ಶ್ರೀಮಂತ. ಶೀನಪ್ಪ ಅವನಿಗ ಮೊದಲ ಬಾರಿಯೇ ಹೆಣ್ಣು ಕೊಡಬೇಕೆಂದು ಆಶಿಸಿದ್ದರೂ ಅವನ ಮೊದಲ ಮದುವೆಯಾದಾಗ ಶೀನಪ್ಪನ ಮಗಳಿಗೆ ಆರೇಳು ವರ್ಷಗಳಾಗಿದ್ದುವಷ್ಟೆ. ಮೊದಲ ಹೆಂಡತಿ ಒಂದು ಮಗುವನ್ನು ಹೆತ್ತು ಎರಡೇ ವರ್ಷದಲ್ಲಿ ತೀರಿ ಕೊಂಡಳು. ಮುಂದೆ ಆರು ತಿಂಗಳಲ್ಲೇ ಎರಡನೇ ಮದುವೆಯಾದ. ಎರಡನೆಯ ಹೆಂಡತಿಯೂ ಕೇವಲ ಎರಡು ವರ್ಷಗಳೊಳಗೇ ಸತ್ತಳು. ಇದನ್ನು ಕಂಡ ಕನ್ಯಾಪಿತೃಗಳು ಸುಬ್ಬಣ್ಣನನ್ನು ತಮ್ಮಿಂದ ಆದಷ್ಟು ದೂರವಿರಿಸಲು ಇಚ್ಛಿಸಿದರು. ಸ್ವಲ್ಪ ದೂರದ ಕನ್ಯಾಪಿತರೊಡನೆ ಅವನು ವಿವಾ ಹದ ಪ್ರಸ್ತಾಪ ಮಾಡಿದುದೂ ಮಧ್ಯದಲ್ಲೇ ಮುರಿದುಬಿತ್ತು. ಸುಬ್ಬಣ್ಣನನ್ನು ಮದುವೆಯಾ ಗುವುದು ಯಾವ ಹೆಣ್ಣಿಗೂ ಅಪಾಯಕಾರಿ ಎಂಬ ಪ್ರಚಾರವನ್ನು ಶೀನಪ್ಪನೇ ತೆರೆಯ ಮರೆಯಲ್ಲಿ ಸಾಕಷ್ಟು ಮಾಡಿದ್ದರು. ತಮಗೆ ತಿಳಿದಿದ್ದ ಜ್ಯೋತಿಷ್ಯದ ಜ್ಞಾನವನ್ನೋ ಅಜ್ಞಾನವನ್ನೋ ಅವರು ಕ್ರೋಡೀಕರಿಸಿ ಸುಬ್ಬಣ್ಣನಿಗೆ ಅಂಗಾರಕ ದೋಷವಿದೆ ಎನ್ನುವ ಸಿದ್ಧಾಂತವನ್ನು ಎಲ್ಲಾ ಕನ್ಯಾಪಿತರೊಡನೆಯೂ ಪ್ರತಿಪಾದಿಸಿದ್ದರು. ಅವರ ಸಿದ್ಧಾಂತಕ್ಕೆ ಪುಷ್ಟಿಯೂ ದೊರೆಯದಿರ ಲಿಲ್ಲ. ಸುಬ್ಬಣ್ಣನ ಇಬ್ಬರು ಹೆಂಡಂದಿರು ಸತ್ತರ ಲ್ಲದೆ, ಅವನು ಪ್ರಣಯ ಸಂಬಂಧವನ್ನಿಟ್ಟುಕೊಂಡ ಐದು ಮಂದಿ ಭೀಕರ ರೋಗಗಳಿಗೆ ತುತ್ತಾಗಿ

ಮಣ್ಣು ಪಾಲಾದರೆಂಬ ಪ್ರತೀತಿಯೂ ಹಬ್ಬಿತ್ತು.

ಆದರೆ ಶೀನಪ್ಪನ ಮಗಳಿಗೆ ಪ್ರಾಯ ಬಂದು ಅವರೇ ಯೋಗ್ಯ ಕನ್ಯಾಪಿತರಾದಾಗ ಸುಬ್ಬಣ್ಣನನ್ನು ಅವಳಿಗೆ ವರನನ್ನಾಗಿ ಮಾಡಲು ಅವರೇ ಮುಂದೆ ಬಂದರು. ಇದು ಅನೇಕರಿಗೆ ವಿಸ್ಮಯವನ್ನುಂಟುಮಾಡಿತ್ತು. ತನ್ನ ಮಗಳಿಗೂ ಸುಬ್ಬಣ್ಣನ ಜಾತಕದಲ್ಲಿರುವಷ್ಟೇ ಪ್ರಬಲವಾದ ಅಂಗಾರಕ ದೋಷವಿದ್ದುದರಿಂದ ಪರಿಣಾಮ ಕೆಡುಕಾಗದೆಂದು ಅವರು ಹೇಳತೊಡಗಿದರು.

ಸುಬ್ಬಣ್ಣನಿಗೆ ಮೂರನೇ ಮದುವೆಯಾಗುವ ಸಮಯದಲ್ಲೇ ಅವನ ಆರೋಗ್ಯ ಚೆನ್ನಾಗಿಲ್ಲವೆಂಬ ಪ್ರತೀತಿಯಿತ್ತು. ವೈದ್ಯರೂ ಡಾಕ್ಟರರೂ ಹಕೀಮರೂ ಕೊಟ್ಟ ಎಲ್ಲ ಅರಿಷ್ಟ-ಆಸವ, ಟಾನಿಕ್, ಮುಲ್ಲಂಗಳನ್ನು ಅವನು ಒಂದೇ ಸವನೆ ಸೇವಿಸುತಿದ್ದನಲ್ಲದೆ ಹಳ್ಳಿಯ ವೈದ್ಯರ ಔಷಧಗಳನ್ನು ಕುಡಿಯುತಿದ್ದ. ಶೀನಪ್ಪನ ಹೆಂಡತಿಗೆ ಈ ಸಂಬಂಧ ಭಯವನ್ನುಂಟುಮಾಡಿದ್ದರೂ ಶೀನಪ್ಪ ಬಿಡಲಿಲ್ಲ. ಒಂದಲ್ಲ ಒಂದು ದಿನ ಸುಬ್ಬಣ್ಣನ ನೂರು ಎಕ್ರೆ ಜಮೀನು ತನ್ನ ಮಗಳ ಪಾಲಿಗೆ ಬರುವುದೆಂಬುದು ಅವರಿಗೆ ಖಚಿತವಾಗಿತ್ತು.

ಮದುವೆಯಾದ ಆರಂಭದಲ್ಲೇ ಶೀನಪ್ಪ ಸುಬ್ಬಣ್ಣನ ಮನೆವಾರ್ತೆ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡತೊಡಗಿದರು. ಅವನ ಕೇಸುಗಳನ್ನು ನಡೆಸಲು ತಾವು ಮಧ್ಯವರ್ತಿಯಾದರು. ಸುಬ್ಬಣ್ಣ ಸ್ವಲ್ಪ ಕಾಹಿಲೆ ಬಿದ್ದಾಗ ಡಾಕ್ಟರರ ಬಳಿಗೂ ಅವನನ್ನು ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿದರು. ಎದೆಗುಂಡಿಗೆ ಬಹಳ ಕ್ಷೀಣವಾಗಿತ್ತೆಂದು ಡಾಕ್ಟರರು ಶೀನಪ್ಪನಿಗೆ ಸೂಕ್ಷ್ಮವಾಗಿ ತಿಳಿಸಿದ್ದರು.

ಸುಬ್ಬಣ್ಣ ಒಂದು ವೇಳೆ ಸತ್ತರೂ ಅವರಿಗೆ ವ್ಯಥೆಯಾಗುವಂತಿರಲಿಲ್ಲ. ಆದರೆ ಅವನ ಮೊದಲ ಹೆಂಡತಿಯ ಮಗುವನ್ನು ನೆನೆಯುವಾಗ ಮಾತ್ರ ಕ್ಷೋಭೆಯಾಗುತ್ತಿತ್ತು. ಒಂದು ವೇಳೆ ಸುಬ್ಬಣ್ಣನು ಫಕ್ಕನೆ ಸತ್ತರೆ ಅವನ ಆಸ್ತಿಯ ಸಿಂಹಪಾಲು ಆ ಮಗುವಿಗೆ ಹೋಗುವುದೆಂಬ ಅಂಜಿಕೆ ಅವರನ್ನು ಕಾಡುತ್ತಿತ್ತು. ಒಂದು ಮರಣ ಶಾಸನ ಮಾಡಬೇಕೆಂದು ಸುಬ್ಬಣ್ಣನಿಗೆ ಹಲವರ ಮೂಲಕ ಸೂಚ್ಯವಾಗಿ ತಿಳಿಸಿದರು. ತನ್ನ ಮಗಳೊಡನೆಯೂ ಒತ್ತಾಯಿಸಲು ಹೇಳಿದ್ದರು.

ತನ್ಮಧ್ಯೆ ಸುಬ್ಬಣ್ಣ ಒಂದು ದಿನ ಮುನ್ಸೂಚನೆಯಿಲ್ಲದೇ ಇಹಲೋಕ ತ್ಯಜಿಸಿದ


ಸುಬ್ಬಣ್ಣ ಮರಣ ಶಾಸನ ಬರೆದಿಟ್ಟೇ ಸತ್ತಿದ್ದಾನೆಂಬ ಸುದ್ದಿ ಊರಲ್ಲೆಲ್ಲ ಹರಡಿತು. ಒಂದು ವಾರದೊಳಗೇ ಆ ಮರಣ ಶಾಸನವೂ ಕೋರ್ಟಿನಲ್ಲಿ ಹಾಜರಾಯಿತು. ಆದರೆ ಸುಬ್ಬಣ್ಣನ ಮೊದಲ ಮಾವ ಅದನ್ನು ಪ್ರತಿಭಟಿಸಿದ.

ಕೇಸು ವ್ಯಾದೆಯಿಂದ ವ್ಯಾದೆಗೆ ಹನುಮಂತನ ಬಾಲದಂತೆ ಬೆಳೆಯಿತು. ಶೀನಪ್ಪ ಅದರಲ್ಲೇ ಮಗ್ನರಾದರು. ಮರಣ ಶಾಸನಕ್ಕೆ ಸಾಕ್ಷ್ಯ ಹಾಕಿದವರ ವಿಚಾರಣೆಯಾಗುವ ಸಮಯದಲ್ಲಿ ಅವರಿಗೆ ಅನ್ನ ನಿದ್ರೆಗಳ ಪರಿವೆಯೂ ಇರಲಿಲ್ಲ. ಅವರಿಬ್ಬರೂ ಸಾಕ್ಷ್ಯಗಾರರು ವಿಚಾರಣೆಯ ಮುಂಚೆ ತಮ್ಮದೇ ಆದ ಕರಾರುಗಳನ್ನು ಅವರ ಮುಂದಿರಿಸಿದ್ದರು; ಅವುಗಳನ್ನು ನಡೆಸಿಕೊಡದಿದ್ದರೆ ತಾವು ಅವರ ವಿರುದ್ಧ ನುಡಿಯುವೆವೆಂದೂ ಬೆದರಿಸಿ ಶೀನಪ್ಪನನ್ನು ಕಂಗಾಲು ಮಾಡಿದ್ದರು.

ಮರಣ ಶಾಸನವು ಕೃತ್ರಿಮವಾಗಿದ್ದುದಾಗಿರಬೇಕೆಂಬ ಸಂಶಯವು ಆರಂಭದಿಂದಲೇ ಕೋರ್ಟಿನ ಹೊರಗಲ್ಲದೆ ಕೋರ್ಟಿನ ಒಳಗೂ ವ್ಯಕ್ತವಾಗಿತ್ತು. ಮರಣ ಶಾಸನವನ್ನು ಬರೆಸಿದ ರೀತಿಯಲ್ಲದೆ, ಅದಕ್ಕುಪಯೋಗಿಸಿದ ಕಾಗದ, ಮಸಿ, ಸಹಿಗಳು ಎಲ್ಲ ಸಂದೇಹದ ಕಲ್ಲೋಲವನ್ನೆಬ್ಬಿಸಿದ್ದುವು. ಮೃತನ ಹಸ್ತಾಕ್ಷರದ ಪರೀಕ್ಷಣ ನಡೆಯಬೇಕೆಂಬ ಆಹ್ವಾನವನ್ನು ಸ್ವೀಕರಿಸಿ ಶೀನಪ್ಪ ಅದನ್ನೂ ನಡೆಸಿದ್ದರು. ಅದರ ಪರಿಣಾಮ ಅವರಿಗೆ ಅಷ್ಟೊಂದು ಅನುಕೂಲವಾಗಿ ತೋರಿ ಬಾರದ್ದರಿಂದ ಸಾಕ್ಷ್ಯ ಹೇಳಿಸುವುದರ ಮೇಲೆಯೇ ಎಲ್ಲವೂ ಹೊಂದಿಕೊಂಡಿದೆ ಎಂದು ವಕೀಲರು ಶೀನಪ್ಪನಿಗೆ ಖಂಡಿತವಾಗಿ ಹೇಳಿಬಿಟ್ಟಿದ್ದರು.

ಒಬ್ಬ ಸಾಕ್ಷ್ಯಗಾರ ಶೀನಪ್ಪನಿಗೆ ಎರಡು ಸಾವಿರ ರೂಪಾಯಿ ಸಾಲ ಕೊಡುವುದಿತ್ತು.

ಲೋಹ ಭಾರವಾಗಿದೆ...



ಬ್ರೈಟ್ ಪ್ಲಾಸ್ಟಿಕ್ ಸಾಧನಗಳು ಹಾಗಿರುವುದಿಲ್ಲ





ಲೋಹದ ಬಲ ಮತ್ತು ಗಾಜಿನ ಅಂದ ಉಳ್ಳದ್ದು, ಆದರೆ ಅವುಗಳೆರಡರ ಕುಂದುಕೊರತೆಗಳು ಇಲ್ಲದಂತಹದು—ಅದೇ ಪ್ಲಾಸ್ಟಿಕ್. ಅದು ಬಹಳ ಹಗುರವಾಗಿದ್ದು, ದೀರ್ಘ ಕಾಲ ಬಾಳಿಕೆ ಬರುತ್ತದೆ. ಅಂದವಾದ ಬಣ್ಣಗಳಲ್ಲಿ ಬರುವ ಅದು ಅತ್ಯಂತ ಸ್ವಚ್ಛವಾಗಿರುತ್ತದೆ ಮತ್ತು ಬಳಸಲು ಬಹಳ ಅನುಕೂಲವಾಗಿರುತ್ತದೆ. ಈ ಎಲ್ಲ ಗುಣಗಳು ಅಪೂರ್ವ ಬ್ರೈಟ್ ಪ್ಲಾಸ್ಟಿಕ್ ಸಾಧನಗಳಲ್ಲಿ ಒಂದುಗೂಡಿವೆ.

ಬ್ರೈಟ್ ಸಾಧನಗಳ ಶ್ರೇಣಿ ನಿಜವಾಗಿಯೂ ಬೆರಗುಗೊಳಿಸುವಷ್ಟು ವ್ಯಾಪಕವಾಗಿದೆ. ಅದರಲ್ಲಿ, ಬಾಚಣಿಗೆ, ಪ್ಲೇಟ್, ಕಪ್, ಗ್ಲಾಸು, ಸಾಬೂನು ಪೆಟ್ಟಿಗೆ, ಮಗ್, ಜಾಡಿ, ಜಗ್, ಶಾಪಿಂಗ್ ಬ್ಯಾಗ್, ಬಕೆಟ್, ಬೇಸಿನ್, ತಟ್ಟೆ—ಇಂತಹ ಸಾಧನಗಳು ಅನೇಕ ಇವೆ.

ಬ್ರೈಟ್ ರಬರ ಸಾಧನಗಳೇ ನಿಮ್ಮ ಸರಿಯಾದ ಆಯ್ಕೆ !

ಬ್ರೈಟ್ ಬ್ರದರ್ಸ್ ಪ್ರೈವೇಟ್ ಲಿಮಿಟೆಡ್,
156ಎ, ಜೆ. ದಾದಾಜೀ ರೋಡ್, ಮುಂಬಯಿ 34.

BB G 115 KN

ಶೀನಪ್ಪ ಅದಕ್ಕೆ ರಸೀತಿ ಕೊಡಬೇಕಾಯಿತಲ್ಲದೆ, ಆದರ ಮೇಲೆ ಐನೂರು ರೂಪಾಯಿ ಅವನಿಗೆ ಕೊಟ್ಟರು. ಆದರೆ ಇನ್ನೊಬ್ಬ ಸಾಕ್ಷ್ಯಗಾರನ ಷರತ್ತು ಬೇರೆಯೇ ಆಗಿತ್ತು.

ಶೀನಪ್ಪ ಅದನ್ನು ಕೇಳಿ ಒಮ್ಮೆ ಸಿಡಿದು ಬಿದ್ದರು. ಆದರೆ ಮರುಕ್ಷಣದಲ್ಲೇ ಅವರು ಸಂಯಮ ತಾಳಿದರು ಕೇವಲ ಒಂದು ಸಾಕ್ಷ್ಯದಿಂದಾಗಿ ಅವರು ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಅದರೊಡನೆ ತಮ್ಮ ಪ್ರತಿಷ್ಠೆಗೂ ಭಂಗ ಬರುವುದೆಂಬುದನ್ನು ಅವರು ಅರಿತಿದ್ದರು ಏಕೆಂದರೆ ಅವರು ವಿವಾದದಲ್ಲಿ ಹೈಕೋರ್ಟಿನ ವರೆಗೂ ಹಠ ಸಾಧಿಸಿ ಗೆಲ್ಲುವವರೆಂಬ ಪ್ರತೀತಿಯೇ ಒಂದು ರೀತಿಯಲ್ಲಿ ಅವರನ್ನು ಅಜಾತಶತ್ರುವನ್ನಾಗಿ ಮಾಡಿತ್ತು.

ಕೊನೆಗೆ ಇನ್ನೊಬ್ಬ ಸಾಕ್ಷ್ಯಗಾರನ ಕರಾರಿಗೆ ತಾವು ಮಣಿದರಲ್ಲದೆ, ಆ ಕರಾರಿಗೆ ನೇರ ಸಂಬಂಧವಿದ್ದ ತನ್ನ ಮಗಳನ್ನೂ ಮಣಿಸಿದರು. ಮರಣ ಶಾಸನದ ಬರೆಹಗಾರರು ಕೇವಲ ಹತ್ತು ತೊಲೆಯ ಒಂದು ಚಿನ್ನದ ಆಭರಣದಿಂದ ತೃಪ್ತರಾದರು.

ಸಾಕ್ಷ್ಯ ವಿಚಾರಣೆಯಾಯಿತು. ಸಾಕ್ಷ್ಯಗಾರರು ತಾವು ಪದೇ ಪದೇ ಬಾಯಿಪಾಠ ಮಾಡಿಕೊಂಡದ್ದನ್ನೆಲ್ಲ ಒಂದು ಮುಂದಾಗಿಯೋ ಮುಂದುಹಿಂದಾಗಿಯೋ ಹೇಳಿಬಿಟ್ಟರು. ಒಂದೆರಡು ವಿಷಯಗಳಲ್ಲಿ ಅವರ ಸಾಕ್ಷ್ಯಗಳು ಪರಸ್ಪರ ಹೊಂದಾಣಿಕೆಯಿಲ್ಲದಂತಾದರೂ ಶೀನಪ್ಪನ ವಕೀಲರು ಅದಕ್ಕೆ ಮಹತ್ವ ಕೊಡಲಿಲ್ಲ. ("ಅದು ಬಿಡಿ. ಇಷ್ಟಾದರೂ ಚೊಕ್ಕಟವಾಗಿ ಯಾರು ಹೇಳುತ್ತಾರೆ? ನೋಡೋಣ ಹೇರಿಂಗಿನಲ್ಲಿ ನಾನೆಲ್ಲ ಬಣ್ಣ ಬದಲಿಸಿಬಿಡುತ್ತೇನೆ.")

ವಕೀಲರು ಅಷ್ಟೊಂದು ಭರವಸೆಯನ್ನಿತ್ತಿದ್ದರೂ ಶೀನಪ್ಪನಿಗೆ ಪೇದೆ ಅಂತೋನಿಯು ಶೀರ್ಷಿನ ವರ್ತಮಾನವನ್ನು ಹೇಳುವತನಕ ಧೈರ್ಯವಿದ್ದಿಲ್ಲ. ತಮ್ಮ ಸಾಕ್ಷ್ಯಗಾರರು ಕೆಲವು ವಿಷಯಗಳಲ್ಲಿ ಯದ್ವಾತದ್ವಾ ಹೇಳಿದ್ದರೆಂಬುದು ಅವರಿಗೆ ವಿದಿತವಾಗಿತ್ತು : ತನ್ನನ್ನು ಬರಬೇಕೆಂದು ಸುಬ್ಬಣ್ಣ ಹೇಳಿಕಳಿಸಿದ್ದುದರಿಂದ ತಾನು ಅವನಲ್ಲಿಗೆ ಮರಣಶಾಸನ ಬರೆಸುವ ದಿನ ಹೋದೆ ಎಂದು ಒಬ್ಬ ಹೇಳಿದ್ದರೆ, ಇನ್ನೊಬ್ಬನು ತನ್ನನ್ನು ಶೀನಪ್ಪ ಬರಹೇಳಿದ್ದನೆಂದಿದ್ದ; ಒಬ್ಬನು ಅದನ್ನು ಬರೆಯುವಾಗ ಸಂಜೆ ಐದು ಗಂಟೆ ಎಂದಿದ್ದರೆ ಬರೆದವನು ಆಗ ಕತ್ತಲಾಗುತ್ತಿತ್ತೆಂದು ಅಡ್ಡ ಸವಾಲಿನಲ್ಲಿ ಉತ್ತರಿಸಿದ್ದ: ಸುಬ್ಬಣ್ಣ ಅಂದು ಮಂಚದಲ್ಲಿ ಮಲಗಿಕೊಂಡಿದ್ದನೆಂದು ಒಬ್ಬ ಹೇಳಿದ್ದರೆ, ಇನ್ನೊಬ್ಬ ಕುರ್ಚಿಯಲ್ಲಿ ಕುಳಿತುಕೊಂಡಿದ್ದನೆಂದಿದ್ದ; ಇಂಥ ಪ್ರತಿಯೊಂದು ತಪ್ಪೂ ಶೀನಪ್ಪನಿಗೆ ಹಿಮಾಲಯವಾಗಿ ತೋರಿತ್ತು.

ಅಂತೋನಿಯ ಮಾತು ಕೇಳಿದ ಶೀನಪ್ಪ ನೇರ ಬಸ್ ಹತ್ತಿ ಊರಿಗೆ ಹೋದರು. ಊರಲ್ಲಿ ಬಸ್ಸಿನಿಂದಿಳಿಯುವಾಗ ಅವನ ಸ್ನೇಹಿತರು ಸಿಕ್ಕರು. ಅವರನ್ನು ಹೋಟೆಲಿಗೆ ಕರೆದುಕೊಂಡು ಹೋಗಿ ಬೇಕಾದಷ್ಟು ತಿಂಡಿ ತೀರ್ಥಗಳನ್ನು ಅವರಿಗೆ ಕೊಡಲು ಹೇಳಿದರು. ಅನೇಕ ಅಪರಿಚಿತರಿಗೂ ಅವರ ಲೆಕ್ಕದಲ್ಲಿ ಚಹಾದ ಆತಿಥ್ಯ ನಡೆಯಿತು, ಎಲ್ಲರೂ ಅವರನ್ನು ಹೊಗಳುವವರೇ. ಸಾಕ್ಷ್ಯಗಾರರು ಅವನ ಅದೃಷ್ಟವನ್ನು ಕೊಂಡಾಡಿದರು.

"ಶೀನಪ್ಪ, ಇನ್ನು ಈ ಸುಟ್ಟ ಬಸ್ಸಿನಲ್ಲಿ ಹೋಗಬಾರದು," ಎಂದರು ಹೋಟೆಲಿನ ಒಡೆಯರು, ನೂರು ರೂಪಾಯಿಯ ನೋಟನ್ನು ಮೇಜಿನೊಳಗೆ ಹಾಕುತ್ತ. "ನನ್ನ ಅಕ್ಕನ ಅಳಿಯ ತನ್ನ ಕಾರನ್ನು ಮಾರಬೇಕೆನ್ನುತ್ತಿದ್ದ. ಬಹಳ ಚಲೋ ಕಾರು. ಏನು, ಕೂತರೆ ಗಾಳಿಯಲ್ಲಿ ತೇಲಿಹೋದಂತಾಗುತ್ತದೆ. ನಿಜ ಹೇಳಬೇಕಾದ್ರೆ ನನಗೆ ನಾಚಿಕೆಯಾಗುತ್ತದೆ. ಮೊನ್ನೆ ಒಮ್ಮೆ ಅವನ ಒತ್ತಾಯಕ್ಕೆ ಕೂತಾಗ ನನ್ನ ಮುಂಡಾಸು ಹಾರಿ ಹೋದುದೇ ಗೊತ್ತಾಗಲಿಲ್ಲ ನನಗೆ. ಮೂವತ್ತು ರೂಪಾಯಿ ಕೊಟ್ಟಿದ್ದ ಪಟ್ಟೆಯ ಮುಂಡಾಸು."

ಶೀನಪ್ಪನಿಗೆ ಹೀಗೆ ಹೋಟೆಲಿನ ಆದರಾತಿಥ್ಯ ಸಲ್ಲಿಸುವ ಗಡಿಬಿಡಿಯಲ್ಲಿ ಸಮಯ ಹೋದುದೇ ಗೊತ್ತಾಗಲಿಲ್ಲ. ಕೆಲವರು ಅವರ ವಕೀಲರನ್ನು

ಹೊಗಳಿದರು. ಕೆಲವರು ಅವರ ಸಾಕ್ಷ್ಯಗಾರರನ್ನು ಕೊಂಡಾಡಿದರು. ಒಬ್ಬಿಬ್ಬರು ಮರಣ ಶಾಸನ ಬರೆದವರನ್ನು ಪ್ರಶಂಸಿಸಿದರು.

"ನಮ್ಮ ಊರಿನ ಮರ್ಯಾದೆ ಉಳಿಯಿತಪ್ಪ ! ಎಲ್ಲಾದರೂ ಎಲ್ಲ ಸುಳ್ಳೆಂದಾಗುತ್ತಿದ್ದರೆ ಶೀನಪ್ಪ ನವರಿಗೆ ಮಾತ್ರವಲ್ಲ ನಮ್ಮೆಲ್ಲರ ಮುಖಕ್ಕೂ ಮಸಿ ಬಳಿದಂತಾಗುತ್ತಿತ್ತು," ಎಂದರು ಮರಣ ಶಾಸನ ಲೇಖಕರು.

ಹೀಗೆ ಹೊತ್ತು ಕಳೆಯುವಾಗ ಶೀನಪ್ಪನ ಸ್ನೇಹಿತರೊಬ್ಬರು ಸಪ್ಪೆಮುಖದಿಂದ ಬಂದರು, ಇನ್ನೊಂದು ಹೋಟೆಲಿನಿಂದ. ಶೀನಪ್ಪ ಅವ ರನ್ನು ಕಾಫಿ ಕುಡಿಯಲು ಒತ್ತಾಯಪಡಿಸಿದರು.

"ನೋಡಿ, ಈಗ ನಾನು ಕಾಫಿ ಕುಡಿದೆ ಶೀನಪ್ಪ," ಅವರೆಂದರು. "ನಿಮ್ಮ ವಿರೋಧಿ ಅಲ್ಲಿ ಕಾಫಿ ಕೊಡಿಸುತ್ತಿದ್ದಾರೆ. ಕೇಸ್ ತನ್ನಂತೆ ಆಯಿತೆಂದು ನಮ್ಮೊಡನೆ ಹೇಳಿದರು."

ಶೀನಪ್ಪ ಸಿಡಿದುಬಿದ್ದರು.

"ಅದು ಸುಳ್ಳು."

ಅಷ್ಟರಲ್ಲೇ ಇನ್ನು ಕೆಲವರು ಅವನಿದ್ದ ಹೋಟೆಲಿನಲ್ಲಿಗೆ ಬಂದರು. ಅವರೂ ಮೊದಲಿ ನವನಂತೆಯೇ ಹೇಳಿದರು.

"ಛೇ ! ನಾನು ಸ್ವತಃ ತೀರ್ಪನ್ನು ಕೇಳಿದವ ನಲ್ಲ ! " ಎಂದರು ಶೀನಪ್ಪ ಅಂತೋನಿಯನ್ನು ನೆನೆಯುತ್ತ. "ಆದರೂ ಹೋಗಿಬರುತ್ತೇನೆ."

ವಕೀಲರಲ್ಲಿಗೆ ಅವರು ಮರಳುವಾಗ ಗುಮಾ-ಸ್ತರು ಯಥಾಸ್ಥಿತಿಯಂತೆ ಟೈಪ್ ಬಡಿಯುತ್ತಿ ದ್ದರು. ಶೀನಪ್ಪ ಗುಮಾಸ್ತರ ಬಳಿ ನಿಂತು,

"ನಮ್ಮ ಕೇಸ್ ಗುಣವಾಗಿದೆಯಲ್ಲ ? ಆದರೂ ನಮ್ಮ ಎದ್ರಿಯೂ ಊರಲ್ಲಿ ಸ್ತ್ರೀಪಾರ್ಟಿ ಕೊಡು ತ್ತಿದ್ದಾನೆ. ಏನಿದು ಗುಮಾಸ್ತರೆ ?"

ಶೀನಪ್ಪನ ಮಾತು ಕೇಳಿ ವಕೀಲರ ಕಚೇರಿ ಯಲ್ಲಿದ್ದವರೆಲ್ಲ ಘೊಳ್ಳನೆ ನಕ್ಕರು. ಶೀನಪ್ಪ ಕಕ್ಕಾವಿಕ್ಕಿಯಾಗಿ ಅವರ ನಗುವ ಮುಖಗಳನ್ನು ದುರದುರನೆ ನೋಡಿದರು.

"ಹೇಳಿ ಗುಮಾಸ್ತರೆ, ಯಾಕೆ ನಗುತ್ತೀರಿ ? " ಎಂದು ಅವರು ತಮ್ಮ ಕೋಪವನ್ನು ನುಂಗುತ್ತ ಆಗ್ರಹಪಡಿಸಿದರು.

"ಅಲ್ಲ, ನಿಮ್ಮ ಎದ್ರಿಯವರು ಸ್ತ್ರೀಪಾರ್ಟಿ ಕೊಡುತ್ತಿದ್ದಾರೆಂದಿರಲ್ಲ ?"

ಕೂತವರ ಬಾಯಿಯಿಂದ ಮತ್ತೊಮ್ಮೆ ನಗೆಯ ಅಲೆ ಹೊರಟಿತು.

"ಏನು ಅವನು ಸ್ತ್ರೀಪಾರ್ಟಿ ಕೊಡುತ್ತಿದ್ದಾ ನೆಂದು ನಾನು ಹೇಳಿದ್ದು ಸುಳ್ಳೆ ? ನೀವೆಲ್ಲ ಏಕೆ ನಗುತ್ತೀರಿ ?" ಎಂದು ಶೀನಪ್ಪ ಕಣ್ಣರಳಿಸಿದರು.

ಪುನಃ ಎಲ್ಲರೂ ನಕ್ಕರು.

"ನಿಮ್ಮ ಎದ್ರಿ ಏನು ಮಾಡುತ್ತಿದ್ದಾನೆಂದು ಕನ್ನಡದಲ್ಲೇ ಹೇಳಿಬಿಡಿ ಶೀನಪ್ಪ," ಎಂದರು ಗ-ಮಾಸ್ತರು ನಿಷ್ಕರುಣೆಯ ನಗುವಿನೊಡನೆ.

"ಅಂದರೆ ತನಗೆ ಕೇಸ್ ಗುಣವಾಗಿದೆ ಎನ್ನುತ್ತ ಎಲ್ಲರಿಗೂ ಕಾಫಿ ಕೊಡುತ್ತಿದ್ದಾನೆ. ನಾನು ನನಗೆ ಕೇಸ್ ಗುಣವಾಯಿತೆಂದು ಒಂದು ಹೋಟೆಲಿನಲ್ಲಿ ಚಹ ಕೊಡಿಸುವಾಗ ಅವನೂ ಮತ್ತೊಂದು ಹೋಟೆಲಿನಲ್ಲಿ ಸ್ತ್ರೀಪಾರ್ಟಿ ಕೊಡುವ ಸುದ್ದಿ ತಿಳಿಯಿತು. ಕೂಡಲೇ ಬಸ್ಸು ಹತ್ತಿದೆ."

"ಕೇಸು ಗುಣವಾಯಿತೆಂದು ನಿಮಗೆ ಹೇಗೆ ತಿಳಿಯಿತು ? ತೀರ್ಪು ತಿಳಿದೊಡನೆ ನಿಮ್ಮನ್ನು ನಾನು ಎಷ್ಟು ಹುಡುಕಾಡಿದರೂ ನೀವು ಸಿಗಲಿಲ್ಲ. ತೀರ್ಪು ಹೇಳುವಾಗ ನಿಮ್ಮ ಎದ್ರಿ ಕೋರ್ಟಿನಲ್ಲೇ ಇದ್ದರು !" ಎಂದರು ಗುಮಾಸ್ತರು.

"ನನಗೆ ನೋಡಿ..." ಅಂತೋನಿಯ ಹೆಸರು ಹೇಳಲು ಶೀನಪ್ಪನಿಗೆ ಸಂಕೋಚವಾಯಿತು. "ಒಬ್ಬ ಹೇಳಿದ. ಕೂಡಲೇ ಹೋದೆ."

"ಏನು ಅವನು ನಿಮ್ಮ ಮಾವನೆ ? ಹೆಸರು ಹೇಳಬಾರದೆ?" ಎಂದು ಗುಮಾಸ್ತರು ನಕ್ಕರು. "ಅಂತೋನಿ ನನ್ನೊಡನೆ ಇದನ್ನು ಆಗಲೇ ಹೇಳಿ ಯಾಗಿದೆ. ಅವನ ಮಾತು ಕೇಳಿ ನೀವು ಟೀ–ಅಲ್ಲ ಸ್ತ್ರೀಪಾರ್ಟಿ ಕೊಟ್ಟಿರಲ್ಲ ! "

ಶೀನಪ್ಪ ಕಣ್ಣು ಮುಚ್ಚಿಕೊಂಡು "ದೇವರೇ !" ಎನ್ನುತ್ತ ಹಿಂದಿದ್ದ ವಕೀಲರ ಬೆಂಚಿನ ಮೇಲೆ ಧೊಪ್ಪನೆ ಕುಳಿತುಕೊಂಡರು. ▲


ಕುಬೇರದ್ವೀಪ, ನೌರು

ಮೂಲ: ಕ್ರಿಸ್ಟೋಫರ್ ಲುಕಾಸ್
ಅನುವಾದ: ಆರ್. ಶ್ರೀನಾಗೇಶ

ವಿಷುವವೃತ್ತದಿಂದ ದಕ್ಷಿಣಕ್ಕೆ ಕೇವಲ ೫೩ ಕಿಲೋಮೀಟರುಗಳ ಅಂತರದಲ್ಲಿ 'ನ ಭೂತೋ ನ ಭವಿಷ್ಯತಿ' ಎನ್ನಬಹುದಾದ ದೇಶವೊಂದಿದೆ. ಅಲ್ಲಿನ ೩.೩೦೦ ಜನ ನಿವಾಸಿಗಳಿಗೆ ನೋಟುಗಳೆಂದರೆ ಕಾಗದದ ಚೂರುಗಳ ಸಮಾನ; ಕೆಲಸವೆಂದರೆ ಪರರು ಮಾಡುವಂಥಾದ್ದು. ಕೇವಲ ಇಪ್ಪತ್ತೆರಡು ಚದುರ ಕಿಲೋಮೀಟರುಗಳಷ್ಟು ವಿಸ್ತೃತವಾಗಿದ್ದು ನಕಾಶೆಯ ಮೇಲೆ ಚುಕ್ಕೆಯಷ್ಟೇ ಅಸ್ತಿತ್ವ ಪಡೆದ ಈ ದ್ವೀಪ ನೀಲಿ ಶಾಂತಸಾಗರದ ಅಪಾರತೆಯಲ್ಲಿ ವಿಲೀನವಾದಂತೆ ಕಾಣುತ್ತದೆ. ಈ ಭೂಮಿಯ ತುಣುಕು ಮತ್ತಾವುದೂ ಅಲ್ಲ, ಜಗತ್ತಿನ ಅತಿ ಶ್ರೀಮಂತ ದೇಶ ನೌರು.

ತೆಂಗಿನಕಾಯಿ ಬಿದ್ದು ನಜ್ಜುಗುಜ್ಜಾಗಿರುವ ತಗಡಿನ ಛಾವಣಿಯ ಮನೆಗಳು ಭವ್ಯವಾದ ಪಿಯಾನೋಗಳಿಂದಲೂ ಪಾತ್ರೆ ತೊಳೆಯುವ ಹಾಗೂ ಬಟ್ಟೆ ಒಗೆಯುವ ಮಶೀನುಗಳಿಂದಲೂ ರಿಫ್ರಿಜರೇಟರುಗಳು, ಜಪಾನಿ ಟೇಪ್ ರೆಕಾರ್ಡರುಗಳು, ಹಳೆಯ ಪೋಲರಾಯ್ಡ್ ಕ್ಯಾಮರಾಗಳಿಂದಲೂ ಫ್ರೆಂಚ್ ಪರಿಮಳಗಳಿಂದಲೂ ತುಂಬಿ ತುಳುಕುತ್ತಿವೆ. ಈ ದೇಶದಲ್ಲಿ ೧೯ ಕಿಲೋಮೀಟರು ಉದ್ದವಾದ ವೃತ್ತಾಕಾರದ ಒಂದೇ ಒಂದು ರಾಜಮಾರ್ಗವಿದ್ದರೂ ಅದರ ಮೇಲೆ ಓಡಾಡುವ ಕಾರುಗಳ, ಮೋಟಾರ್ ಸೈಕಲ್ಲುಗಳ ಸಂಖ್ಯೆ ೨೦೦೦ದಷ್ಟು. ಮೋಟಾರು ಕೆಟ್ಟಾಗ ನೌರು ದೇಶದ ಜನ ರಿಪೇರಿ ಮಾಡಿಸುವುದರ ಬದಲು ಹೊಸ ಮೋಟಾರುಗಳನ್ನೇ ಕೊಳ್ಳು ತ್ತಾರೆ. ಹೀಗಾಗಿ ಹಳೆಯ ಕಾರುಗಳನ್ನಿರಿಸಿದ ಸ್ಥಳ ಮುರುಕು ಕಾರುಗಳ ಪಾರ್ಕಿಂಗ್ ಸ್ಥಳದಂತೆ ಕಾಣಿ ಸುತ್ತದೆ.

ಏನೇ ಇರಲಿ, ನೌರು ದೇಶ ಅಸಾಧಾರಣವೂ ಅತ್ಯದ್ಭುತವೂ ಆಗಿದೆಯೆಂದು ಅನ್ನಲೇಬೇಕು. ಅದು ಅತಿ ಚಿಕ್ಕ, ಜಗತ್ತಿನಿಂದ ಅತಿ ದೂರವಾದ ಪ್ರಜಾರಾಜ್ಯ. ಫಿಜಿ ದ್ವೀಪದಿಂದ ಆಗ್ನೇಯಕ್ಕೆ ಹಡಗುಗಳ ಮಾರ್ಗಕ್ಕೆ ಅತೀತವಾದ ನೌರು ದೇಶ ಮೊನ್ನೆ ತಾನೇ ಜನವರಿಯಲ್ಲಿ ಸ್ವಾತಂ



ತ್ರ್ಯದ ಮೂರನೇ ವರ್ಷದಲ್ಲಿ ಕಾಲಿರಿಸಿತು. ೫.೨೬೩ ಎಕರೆಗಳಷ್ಟು, ಅಂದರೆ ನ್ಯೂಯಾರ್ಕಿನ ಕೆನ್ನೆಡಿ ಏರ್‌ಪೋರ್ಟ್‌ನ್ನು ಹಿಡಿಸುವಷ್ಟು ಮಾತ್ರ ನೌರು ವಿಸ್ತರವಾಗಿದೆ.

ಈ ದೇಶ ಇಪ್ಪತ್ತೆರಡು ವರ್ಷ ಕಾಲ ಸ್ವಾತಂತ್ರ್ಯ ಹೋರಾಟ ನಡೆಸುತ್ತಿದ್ದಾಗ ಬ್ರಿಟನ್, ಆಸ್ಟ್ರೇಲಿಯಾ ಹಾಗೂ ನ್ಯೂಝೀಲೆಂಡು ಗಳು ನೌರುವಿನ ಅಧಿಪತ್ಯವನ್ನು ನಡೆಸಿದ್ದವು. ಕೊನೆಗೂ ಈ ದೇಶ ಸಂಯುಕ್ತ ರಾಷ್ಟ್ರ ಸಂಸ್ಥೆಯ ಮೂಲಕ ಸ್ವಾತಂತ್ರ್ಯವನ್ನು ಸಂಪಾದಿಸಿತು. ಸದಾ ಕಾಲವೂ ನಗುಮೊಗದಿಂದಿರುವ ನೌರು ಜನರಿಗೆ ಅಥವಾ ರಕ್ತಪಾತವಿಲ್ಲದೆ ಸ್ವರಾಜ್ಯ ಸಂಪಾದಿಸಿದ ರೆಂಬುದೂ ಮುಖ್ಯವಾದದ್ದು. ಶಬ್ದಗಳೇ ಅವರ ಆಯುಧಗಳಾಗಿದ್ದವು.

ಜಗತ್ತಿನ ಅತಿ ಹೆಚ್ಚು ವೈಯಕ್ತಿಕ ಆದಾಯದ ಹಾಗೂ ಅತಿ ಕಡಿಮೆ ಜೀವನ ವೆಚ್ಚದ ದೇಶ ಇದಾಗಿದೆ. ಅಲ್ಲಿ ಪ್ರತಿ ಗಂಡಸು, ಹೆಂಗಸು, ಮಗುವಿನ ಸರಾಸರಿ ವಾರ್ಷಿಕ ಆದಾಯ ೬೫,೦೦೦ ರೂಪಾಯಿಗಳಷ್ಟು; ಅಂದರೆ, ಅಮೇರಿಕ ಹಾಗೂ ಕುವೈತುಗಳಲ್ಲಿನ ಪ್ರತಿ ವ್ಯಕ್ತಿಯ ವಾರ್ಷಿಕ ಆದಾಯದ ಎರಡು ಪಟ್ಟು.

ಇಂತಹ ಚಿಕ್ಕ ದೇಶ ಇಷ್ಟು ಶ್ರೀಮಂತವಾಗಿ ರುವುದು ಹೇಗೆ? ಅದನ್ನು ಒಂದೇ ಶಬ್ದದಲ್ಲಿ ವಿವರಿಸಬಹುದು— ಫಾಸ್ಫೇಟ್. ದ್ವೀಪದ ಐದರಲ್ಲಿ ನಾಲ್ಕಂಶ ಅತ್ಯುತ್ತಮ ದರ್ಜೆಯ ಸುಣ್ಣದ ಫಾಸ್ಫೇಟ್‌ನಿಂದ ತುಂಬಿಹೋಗಿದೆ. ಕಂದುಬಣ್ಣದ, ಮುಟ್ಟಿದರೆ ಪುಡಿಪುಡಿಯಾಗುವ ಈ ಪದಾರ್ಥ ಅತ್ಯಮೌಲ್ಯವಾದ ಹಾಗೂ ಅಪರೂಪವಾಗಿ ದೊರೆಯುವ ಗೊಬ್ಬರ. ಕಳೆದ ೭೩ ವರ್ಷಗಳಲ್ಲಿ ಆಸ್ಟ್ರೇಲಿಯಾ ಹಾಗೂ ನ್ಯೂಝೀಲಂಡುಗಳನ್ನು ಇದು ಬಹುಮಟ್ಟಿಗೆ ಹಚ್ಚಹಸುರಾಗಿ ಪರಿವರ್ತಿಸಿದೆ.

ಅತಿ ಕುತೂಹಲಕಿನ ಪ್ರವಾಸಿಕರನ್ನು ನೌರು ಆಕರ್ಷಿಸಲಾರದು. ಏಕೆಂದರೆ, ಮೊದಲನೆಯದಾಗಿ, ಯಾವನೇ ಒಬ್ಬ ನಿವಾಸಿಯಿಂದ ಆಮಂತ್ರಣ ದೊರೆಯದ ಹೊರತು ಈ ದೇಶವನ್ನು ಪ್ರವೇಶಿಸಲು ಸಂದರ್ಶಕರಿಗೆ ಅವಕಾಶ ದೊರೆಯಲಾರದು. ಹಿಂದೆ ಶಾಲಾ ಶಿಕ್ಷಕನಾಗಿದ್ದ, ಚತುರನಾದ, ಚೌಕಾಶಿ ಸ್ವಭಾವದ, ನೌರು ದೇಶದ ಅಧ್ಯಕ್ಷ ಹ್ಯಾಮರ್ ಡಿ. ರೋಬರ್ಟ್‌ನೇ ಇದಕ್ಕೆ ಕಾರಣವೆನ್ನಬೇಕು. ಭೋಳೆ ಸ್ವಭಾವದ ತನ್ನ ಶ್ರೀಮಂತ ನಿವಾಸಿಗಳನ್ನು ಹೊರಗಿನವರು ಸ್ವಲಾಭಕ್ಕಾಗಿ ಉಪಯೋಗಿಸಿಕೊಳ್ಳಬಹುದೆಂದು ಆತ ಹೊರಗಿನವರು ಹೊರಗೇ ಇರಲಿ ಎಂದು ಆಶಿಸುತ್ತಾನೆ. ಎರಡನೆಯದಾಗಿ, ಇಲ್ಲಿ ಹೊಟೇಲುಗಳಿಲ್ಲದ್ದರಿಂದ ಮನಸ್ಸಿರಲಿ ಬಿಡಲಿ ಸಂದರ್ಶಕರು ತಮಗೆ ಆಮಂತ್ರಣವಿತ್ತವರ ಆತಿಥ್ಯವನ್ನು ಸ್ವೀಕರಿಸಲೇಬೇಕು. ಮೂರನೆಯದಾಗಿ, ಸಿಡ್ನಿಯಿಂದ ೩,೫೦೦ ಕಿಲೋಮೀಟರು, ಟೋಕಿಯೋದಿಂದ ೫,೦೦೦ ಕಿಲೋಮೀಟರು ದೂರವಿರುವ ನೌರುದೇಶಕ್ಕೆ ಹೊರಜಗತ್ತಿನ ಸಂಪರ್ಕ ಬರುವುದು ವಾರಕ್ಕೊಂದಾವರ್ತಿ ಫಿಜಿಯಿಂದ ಬರುವ ವಿಮಾನದಿಂದ ಮಾತ್ರ.

ಮೊದಲ ನೋಟಕ್ಕೆ ಈ ದೇಶ ದಕ್ಷಿಣ ಸಮುದ್ರಗಳಲ್ಲಿನ ಇತರ ದ್ವೀಪಗಳಂತೆ ಶಾಂತವಾಗಿ ಕಂಡುಬರುತ್ತದೆ. ನಡುವೆ ಹವಳದ ಗುಡ್ಡಗಳು, ಇತ್ತ ಸಮುದ್ರ ತೀರ; ಇವೆರಡರ ಮಧ್ಯೆ ಫಲವತ್ತಾದ ಪಟ್ಟಿ. ಹೀಗಾಗಿ ಆಲಸ್ಯಜೀವಿಗಳಾದ ನೌರುವಿನ ಜನ ಸಮುದ್ರತೀರಕ್ಕೆ ಹತ್ತಿರ ಹತ್ತಿರವಾಗಿಯೇ ವಾಸಿಸುತ್ತಾರೆ. ತೆಂಗಿನ ತೋಟದಲ್ಲೇ ಅವರ ಮನೆ. ಲಕಲಕ ಹೊಳೆಯುವ ಉಸುಬಿನ ಮೇಲೆ ಎಳೆದು ತಂದುಹಾಕಿದ ನಾವೆಗಳನ್ನು ನೀವಲ್ಲಿ ಕಾಣಬಹುದು. ವ್ಯಾಪಾರಿಗಾಳಿ ಬೀಸುವಾಗ ಮಲ್ಲಿಗೆಯ ಸುವಾಸನೆಯಿಂದ ದ್ವೀಪವೆಲ್ಲ ತುಂಬಿಹೋಗುತ್ತದೆ.

ನೌರುನೊಳಗೆ ಸುಮಾರು ೭೫೦ ಮೀಟರುಗಳಷ್ಟು ದೂರ ಹೋಗುವುದೇ ತಡ, ದ್ವೀಪ ಹಾಳು ಸುರಿಯತೊಡಗುತ್ತದೆ. ಅಲ್ಲಿ ಬುಲ್‌ಡೋಜರುಗಳು, ಕ್ರೇನುಗಳು ಹಗಲೂ ರಾತ್ರಿ ಅವಿಶ್ರಾಂತವಾಗಿ ಫಾಸ್ಫೇಟನ್ನು

ಕಾಣಬಹುದು. ಇವು ಪ್ರತಿವರ್ಷ ಇಪ್ಪತ್ತು ಲಕ್ಷ ಟನ್ ಫಾಸ್ಫೇಟನ್ನು ಅಗಡು ದ್ವೀಪ ಹಾಳು ಸುರಿಯುವಂತೆ ಮಾಡುತ್ತಿವೆ. ನೌರು ತನ್ನ ಶ್ರೀಮಂತಿಕೆಗೆ ತೆರಬೇಕಾದ ಬೆಲೆ ಇದು.

ನಾಲ್ಕೂವರೆ ಕೋಟಿ ಟನ್ ಫಾಸ್ಫೇಟನ್ನು ಈಗಾಗಲೇ ತೆಗೆಯಲಾಗಿದೆ. ೧೯೯೫ ರ ಹೊತ್ತಿಗೆ ಫಾಸ್ಫೇಟ್ ಸಂಗ್ರಹ ತೀರಿಹೋಗುವುದು. ಮುಂದೇನು? ಅಲ್ಲಿ ಆರ್ಥಿಕ ವಿಪತ್ತು ಸಂಭವಿಸುವುದೇ? ನೌರುನ ಅಧ್ಯಕ್ಷ ಹ್ಯಾಮರ್ ಡಿ. ರೋಬರ್ಟ್ ವ್ಯಾವಹಾರಿಕ ಬುದ್ಧಿಯುವನೂ ದೂರದೃಷ್ಟಿಯುಳ್ಳವನೂ ಆಗಿದ್ದರಿಂದ ಅಲ್ಲಿ ಹೀಗಾಗಲಾರದು. ಪ್ರತಿ ಟನ್ನಿನಿಂದ ದೊರೆಯುವ ೬೦ ರೂಪಾಯಿಗಳಲ್ಲಿ ನೌರು ಸರಕಾರ ೫ ರೂಪಾಯಿಗಳನ್ನು ಫಾಸ್ಫೇಟು ತೆಗೆಯುವ ಭೂಮಿಯ ಒಡೆಯರಿಗೆ ಗೌರವಧನದ ರೂಪದಲ್ಲಿಯೂ ೨೯ ರೂಪಾಯಿಗಳನ್ನು ಬಡ್ಡಿ ದೊರೆಯುವ ಐದು ಟ್ರಸ್ಟ್ ಫಂಡುಗಳಲ್ಲಿಯೂ ವಿನಿಯೋಗಿಸುತ್ತದೆ. ಹೀಗಾಗಿ ೧೯೯೫ ರ ಗಡಿಯನ್ನು ತಲುಪುವ ವೇಳೆಗೆ ನೌರು ೨೬೦ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ತೊಡಗಿಸಿ ಅದರಿಂದ ಪ್ರತಿ ವರ್ಷ ಹದಿನೆಂಟು ಕೋಟಿ ರೂಪಾಯಿಗಳಷ್ಟು ಆದಾಯವನ್ನು ಪಡೆಯುವುದು. ಅಂದರೆ ಅಲ್ಲಿನ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಈ ಆದಾಯದಿಂದ ಪ್ರತಿಯೊಬ್ಬರೂ—ಚಿಕ್ಕ ಮಗು ಕೂಡ—ವರ್ಷಂಪ್ರತಿ ೫೪.೦೦೦ ರೂಪಾಯಿಗಳನ್ನು ಪಡೆಯಬಲ್ಲರು.

ಈ ಅಪಾರ ಸಂಪತ್ತಿನ ಬಲದಿಂದಲೇ ಇಂದು ನೌರು ದೇಶ ದಕ್ಷಿಣ ಶಾಂತಸಾಗರದ ಮೊದಲನೆಯ ಹಾಗೂ ಸಂಪೂರ್ಣ ಸ್ವತಂತ್ರವಾದ ಪ್ರಜಾರಾಜ್ಯವನ್ನು ಹೊಂದಿದೆಯಷ್ಟೇ ಅಲ್ಲ, ಹಾಗೆ ಹೇಳಿಕೊಳ್ಳಲು ಅಗತ್ಯವಾದ ಸರಕಾರಿ ಆಡಳಿತ ಯಂತ್ರವನ್ನೂ ಹೊಂದಿದೆ.

ಪರ್‌ಸ್ಟ್ರಿಪ್ ನಾಚೆ ಕೆಲ ಆಫೀಸುಗಳು ಗುಂಪು-ಗುಂಪಾಗಿದ್ದು ಕಂಡುಬರುತ್ತದೆ. ಅಲ್ಲಿ ಐವರು ಕ್ಯಾಬಿನೆಟ್ ಮಂತ್ರಿಗಳು, ಒಂದು ಟೇಬಲ್ ಕಂಪ್ಯೂಟರ್, ಆರು ಜನ ಬ್ರಿಟಿಶ್ ಹಾಗೂ ಆಸ್ಟ್ರೇಲಿಯನ್ ಸಲಹೆಗಾರರು ಸೇರಿ ೫೪೭ ಸರಕಾರಿ ನೌಕರರ ಸಹಾಯದಿಂದ ಆಡಳಿತ ಯಂತ್ರ ಸುಗಮವಾಗಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳುತ್ತಾರೆ. ಆಡಳಿತ ವ್ಯವಸ್ಥೆಯಿಂದಾಗಿ ಫೈಲುಗಳು ದಿನಾಲೂ ಹುಟ್ಟಿಕೊಳ್ಳುವುದರಿಂದ ಈ ಬಗ್ಗೆ ತಮಾಷೆಗಳೂ ಹುಟ್ಟಿಕೊಳ್ಳುತ್ತಿರುತ್ತವೆ.

ಈ ಆಫೀಸುಗಳ ಹತ್ತಿರವೇ ನೌರುನ ಪಾಸ್-ಪೋರ್ಟ್ ಆಫೀಸೂ ಟೆಲಿಪ್ರಿಂಟರ್ ರೂಮೂ ಇವೆ. ಇಲ್ಲಿಂದಲೆ ಬಂಗಲೆಯಷ್ಟು ದೊಡ್ಡದಾದ ನೌರುನ ಪಾರ್ಲಿಮೆಂಟ್ ಭವನಕ್ಕೂ ಮೆಲ್-ಬೋರ್ನಿನಲ್ಲಿನ ಸಾಗರೋತ್ತರ ಕಚೇರಿಗೂ ಸಂಪರ್ಕ ಜೋಡಿಸಲಾಗಿದೆ. ಮೆಲ್‌ಬೋರ್ನಿನಲ್ಲಿನ ಈ ಆಫೀಸನ್ನು ಹೊರತುಪಡಿಸಿ ಬೇರಾವ ದೇಶದಲ್ಲೂ ಇದರ ರಾಯಭಾರವಿಲ್ಲ. ೧೮ ಸದಸ್ಯರ ಪಾರ್ಲಿಮೆಂಟು ವರ್ಷದಲ್ಲಿ ೪೦ ಸಲ ಸೇರುತ್ತದೆ. ಉಳಿದ ವೇಳೆಯಲ್ಲಿ ಅದರ ಬಾಗಿಲಿಗೆ ಬೀಗವೇ ಗತಿ.

'ನೌರು ಲೋಕಲ್ ಗವರ್ನ್‌ಮೆಂಟ್ ಕೌನ್ಸಿಲ್' ಎಂಬ ಸಂಸ್ಥೆ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ. ಸುಮಾರಾಗಿ ಪಾರ್ಲಿಮೆಂಟ್ ಸದಸ್ಯರೇ ಈ ಸಂಸ್ಥೆಯ ಸದಸ್ಯರಾಗಿದ್ದರೂ ಈ ಎರಡೂ ಸಂಸ್ಥೆಗಳ ನಡುವಿನ ವ್ಯವಹಾರ ಪತ್ರ ಮೂಲಕವಾಗಿಯೇ ನಡೆಯುತ್ತದೆ.

ಈ ದೇಶಕ್ಕೆ ತನ್ನದೇ ಆದ ನಾಣ್ಯಪದ್ಧತಿಯಿಲ್ಲ. ಅದು ಆಸ್ಟ್ರೇಲಿಯನ್ ಪೌಂಡುಗಳನ್ನು ಬಳಸುತ್ತಿದೆ. ಹಾಗೆಯೆ ಅದಕ್ಕೆ ತನ್ನದೆ ಆದ ಲಿಪಿಬದ್ಧ ಭಾಷೆಯೂ ಇಲ್ಲ. ಮಾತನಾಡಲು ನೌರು ಭಾಷೆಯನ್ನೂ ಬರವಣಿಗೆಗೆ ಇಂಗ್ಲಿಷನ್ನೂ ಇಲ್ಲಿ ಉಪಯೋಗಿಸಲಾಗುತ್ತಿದೆ. ಆಳವಾದ ಬಂದರವೂ ಇಲ್ಲ. ಹಡಗುಗಳು ತೀರದಿಂದ ದೂರದಲ್ಲಿ ನಿಂತು, ಭೀಮಕಾಯದ ಕ್ಯಾಂಟಿಲಿವರುಗಳ ಸಹಾಯದಿಂದ ಫಾಸ್ಫೇಟನ್ನು ತುಂಬಿಕೊಳ್ಳುವವು.

ಬ್ರೆಡ್‌ಫ್ರುಟ್, ಪಪಾಯಿ, ತೆಂಗು, ಸಮುದ್ರದಲ್ಲಿನ ಬಂಡೆಗಲ್ಲುಗಳಾಚೆ ದೊರೆಯುವ ಅಷ್ಟಿಷ್ಟು

ಬೊನಿಟೋ ಮೀನುಗಳನ್ನು ಬಿಟ್ಟರೆ ಈ ದ್ವೀಪದ ಉತ್ಪಾದನೆಯೆಂದರೆ ಫಾಸ್ಫೇಟು ಮಾತ್ರ. ದ್ವೀಪದ ಐದರಲ್ಲಿ ನಾಲ್ಕರಷ್ಟು ಭಾಗವನ್ನು ಅಮೂಲ್ಯವಾದ ಗೊಬ್ಬರ ಆವರಿಸಿಕೊಂಡಿರುವಾಗ ನೌರು ದೇಶ ಹವಳಮಯ ಸಮುದ್ರತೀರದಲ್ಲಿ ದವಸಧಾನ್ಯಗಳನ್ನು ಬೆಳೆಯಲಾರದೆಂಬುದು ನಿಸರ್ಗದ ವಿಡಂಬನೆಯೇ ಸರಿ. ಅಲ್ಲಿ ನೀರಿನ ತುಟಾಗ್ರತೆಯೂ ಸಾಕಷ್ಟಿದೆ. ಪ್ರತಿವರ್ಷ ಸುಮಾರು ೧೯೩ ಸೆಂಟಿಮೀಟರುಗಳಷ್ಟು ಮಳೆಯಾದರೂ ಬಾಷ್ಪೀಭವನದ ಪ್ರಮಾಣವೂ ಅಷ್ಟೇ ಇರುವುದರಿಂದ ಜಲಾಶಯಗಳನ್ನು ನಿರ್ಮಿಸಲೂ ಬರುವಂತಿಲ್ಲ. ಹೀಗಾಗಿ ವರ್ಷಂಪ್ರತಿ ಆಹಾರ ಧಾನ್ಯಗಳನ್ನೂ, ಒಂದು ಕೋಟಿ ಅರವತ್ತು ಮೂರು ಲಕ್ಷ ಲೀಟರುಗಳಷ್ಟು ನೀರನ್ನೂ ಈ ದ್ವೀಪ ಆಸ್ಟ್ರೇಲಿಯದಿಂದ ಪಡೆಯಬೇಕಾಗಿದೆ.

ನೌರು ಸರಕಾರ ಜಗತ್ತಿನಲ್ಲಿಯೇ ಉಚ್ಚಮಟ್ಟದ ಕಲ್ಯಾಣಕಾರಿ ಸರಕಾರವಾಗಿ ಜನರನ್ನು 'ಉಂಡಾಡಿ'ಗಳನ್ನಾಗಿ ಮಾಡಿದೆ. ಅಲ್ಲಿ ಮನೆ ಬಾಡಿಗೆ ತಿಂಗಳಿಗೆ ಅತಿ ಹೆಚ್ಚೆಂದರೆ ಮೂವತ್ತಾರು ರೂಪಾಯಿಗಳು. ವೈದ್ಯಕೀಯ ಸೇವೆ ಹಾಗೂ ಕಡ್ಡಾಯದ ಶಿಕ್ಷಣ (೬ ವರ್ಷಗಳಿಂದ ೧೭ ವರ್ಷಗಳ ನಡುವೆ) ಉಚಿತವಾಗಿವೆ. ನೌರುನಲ್ಲಿನ ೩೫೦ ಟೆಲಿಫೋನುಗಳ ಮೂಲಕ ಪುಕ್ಕಟೆಯಾಗಿ ಮಾತಾಡಬಹುದು. ಅಷ್ಟೇ ಅಲ್ಲ, ಸಂತತಿ ನಿಯಂತ್ರಣ ಗುಳಿಗೆಗಳು, ಹದಿನೈದು ದಿನಕ್ಕೊಮ್ಮೆ ಹೊರಡುವ ವೃತ್ತಪತ್ರಿಕೆ, ಕಣ್ಣಡಕ, ಕೃತಕ ಕೇಶಗಳು ಕೂಡ ಪುಕ್ಕಟೆಯಾಗಿ ದೊರೆಯುವವು.

ಮುಖ್ಯವಾಗಿ ಪೋಲಿನೇಶಿಯನ್ ಮೂಲದವರಾದ ಈ ಜನರಿಗೆ ದೈಹಿಕಶ್ರಮ ಒಗ್ಗದ್ದರಿಂದ ಆ ಕೆಲಸಗಳನ್ನು ಮಾಡಿಸಿಕೊಳ್ಳಲು ೧೩೦ ಯುರೋಪಿಯನ್ ಎಂಜನಿಯರರನ್ನೂ ಹಾಂಕಾಂಗಿನಿಂದ ೯೨೪ ಜನ ಕುಶಲಕರ್ಮಿಗಳನ್ನೂ ಕೆಳದರ್ಜೆಯ ಕೆಲಸಗಳಿಗಾಗಿ ಗಿಲ್ಬರ್ಟ್ ಹಾಗೂ ಎಲ್ಲಿಸ್ ದ್ವೀಪಗಳಿಂದ ೭೧೫ ಜನರನ್ನೂ ಕರೆತಂದಿದ್ದಾರೆ. ವರ್ಷಕ್ಕೆ ಬರೇ ೯೦,೬೦೦ ರೂಪಾಯಿ ಸಂಬಳ ಮತ್ತು ಖರ್ಚಿಗಾಗಿ ೨೨ ೫೦೦ ರೂಪಾಯಿಗಳನ್ನು ಪಡೆಯುವ ನೌರು ದೇಶದ ಅಧ್ಯಕ್ಷರು, ಈ ಕಾರ್ಮಿಕರ ಕಿಸೆ ಖಾಲಿ ಬೀಳಬಾರದೆಂದು ಪ್ರತಿಯೊಬ್ಬರಿಗ ಕಡಿಮೆಯೆಂದರೆ ೮.೭೩೦ ರೂಪಾಯಿಗಳಷ್ಟು ಸಂಬಳ ಕೊಡುತ್ತಾರೆ.

ನೌರುನ ಜನರ ಜೀವನ ಮೊದಲಿಂದಲೂ ಹೀಗೇ ಇತ್ತೆಂದಲ್ಲ. ಬ್ರಿಟನ್ನಿನ ವ್ಹೇಲ್ ಬೇಟೆಯಾಡುವ 'ಹಂಟರ್' ಹಡಗಿನ ಕ್ಯಾಪ್ಟನ್ ಜಾನ್ ಫಿಯರ್ನ್ ಈ ದ್ವೀಪವನ್ನು ಪ್ರಥಮತಃ ನೋಡಿದ್ದು ೧೭೯೮ ರಲ್ಲಿ. ಆತ ಇದನ್ನು ಸಂತೋಷ ದ್ವೀಪವೆಂದು ಕರೆದ. ಜಾನ್ ಫಿಯರ್ನ್ ಈ ದ್ವೀಪವನ್ನು ಶೋಧಿಸಿದ ಅಲ್ಪ ಕಾಲದಲ್ಲಿಯೇ ವ್ಹೇಲ್ ಬೇಟೆಗಾರರು ನೌರುನಲ್ಲಿ ಹಡಗುಗಳನ್ನು ನಿಲ್ಲಿಸತೊಡಗಿದರು. ಬಿಳಿಯರ ಆಗಮನದೊಂದಿಗೆ ಸರಾಯಿ, ರೋಗರುಜಿನಗಳು ಹಾಗೂ ಮದ್ದುಗುಂಡುಗಳ ಮೂಲಕ ಕಷ್ಟ ಪರಂಪರೆಯೂ ಬಂತು.

೧೮೭೮ ರ ಸುಮಾರಿಗೆ ನೌರುನ ಹನ್ನೆರಡು ಜನಾಂಗಗಳು ತಮ್ಮತಮ್ಮಲ್ಲಿ ವೈನವಿರೋಧಿಸುವಂತಹ ಯುದ್ಧದಲ್ಲಿ ತೊಡಗಿದ್ದವು. ಸಾಮ್ರಾಜ್ಯ ಪಿಪಾಸಿಯಾದ ಜರ್ಮನಿ ೧೮೮೮ ರಲ್ಲಿ ಎಬರ್ ಎಂಬ ಗನ್‌ಬೋಟನ್ನು ಅಲ್ಲಿ ಕಳಿಸಿ ಈ ಆಂತರಿಕ ಸಮರವನ್ನು ಕೊನೆಗೊಳಿಸಿತಲ್ಲದೆ ನೌರುವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿತು. ಅಂದಿನಿಂದ ಅದು ೮೦ ವರ್ಷಗಳ ವರೆಗೆ ವಿದೇಶಿ ಆಡಳಿತಕ್ಕೆ ಒಳಪಟ್ಟಿತ್ತು.

೧೯೦೫ ರಲ್ಲಿ ನ್ಯೂಜೀಲೆಂಡಿನ ಆಲ್ಬರ್ಟ್ ಎಲ್ಲಿಸ್‌ನ ಪ್ಯಾಸಿಫಿಕ್ ಫಾಸ್ಫೇಟ್ ಕಂಪನಿ ಜರ್ಮನಿಯ ಮತ್ತೊಂದು ಕಂಪನಿಯೊಡನೆ ಒಪ್ಪಂದ ಮಾಡಿಕೊಂಡು ಈ ದ್ವೀಪದ ಫಾಸ್ಫೇಟನ್ನು ಮಾರಿ ಅಪಾರ ಹಣ ಸೆಳೆದುಕೊಳ್ಳತೊಡಗಿತು. ಮೊದಲನೇ ಮಹಾಯುದ್ಧ ಮುಗಿದ ನಂತರ ಲೀಗ್ ಆಫ್ ನೇಶನ್ಸ್ ನೌರು ದ್ವೀಪವನ್ನು ಬ್ರಿಟನ್ನಿನ ಆದಿಷ್ಟ ವಸಾಹತೆಂದು ಸಾರಿ ಅದರ ಆಡಳಿತವನ್ನು

ಬ್ರಿಟನ್, ಆಸ್ಟ್ರೇಲಿಯ ಹಾಗೂ ನ್ಯೂಜೀಲೆಂಡು ಗಳಿಗೊಪ್ಪಿಸಿತು.

ಈ ಮೂರು ಸರಕಾರಗಳೂ ಸೇರಿ ಬ್ರಿಟಿಶ್ ಫಾಸ್ಫೇಟ್ ಕಮಿಶನರ್ಸ್ ಎಂಬ ಲಾಭೋದ್ದೇಶವಿಲ್ಲದ ಸಂಸ್ಥೆಯನ್ನು ಸ್ಥಾಪಿಸಿದವು. ಇದು ಫಾಸ್ಫೇಟ್ ತೆಗೆಯುವ ಹಳೆ ಕಂಪನಿಯನ್ನು ಕೊಂಡುಕೊಂಡಿತು. ಈ ಹೊಸ ಸಂಸ್ಥೆ ಫಾಸ್ಫೇಟ್ ತೆಗೆಯುವ ಕೆಲಸ ಮಧ್ಯೆ ಮಧ್ಯೆ ನಿಂತುಹೋಗದಂತೆ ನೋಡಿಕೊಂಡಿತಲ್ಲದೆ ನೌರು ನಿವಾಸಿಗಳನ್ನು ಮಕ್ಕಳಂತೆ ನಡೆಸಿಕೊಂಡಿತು.

ಅಲ್ಲಿಂದ ಮುಂದೆ ಎರಡನೆ ಮಹಾಯುದ್ಧದ ವಿಪತ್ಕಾರಿ ವರ್ಷಗಳು ಪ್ರಾರಂಭವಾದವು. ಜಪಾನೀಯರು ನೌರುವನ್ನು ವಶಪಡಿಸಿಕೊಂಡರು. ಈ ವಿಪತ್ತಿನಲ್ಲಿ ಸೊರಗಿ ಕಡ್ಡಿಯಾದ ಕೇವಲ ೧,೩೦೦ ನಿವಾಸಿಗಳು ಮಾತ್ರ ಉಳಿದುಳಿದರು. ೧೯೪೭ರಲ್ಲಿ ಸಂಯುಕ್ತ ರಾಷ್ಟ್ರ ಸಂಘ ನೌರುವನ್ನು ಟ್ರಸ್ಟ್ ಪ್ರದೇಶವೆಂದು ಸಾರಿ, ಮೊದಲಿನಂತೆ ಆಸ್ಟ್ರೇಲಿಯ, ನ್ಯೂಜೀಲೆಂಡ್, ಬ್ರಿಟನ್ನುಗಳಿಗೆ ಅದರ ಆಡಳಿತ ಒಪ್ಪಿಸಿತು. ಅದರ ಈಗ [illegible] ಬದಲಾಗಿತ್ತು. ನೌರುನ [illegible] ತನೂ ದೇಶಕ್ಕೆ ಸ್ವಾತಂತ್ರ್ಯ[illegible] ತೊಡಗಿದ. ಆಗ ಸಂಯುಕ್ತ ರಾಷ್ಟ್ರ ಸಂಘ ಅದನ್ನಾಳುವ ರಾಷ್ಟ್ರಗಳ ಮೇಲೆ ಒತ್ತಾಯ ತಂದಿದ್ದರಿಂದ ಜನವರಿ ೩೧, ೧೯೬೮ ರಂದು ನೌರು ಸ್ವತಂತ್ರವಾಯಿತು.

ಹಣವಿರುವುದು ಖರ್ಚುಮಾಡಲಿಕ್ಕಾಗಿಯೇ ಎಂಬ ಭಾವನೆ ಇಲ್ಲಿ ಬೆಳೆದುಬಂದದ್ದರಿಂದ ಬ್ಯಾಂಕಿನಲ್ಲಿ ಹಣ ಕೂಡಿಡುವುದನ್ನು ಯಶಸ್ಸಿನ ಸಂಕೇತವೆಂದಾಗಲಿ ಸಾಮಾಜಿಕ ಪ್ರತಿಷ್ಠೆಯ ಕುರುಹೆಂದಾಗಲಿ ಪರಿಗಣಿಸಲಾಗುವುದಿಲ್ಲ. ಅಲ್ಲಿನ ಜನ ಖಾಸಗಿ ಆಸ್ತಿಯನ್ನು ಖಾಸಗಿಯಲ್ಲವೆನ್ನುವ ರೀತಿಯಲ್ಲಿ ಕಾಣುವುದಕ್ಕೆ ಇದೇ ಕಾರಣವಿರಬೇಕು. ನೀವು ಯಾರೊಬ್ಬನ ಕಾರನ್ನೋ ಟೈಪ್‌ರೈಟರನ್ನೋ ರೇಡಿಯೋವನ್ನೋ ಹೊಗಳಿದರೆ ಅವನದನ್ನು ನಿಮಗೆ ಭಕ್ಷೀಸಾಗಿ ಕೊಟ್ಟುಬಿಡುತ್ತಾನೆ. ಹಾಗೆ ಮಾಡಬೇಕೆಂಬ ರೂಢಿಯೇ ಅಲ್ಲಿ ಬೆಳೆದುಬಂದಿದೆ.

ಹಾಳು ಸುರಿಯುವ ನೌರುವನ್ನು ಹೇಗೆ ಸುಂದರವಾಗಿಸಬೇಕೆಂಬುದೇ ಒಂದು ಸಮಸ್ಯೆಯಾಗಿದೆ. ಆಸ್ಟ್ರೇಲಿಯದಿಂದ ಹಡಗಿನಲ್ಲಿ ಮಣ್ಣು ತುಂಬಿ ತಂದು ಫಾಸ್ಫೇಟ್ ಉದ್ಯಮದಿಂದಾಗಿ ಹಾಳು ಬಿದ್ದ ಸ್ಥಳಗಳಲ್ಲಿ ತುಂಬಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಕನಸನ್ನು ನೌರುನ ಅಧ್ಯಕ್ಷರು ಕಾಣುತ್ತಿದ್ದಾರೆ. ನೌರುನ ಸಂಪತ್ತಿನ ಮಟ್ಟದಿಂದ ನೋಡಿದರೆ ಕೂಡ, ಅಷ್ಟು ದೂರದಿಂದ ಮಣ್ಣು ಸಾಗಿಸುವ ಖರ್ಚು ಮಿತಿಮೀರಿದ್ದೇ ಆಗಿದೆ. ಹೀಗಾಗಿ ಅಲ್ಲಿನ ಜನ ದ್ವೀಪದ ನಿಸರ್ಗ ಕುರೂಪತೆಗೆ ಹೊಂದಿಕೊಂಡು ಹೋಗಲೇಬೇಕಾಗಿದೆ. ಆರಾಮವಾಗಿ ಬಿಸಿಲಿಗೆ ಮೈಯೊಡ್ಡಿ ಅಥವಾ ಹವಳದ ಬಂಡೆಗಲ್ಲುಗಳ ಮೇಲೆ ಕಡುನೀಲ ಸಾಗರ ಸುರುಳಿ ಸುರುಳಿಯಾಗಿ ಅಪ್ಪಳಿಸುವುದನ್ನು ನೋಡುತ್ತ, ಹಣವನ್ನು ಖರ್ಚು ಮಾಡುತ್ತ, ನೌರುನ ಜನ ಕಾಲ ಕಳೆಯುತ್ತಾರೆ. ▲

ಹುಂಹೂದಿ ಗಾದೆಗಳು

ಒಳ್ಳೆಯ ಯುದ್ಧಕ್ಕಿಂತ ಕೆಟ್ಟ ಶಾಂತಿ ಮೇಲು.

ನಿಮ್ಮ ಗುಟ್ಟು ನಿಮ್ಮ ಸೆರೆಯಾಳು, ಹೊರಗೆಡವಿದರೆ ನೀವು ಅದರ ಸೆರೆಯಾಳು.

ಕಚ್ಚಲಾಗದಿದ್ದರೆ ಹಲ್ಲು ತೋರಿಸಬಾರದು.

ಪ್ರೀತಿ ಬೆಣ್ಣೆ ಇದ್ದಂತೆ, ರೊಟ್ಟಿಯೊಂದಿಗೆ ಬಲು ರುಚಿ. — ರಾಜಾರಾವು ಹೆಗಡೆ


ಆಹಾ! ಬೆಳವಣಿಗೆಯ ಶಿಖರ!
ಒಂದು ಟಾನಿಕ್ ಇಷ್ಟನ್ನು ಸಾಧಿಸಬಲ್ಲುದೆ?
ಹೌದು, ಇನ್‌ಕ್ರೆಮಿನ್ ನಿಮ್ಮ ಮಗುವಿನ ಬೆಳವಣಿಗೆಗಾಗಿ ಹಸಿವನ್ನು ಧಾರಾಳವಾಗಿ ಕೊಡುತ್ತದೆ
ಹೌದು, ಇನ್‌ಕ್ರೆಮಿನ್ ನಿಮ್ಮ ಮಗುವಿನ ಬೆಳವಣಿಗೆಗಾಗಿ ಹಸಿವನ್ನು ಧಾರಾಳವಾಗಿ ಕೊಡುತ್ತದೆ
ದೊಡ್ಡ ಮಕ್ಕಳಿಗೆ ಕಬ್ಬಿಣದ ಸತ್ವವಿರುವ
• ಇನ್‌ಕ್ರಿಮಿನ್ ಸಿರಪ್
ಶಿಶುಗಳಿಗಾಗಿ
• ಇನ್‌ಕ್ರಿಮಿನ್ ಡ್ರಾಪ್ಸ್
Incremin syrup
Incremin drops
Lederle
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ದೊರೆಯುತ್ತದೆ. ಲೆಡರ್ಲೀ—ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವಾಸಾರ್ಹವೆನಿಸಿದ ಕಂಪೆನಿಯವರಿಂದ ಇನ್‌ಕ್ರಿಮಿನ್ ತಯಾರಿಸಲ್ಪಡುತ್ತದೆ. ಲೆಡರ್ಲೀ ಡಿವಿಜನ್—ಸಯನಾಮಿಡ್ ಇಂಡಿಯಾ ಲಿಮಿಟೆಡ್, ಪಿ.ಓ. ಬಾಕ್ಸ್ 9109, ಬೊಂಬಾಯಿ 25 ಡಿ.ಡಿ.
• ಅಮೆರಿಕನ್ ಸಯನಾಮಿಡ್ ಕಂಪೆನಿಯವರ ರಿಜಿಸ್ಟರ್ಡ್ ಟ್ರೇಡ್ ಮಾರ್ಕ್



ಎರಡು ಸಾಕೆ?

ಜನನ ನಿಯಂತ್ರಣ ಯುಗದ ಒಂದು ಭವಿಷ್ಯದ್ದರ್ಶನ

ಜಗತ್ತಿನ ಜನಸಂಖ್ಯೆ ಈಗ ೩೬೦ ಕೋಟಿ. ಈಗಿನ ವೇಗದಲ್ಲಿಯೇ ಅದು ಹೆಚ್ಚುತ್ತ ಹೋದರೆ ಅದು ಇಸವಿ ೨೦೦೦ ದಷ್ಟು ಹೊತ್ತಿಗೆ ೭೦೦ ಕೋಟಿಯಾಗುವುದು ಖಂಡಿತ. ಇನ್ನು ೯೦೦ ವರ್ಷಗಳಲ್ಲಿ ಪೃಥ್ವಿಯ ಹೊರಮೈಯಲ್ಲಿ ಪ್ರತಿ ಚದರಡಿ ನೆಲಕ್ಕೆ ಒಂದು ಸಾವಿರ ಜನ ಆಗ ಬಹುದು. ಆದರೆ ಅದಕ್ಕಿಂತ ಎಷ್ಟೋ ಮೊದಲೇ—ಬಹುಶಃ ೨೦೦೦ ನೇ ಇಸವಿಯಷ್ಟು ಹೊತ್ತಿಗೆ ನೂರಾರು ಕೋಟಿ ಜನ ಹಸಿವಿನಿಂದ ಸತ್ತು ಮನುಷ್ಯಕುಲ ಎಂದೂ ಮರೆಯದ ಪಾಠ ಕಲಿಯಲಿದೆ ಸಂತತಿ ನಿಯಂತ್ರಣ ಆಮೇಲೆ ಕೇವಲ ಪ್ರಚಾರ ಮತ್ತು ಸ್ವಯಂಪ್ರೇರಣೆಯಿಂದ ಕೈಕೊಳ್ಳತಕ್ಕ ವಿಚಾರವಾಗಿ ಉಳಿಯದು. ಅದು ಸರಕಾರಗಳ ಕಾನೂನುಗಳ ಕಕ್ಷೆಯಲ್ಲಿ ಬರಲಿದೆ. ಕೆಲ ಶತಮಾನಗಳ ನಿರಂತರ ವೈಧಾನಿಕ ಕ್ರಮಗಳ ಫಲವಾಗಿ ಆಹಾರದ ಉತ್ಪಾದನೆಗೆ ಸರಿಹೊಂದು ವಷ್ಟು ಮಾತ್ರವೇ ಜನಸಂಖ್ಯೆ ಇರಬೇಕೆಂಬುದು ಕಾನೂನಿನಿಂದ ವಿಧಿಸಲ್ಪಡಲಿದೆ. ಇದೆಲ್ಲದರ ಸಾರಾಂಶವೆಂದರೆ ಸಾಯುವವರ ಸಂಖ್ಯೆ ನೋಡಿ ಹುಟ್ಟಬೇಕಾದವರ ಸಂಖ್ಯೆಯನ್ನು ಗೊತ್ತುಪಡಿಸ ಲಾಗುವುದು.

ಒಂದು ಮಾತಿನಲ್ಲಿ, 'ಎರಡು ಸಾಕು' ಯುಗದ ಪ್ರವರ್ತನೆಯಾಗುವುದು.

ಬಹಳ ಹಿತವಾದ ಯುಗದ ಆರಂಭ. ಬಡತನ ವಿಲ್ಲ—ಬರಗಾಲವಂತೂ ಇಲ್ಲವೇ ಇಲ್ಲ. ಸಾಂಕ್ರಾಮಿಕ ರೋಗರುಜಿನಗಳು ಬಹಳ ಮಟ್ಟಿಗೆ ನಿವೃತ್ತಿ ಹೊಂದಿರುವುವು.

ಆದರೆ ಜೀವಶಾಸ್ತ್ರದಲ್ಲಿ ಸಂಶೋಧನಾನಿರತ ರಾದ ಅನೇಕ ವಿಜ್ಞಾನಿಗಳ ಪ್ರಕಾರ ಈ ಹೊಸ ಜಗತ್ತು ನಾವು ಈಗ ಭಾವಿಸಿದಷ್ಟು ಆಕರ್ಷಕ ವಾಗಿರುವುದಿಲ್ಲ. ಈ ಎರಡು ಸಾಕು ಯುಗ ಕೆಲ ಶತಮಾನಗಳ ಕಾಲ ಸಾಗಿದ ನಂತರ ಈ ಇಪ್ಪತ್ತನೇ ಶತಮಾನದ ಮನುಷ್ಯ ಅಕಸ್ಮಾತ್ತಾಗಿ ಆ ಯುಗದಲ್ಲಿ ಕಾಲಿರಿಸಿದ್ದೇ ಆದರೆ ಅವನನ್ನು ಕೆಲ ವಿಷಯಗಳು ಚಕಿತಗೊಳಿಸುವವು. ಒಂದೆಂ-ದರೆ ಮನುಷ್ಯರಲ್ಲಿ ಪರಸ್ಪರ ಈಗಿರುವಷ್ಟು ಹೋಲಿಕೆ ಕಾಣಿಸುವುದಿಲ್ಲ. ಇನ್ನೊಂದೆಂದರೆ ಈ ಸುಭಿಕ್ಷ ಯುಗದ ಜನರು ಈಗಿನವರಷ್ಟು ಗಟ್ಟಿಮುಟ್ಟಾಗಿರದೆ ಮೃದುವಾಗಿಯೂ ದುರ್ಬಲ ರಾಗಿಯೂ ಗೋಚರಿಸುವರು.

ಕೆಲ ತಾಸು ಈ ಹೊಸ ಜಗತ್ತಿನಲ್ಲಿ ಕಳೆಯು ವಷ್ಟರಲ್ಲೇ ಈ ಕಾಲಾಂತರದ ಆಗಂತುಕ ಅಸಂಖ್ಯ ಆಸ್ಪತ್ರೆ ಅಥವಾ ಆರೋಗ್ಯಧಾಮಗಳಿರುವುದನ್ನು ಕಾಣುವನು; ಸಾಂಕ್ರಾಮಿಕ ರೋಗಮುಕ್ತವಾದ ಈ ಕಾಲದಲ್ಲಿ ಏಕಿಷ್ಟು ಆಸ್ಪತ್ರೆ ಆರೋಗ್ಯಧಾಮ ಗಳೆಂದು ಆಶ್ಚರ್ಯಪಡತೊಡಗುವನು. ವಿಚಾರಿಸಿ ದಾಗ ಅವನಿಗೆ ಹೆಚ್ಚಿನ ಜನ ಹೆಚ್ಚಿನ ಕಾಲ ಆಸ್ಪತ್ರೆ ಗಳಲ್ಲೇ ಕಳೆಯುವರೆಂದು ತಿಳಿದುಬರುವುದು.

ಅವರು ಇನ್‌ಫ್ಲುಯೆಂಜಾ, ಪ್ಲೇಗಿನಂಥ ರೋಗಗಳಿಗಾಗಿಯಲ್ಲ. ವಿಚಿತ್ರವಾದ ಜನ್ಮಸಿದ್ಧ ರೋಗಗಳಿಗಾಗಿ ಚಿಕಿತ್ಸೆಯನ್ನು ಜೀವಮಾನವೆಲ್ಲ ಪಡೆಯುತ್ತಿರಬೇಕಾಗಿದೆ. ಆಗಿನ ಡಾಕ್ಟರರಿಗೆ ಈಗಿನವರಿಗಿಂತಲೂ ಹೆಚ್ಚು ತಲೆನೋವಿರುತ್ತದೆ. ಅವರು ಪ್ರತಿ ವ್ಯಕ್ತಿಗೂ ಬೇರೆಬೇರೆಯ ಔಷಧೋಪಚಾರವನ್ನು ಕಲ್ಪಿಸಬೇಕಾಗುವುದು. ಅಷ್ಟು ಮಾಡದಿದ್ದರೆ ಜನರು ಮಕ್ಕಳು ಹಡೆಯುವ ವಯಸ್ಸಿನ ವರೆಗೂ ಬದುಕುವುದೇ ಕಷ್ಟವಾಗುವುದರಿಂದ ಮನುಷ್ಯಕುಲದ ಉಳಿವೇ ಗಂಡಾಂತರಕ್ಕೊಳಗಾಗುವುದು.

ಇದೆಲ್ಲವೂ 'ಎರಡು ಸಾಕು' ನೀತಿಯ ನೇರ ಫಲವಾಗಿ ಕೆಲವಾರು ಶತಮಾನಗಳಲ್ಲಿ ಒದಗುವವೆಂದು ನ್ಯೂಯಾರ್ಕಿನ ಜೀವಶಾಸ್ತ್ರಿ ಲಿಯನಾರ್ಡ್ ಅರ್ನ್‌ಸ್ಟೈನರು ಭವಿಷ್ಯ ಹೇಳುತ್ತಾರೆ. ಇದಕ್ಕೆ ಆಧಾರವೇನು? ಮನುಷ್ಯನನ್ನೊಳಗೊಂಡು ಲೈಂಗಿಕ ಸಂತಾನೋತ್ಪಾದನ ಪದ್ಧತಿಯನ್ನವಲಂಬಿಸುವ ಯಾವುದೇ ಪ್ರಾಣಿಗಳ ವಿಕಾಸಕ್ರಮವನ್ನು ಗಮನಿಸಿದರೆ ಇದು ತಂತಾನೇ ಹೊಳೆಯುವುದೆಂದು ಡಾ. ಅರ್ನ್‌ಸ್ಟೈನರ ಹೇಳಿಕೆ.

ಜೀವವಿಕಾಸ ಹೇಗೆ ನಡೆಯುತ್ತದೆ? ಜೀವಜಾತಿಗಳು ತಮ್ಮ ಗುಣಯೋಗ್ಯತೆಗಳನ್ನು ಹೇಗೆ ಉಳಿಸಿಕೊಂಡು ಹೆಚ್ಚಿಸಿಕೊಳ್ಳುತ್ತವೆ?

ಈಗ ಶಾಲಾಬಾಲಕರಿಗೂ ತಿಳಿದಿರುವಂತೆ, ಜಗತ್ತಿನಲ್ಲಿ ಹುಟ್ಟುವ ಪ್ರತಿ ಜೀವಿ ತನ್ನ ತಂದೆ ಮತ್ತು ತಾಯಿಯಿಂದ ಅರ್ಧ–ಅರ್ಧ ಆನುವಂಶಿಕ ಗುಣಗಳನ್ನು ಪಡೆದುಬಂದಿರುತ್ತದೆ. ಜೀನ್ ಎಂಬ ವಂಶವಾಹಿಗಳ ಮೂಲಕ ಇಳಿದು ಬರುವ ಈ ಗುಣಗಳು ಆಕಸ್ಮಿಕ ಲೈಂಗಿಕ ಸಂಯೋಗಗಳಿಂದಾಗಿ ಪುನಃ ಪುನಃ ಮಿಶ್ರಣವಾಗುವುದರಿಂದ ಮಾನವನಿಂದ ಸಸ್ಯಗಳ ವರೆಗೆ ಪ್ರತಿ ಜಾತಿಯಲ್ಲಿ ಅನೇಕಾನೇಕ ವೈವಿಧ್ಯಗಳು ಕಾಣಸಿಕೊಳ್ಳುತ್ತವೆ.

ಹೀಗೆ ಮಿಶ್ರಣಗಳಿಂದುಂಟಾಗುವ ವೈವಿಧ್ಯಗಳಲ್ಲದೆ ಜೀವಿ ತನ್ನ ಪರಿಸರದ ಪ್ರಭಾವದಿಂದಲೂ ಕೆಲ ಗುಣ ವಿಶೇಷಗಳನ್ನು ಪಡೆಯುತ್ತದೆ. ಇದೂ ಅಲ್ಲದೆ ಆಕಸ್ಮಿಕವಾಗಿ ವಂಶವಾಹಿಗಳಲ್ಲೇ ಒಮ್ಮೊಮ್ಮೆ ವಿಕರಣ (mutation) ಗಳಾಗುವುದುಂಟು. ಈ ವಿಕರಣಗಳಿಂದ ಹೊಚ್ಚ ಹೊಸ ಲಕ್ಷಣಗಳು ಪ್ರತ್ಯಕ್ಷವಾಗಬಹುದು. ಹೀಗೆ ಆದ ವಿಕರಣಗಳು ಜೀವಿಗೆ ತನ್ನ ಪರಿಸರದಲ್ಲಿ ಬಾಳಲು ಅನುಕೂಲವಾಗಿದ್ದರೆ ಆ ವಿಕರಣವುಳ್ಳ ವ್ಯಕ್ತಿಗಳು ಹೆಚ್ಚು ಯಶಸ್ವಿಯಾಗುವವು; ಆಗ ಹೊಸ ಗುಣವುಳ್ಳ ವ್ಯಕ್ತಿಗಳು ಇತರರಿಗಿಂತ ಹೆಚ್ಚು ಸಂಖ್ಯಾವೃದ್ಧಿ ಮಾಡಿಕೊಳ್ಳುವವು. ಆಗ ಮೂಲ ಆನುವಂಶಿಕ ಗುಣದ ಬದಲು ಈ ಹೊಸ ಗುಣ ಆ ಜಾತಿಯಲ್ಲಿ ಕಾಲಾಂತರದಲ್ಲಿ ನೆಲೆಗೊಳ್ಳುತ್ತದೆ. ಹೊಸ ಲಕ್ಷಣ ಬದುಕಿಗೆ ಪ್ರತಿಕೂಲವಾಗಿದ್ದಲ್ಲಿ ಅದನ್ನು ಪಡೆದ ವ್ಯಕ್ತಿ ನಷ್ಟವಾಗಿ ಹೋಗುತದೆ ಇಲ್ಲವೆ ಆ ವಿಕರಣವುಳ್ಳ ವ್ಯಕ್ತಿ ಹೆಚ್ಚು ಸಂತಾನವೃದ್ಧಿ ಮಾಡಿಕೊಳ್ಳಲಾರದೆ ಅದರ ವಂಶ ಬಹಳ ಮಿತಸಂಖ್ಯೆಯಲ್ಲಿ ಉಳಿಯುತ್ತದೆ. ಇದನ್ನೇ ನೈಸರ್ಗಿಕ "ಆಯ್ಕೆ" (selection) ಎನ್ನುವುದು. ಹೀಗೆ ವಂಶಾನುಗತ ಗುಣಗಳು, ಪರಿಸರದ ಪ್ರಭಾವದಿಂದಾದ ವೈಶಿಷ್ಟ್ಯಗಳು ಮತ್ತು ಆಕಸ್ಮಿಕ ವಿಕರಣಗಳು ಇವು ಮೂರರ ನಿರಂತರ ಪರಸ್ಪರ ಪರಿಣಾಮದಿಂದಲೇ ಮನುಷ್ಯ ಕೂಡ ವಿಕಾಸ ಹೊಂದುತ್ತ ಬಂದಿದ್ದಾನೆ. ಈ ವಿಧಾನಗಳಿಂದಲೇ ನಾವು ನಮ್ಮ ಲಕ್ಷ ವರ್ಷ ಪೂರ್ವದ ಪೂರ್ವಜರಿಗಿಂತ ಮೇಲ್ಮಟ್ಟದಲ್ಲಿದ್ದೇವೆ.

ಭವಿಷ್ಯತ್ತಿನ ಸಂತತಿ ನಿಯಂತ್ರಿತ ಸಮಾಜದಲ್ಲಿ ಇವು ಮೂರು ಅಂಶಗಳು ಯಾವ ರೀತಿಯಲ್ಲಿ ಕೆಲಸ ಮಾಡುವವೆಂದು ನೋಡೋಣ. ಮೊದಲು ಆಕಸ್ಮಿಕ ವಿಕರಣಗಳು. ಇವು ಮನುಷ್ಯನ ನಿಯಂತ್ರಣಕ್ಕೆ ಒಳಪಡದ ಕಾರಣಗಳಿಂದ ಒದಗುವುದರಿಂದ ಅದನ್ನು ತಡೆಯಲಾಗದು. ಈ ವರೆಗೆ ಯಾವ ದರದಲ್ಲಿ ವಿಕರಣಗಳು ಆಗುತ್ತ ಬಂದಿವೆಯೋ ಅದೇ ದರದಲ್ಲಿ ಮುಂದೆಯೂ ಆಗುವುದು ನಿಶ್ಚಯ.

ಆದರೆ "ಆಯ್ಕೆ"ಯ ವಿಷಯ ಮಾತ್ರ

ಹಾಗಿಲ್ಲ. ವಿಕರಣಗಳಲ್ಲಿ ಅನುಕೂಲ ಮತ್ತು ಪ್ರತಿಕೂಲ ಎಂಬೆರಡು ತರಹ ಇವೆ. ನಿಸರ್ಗದಲ್ಲಿ ಪ್ರತಿ ಜೀವ ಜಾತಿಯಲ್ಲೂ ನಿರಂತರವಾಗಿ ಬದುಕಿಗಾಗಿ ಹೋರಾಟ ನಡೆಯುವುದರಿಂದ ಪ್ರತಿಕೂಲ ವಿಕರಣವನ್ನು ಹೊಂದಿದ ವಂಶಗಳು ಈ ಸ್ಪರ್ಧೆಯಲ್ಲಿ ಬಿದ್ದುಹೋಗುತ್ತವೆ. ಸ್ಪರ್ಧೆಯ ಪರಿಣಾಮವಾಗಿ ಎರಡು ಸಂಗತಿಗಳು ಒದಗುತ್ತವೆ. ಒಂದು. ಸಬಲ (ಬದುಕುಳಿಯುವ ದೃಷ್ಟಿಯಿಂದ—ದೇಹದಾರ್ಢ್ಯ ಮಾತ್ರದಿಂದಲ್ಲ) ವ್ಯಕ್ತಿಗಳಷ್ಟೇ ಉಳಿದು ವಂಶ ವೃದ್ಧಿಮಾಡಿಕೊಳ್ಳುವುದರಿಂದ ಒಟ್ಟಿನ ಮೇಲೆ ಜಾತಿ ಬಲಿಷ್ಠವಾಗುಳಿಯುವುದು; ಎರಡು, ಅನೇಕ ವಿಕರಣಗಳಲ್ಲಿ ಕೆಲವು ಮಾತ್ರವೇ ಉಳಿಯುವುದರಿಂದ ಒಟ್ಟಿನ ಮೇಲೆ ಆಯಾ ಜಾತಿಯ ವ್ಯಕ್ತಿಗಳಲ್ಲಿ ಪರಸ್ಪರ ಹೋಲಿಕೆ ಸಾಕಷ್ಟಿರುವುದು.

ಸಂತತಿ ನಿಯಂತ್ರಣದ ಸಮಾಜದಲ್ಲಿ ಏನಾಗುವುದು ನೋಡೋಣ. ನಮಗೆ ಜನಸಂಖ್ಯೆಯನ್ನು ಮಿತಗೊಳಿಸುವುದು ಮುಖ್ಯವಾಗಿದೆ. ನಿಸರ್ಗದಲ್ಲಿ ಸಂಖ್ಯಾಮಿತಿಯನ್ನು ಸಾಧಿಸುವ ರೀತಿ ನಮಗೆಲ್ಲ ಗೊತ್ತು. ರೋಗರುಜಿನಗಳಿಂದಲೂ ಶತ್ರು ಜಾತಿಗಳ ಕೈಗೆ ಸಿಕ್ಕಿ ಸ್ವಾಹಾ ಆಗುವುದರಿಂದಲೂ ಸ್ವಜಾತಿಯಲ್ಲೇ ಆಗುವ ಸ್ಪರ್ಧೆಯಿಂದಲೂ ನಿಸರ್ಗ ಸಂಖ್ಯಾಮಿತಿಯನ್ನು ಸಾಧಿಸುತ್ತದೆ. ಮನುಷ್ಯನಿಗೆ ಶತ್ರು ಜಾತಿಗಳು

ಉಳಿದಿಲ್ಲ. ಈ ಶತಮಾನದಲ್ಲಿ ಆತ ಸಾಂಕ್ರಾಮಿಕ ರೋಗಗಳನ್ನೂ ಹಿಡಿತಕ್ಕೆ ತಂದಿದ್ದಾನೆ. ರೋಗಗಳ ಹಾವಳಿ ತಲೆದೋರಿದೊಡನೆ ಅವುಗಳನ್ನು ಸರಕಾರಗಳು ಅಂಕೆಗೆ ತರುತ್ತವೆ. ಮನುಷ್ಯನ ಸಂಖ್ಯಾಮಿತಿಗೆ ಮಾರ್ಗವೊಂದೇ—ಜನನಗಳನ್ನೇ ನಿಯಂತ್ರಿಸುವುದು. ನಿಸರ್ಗ ಎಂದೂ ಜನನಗಳನ್ನು ನಿಯಂತ್ರಿಸುವುದಿಲ್ಲ— ಅದು ಜನನಗಳನ್ನು ಮರಣಗಳಿಂದ ಸರಿದೂಗಿಸುತ್ತದೆ; ದುರ್ಬಲ ವ್ಯಕ್ತಿಗಳಿಗೆ ಸಂತಾನವೃದ್ಧಿ ಮಾಡಿಕೊಳ್ಳಲು ಅದು ಅವಕಾಶವನ್ನು ಕೊಡುವುದೇ ತೀರ ಕಡಿಮೆ.

ಮಾನವ ಸಮಾಜದ ರಚನೆ ಮತ್ತು ಆಡಳಿತೆ ಕೆಲ ತತ್ವಗಳನ್ನು ಅನುಸರಿಸಬೇಕಾಗಿದೆ. ಅದರಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ, ಗುಂಪುಗುಂಪುಗಳ ನಡುವೆ ಪರಿಭೇದ ಪಕ್ಷಪಾತಗಳಿಗೆ ಎಡೆಯಿಲ್ಲ ಅದರಲ್ಲಿ ಕಾನೂನು ಮೂಲಕ ಜನನ ನಿಯಂತ್ರಣ ಮಾಡುವುದಾದರೆ ಎಲ್ಲರಿಗೂ ಸಂತಾನೋತ್ಪಾದನೆಯಲ್ಲಿ ಸಮಾನ ಹಕ್ಕುಗಳನ್ನು ಕೊಡಬೇಕಾಗುವುದು ಅಂದರೆ ಪ್ರತಿ ದಂಪತಿಗೆ ಎರಡು ಮಕ್ಕಳನ್ನು ಹಡೆದು ಬೆಳೆಸುವ ಹಕ್ಕು ಇರುತ್ತದೆ. ಹೀಗೆ ಹುಟ್ಟಿದ ಮಕ್ಕಳನ್ನು ಸಾಧ್ಯವಿದ್ದಷ್ಟು ಜತನದಿಂದ ಕಾಪಾಡುವುದೂ ಅಗತ್ಯವಾಗುತ್ತದೆ. ಇಲ್ಲದಿದ್ದರೆ ಜನಸಂಖ್ಯೆಯ ಹ್ರಾಸದ ಭಯವುಂಟು. ಸಂಖ್ಯೆಯ ವೃದ್ಧಿಯಷ್ಟೇ ಹ್ರಾಸವೂ ಭಯಪ್ರದವೇ ಆಗಿದೆಯಲ್ಲವೆ?

ಇಂಥ ವ್ಯವಸ್ಥೆಯಲ್ಲಿ ಸ್ಪರ್ಧೆಗೆ ಅವಕಾಶ ಉಳಿಯದು. ಆಗ ಆನುವಂಶಿಕ ರೋಗಗಳುಳ್ಳ ಜನರ ಅನುಪಾತ ಹೆಚ್ಚುವುದು. ಸದ್ಯಕ್ಕೆ ಇಂಥ ವಿಕಾರಗಳ ಸಂಖ್ಯೆ ಅಲ್ಪ–ಮಧುಮೇಹ ಪಾಂಡುಚರ್ಮ, ಕೊಕ್ಕೆಕೋಶದ ಅನೀಮಿಯ ಮೊದಲಾದವು. ಆಕಸ್ಮಿಕ ವಿಕರಣಗಳ ಫಲವಾಗಿ ಇನ್ನೂ ಎಷ್ಟೋ ಪ್ರತಿಕೂಲ ಗುಣಗಳು ಉಂಟಾಗಬಹುದು. ಈವರೆಗೆ ಅಂಥವು ಸಾಂಕ್ರಾಮಿಕ ರೋಗ ಮತ್ತು ಸ್ಪರ್ಧೆಯ ಮೂಲಕ ಬೇಗನೆ ನಿವೃತ್ತಿ ಹೊಂದು

ತ್ತಿದ್ದವು. ಇನ್ನು ಮುಂದೆ ಹಾಗಾಗಲಾರದ್ದರಿಂದ ಅವು ವಂಶಾನುಗತವಾಗಿ ಉಳಿದುಕೊಳ್ಳುವವು. ಈ ಪ್ರಕಾರ ಸಾಪೇಕ್ಷವಾಗಿ ಒಟ್ಟು ಜನಸಂಖ್ಯೆಯಲ್ಲಿ ಆನುವಂಶಿಕ ರೋಗಗಳಿಂದ ಬಳಲುವವರ ಅನುಪಾತ ಹೆಚ್ಚುವುದು.

ಆಕಸ್ಮಿಕ ವಿಕರಣಗಳಿಂದ ಉಂಟಾದ ಹೊಸ ಶರೀರ ಲಕ್ಷಣಗಳಲ್ಲಿ ಈ ವರೆಗೆ ಕೆಲವು ಲಕ್ಷಣ ಮಾತ್ರ ಉಳಿದುಕೊಂಡು ಬಂದಿವೆ; ಆದರೆ ಜನನ ನಿಯಂತ್ರಣದ ಸಮಾಜದಲ್ಲಿ ಇಂಥ ಮಾದರಿಗಳು ಬದುಕುಳಿಯುವ ಸಂಭವ ಹೆಚ್ಚಾಗುವುದರಿಂದ ಮನುಷ್ಯರ ಮುಖ ಮತ್ತು ಶರೀರ ಲಕ್ಷಣಗಳಲ್ಲಿ ಅಸಂಖ್ಯಾತ ಪ್ರಕಾರಗಳು ಆಗುವವು. ಅಂದರೆ ವ್ಯಕ್ತಿಗೂ ವ್ಯಕ್ತಿಗೂ ಹೋಲಿಕೆ ಕಡಿಮೆಯಾಗುವುದು.

ಹೀಗೆ ಮನುಷ್ಯ ಜಾತಿಯಲ್ಲಿ ಶರೀರ ಪ್ರಕೃತಿ ವೈವಿಧ್ಯಗಳು ಹೆಚ್ಚಿದಂತೆ ವೈದ್ಯಶಾಸ್ತ್ರದ ಸ್ವರೂಪವೂ ಬದಲಾಗಬೇಕಾಗುತ್ತದೆ, ಪ್ರಕೃತಿಗಳು ಅಸಂಖ್ಯವಾಗುವುದರಿಂದ ಅವುಗಳಿಗೆ ಬರುವ ರೋಗಗಳೂ ಅಸಂಖ್ಯವಾಗುವವು. ಅವುಗಳಿಗೆ ಪ್ರತೀಕಾರಗಳೂ ವೈವಿಧ್ಯಪೂರ್ಣವಾಗಬೇಕು. ಇಂದು ಕೂಡ ವೈದ್ಯರು ರೋಗಕ್ಕೆ ಪ್ರತೀಕಾರೋಪಾಯ ಗೊತ್ತಿದ್ದರೂ ಆ ಉಪಾಯ ರೋಗಿಯ ಪ್ರಕೃತಿಗೆ ಸರಿಹೊಂದದಿರುವುದರಿಂದ ಎಷ್ಟೋ ವೇಳೆ ಉಭಯಸಂಕಟದಲ್ಲಿ ಸಿಲುಕುತ್ತಾರೆ. ಭವಿಷ್ಯತ್ತಿನಲ್ಲಿ ಈ ಪೇಚಾಟ ಇನ್ನೂ ಹೆಚ್ಚಾದೀತು. ಪ್ರತಿ ರೋಗಿಗೂ ಅವನದೇ ಔಷಧವನ್ನು ತಯಾರಿಸುವ ಕಾಲವೂ ಬಂದೀತು. ಹಾಗೆಯೇ ಸಾಂಕ್ರಾಮಿಕಗಳಿಗಿಂತ ಆನುವಂಶಿಕ ವಿಕಾರಗಳು ಪ್ರಾಧಾನ್ಯ ಪಡೆಯುವವು.

ಮನುಷ್ಯ ಜಾತಿಯನ್ನು ಬಲಿಷ್ಠ ಸಮರ್ಥವಾಗಿ ಉಳಿಸುವುದಕ್ಕೆ ಈಗ ಗೊತ್ತಿದ್ದ ಮಟ್ಟಿಗೆ ಎರಡೇ ದಾರಿ ಇವೆ. ಒಂದು, ಧಾರಾಳವಾಗಿ ಮಕ್ಕಳು ಹುಟ್ಟಲು ಬಿಟ್ಟು ಸ್ಪರ್ಧೆ ಮತ್ತು ಇತರ ನೈಸರ್ಗಿಕ ವಿಧಾನಗಳಿಂದ ಸಮರ್ಥ ವ್ಯಕ್ತಿಗಳಷ್ಟೇ ಉಳಿ[illegible] ಮಾಡುವುದು. ಈಗ ಈ ದಾರಿ ಮುಚ್ಚಿದೆ. ಎರಡು, ಸಮರ್ಥ ಗುಣಗಳುಳ್ಳ ತಂದೆ ತಾಯಿಗಳಿಗೆ ಅಸಮರ್ಥರಿಗಿಂತ ಹೆಚ್ಚು ಮಕ್ಕಳನ್ನು ಪಡೆಯಗೊಡುವುದು. ಈ ದಾರಿ 'ಮಾನವ ಹಕ್ಕು'ಗಳಿಗೆ ಪ್ರಾಧಾನ್ಯವುಳ್ಳ ಸಮಾಜದಲ್ಲಿ ಅಸಾಧ್ಯ. ಆದ್ದರಿಂದ ಮಾನವ ಜಾತಿಯ ಸಾಮಾನ್ಯ ಶಾರೀರಿಕ ಸಾಮರ್ಥ್ಯ ಹ್ರಾಸ ಹೊಂದುತ್ತ ಹೋಗುವುದು ಜನನ ನಿಯಂತ್ರಣದ ಸಮಾಜದಲ್ಲಿ ಅನಿವಾರ್ಯವಾಗಿದೆಯೆಂದು ಆರ್ನ್‌ಸ್ಟೈನ್ ಅಭಿಪ್ರಾಯಪಡುತ್ತಾರೆ.

ಈಚೆಗೆ ಜೀವರಸಾಯನ ಶಾಸ್ತ್ರದಲ್ಲಾದ ಅದ್ಭುತ ಪ್ರಗತಿ (ಉದಾ: ಕೃತಕ ವಂಶವಾಹಿಗಳ ನಿರ್ಮಾಣ) ಯಿಂದ ಮೇಲೆ ಹೇಳಿದ ಎಲ್ಲ ಕಷ್ಟಗಳಿಗೂ ವಿಜ್ಞಾನಿ ಉತ್ತರ ಕೊಡುತ್ತಾನೆಂದು ಆಶಾವಾದಿಗಳು ವಾದಿಸುತ್ತಾರೆ. ಡಾ. ಆರ್ನ್‌ಸ್ಟೈನರ ಅಭಿಪ್ರಾಯದಲ್ಲಿ ಇದು ಆನೆಗಿಂತ ಮೊದಲು ಅಂಕುಶ ಕೊಂಡುಕೊಳ್ಳುವ ಹೆಡ್ಡತನ. ಈ ಹೊಸ ಜ್ಞಾನದಿಂದ ನಾವೇನಾದರೂ ಲಾಭ ಹೊಂದಬೇಕಾದರೆ ವಂಶವಾಹಿಗಳಲ್ಲಿ ಕಾಣುವ ಯಾವ ಗುಣ ಮನುಷ್ಯನ ಸಾರ್ವತ್ರಿಕ ಉನ್ನತಿಗೆ ಕಾರಣವಾಗುತ್ತದೆ, ಯಾವುದು ಅವನತಿಗೆ ಎಂದು ಗೊತ್ತಿರಬೇಕು. ಈ ವಿಷಯದಲ್ಲಿ ನಮ್ಮ ಜ್ಞಾನ ತೀರ ಅಲ್ಪ. ವಂಶವಾಹಿಗಳಲ್ಲಿ ಪ್ರತಿಯೊಂದರ (ಅವುಗಳ ಸಂಖ್ಯೆ ಲಕ್ಷಾಂತರ ಇದೆ) ಪ್ರತಿಯೊಂದು ಅಂಶದ ಗುಣಾವಗುಣಗಳನ್ನು ಅಭ್ಯಸಿಸಬೇಕು. ಇದು ಸೈದ್ಧಾಂತಿಕವಾಗಿ ಇಂದಿನ ಕಂಪ್ಯೂಟರ್ ಯುಗದಲ್ಲಿ ಅಸಾಧ್ಯವಲ್ಲದ್ದಿರೂ ಆಚರಣೆಯಲ್ಲಿ ಬಲು ಜಟಿಲವೂ ಅಸಾಧ್ಯಪ್ರಾಯವೂ ಆಗಿದೆ.

ಆರ್ನ್‌ಸ್ಟೈನರ ಅಭಿಪ್ರಾಯದಲ್ಲಿ ಸದ್ಯಕ್ಕೆ ಸಾಧ್ಯತೆಯ ಅಳವಿನಲ್ಲಿರುವ ಉಪಾಯವೊಂದೇ. ಮಾನವನ ಸಮರ್ಥ ಅಸ್ತಿತ್ವಕ್ಕೆ ಪ್ರತಿಕೂಲವೆಂದು ಸ್ಪಷ್ಟವಾಗಿ ಸಿದ್ಧವಾಗುವ ಅಂಶಗಳಾವವು ಎಂದು ಮೊದಲು ನಿಗದಿಪಡಿಸಿಕೊಂಡು ಅವುಗಳಿಗೆ ಕಾರಣವಾದ ವಂಶವಾಹಿಗುಣಗಳನ್ನು ನಿರ್ಧರಿಸಬೇಕು. [illegible]

ಲಕ್ಷಣಗಳಿಗೆ ಕಾರಣವಾದ ಅಂಶಗಳನ್ನೂ ವಿಶ್ಲೇಷಿಸಿ ತಿಳಿದುಕೊಳ್ಳಬೇಕು. ಖಚಿತವಾಗಿ ಪ್ರತಿಕೂಲವೆಂದು ಗೊತ್ತಿರುವ ವಂಶವಾಹಿಗುಣಗಳುಳ್ಳ ದಂಪತಿಗಳಿಗೆ ಮಕ್ಕಳನ್ನು ಪಡೆಯುವ ವಿಷಯದಲ್ಲಿ ನಿರುತ್ಸಾಹಕರವಾದ ಕಾನೂನು ಕ್ರಮಗಳನ್ನು ಕೈಕೊಳ್ಳುವುದು. ಹಾಗೆಯೇ ಖಚಿತವಾಗಿ ಅನುಕೂಲವೆಂದು ಸಿದ್ಧವಾದ ವಂಶವಾಹಿಗುಣಗಳುಳ್ಳ ದಂಪತಿಗಳಿಗೆ ಎರಡಕ್ಕಿಂತ ಹೆಚ್ಚು—ಮೂರೋ ನಾಲ್ಕೋ— ಮಕ್ಕಳನ್ನು ಹಡೆದು ಸಾಕುವುದಕ್ಕೆ ಸಹಾಯ ಮಾಡುವುದು. ಹೀಗೆ ಮಾಡಿದರೆ ಮನುಷ್ಯ ಜಾತಿ ಆನುವಂಶಿಕ ಅವನತಿಯಿಂದ ತಪ್ಪಿಸಿಕೊಳ್ಳಬಲ್ಲದು. ಆದರೆ ಇದು ಕೂಡ ಪ್ರಚಂಡ ರಾಜಕೀಯ ತೊಡಕುಗಳಿಂದ ತುಂಬಿದ ವಿಷಯ.

ಇಪ್ಪತ್ತನೇ ಶತಮಾನದ ಕೊನೆಯ ಪಾದದಲ್ಲಿ ಮನುಷ್ಯನನ್ನು ಎದುರಿಸುತ್ತಿರುವ ನಿಜವಾದ ಸಮಸ್ಯೆಗಳು ಕಮ್ಯೂನಿಜಂ. ಸರ್ವಾಧಿಕಾರ ಅಥವಾ ಪ್ರಜಾಸತ್ತೆಗಳಲ್ಲಿ ಒಂದನ್ನಾರಿಸುವುದಲ್ಲ. ಮನುಷ್ಯ ಜಾತಿ ಪರಮಾಣು, ವಿಷಾನಿಲ ಅಥವಾ ಕ್ರಿಮಿ ಯುದ್ಧದಿಂದ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸುವುದು ಒಂದು; ಜನನ ನಿಯಂತ್ರಣ ಯುಗದಲ್ಲಿ (ಒಂದಲ್ಲ ಒಂದು ಬಗೆಯ ಜನನ ನಿಯಂತ್ರಣ ಮಾಡದೆ ಗತಿಯಿಲ್ಲ ಎಂಬುದನ್ನು ಆರ್ನ್‌ಸ್ಟೈನರೂ ಒಪ್ಪುತ್ತಾರೆ) ಸಾವಕಾಶವಾಗಿ ಮಾನವ ಕುಲ ಗುಣಾವನತಿ ಹೊಂದುವುದನ್ನು ತಡೆಯುವುದು ಎರಡು—ಈ ಸಮಸ್ಯೆಗಳೇ ನಿಜವಾದ ಸಮಸ್ಯೆಗಳು. ▲

ಆಧಾರ: 'ಸಾಯನ್ಸ್ ಡೈಜೆಸ್ಟ್'

★★★★★★★★★★★★★★

ರವೀಂದ್ರರು ಸಾಹಿತ್ಯಕ ಜೀವನವನ್ನು ಪ್ರಾರಂಭಿಸಿದ ಮೊದಲ ದಿನಗಳಲ್ಲಿಯೇ ಅವರಿಗೆ ದೊರೆತ ಕೀರ್ತಿ ಹತ್ತು ಜನ ಮಿತ್ರರನ್ನು ತಂದುಕೊಟ್ಟರೆ ಇಪ್ಪತ್ತು ಜನ ಶತ್ರುಗಳನ್ನು ನಿರ್ಮಿಸಿತು. ಅಸೂಯ ಪರರಾದ ಈ ಜನ ಲೆಕ್ಕಣಿಕೆಯಿಂದ ಅವರ ವಿರುದ್ಧ ಅಪಪ್ರಚಾರ ಮಾಡಿ ಹಗೆ ಸಾಧಿಸಲು ಪ್ರಯತ್ನಿಸಿದರಾದರೂ ಅದರಿಂದ ಏನೂ ಪರಿಣಾಮವಾಗದ್ದರಿಂದ ಅವರು ಬೇರೆ ಉಪಾಯ ಹೂಡಿದರು. ಒಂದು ದಿನ ರವೀಂದ್ರರು ತಮ್ಮ ಕೋಣೆಯಲ್ಲಿ ಕುಳಿತು ದತ್ತಚಿತ್ತರಾಗಿ ಬರೆಯುತ್ತಿದ್ದಾಗ, ಧಾಂಡಿಗನೊಬ್ಬ ಕಿಟಕಿಯಿಂದ ಹಾರಿ ಅವರೆದುರು ನಿಂತು ಕತ್ತಿಯನ್ನು ಝಳಪಿಸ ತೊಡಗಿದ.

ರವೀಂದ್ರನಾಥರು ಕಣ್ಣೆತ್ತಿ ನೋಡಿದರು. ಮೃತ್ಯು ಎದುರಿಗೇ ನಿಂತಿದ್ದರೂ ಮುಖದಲ್ಲಿ ಭಯದ ಸುಳಿವೂ ಕಾಣಿಸಿಕೊಳ್ಳಲಿಲ್ಲ. "ನಿನಗೇನು ಬೇಕು?" ವಿಶ್ವಕವಿಗಳು ಶಾಂತಭಾವದಿಂದ ಕೇಳಿದರು. "ನಿನ್ನನ್ನು ಕೊಲ್ಲಲೆಂದೇ ನಾನಿಲ್ಲಿ ಬಂದಿದ್ದೇನೆ. ಹೂಂ ಸಾಯಲಿಕ್ಕೆ ತಯಾರಾಗು," ಎಂದು ಆತ ಕತ್ತಿಯನ್ನು ಝಳಪಿಸುತ್ತಾ ಹೇಳಿದ.

"ನೋಡು, ಮಹತ್ವದ ಪತ್ರವೊಂದನ್ನು ಬರೆಯುತ್ತಿದ್ದೇನೆ. ಅದು ಮುಗಿಯಲು ಒಂದು ಗಂಟೆಯಾದರೂ ಬೇಕು. ಕೊಂಚ ಸಮಯ ಬಿಟ್ಟು ಬಂದರೆ ಒಳ್ಳೇದು. ನಾನು ತಯಾರಾಗಿರುತ್ತೇನೆ," ಎಂದು ರವೀಂದ್ರರು ಹೇಳಿ ಮತ್ತೆ ಬರೆಯುವುದರಲ್ಲಿ ಮಗ್ನರಾದರು. ಆ ಮೇಲೆ ಅವನನ್ನು ಕಣ್ಣೆತ್ತಿಯೂ ನೋಡಲಿಲ್ಲ. ಆಗಂತುಕ ಕೆಲ ಸಮಯ ರವೀಂದ್ರರನ್ನು ದಿಟ್ಟಿಸುತ್ತ ನಿಂತ. ನಂತರ ಕಿಡಕಿಯಿಂದ ಹಾರಿ ಹೊರಟುಹೋದ.

—ಕನ್ಹೈಯಾಲಾಲ ಮಿಶ್ರ 'ಪ್ರಭಾಕರ'

ಮರಾಠಿ ಕಥೆ



ಮನು

ಮನು—ಅವಳ ನಿಜ ನಾಮಧೇಯ ಮನುಯೇಲ. ನಾನು ಅವಳನ್ನು ಮೊತ್ತಮೊದಲು ಕಂಡದ್ದು ಎಲ್ಲಿಯೆಂದು ಸ್ಮರಿಸಿಕೊಳ್ಳಲು ಅನೇಕ ಸಲ ಯತ್ನಿಸಿ ವಿಫಲನಾಗಿದ್ದೇನೆ. ನಾನವಳನ್ನು ನೆನೆದಾಗಲೆಲ್ಲ ಲಂಡನ್ನಿನ ದಟ್ಟವಾದ ಮಂಜು ಮುಸುಕಿದ ಒಂದು ಸಂಜೆಯಲ್ಲಿ ಟಾಟೆನ್‌ಹ್ಯಾಂ ಕೋರ್ಟ್ ಬೀದಿಯ ಜನಸಂದಣಿಯು ನೆನಪಾಗುತ್ತದೆ. ಆ ಬೀದಿಯಲ್ಲೇ, ನವೆಂಬರ್ ಅಥವಾ ಡಿಸೆಂಬರ ತಿಂಗಳಲ್ಲಿ, ಬಸ್ಸಿಗಾಗಿ ಕಾದು ನಿಂತಿದ್ದ ಅವಳನ್ನು ನಾನು ಪ್ರಪ್ರಥಮವಾಗಿ ಕಂಡಿರಬೇಕು. ಆದರೆ ಮರುಕ್ಷಣವೇ ಚಿತ್ತ ಭಿತ್ತಿಯಲ್ಲಿ ಮತ್ತೊಂದು ಚಿತ್ರ ಮೂಡಿ ಬರುತ್ತದೆ : ವಸಂತ ಋತುವಿನ ಒಂದು ಸುಂದರ ಪ್ರಾತಃಕಾಲ. ಹಂಪ್‌ಸ್ಟೀಡ್ ಹೀತ್ ಸರೋವರದಲ್ಲಿ ಮುದ್ದಾದ ಹಂಸಗಳು ತೇಲುತ್ತಿವೆ. ದಡದಲ್ಲಿ ನಿಂತ ಮನು ರೊಟ್ಟಿಚೂರುಗಳನ್ನು ಹಂಸಗಳತ್ತ ಎಸೆಯುತ್ತಿದ್ದಾಳೆ. ಇದೇ ಅವಳ ಪ್ರಥಮ ದರ್ಶನವಾಗಿರಬೇಕೆನ್ನುವಷ್ಟರಲ್ಲಿ ಮತ್ತೊಂದು

ಪು. ಶಿ. ರೇಗೆ
ಕನ್ನಡಕ್ಕೆ: ಮ. ಷ. ದೀನ್

ಚಿತ್ರ ಮೂಡಿ ಬರುತ್ತದೆ. ಅವಳು ಸ್ಟೋಲ್ ಸಿನಿಮಾದ ಬಳಿ ನಿಂತಿದ್ದಾಳೆ. ಒಂದು ಕೈಯಲ್ಲಿ ಪುಸ್ತಕವಿದೆ. ಮತ್ತೊಂದರಲ್ಲಿ ಸ್ಯಾಂಡ್‌ವಿಚ್ ಇದೆ. ಅವಳು ನಿಂತಲ್ಲೆ ಸ್ಯಾಂಡ್‌ವಿಚ್ ಕಡಿದು ಕೊಂಡು ತಿನ್ನುತ್ತಿದ್ದಾಳೆ. ಇಂತಹವೆ ಹಲವಾರು ಸ್ಮೃತಿಗಳ ದಾಳಿಗೆ ಸಿಕ್ಕು, ನಿರಾಶನಾಗಿ ಈ ಪ್ರಯತ್ನವನ್ನೇ ಕೈಬಿಡುತ್ತೇನೆ.

ಅವಳು ಯಾವಾಗ, ಎಲ್ಲಿ ಕಾಣಿಸಿಕೊಳ್ಳುವ ಳೆಂಬುದೇನು ನಿಯಮಿತವಲ್ಲ. ಆದ್ದರಿಂದ, ನಾನವಳನ್ನು ಎಲ್ಲಿ ಕಂಡರೂ ನನಗೇನು ಆಶ್ಚರ್ಯ ವಾಗುತ್ತಿರಲಿಲ್ಲ. ಅನಿರೀಕ್ಷಿತವೆನ್ನಿಸುತ್ತಿರಲಿಲ್ಲ. ಅವಳ ಭಾವಸ್ಥಿತಿಗಳೂ ಅಷ್ಟೆ! ಒಮ್ಮೊಮ್ಮೆ ಸಿಕ್ಕಿದಾಗ ಒಂದೊಂದು ಥರ. ಒಮ್ಮೆ, ಜಗತ್ತಿನ ಆದಿ–ಅಂತ್ಯಗಳ ಮರ್ಮವನ್ನು ಅರಿತ ದಾರ್ಶನಿಕ ನಂತೆ ನಿರ್ಲಿಪ್ತವಾದ ದೃಷ್ಟಿಯಿಂದ ತನ್ನ ಸುತ್ತ–ಮುತ್ತಣ ಜನ ಜೀವನವನ್ನು ಅವಲೋಕಿಸು ವಳು. ಮತ್ತೊಮ್ಮೆ ಅಷ್ಟೇ ಮುಗ್ಧತೆಯಿಂದ ತನ್ನ ಪರಿವೇಶದಲ್ಲಿ ಸಮರಸವಾಗಿ ಹೋಗಿಬಿಡು ವಳು. ಯಾವ ಸಂದರ್ಭದಲ್ಲೂ ಅವಳ ಮನದ ಆಳವನ್ನು ಅರಿಯಲಾಗುತ್ತಿರಲಿಲ್ಲ. ಅವಳನ್ನು ಕಂಡಾಗ, ಒಮ್ಮೆ ಜಗತ್ತೇ ಮಾಯೆಯೆಂದೆನಿಸಿದರೆ ಮತ್ತೊಮ್ಮೆ ಅವಳೇ ಮಾಯೆ ಅನ್ನಿಸುತ್ತಿತ್ತು. ಅವಳೊಂದಿಗೆ ಒಂದು ಶಾಶ್ವತ ಬಂಧದಲ್ಲಿ ಸಂಲಗ್ನ ವಾಗಿಬಿಡಬೇಕೆಂಬ ಬಯಕೆಯೊಂದಿಗೆ ಹಾಗೆ ಆಗುವುದು ಬೇಡವೆಂಬ ವಿರೋಧ ಭಾವವೂ ಉದ್ಭವಿಸುತ್ತಿತ್ತು.

ಆರಂಭದ ದಿನಗಳಲ್ಲಿ ನಾನವಳನ್ನು ಕಂಡಾಗ ಲೆಲ್ಲ ಅವಳು ನನ್ನನ್ನು ಕರೆಯುತ್ತಿರುವಂತೆಯೇ ಭಾಸವಾಗುತ್ತಿತ್ತು. ಅವಳ ಬಳಿ ಸಾರಬೇಕೆಂದು ಆಸೆಯಾಗುತ್ತಿತ್ತು; ಏನಾದರೂ ನೆಪ ಹೂಡಿ ಅವಳನ್ನು ಮಾತಾಡಿಸಬೇಕೆನ್ನಿಸುತ್ತಿತ್ತು. ಆದರೆ ಭಯ; ಅವಳು ಮುನಿದುಕೊಂಡರೆ! ಮತ್ತೆ ಕಾಣಸಿಗದಿದ್ದರೆ! ಇಷ್ಟಾದರೂ ಅವಳು ನನ್ನ ಆಂತರಿಕ ತುಮುಲವನ್ನು ಬಲ್ಲಳೆಂಬ ಭಾವನೆ ನನ್ನಲ್ಲಿ ಮೂಡಿಬರುತ್ತಿತ್ತು. ಆ ದಿನಗಳಲ್ಲಿ ಅವಳ ನೋಟ, ನಗೆ—ಇವೆಲ್ಲಕ್ಕೂ ನನ್ನ ಕಾಮ–ನೆಗೆ ಅನುಕೂಲವಾದ ಅರ್ಥಗಳನ್ನು ಕಲ್ಪಿಸಿ ಕೊಳ್ಳುತ್ತಿದ್ದೆ. ಆ ಅರ್ಥಗಳು ಅಷ್ಟೇನೂ ತಪ್ಪಾಗಿರಲಿಲ್ಲವೆಂದು ನನಗೆ ನಂತರ ತಿಳಿಯಿ ತಾದರೂ ಆ ಸಮಯದಲ್ಲಿ ಅದರ ಅರಿವಿರಲಿಲ್ಲ.

ಅವಳು ಕಣ್ಮರೆಯಾದ ಕೂಡಲೆ ನನ್ನ ಮನ 'ಅವಳು ಇನ್ನೆಂದೂ ಕಾಣಸಿಗಳು. ರೂಪ್!' ಎನ್ನುತ್ತಿತ್ತು. ಆಗ ನಾನು ಅವಳನ್ನು ಮರೆತು–ಬಿಡುವ ಪ್ರಯತ್ನವನ್ನು ಮಾಡುತ್ತಿದ್ದೆ. ಅಷ್ಟರಲ್ಲಿ ಮತ್ತೆಲ್ಲಾದರೂ ಅವಳ ದರ್ಶನವಾಗಿಬಿಡು ತ್ತಿತ್ತು. ಯಥಾಪ್ರಕಾರ ಮತ್ತೆ ಅಂತರಂಗದಲ್ಲಿ ತುಮುಲ ಆರಂಭವಾಗಿಬಿಡುತ್ತಿತ್ತು.

ಹೀಗೆ, ಒಂದು ಸಂಜೆ ಸುಮಾರು ಆರು ಘಂಟೆಯ ಸಮಯ, ನಾನು ವಾಚನಾಲಯದಿಂದ ಮನೆಗೆ ಹಿಂತಿರುಗುತ್ತಿದ್ದಾಗ ಅವಳು ಬಸ್ಸಿಗಾಗಿ ಕಾದು ನಿಂತಿದ್ದಳು. ಅವಳನ್ನು ಕಂಡ ಕೂಡಲೆ ಹೆಜ್ಜೆಗಳು ಸ್ತಬ್ಧವಾದುವು. ಏನಚ್ಚರಿ! ಅವಳೇ ನನ್ನನ್ನು ಕರೆದಳು. ನಾನು ಬಳಿಗೆ ಹೋದೆ. ಅವಳು ನನ್ನ ಕೈಗೆ ಎರಡು ಪುಸ್ತಕಗಳನ್ನಿತ್ತು, 'ಈಗ ಬಂದೆ!' ಎಂದು ಹೇಳಿ, ಪಕ್ಕದ ಬೀದಿ ಯಲ್ಲಿ ನಡೆದು ಮರೆಯಾದಳು. ಅವಳು ಬರು ತ್ತಾಳೆ, ನನ್ನೊಡನೆ ಮಾತಾಡುತ್ತಾಳೆ. ನಮ್ಮ ಪರಿಚಯವಾಗುತ್ತೆ— ಎಂದುಕೊಂಡೆ. ಅವಳ ಹೆಸರು, ವಿಳಾಸ ತಿಳಿಯುವ ಕುತೂಹಲದಿಂದ ಮೊದಲನೇ ಪುಸ್ತಕದ ರಕ್ಷಾಕವಚವನ್ನು ತೆರೆದೆ— ಮನ್ಯುಯೇಲ ಹಾರ್ಟ್‌ಮನ್, ವೀನ್.

ಓ, ಇವಳು ಆಸ್ಟ್ರಿಯನ್, ವಿಯೆನ್ನದವಳು. ಮನುಯೇಲ...ಮನುಯೇಲ. ನಾನು ಕೂಡಲೆ ಆ ಹೆಸರನ್ನು ಭಾರತೀಕರಿಸಿದೆ—ಮನು—ಮನು ವೇಲ! ಅಷ್ಟರಲ್ಲೆ ಅವಳು ಬಂದುಬಿಟ್ಟಳು. ಅವಳ ಕೈಯಲ್ಲೊಂದು ಪೊಟ್ಟಣವಿತ್ತು.

"ಸ್ವಲ್ಪ ಸ್ಯಾಂಡ್‌ವಿಚ್ ತಂದಿದ್ದೇನೆ. ನಡೆ ಯಿರಿ. 'ಹೀತ್'ನಲ್ಲಿ ಸಂಚರಿಸಿ ಬರೋಣ." ಎಂದು, ನನಗೆ ಉತ್ತರಿಸಲೂ ಅವಕಾಶ ಕೊಡದೆ ನನ್ನ ಕೈ ಹಿಡಿದುಕೊಂಡು ನಡೆದೇಬಿಟ್ಟಳು.

ಅಂದಿನಿಂದ ನಾವು ಎಲ್ಲಿ, ಯಾವಾಗ ಭೇಟಿಯಾ ಗುವುದೆಂದು ಅವಳೇ ನಿಶ್ಚಯಿಸುತ್ತಿದ್ದಳು; ನಿಶ್ಚಿತ ಸ್ಥಾನಕ್ಕೆ ಸಮಯಕ್ಕೆ ಸರಿಯಾಗಿ ಬಂದು ಬಿಡುತ್ತಿ ದ್ದಳು. ಆಗ ಸಾಮಾನ್ಯವಾಗಿ, ಅವಳು ಒಂದೇ ಸಮನೆ ಮಾತಾಡುತ್ತಿದ್ದಳು; ನಾನು ಮೌನವಾಗಿ ಕುಳಿತು ಕೇಳುತ್ತಿದ್ದೆ. ಮನುವಿನ ಬಾಯಿಯಿಂದ

ಹೊರಟ ಶಬ್ದಗಳನ್ನು ಆಲಿಸುವುದೇ ಒಂದು ಸಂತೋಷ. ಅವಳು ಆಂಗ್ಲ ಪದಗಳನ್ನು ತನ್ನದೇ ಆದ ಒಂದು ಸುಮಧುರ ರೀತಿಯಲ್ಲಿ ಉಚ್ಚರಿಸುತ್ತಿದ್ದಳು. ರೂಢಿಯಲ್ಲಿರುವ ಆಂಗ್ಲ ಉಚ್ಚಾರಣೆಗಳನ್ನೆಲ್ಲ ಬದಿಗಿರಿಸಿ ಅವಳ ಉಚ್ಚಾರಗಳನ್ನೇ ಬಳಕೆಗೆ ತರಬೇಕೆನ್ನುವಷ್ಟು ಮಟ್ಟಿಗೆ ನಾನವನ್ನು ಮೆಚ್ಚಿಕೊಂಡಿದ್ದೆ. ಅವಳು ಆ ರೀತಿ ಸಲ್ಲಾಪದಲ್ಲಿ ತೊಡಗಿದಾಗ ನನಗೆ ದಕ್ಷಿಣ ಕನ್ನಡದ ಸ್ತ್ರೀಯರ ನೆನಪಾಗುತ್ತಿತ್ತು. ಅವರೂ ಹೀಗೇ ಮುದ್ದು-ಮುದ್ದಾಗಿರುತ್ತಾರೆ—ಸಾಮಾನ್ಯ ಮಾತುಗಳಲ್ಲೂ ರಸ ತುಂಬಿಸುವ ಮಾಟಗಾತಿಯರು.

ಅವಳಿಗೆ ಮಾತಾಡಲು ನಿರ್ದಿಷ್ಟ ವಿಷಯ ವೇನೂ ಬೇಕಿರುತ್ತಿರಲಿಲ್ಲ. ಅಲ್ಲದೆ, ಪ್ರತಿಯೊಂದು ವಿಷಯದಲ್ಲೂ ಅವಳ ಅಭಿಪ್ರಾಯಗಳೇ ಬೇರೆ. ಆಕಾಶ ಒಂದು ಅತಿ ವಿಶಾಲವಾದ ಮಹತ್-ಸಾಗರವೆಂದು ಅವಳ ಅಭಿಪ್ರಾಯ. ಅವಳಿಗೆ ನನ್ನ ಕಪ್ಪು ಬಣ್ಣ ಅತಿ ಮೆಚ್ಚು! ಅವಳದೊಂದು ಸಿದ್ಧಾಂತ: ಯುರೋಪಿಯನ್ನರ ಪೂರ್ವಜರು ಆದಿಯಲ್ಲಿ ಭಾರತದಲ್ಲಿದ್ದರು. ಆನಂತರ ಅವರು ಹಬ್ಬಿ-ಹರಡಿ ಯುರೋಪ್ ಖಂಡವನ್ನು ಪ್ರವೇಶಿಸಿದರು. ಅವಳು ನನ್ನ ಅಂಗೈಗಳನ್ನು ತನ್ನ ಕತ್ತಿನ ಕೆಳಗೊತ್ತಿ ಹಿಡಿದುಕೊಂಡು, "ನೋಡಿ, ಆ ಪ್ರದೀರ್ಘ ಕಾಲದ ಪರಿಣಾಮವಾಗಿ ನಮ್ಮ ಬಣ್ಣಗಳಲ್ಲಿ ಎಷ್ಟೊಂದು ಅಂತರ ಉಂಟಾಗಿಬಿಟ್ಟಿದೆ," ಎಂದು ತೋರಿಸಿ ತನ್ನ ವಾದವನ್ನು ಮುಗಿಸಿಬಿಡುತ್ತಿದ್ದಳು. ನಾನು ಅವಳನ್ನು ವಿರೋಧಿಸಿದರೆ, ಇಲ್ಲವೆ ಅವಳ ಮಾತುಗಳಲ್ಲಿ ಅರುಚಿ ತೋರಿದರೆ ಅವಳು ಕೂಡಲೇ ವಿಷಯವನ್ನೇ ಬದಲಿಸಿಬಿಡುತ್ತಿದ್ದಳು. ಆದ್ದರಿಂದ ಅವಳೊಡನೆ ವಾದಿಸಲು ಯತ್ನಿಸುವುದರಲ್ಲೇನೂ ಪ್ರಯೋಜನವೇ ಇರಲಿಲ್ಲ. ಸಂಪೂರ್ಣವಾಗಿ ಅವಳ ಇಚ್ಛೆಗೊಳಗಾಗಿ, ಅವಳ ವಾದಗಳ ಪ್ರವಾಹದಲ್ಲಿ ಕೊಚ್ಚಿ ಹೋಗುವುದೇ ಹಿತವೆನಿಸುತಿತ್ತು. ಆ ರೀತಿಯ ಸಂಯಮವನ್ನು ತೋರಿದ್ದಲ್ಲಿ ಅದಕ್ಕೆ ತಕ್ಕ ಪ್ರತಿಫಲವು ದೊರೆಯುತ್ತಿತ್ತು—ಪ್ರತಿ ಸಾರಿಯೂ ನೂತನವಾದುದು, ಅನಿರೀಕ್ಷಿತವಾದುದು.

ನಾವು ಹೀಗೆ ಭೆಟ್ಟಿಯಾಗುತ್ತಿದ್ದರೂ ಅವಳ ಉದ್ಯೋಗವೇನೆಂದು ನನಗೆ ತಿಳಿದಿರಲಿಲ್ಲ. ಒಮ್ಮೆ ತಾನಾಗಿಯೇ ಅವಳ ಬಾಯಿಯಿಂದ ಹೊರಬಿತ್ತು, "ನನಗೆ ಚಿತ್ರಕಲೆಯಲ್ಲಿ ತುಂಬ ಆಸಕ್ತಿ, ಅದರ ಅಧ್ಯಯನಕ್ಕಾಗಿಯೇ ಇಂಗ್ಲಂಡಿಗೆ ಬಂದಿದ್ದೇನೆ," ಎಂದು. ಆದರೆ, ನಿಜಕ್ಕೂ ಚಿತ್ರಕಲೆಯ ಅಧ್ಯಯನವನ್ನು ಮಾಡುವವರು ಪ್ಯಾರಿಸ್‌ಗೆ ಹೋಗುತ್ತಾರಷ್ಟೇ ಹೊರತು ಇಂಗ್ಲಂಡಿಗೇಕೆ ಬರುತ್ತಾರೆಂದು ನನಗೆ ಅರ್ಥವಾಗಲಿಲ್ಲ. ಎಂದರೆ, ಅವಳು ಬಾಯಿಗೆ ಬಂದದ್ದೇನನ್ನೋ ಹೇಳಿಬಿಟ್ಟಿದ್ದಳೆಂದಲ್ಲ ನನ್ನ ಅರ್ಥ. ಪ್ರತ್ಯಕ್ಷ ಪ್ರಪಂಚವನ್ನೂ ಕಾಲ್ಪನಿಕ ಜಗತ್ತನ್ನು ಅವಳು ಎಷ್ಟರ ಮಟ್ಟಿಗೆ ಒಂದುಗೂಡಿಸಿ ಬಿಡುತ್ತಿದ್ದಳೆಂದರೆ ಅವಳ ಮಾತುಗಳನ್ನು ಕೇವಲ ಲೌಕಿಕ ದೃಷ್ಟಿಯಿಂದ ಪರಿಶೀಲಿಸುವುದು ಕಷ್ಟವಾಗುತ್ತಿತ್ತು.

ಅವಳ ಮುಖದಲ್ಲಿ ವಿವಿಧ ಭಾವಗಳು ಎಷ್ಟು ಸಹಜವಾಗಿ ಮೂಡಿ ಮಾಯವಾಗುತ್ತಿದ್ದವೋ ಅಷ್ಟೇ ಸಹಜವಾಗಿ, ಅವಳು, ಒಂದೇ ಭಾವವನ್ನು ತಾಸುಗಟ್ಟಲೆ ಸ್ಥಿರವಾಗಿರಿಸಿಕೊಳ್ಳಲು ಸಮರ್ಥಳಾಗಿದ್ದಳು. ಮಾತುಗಳ ಮಧ್ಯೆ, ಇದ್ದಕ್ಕಿದ್ದ ಹಾಗೆ, ಕೆಳ್ದುಟಿಯನ್ನು ಸ್ವಲ್ಪ ಬಲಕ್ಕೆ ಕೊಂಕಿಸಿ, ಅಗಲವಾಗಿ ಕಣ್ಣುಗಳನ್ನು ತೆರೆದುಕೊಂಡು ತುಂಬ ಹೊತ್ತು ಹಾಗೆ ಇದ್ದುಬಿಡುತ್ತಿದ್ದಳು. ಒಂದು ದಿನ ತುಂಬ ಹೊತ್ತು ಉಸಿರುಕಟ್ಟಿ ಸ್ತಬ್ಧವಾಗಿ ಬಿಟ್ಟಿದ್ದಳು. ನಾನಂತೂ ಹೆದರಿಯೇಬಿಟ್ಟಿದ್ದೆ.

ಒಮ್ಮೆ ಏಳೆಂಟು ದಿನ ಭೇಟಿಯಾಗಲೇ ಇಲ್ಲ. ಮತ್ತೆ ಸಿಕ್ಕಾಗ ಮನುವಿನ ಕೈಯಲ್ಲಿ ಕಾಗದದ ಪ್ಯಾಕೆಟ್ ಇತ್ತು. ಅವಳು ಅದರಿಂದ ಒಂದು ಚಿತ್ರವನ್ನು ತೆಗೆದು ನನ್ನ ಕೈಗಿತ್ತಳು. ನೋಡಿದೆ. ಒಂದು ಸರಳ ಸುಂದರ, ಜಪಾನಿ ಪರಂಪರೆಯ 'ಲೈನ್ ಆ್ಯಂಡ್ ವಾಷ್' ಚಿತ್ರ. ಶ್ವೇತವರ್ಣದ ಮಯೂರ ಒಂದು ಗರಿಗೆದರಿ, ಬಲಗಾಲನೆತ್ತಿ ನರ್ತಿಸುತ್ತಿತ್ತೆಂದರೆ ಅದು ಆ ಚಿತ್ರದ ತುಂಬ ನೀರಸ ವರ್ಣನೆಯಷ್ಟೆ. ಏಕೆಂದರೆ ಆ ಚಿತ್ರ ತುಂಬ ಸುಂದರವಾಗಿತ್ತು. ನೋಡುತ್ತಿದ್ದರೆ, ಆ ನವಿಲು ಈ ಕೂಡಲೇ ಮೇಲಕ್ಕೆತ್ತಿರುವ ಕಾಲನ್ನು ನೆಲದ ಮೇಲಿರಿಸಿ ಮತ್ತೊಂದನ್ನು ಮೇಲಕೆತ್ತಿ ನಿಜಕ್ಕೂ ನರ್ತಿಸಲಾರಂಭಿಸಿ ಬಿಡುವುದೇನೋ ಅನ್ನಿಸುತ್ತಿತ್ತು. ನಾನು ಸ್ವಲ್ಪ ಹೊತ್ತು ಚಿತ್ರ

ವನ್ನೇ ನೋಡುತ್ತ ನಿಂತೆ. ಅನಂತರ ಮಾಡಬಾರದುದನ್ನು ಮಾಡಿಬಿಟ್ಟೆ "ಈ ಚಿತ್ರವನ್ನು ನೀನು ಬರೆದೆಯಾ?" ಎಂದು ಕೇಳಿದೆ. ಮನು ಸಾವಕಾಶವಾಗಿ ಚಿತ್ರವನ್ನು ನನ್ನ ಕೈಯಿಂದ ತೆಗೆದುಕೊಂಡು, ನಿರ್ವಿಕಾರ ಭಾವದಿಂದ ಹರಿದು ಚೂರು-ಚೂರು ಮಾಡಿಬಿಟ್ಟಳು.

ಅದಾದ ನಂತರ ಅವಳು ಮತ್ತೆಂದೂ ಕಾಣಿಸಿಕೊಳ್ಳಲೇ ಇಲ್ಲ.

★★

ಕತೆ ಬರೆಯುವುದೇ ಉದ್ದೇಶವಾಗಿರುತ್ತಿದ್ದರೆ, ಅದು ಇಲ್ಲಿಗೆ ಮುಗಿಯುತ್ತಿತ್ತು; ಆದರೆ ನಿಜ ಜೀವನದ ಮಾತುಗಳು ಹಾಗೆ ಮುಗಿದುಬಿಡುವುದಿಲ್ಲ. ಒಮ್ಮೆ ಹೀಗೆ ಹಸುರು ಹುಲ್ಲಿನ ಮೇಲೆ ನಾವು ಮಲಗಿದಾಗ, ಮನು "ಒಂದೇ ಸಮಯದಲ್ಲಿ ಎಲ್ಲ ಮಾತುಗಳು ನಡೆಯುತ್ತಿರುತ್ತವೆ," ಎಂದಿದ್ದಳು. ತತ್ವಶಾಸ್ತ್ರದ ವಿದ್ಯಾರ್ಥಿಯಾದ ನನಗೂ ಕೂಡ ಆ ಮಾತಿನ ಅರ್ಥ ಕೂಡಲೇ ಹೊಳೆಯಲಿಲ್ಲ. ಆಗ ಮನು ವಿವರಿಸಿದಳು. ನಾನು ಮಾತಾಡಿದಾಗ ಗಾಳಿಯಲ್ಲಿ ತರಂಗಗಳು ಏಳುತ್ತವೆ. ಆ ತರಂಗಗಳು ಎಲ್ಲಿ ಹೋಗುತ್ತವೆ? ಕೆಲವು ಅತ್ತ ಹೋಗುತ್ತವೆ, ಕೆಲವು ಇತ್ತ. ಕೆಲವು ಅಲ್ಲೇ ನಿಂತುಬಿಡುತ್ತವೆ. ಆದರೆ ಒಂದು ತರಂಗವೂ ನಾಶ ಪಾತ್ರವಾಗುವುದಿಲ್ಲ. ಏಕೆಂದರೆ ಪ್ರಕೃತಿಯ ಧರ್ಮ ವಿನಾಶವಲ್ಲ, ರಕ್ಷಣೆ. ಅದು ಸಕಲವನ್ನು ಸಂರಕ್ಷಿಸುತ್ತದೆ. ಅಂದ ಬಳಿಕ, ಎಲ್ಲ ತರಂಗಗಳೂ ಯಾವಾಗಲೂ ವಾತಾವರಣದಲ್ಲಿ ತೇಲುತ್ತಲೇ ಇರುತ್ತವೆ. ಆದ್ದರಿಂದ, ಯಾರು ಏನನ್ನು ಕೇಳಲಿಚ್ಛಿಸುವರೋ ಅದು ಕೇಳಿಸುತ್ತದೆ." ನಂತರ ವಿಶ್ವದ ಸಕಲ ತರಂಗಗಳನ್ನು ಆಲಿಸುತ್ತಿರುವಳೇನೋ ಎಂಬಂತೆ ಅವಳು ತುಂಬ ಗಂಭೀರಳಾಗಿಬಿಟ್ಟಳು.

"ಈಗೇನು ಕೇಳಿಸುತ್ತಿದೆ?" ಎಂದು ಮೆಲ್ಲಗೆ ಕೇಳಿದೆ.

ಅವಳು ತಕ್ಷಣ ಹೇಳಿದಳು: "ಹದಿನಾಲ್ಕರ ವಯಸ್ಸಿನಲ್ಲಿ, ನೀವೊಂದು ಸಂಜೆ ಸಮುದ್ರ ತಟದ ಮರಳಲ್ಲಿ ದಾರಿ ತಪ್ಪಿ ತೊಳಲುತ್ತಿರಲು, ನಿಮ್ಮ ನಿರೀಕ್ಷೆಗಿಂತ ಮುಂಚಿತವಾಗಿಯೇ ಕತ್ತಲು ಕವಿದು ಬರಲು, ನೀವು ದಿಗಿಲುಗೊಂಡು ನನ್ನನ್ನು ಕೂಗಲಾರಂಭಿಸಿದ್ದಿರಿ. ನನಗೀಗ ಆ ಕೂಗು ಕೇಳಿಸುತ್ತಿದೆ."

ಕೇಳಿ ಬೆಚ್ಚಿಬಿದ್ದೆ ನಾನು. ಆರು ವರ್ಷಗಳ ಹಿಂದೆ ಸುಮಾರು ಆ ತರಹದ ಘಟನೆಯೊಂದು ಘಟಿಸಿತ್ತು; ನಾನು ಕುಂದಾಪುರಕ್ಕೆ, ನಮ್ಮಜ್ಜೀ ಮನೆಗೆ, ಹೋಗಿದ್ದಾಗ, ಕಡಲ ತಡಿಯಿಂದ ಹಿಂದಿರುಗುವಾಗ ತಡವಾದ್ದರಿಂದ ಮನೆಯಲ್ಲಿ ಬೈಯಿಸಿಕೊಂಡಿದ್ದೆ. ವಿವರಗಳಲ್ಲಿದ್ದ ವ್ಯತ್ಯಾಸವಿಷ್ಟೆ: ಆಗ ನನ್ನ ವಯಸ್ಸು ಹದಿನಾಲ್ಕಾಗಿರದೆ ಹದಿನಾರಾಗಿತ್ತು. ಕಡಲ ತಡಿಯಲ್ಲಿ ಆ ಸಂಜೆ ಜೊತೆಯಲ್ಲಿ ನೆರೆಮನೆಯ ನಿರ್ಮಲ—ನಿಮು—ಇದ್ದಳು. ನಾನು ಕೂಗಿಕೊಂಡಿರಲಿಲ್ಲ. ಆದರೆ ನಿಮು ಬಗ್ಗೆ—ಅವಳ ತಂದೆಯ ಬಗ್ಗೆ—ಭಯಾಕುಲನಾಗಿ ಚಿಂತಿಸುತ್ತಿದ್ದೆ. 'ಮನುವೇಲ' ಮತ್ತು 'ನಿರ್ಮಲ'—ಈ ನಾಮ ವರ್ಣಗಳಲ್ಲಿ ಎಷ್ಟೊಂದು ಸಾಮ್ಯವಿದೆ!

ಆಗ ನಾನು, ವ್ಯಕ್ತಿಗಳ ಮತ್ತು ಪ್ರಸಂಗಗಳ ಸಂಖ್ಯೆ ಅತ್ಯಲ್ಪವಾದುದು, ಅವುಗಳಲ್ಲಿ ನಾವೇ ನವೀನತೆಯನ್ನು ತಂದುಕೊಳ್ಳಬೇಕು, ಒಂದೇ ತರಂಗದಿಂದ ವಿವಿಧ ನೂತನ ಸ್ವರಗಳನ್ನೆಬ್ಬಿಸಬೇಕು—ಎಂದೊಪ್ಪಿಕೊಂಡೆ. ಈ ಕಾರ್ಯವು ಅತಿ ಸುಲಭವಾಗಿತ್ತು. ಅವಳಿಗೆ ಯಾವ ಘಟನೆಯೂ ಅನಿರೀಕ್ಷಿತವೆಂದು ತೋರುತ್ತಿರಲಿಲ್ಲ. ಅವಳು ಸಕಲವನ್ನೂ ಸಹಜವಾಗಿಯೇ ಸ್ವೀಕರಿಸುತ್ತಿದ್ದಳು. ಆದ್ದರಿಂದ ಅವಳ ಸ್ವಭಾವದಲ್ಲಿ ಸಂಕೋಚ, ಅಂಜಿಕೆ ಮತ್ತು ತಾತ್[illegible]ವಗಳಿಗೆ ಎಡೆಯೇ ಇರಲಿಲ್ಲ. ಸಂಕೋಚ ಮತ್ತು ಅಂಜಿಕೆಗಳು ಕಣ್ಣ ಮುಂದಿರುವ ಸತ್ಯದ ಅಸ್ವೀಕೃತಿಯ ಪ್ರತೀಕಗಳು. ಅಂಥ ಅಸ್ವೀಕೃತಿ ಅವಳಿಗೆ ಪ್ರಿಯವೂ ಆಗಿರಲಿಲ್ಲ, ಸಾಧ್ಯವೂ ಆಗಿರಲಿಲ್ಲ.

ಒಮ್ಮೊಮ್ಮೆ ಮನದಲ್ಲಿ ಪ್ರಶ್ನೆಗಳು ಏಳುತ್ತವೆ. ನಾನವಳ ವರ್ತನೆಗೆ ನೀಡುತ್ತಿರುವ ಈ ಅರ್ಥಗಳು ಸರಿಯೆ? ಕೊನೆಯ ಪಕ್ಷ ಅವಳಿಗೆ ಇವರ ಪ್ರಜ್ಞೆ ಇತ್ತೆ? ಆದರೆ, ವಾಸ್ತವಿಕವಾಗಿ, ಈ ಪ್ರಶ್ನೆಗಳು ಗೌಣವಾದವು. ಜ್ಞಾನೋದಯವು ಅನಂತರವಾಗುತ್ತದೆ. ಅದಕ್ಕೆ ಮುಂಚೆ ಸರ್ವತೋಮುಖವಾದ ಚಿಂತನೆ ನಡೆಯಬೇಕು. ದೈನಂದಿನ ಜೀವನ ಅದಕ್ಕೆ ಎಡೆಗೊಡುವುದಿಲ್ಲ. ಮನು ಈ

ಸತ್ಯವನ್ನು ಬಲ್ಲವಳಾಗಿದ್ದಳು.

ಬಹುಶಃ ಅದಕ್ಕೆಂದೇ ತೋರುತ್ತೆ, ಮನು ಎಂದೂ ಪ್ರಶ್ನೆಗಳನ್ನೇ ಕೇಳುತ್ತಿರಲಿಲ್ಲ. ಅಕಸ್ಮಾತ್, ಎಂದಾದರೂ ಕೇಳಿದರೂ ಅವು ಸ್ವಗತವಾಗಿರುತ್ತಿದ್ದವು. ಅಲ್ಲದೆ ಕೂಡಲೇ ಅವುಗಳ ಉತ್ತರ ಅವಳ ಬಾಯಿಯಿಂದಲೇ ಹೊರಟುಬಿಡುತ್ತಿತ್ತು. ಪ್ರಶ್ನೆ ಸಂಶಯದ ಪ್ರತಿಬಿಂಬ—ಅದು ಅವಳಿಗಾಗದು. ಆದರೂ. ಒಂದೇ ಒಂದು ಬಾರಿ ಅವಳು ನನ್ನನ್ನು ಕುರಿತು ಒಂದು ಪ್ರಶ್ನೆ ಕೇಳಿದ್ದಳು.

"ನೀವೇನಾಗಲಿರುವಿರಿ ?"

"ಮೈಸೂರಿಗೆ ಹೋದ ಮೇಲೆ ನಾನು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗುವವನಿದ್ದೇನೆ. ಅದಕ್ಕಾಗಿಯೆ ಅಲ್ಲವೆ ನಮ್ಮ ಸರಕಾರ ನನಗೆ ವಿದ್ಯಾರ್ಥಿವೇತನವನ್ನು ಕೊಟ್ಟು ಇಲ್ಲಿಗೆ ಕಳಿಸಿರುವುದು ?" ಎಂದು ನೇರವಾಗಿ ಉತ್ತರಿಸಿದೆ.

ಅವಳು ತುಂಬ ಹೊತ್ತು ಮಾತೇ ಆಡಲಿಲ್ಲ. ನನ್ನ ಉತ್ತರದಲ್ಲಿ ಅಡಗಿದ್ದ ನಮ್ಮ ಭಾವಿ ವಿಯೋಗದ ಸಂಕೇತದಿಂದ ಅವಳು ದುಃಖಿತಳಾಗಿರಬೇಕೆಂದು ಊಹಿಸಿದೆ.

ಸ್ವಲ್ಪ ಹೊತ್ತಾದ ಮೇಲೆ. "ನೀವು ರೂಪ್ ಆಗಲು ಇಚ್ಛಿಸುವುದಿಲ್ಲವೆ ?" ಎಂದು ಪ್ರಶ್ನಿಸುತ್ತ ಎದ್ದು ನಿಂತಳು; ಅಲ್ಲಿಂದ ಹೊರಡುವ ಸಿದ್ಧತೆಗಳಲ್ಲಿ ಮಗ್ನಳಾದಳು.

ಅವಳ ಆ ಪ್ರಶ್ನೆಯ ಅರ್ಥ ನನಗೆ ತಿಳಿದದ್ದು ತುಂಬ ದಿನಗಳಾದ ಮೇಲೆ. 'ಆಗುವುದು' ಎಂದರೆ 'ಇರುವುದರ' ವಿಕಾಸಕ್ಕೆ ಅವಕಾಶ ಕೊಡುವುದು. ಅದಕ್ಕೆ ಪರಿಶ್ರಮದ ಅವಶ್ಯಕತೆ ಇಲ್ಲ. ಆಯ್ಕೆ ಸರಿಯಾದ್ದಾಗಬೇಕು. ಪ್ರಿಯವಾದ ಕಾರ್ಯವನ್ನು ಮಾಡುವಾಗ ಶ್ರಮ ಕಾಣುವುದಿಲ್ಲ, ದಣಿವಾಗುವುದಿಲ್ಲ. ಆಗ ನಮ್ಮ ಸಕಲ ಶಕ್ತಿಗಳು ಒಟ್ಟುಗೂಡಿ ಕೆಲಸ ಮಾಡುತ್ತವೆ. ಐದು ನಿಮಿಷ ಟ್ರೇನ್‌ಗಾಗಿ ಕಾಯುವುದು ದುಃಸಹವಾಗಿಬಿಡುತ್ತದೆ. ಆದರೆ, ಪ್ರಿಯಜನರಿಗಾಗಿ ಎಷ್ಟು ಹೊತ್ತು ಕಾದರೂ ನಮಗೆ ಕೋಪ ಬರಬಹುದಾದರೂ ಅದು ಶ್ರಮವೆನಿಸುವುದಿಲ್ಲ.

ಒಮ್ಮೆ ನಾನು ಹೋಬರ್ನ್ ಸ್ಟೇಷನ್ ತಲುಪುವುದು ಸುಮಾರು ಅರ್ಧ ಘಂಟೆ ವಿಳಂಬವಾಗಿಬಿಟ್ಟಿತು. ನನಗೆ ಅಂಜಿಕೆಯಾಗತೊಡಗಿತ್ತು. ಆದರೆ, ಅವಳ ನಿತ್ಯದರ್ಶನ ನನ್ನ ಭಾವಗಳನ್ನು ತಡವಿ ಶಾಂತಗೊಳಿಸಿತು.

"ತುಂಬ ತಡ ಮಾಡಿಬಿಟ್ಟೆ !" ಎಂದೆ.

"ಇಲ್ಲವೆ ! ನೀವು ಇಲ್ಲೇ ಇದ್ದಿರಲ್ಲ ! ಸ್ವಲ್ಪ ಹೊತ್ತು ಈ ಕಂಬದ ರೂಪು ಧರಿಸಿ ಆ ಕಂಬದೊಂದಿಗೆ ಕಣ್ಣುಮುಚ್ಚಾಲೆಯಾಡುತ್ತಿದ್ದಿರಿ. ಎಷ್ಟೋ ಬಾರಿ ಈ ತೂಕ ಯಂತ್ರದ ವೇಷ ಧರಿಸಿ ನನ್ನನ್ನು ಮೋಹಿಸಿದಿರಿ. ಈಗ, ಒಂದು ಕ್ಷಣ ಮುಂಚೆ. ಒಂದು ಸುಂದರ ಶಿಶುವಾಗಿ ನನ್ನ ಕಾಲುಗಳನಪ್ಪಿಕೊಂಡಿದ್ದಿರಿ. ಎಂದು ಎಷ್ಟು ಸಹಜವಾಗಿ ನುಡಿದಳೆಂದರೆ, ನನಗೆ ನಗು ತಡೆಯಲಾಗಲಿಲ್ಲ. ಇಬ್ಬರೂ ಜೋರಾಗಿ ನಕ್ಕೆವು. ಈ ಸಂದರ್ಭದಲ್ಲಿ ಮಾತ್ರವೆಂದಲ್ಲ, ಯಾವಾಗಲೂ ಅಷ್ಟೆ. ಅವಳ ವರ್ತನೆ ಸರಳ ಮತ್ತು ನಿಶ್ಚಲವಾದದ್ದು. ಆದರೆ ಕೆಲವೊಮ್ಮೆ ಅವಳ ಸರಳತೆಯೇ ಒಂದು ಸಮಸ್ಯೆಯಾಗುತ್ತಿತ್ತು. ಅವಳೊಂದಿಗೆ ಹೇಗೆ ವರ್ತಿಸಬೇಕೆಂಬುದು ತಿಳಿಯದಾಗುತ್ತಿತ್ತು. ಲೌಕಿಕ ಅನುಭವಗಳು ಹೆಚ್ಚಿದಂತೆಲ್ಲ ನಮ್ಮ ವ್ಯವಹಾರಗಳಲ್ಲಿ ಒಂದು ಬಿಗಿ ಬಂದುಬಿಡುತ್ತದೆ. ಸಂಘರ್ಷವೆಲ್ಲ ವ್ಯವಹಾರ ನೀತಿಗಳನ್ನು ಸಿದ್ಧಪಡಿಸಿ ಅವುಗಳನ್ನು ಪರೀಕ್ಷಿಸುವುದರಲ್ಲೆ ಆಗಿಬಿಡುತ್ತದೆ. ಸಮಾಜದ ಅಸ್ತಿತ್ವಕ್ಕೆ ಅವು ಅತ್ಯಗತ್ಯವೆಂದು ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತೇವೆ. ಅದು ನಿಜವೂ ಹೌದು. ಪ್ರತಿಯೊಂದನ್ನು, ಪ್ರತಿಸಾರಿಯೂ ಹೊಸತಾಗಿ ಪರಿಶೀಲಿಸಿ ನಿಶ್ಚಯಿಸಬೇಕೆಂದರೆ ಯಾರಿಗೆ ತಾನೆ ಹುಚ್ಚು ಹಿಡಿಯದು. ಆದರೆ ಮನುವನ್ನು ನೋಡಿದಾಗ ನಮ್ಮ ಸಂಘರ್ಷವೆಲ್ಲ ವ್ಯರ್ಥವೆನ್ನಿಸುತ್ತದೆ. ಸತ್ಯವಿಷ್ಟೆ: ನಾವು ನಮ್ಮ ಅಂತರಂಗವನ್ನು ಅನುಸರಿಸಿ ನಡೆದಲ್ಲಿ ನೆಪಗಳನ್ನು ಹೂಡುವ ಅವಶ್ಯಕತೆಯೇ ಬರುವುದಿಲ್ಲ. ಅದು ಬಿಟ್ಟು ನಾವು ಪರರಿಚ್ಛೆಯಂತೆ ನಡೆದುಕೊಂಡಲ್ಲಿ ನಮ್ಮ ಮನಸ್ಸಿನ ಸಮಾಧಾನಕ್ಕಾಗಿ ನೆಪಗಳನ್ನು ಹುಡುಕಬೇಕಾಗುತ್ತದೆ. ಅದರ ಅಭ್ಯಾಸವಾಗಿಬಿಟ್ಟಿತೆಂದರೆ ನಾವು ಮೊದಲೆ ಯಾವ ವಿಷಯ ಯಾವ ರೂಢಿ ನಿಯಮದ ಪ್ರಕಾರ ಸರಿಯಾಗು

ತ್ತದೆಂಬುದನ್ನು ಗಮನಿಸುತ್ತೇವೆ. ಹೊರತು ಅದು ನಮಗೆ ಪ್ರಿಯವೋ ಅಪ್ರಿಯವೊ ಎಂಬುದನ್ನು ಗಮನಿಸುವುದೆ ಇಲ್ಲ.

★★

ನಾವು ಐರ್ಲೆಂಡ್ ಪ್ರವಾಸ ಕೈಗೊಂಡಾಗ ಒಂದು ದಿನ ಮಾತಾಡುತ್ತ ಕುಳಿತಿದ್ದ ಮನು ಸಹಜವಾಗಿ ಎದ್ದು, ನಿಸ್ಸಂಕೋಚವಾಗಿ ಬಟ್ಟೆಗಳನ್ನೆಲ್ಲ ಬಿಚ್ಚಿ ಹಾಕಿ ಲಾಕ್ ಅಲೆನ್ಸ* ನೀರಿಗಿಳಿದು ಬಿಟ್ಟಳು. ನನಗೂ ಈಜು ಬರುತ್ತಿತ್ತು. ಆದರೂ ಚಕಿತನಾಗಿ ಕುಳಿತುಬಿಟ್ಟೆ. ಯಾರಾದರೂ ನೋಡಿಬಿಟ್ಟರೇನು ಗತಿ? ಎಂಬ ಭಯ ಕಾಡಿಸತೊಡಗಿತು. ಆ ತಿಳಿಜಲದಲ್ಲಿ ಅವಳು ಎಷ್ಟು ಸುಂದರವಾಗಿ ಕಾಣುತ್ತಿದ್ದಳು. ಅವಳು ಸಾವಕಾಶವಾಗಿ ನೀರಿನಿಂದೀಚೆಗೆ ಬಂದು ಒಂದು ಕ್ಷಣ ಅಂಗ್ರೆಯ 'ಲಾಸೂರ್ಸ್' ಹಾಗೆ ನಿಶ್ಚಲವಾಗಿ ನಿಂತು ಬಿಟ್ಟಾಗಂತೂ ಅವಳು ಇನ್ನೂ ಹೆಚ್ಚು ಸುಂದರವಾಗಿ ಕಾಣುತ್ತಿದ್ದಳು— ಎಂಬುದೆಲ್ಲ ನನಗೊಂದು ಸುಂದರ ಸ್ವಪ್ನವಾಗಿ ತೋರುತ್ತಿತ್ತು...ಆದ್ದರಿಂದಲೇ ನನಗೆ ಎದುರಿಗಿದ್ದ ಸತ್ಯವನ್ನು ಸ್ವೀಕರಿಸುವ ಸಾಹಸವಾಗಲಿಲ್ಲ. ಅವಳು ಹಾಗೇ, ಒದ್ದೆ ಮೈಯಲ್ಲೇ, ಓಡಿ ಬಂದು ನನ್ನ ಮೇಲೆ ಬೀಳದೆ ಹೋಗಿದ್ದರೆ ಆ ಸತ್ಯ ಎಂದೆಂದಿಗೂ ನನ್ನದಾಗುತ್ತಿರಲಿಲ್ಲ.

ಮನು ಗತ ಅಥವಾ ಭಾವಿ ಜೀವನದ ಪ್ರಸ್ತಾಪವನ್ನು ಮಾಡುತ್ತಲೇ ಇರಲಿಲ್ಲ. ಪ್ರತಿ ಕ್ಷಣವೂ ಬೇರೆ ಕ್ಷಣಕ್ಕಿಂತ ಭಿನ್ನವಾಬುದಾದ್ದರಿಂದ ಅದನ್ನು ಅಂತೆಯೇ ಭೋಗಿಸಬೇಕೆಂದು ಅವಳು ಬಯಸುತ್ತಿದ್ದಳು. ಇದೇ ಅವಳ ಚಿರ-ಪ್ರಸನ್ನತೆಯ ಗುಟ್ಟು. ನವಿಲಿನ ಚಿತ್ರದ ಪ್ರಸಂಗದ ನಂತರ ಅವಳು ನನ್ನನ್ನು ಭೆಟ್ಟಿಯಾಗದೆ ಹೋದುದರ ಬಗ್ಗೆ ಯೋಚಿಸಿದಾಗಲೆಲ್ಲ ಅವಳ ವರ್ತನೆ ಅವಳ ಸ್ವಭಾವಕ್ಕೆ ವಿರುದ್ಧವಾದುದೇ ಅನ್ನಿಸುತ್ತದೆ. ನಾನಂದು ಕೇಳಿದ ಪ್ರಶ್ನೆಯಿಂದ ಅವಳ ಸ್ವಾಭಿಮಾನ ಘಾಸಿಗೊಂಡಿತೆ? ಅವಳಿಗೆ ನನ್ನಲ್ಲಿದ್ದ ವಿಶ್ವಾಸಕ್ಕೆ ಧಕ್ಕೆ ತಗುಲಿತೆ? ಅವಳು ನಿರ್ಮಿಸಿಕೊಂಡಿದ್ದ ಸ್ವಪ್ನ ಲೋಕಕ್ಕೆ ಆಘಾತ ಉಂಟಾಯಿತೆ? ಈ ರೀತಿಯ ಮೇಲು ನೋಟಕ್ಕೆ ಸಹಜವಾಗಿ ತೋರುವ ಪ್ರಶ್ನೆಗಳೇನೋ ನನ್ನ ಮನದಲ್ಲೇಳುತ್ತವೆ. ಆದರೆ, ಆಳವಾಗಿ ವಿಮರ್ಶಿಸಿದಾಗ ಅವಳ ವರ್ತನೆಗೆ ಬೇರೊಂದು ಅರ್ಥ ಕಂಡುಬರುತ್ತದೆ. ಅವಳಿಗೆ ಆ ಚಿತ್ರವನ್ನು ಮಾಡಿದವರು ಯಾರೆಂಬುದಷ್ಟು ಮುಖ್ಯವಾಗಿರಲಿಲ್ಲ. ಅದು ಹೇಗಿದೆ? ಏನನ್ನು ಪ್ರತಿಬಿಂಬಿಸುತ್ತದೆ ಎಂಬುದು ಮುಖ್ಯವಾಗಿತ್ತು. ಆ ಪ್ರಸಂಗದ ನಂತರ ಅವಳ ಭೆಟ್ಟಿಯಾಗದಿದ್ದೊಂದು ಕೇವಲ ಆಕಸ್ಮಿಕವಿರಬೇಕು. ಆ ಘಟನೆಗೂ ಅವಳ ನಿರ್ಗಮನಕ್ಕೂ ಸಂಬಂಧವೇ ಇರಲಿಕ್ಕಿಲ್ಲ— ಇರಲಿಲ್ಲವೆಂದೇ ನನ್ನ ವಿಶ್ವಾಸ.

ಅವಳ ಅನಿರೀಕ್ಷಿತ ನಿರ್ಗಮನದಿಂದ ಜಗತ್ತೇ ಶೂನ್ಯವಾದಂತಾಯಿತು. ಏನು ಮಾಡಲೂ ತೋಚದಾಯಿತು. ಸುದೈವದಿಂದ ಪರೀಕ್ಷೆ ಹತ್ತಿರ ಬಂದಿತ್ತು. ಅಧ್ಯಯನದಲ್ಲಿ ತೊಡಗಿ ಅವಳನ್ನು ಮರೆಯುವ ದೃಢ ಸಂಕಲ್ಪ ಮಾಡಿದೆ. ಬಹುಮಟ್ಟಿಗೆ ಅದನ್ನು ಪಾಲಿಸಿಯೂ ಪಾಲಿಸಿದೆ. ಒಂದು ದೃಷ್ಟಿಯಿಂದ ನೋಡಿದರೆ, ಅವಳನ್ನು ಹುಡುಕುವುದು ನನ್ನ ಕರ್ತವ್ಯವೆನಿಸುತ್ತಿತ್ತು. ಮತ್ತೊಂದು ದೃಷ್ಟಿಯಿಂದ ನೋಡಿದಾಗ, ಆಗಿ ಹೋದುದನ್ನು ಕಟ್ಟಿಕೊಂಡು ಅಳುವುದೇಕೆ? ಅನ್ನಿಸುತ್ತಿತ್ತು. ಒಂದು ವಿಚಾರವು ಪ್ರೇಮದ ವೈಶಾಲ್ಯಕ್ಕೆ ಪ್ರತೀಕವಾಗಿದ್ದರೆ, ಮತ್ತೊಂದು ಸ್ವಾರ್ಥಪ್ರೇಮದ ಪ್ರತಿಬಿಂಬವಾಗಿತ್ತು.

ಎಲ್ಲವೂ ಸಾಂಗವಾಗಿ ನಡೆಯುವಾಗ ಇಂಥ ವಿಚಾರಗಳು ಹತ್ತಿರವೇ ಸುಳಿಯುವುದಿಲ್ಲ. ಆದರೆ, ರಥವೆಲ್ಲಿಯಾದರೂ ಸಿಕ್ಕಿಕೊಂಡಿತೆಂದರೆ ಹೊಳೆಯಲು ಆರಂಭವಾಗಿ ಬಿಡುತ್ತವೆ, ದಾರ್ಶನಿಕ ವಿಚಾರಗಳು. ಮನು ಪ್ರಶಂಸಾರ್ಹಳು. ಏಕೆಂದರೆ ಅವಳಿಗೊಂದೂ ಇಂಥ ವಿಚಾರಗಳ ಅಥವಾ ದರ್ಶನದ ಅವಶ್ಯಕತೆಯೇ ಬೀಳುತ್ತಿರಲಿಲ್ಲ. ಒಂದು ರೀತಿಯಲ್ಲಿ ಅವಳ ಬಾಳು ಸಂಪೂರ್ಣವಾಗಿ 'ಜೀವಧರ್ಮದ' ಮಾರ್ಗವನ್ನು ಅವಲಂಬಿಸಿತ್ತು. ಧ್ವನಿಗೆ ಪ್ರತಿಧ್ವನಿ, ಪ್ರಶ್ನೆಗೆ ಉತ್ತರ ಒದಗಿಸುವುದರಲ್ಲಿ ಅಡಗಿದೆ ಜೀವಧರ್ಮದ ರಹಸ್ಯ. ಅದರಲ್ಲಿ ಇದು ನನ್ನದು ಅದು ಪರರದು ಎಂಬ ಭೇದ

---

* LOCH ALLEN— ಇದು ಐರ್ಲೆಂಡಿನ ಲೈಟ್ರಿಂ ಪ್ರದೇಶದಲ್ಲಿರುವ ಒಂದು ಸರೋವರ.

ಭಾವಕ್ಕೆ ಎಡೆಯೇ ಇಲ್ಲ. ಅದರಲ್ಲಿ ಬೇಟೆ ಮತ್ತು ಬೇಟೆಗಾರ, ಗುರು ಮತ್ತು ಶಿಷ್ಯ, ಪ್ರಿಯ ಮತ್ತು ಪ್ರಿಯತಮೆ, ಹತ ಮತ್ತು ಹಂತಕ—ಇವರುಗಳ ಏಕತೆ ಸ್ವಯಂಸಿದ್ಧವಾಗಿರುತ್ತದೆ. ಇದೇ ಜೀವಧರ್ಮದ ರಹಸ್ಯ. ಮನು ತಾಸುಗಟ್ಟಲೆ ಹಸುರು ಹುಲ್ಲಿನಲ್ಲಿ ನಿಶ್ಚಲವಾಗಿ ಮಲಗಿಬಿಟ್ಟಾಗ. ಅಥವಾ ಮಕ್ಕಳ ಸಂಗದಲ್ಲಿ ತನ್ನನ್ನೇ ಮರೆತು ತಾನು ಒಂದು ಶಿಶುವಾಗಿಬಿಟ್ಟಾಗ. ಅಥವಾ ತನ್ನ ದಪ್ಪ ಬೆರಳುಗಳಲ್ಲಿ ನನ್ನ ಕೂದಲನ್ನು ಹಿಡಿದುಕೊಂಡು—ಏಕಕಾಲದಲ್ಲೇ ನಗುತ್ತಲೂ ಅಳುತ್ತಲೂ—ಪ್ರಾಣ ಹೋದಂತೆ ಜಗ್ಗಿದಾಗ ನನಗೆ ಆ ರಹಸ್ಯದ ಅರಿವು ಅಷ್ಟಿಷ್ಟು ಆಗುತ್ತಿತ್ತು. ಅವಳು ಒಂದೊಂದು ಕ್ಷಣವನ್ನು ಸಾಕ್ಷಾತ್ಕರಿಸಿಕೊಂಡು ಅದರಲ್ಲೊಂದು ವಿಲಕ್ಷಣ ಸೌಂದರ್ಯವನ್ನು ತುಂಬುತ್ತಿದ್ದಳು.

"ನಾನು ಕಲಿಯಬೇಕಾದ್ದು ತುಂಬ ಇದೆ." ಎಂದಳು ಒಮ್ಮೆ.

"ಏನನ್ನು ಕಲಿಯಬೇಕೆಂದಿರುವೆ?" ಎಂದು ಕೇಳಿದೆ.

"ಎಲ್ಲ, ಎಲ್ಲರಿಂದ. ಕಲಿಯುವುದಕ್ಕೆ ವಿಷಯ ವಿಶೇಷವೇಕೆ? ನೋಡಿ, ನಿನ್ನೆ ನಾನೊಬ್ಬ ಬಾಲಕನಿಂದ ವಿಮಾನ ಮಾಡುವುದನ್ನು ಕಲಿತೆ. ತಡೆಯಿರಿ. ನಿಮಗೊಂದು ಮಾಡಿ ಕೊಡುತ್ತೇನೆ." ಎಂದು, ನಿಜಕ್ಕೂ ಕಾಗದವನ್ನೆತ್ತಿಕೊಂಡು ವಿಮಾನವನ್ನು ಮಾಡಲಾರಂಭಿಸಿದಳು. ಆ ಸಮಯದಲ್ಲಿ ಅವಳ ಹಾವ-ಭಾವಗಳು ಏಳೆಂಟು ವರ್ಷದ ಬಾಲಕಿಯಂತೆಯೇ ಇದ್ದುವು.

"ಹಾಗಾದರೆ ನನ್ನಿಂದ ಏನನ್ನು ಕಲಿತೆ?" ನಾನು ಕೇಳಿದೆ,

ಮನು ನನ್ನ ಎರಡೂ ಕೈಗಳನ್ನು ತನ್ನ ತೊಡೆಗಳಲ್ಲಿರಿಸಿಕೊಂಡು. ತನ್ನ ವಿಶಾಲ ನಯನಗಳ ದೃಷ್ಟಿವರ್ಷದಲ್ಲಿ ನನ್ನನ್ನು ತೋಯಿಸಿ ಹೇಳಿದಳು, "ನಾನು ನನ್ನನ್ನೇ ಮರೆಯುವುದನ್ನು ಕಲಿತದ್ದೆ ನಿಮ್ಮಿಂದ. ಒಂದು ಕಾಲಕ್ಕೆ ನಾನು ಅತಿ ಸ್ವಾಭಿಮಾನಿಯಾಗಿದ್ದೆ. ಆದರೆ ನಿಮ್ಮನ್ನು ಕಂಡ ಮೇಲೆ ನನ್ನಲ್ಲೊಂದು ಬದಲಾವಣೆ ಉಂಟಾಯಿತು; ಶಾಶ್ವತ ಪರಿವರ್ತನೆ."

"ಊಹೂಂ! ನೀನು ಮೊದಲಿಂದಲೂ ಇರುವುದೇ ಹೀಗೆ. ನನಗಿಲ್ಲದ ದೊಡ್ಡಸ್ತಿಕೆ ಕೊಟ್ಟು ಸನ್ಮಾನಿಸುತ್ತಿರುವೆ ಅಷ್ಟೆ."

"ನಿಮಗಿನ್ನೂ ನನ್ನ ಬಗ್ಗೆ ಏನೂ ತಿಳಿದಿಲ್ಲ. ಒಂದಲ್ಲ ಒಂದು ದಿನ ಎಲ್ಲ ತಿಳಿಯುತ್ತೆ. ನಿಜವಾಗಿಯೂ ಕೊಡುವವನು ತನ್ನ ಕೊಡುಗೆಯನ್ನು ಗುರುತಿಸಲಾರ."

"ನಾನೂ ನಿನ್ನಿಂದ ಏನನ್ನೋ ಕಲಿತಿದ್ದೇನೆ." ಎಂದೆ.

"ಗೊತ್ತು. ವ್ಯರ್ಥ ಸಲ್ಲಾಪ ಮಾಡುವುದು." ಎಂದಳು.

"ಅಲ್ಲ. ಅಜ್ಜಿ ಕತೆಯ ರಾಜಕುಮಾರಿಯಂತೆ ನಿರ್ಭಯವಾಗಿ, ಮುಗ್ಧವಾಗಿ ಬಾಳುವುದು." ಎಂದೆ.

ಕೇಳಿ ನಸು ನಕ್ಕಳಷ್ಟೆ. ತಕ್ಷಣವೇ ಹೊರಟು ನಿಂತಳು. ನಾನು ಅವಳಿಗೆ ಕೋಟನ್ನು ತೊಡಿಸುವಾಗ ಅವಳ ಎಡ ಭುಜದ ಮೇಲೆ ಗಲ್ಲವನ್ನೂರಿದೆ. ಅವಳು ನನ್ನ ಎಡಗೈಯನ್ನು ಬಿಗಿಯಾಗಿ ಎದೆಗೆ—ಹೃದಯದ ಮೇಲೆ—ಒತ್ತಿಕೊಂಡು ತನ್ನ ಬಲಗೈಯಿಂದ ನನ್ನ ಎಡಗೆನ್ನೆಯನ್ನು ಮೃದುವಾಗಿ ನೇವರಿಸಿ ಹೊರಟುಹೋದಳು. ಅಂಥ ಸುಖ ನಾನೆಂದೂ ಅನುಭವಿಸಿಲ್ಲ...

ಸಂತೋಷ ಒಂದು ಮಾನಸಿಕ ಸ್ಥಿತಿ. ಆದರೆ ಸುಖವು ಆ ಕ್ಷಣದಲ್ಲಿ ಉಂಟಾದ ಜೀವನಬೋಧ. ಯೋಗಾಭ್ಯಾಸ ಹಾಗೂ ತಪಸ್ಸಿನಿಂದ ಸಂತೋಷದ ಪ್ರವೃತ್ತಿಯನ್ನು ಆತ್ಮಗತ ಮಾಡಿಕೊಳ್ಳುವುದು ಸಾಧ್ಯ. ಸಂತೋಷದ ಮೂಲದಲ್ಲಿ ಪರಿಸ್ಥಿತಿಗಳನ್ನು ಜಯಿಸುವ ತೀವ್ರವಾದ ಆಕಾಂಕ್ಷೆ ಇರುತ್ತದೆ. ಆದರೆ ಸುಖವು ಲಜ್ಜಾಶೀಲವಾದದ್ದು, ಅಂಜುಬುರುಕ ಸ್ವಭಾವದ್ದು. ಅದು ಎಲ್ಲಿ, ಯಾವಾಗ ದೊರೆಯುವುದೆಂದು ಹೇಳುವುದು ಕಷ್ಟ.

ಪರೀಕ್ಷೆಗಳು ಮುಗಿದ ನಂತರ ಅವಳನ್ನು ಹುಡುಕಲೆಂದು ವಿಯೆನ್ನಾಗೆ ಹೋಗುತ್ತಿದ್ದಾಗ ಟ್ರೇನಿನಲ್ಲಿ ನಡೆದ ಒಂದು ಪ್ರಸಂಗದ ನೆನಪಾಗುತ್ತದೆ. ಗಾಡಿಯಲ್ಲಿ ತುಂಬ ಜನ; ಇಕ್ಕಟ್ಟು. ನನ್ನ ಪಕ್ಕದಲ್ಲಿ ಹದಿನೇಳು-ಹದಿನೆಂಟರ ತರುಣಿಯೊಬ್ಬಳು ಕುಳಿತಿದ್ದಳು. ನೋಡಿದರೆ, ಅವಳು ಒಂಟಿಯಾಗಿ ದೂರದ ಪ್ರಯಾಣವನ್ನು ಮಾಡು

ತ್ತಿದ್ದಾಳು. ಅದೇ ಮೊದಲೆಂದು ತೋರಿತು. ಇರುಳು ಇಳಿದು ಬರಲು ಪ್ರಯಾಣಿಕರೆಲ್ಲ ತೂಕಡಿಸಲಾರಂಭಿಸಿದರು. ಸಾಮಾನ್ಯವಾಗಿ ನನಗೆ ಟ್ರೇನಿನಲ್ಲಿ ನಿದ್ರೆ ಬರುವುದಿಲ್ಲ. ಆದರೂ ಹೇಗೋ ತೂಕಡಿಸಿಬಿಟ್ಟಿದ್ದೆ. ನನಗೆ ಎಚ್ಚರವಾದಾಗ ಆ ತರುಣಿ ನನ್ನ ಭುಜದ ಮೇಲೆ ತಲೆ ಇರಿಸಿ ನಿದ್ದೆ ಹೋಗಿದ್ದಳು. ಹಠಾತ್ತಾಗಿ ಅವಳೊಡನೆ ಮಾಯವಾಗಿಬಿಡಬೇಕನ್ನಿಸಿತು. ಅಪಾರ ಕರುಣೆಯ ಪ್ರವಾಹದಲ್ಲಿ ಕೊಚ್ಚಿ ಹೋಗಬೇಕನ್ನಿಸಿತು. ಅವಳಿಗೆ ಎಚ್ಚರವಾದೀತೆಂದು ಅಲುಗಾಡದ ಹಾಗೆ ಕುಳಿತುಬಿಟ್ಟೆ. ಕರ್ಣ ಪರಶುರಾಮರಿಗೆ ಮಲಗಲು ತೊಡೆಯನ್ನು ಕೊಟ್ಟಿದ್ದ ಪ್ರಸಂಗದ ನೆನಪಾಯಿತು. ಇಡೀ ರಾತ್ರಿ ಹಾಗೇ ಕುಳಿತು ಕಳೆದೆ. ಆಗ ನನಗಾದ ಅನುಭವಕ್ಕೆ, ಅದರ ಸ್ಮೃತಿ ಮಾತ್ರದಿಂದ ಈಗಾಗುವ ಅನುಭವಕ್ಕೆ ನಾನು 'ಸುಖ'ವೆಂದು ಕರೆಯುತ್ತೇನೆ. ಅದನ್ನು ಮನುಗೆ ಹೇಳಬೇಕಿತ್ತು. ಆಗವಳು ನನ್ನನ್ನು ಮನಸಾರೆ ಕೊಂಡಾಡುತ್ತಿದ್ದಳು.

★★

ನಾನು ವಿಯೆನ್ನಾಗೆ ಹೋಗಿ ಅಲ್ಲಿ ನಾಲ್ಕೈದು ದಿನ ತಂಗಿದೆ. ಅಲ್ಲಿನ ಭವನಗಳು ಸ್ಮಾರಕಗಳು, ಸಂಗ್ರಹಾಲಯಗಳು—ಇವುಗಳನ್ನೆಲ್ಲ ನೋಡಿದೆ. ಒಂದು ದಿನ ಅಕಸ್ಮಾತ್ತಾಗಿ ಸುಖದ ಒಂದು ಕ್ಷಣ ನನಗೆ ಲಭ್ಯವಾಯಿತು. ವಿಯೆನ್ನಾ ನಗರವಿರುವುದು ಡೆನ್ಯುಬ್ ನದಿಯ ತೀರದಲ್ಲಿ. ಅಲ್ಲಿ ನದಿಯಲ್ಲಿ ವಿಹರಿಸಲು ಸಣ್ಣ-ಸಣ್ಣ ದೋಣಿಗಳು ಇರುತ್ತವೆ. ಅಂದು ಬೆಳಿಗ್ಗೆ ಬೇಗನೆ ಎದ್ದು, ನದೀತೀರದಲ್ಲಿ ನಿಂತು, ಅಲೆಗಳ ಲೀಲೆಯನ್ನು ನೋಡುತ್ತ, ದೋಣಿಯ ಹಾದಿಯನ್ನು ಕಾಯುತ್ತಿದ್ದೆ.

"ನಮ್ಮೊಡನೆ ಬರುವಿರಾ ?" ಹಿಂದಿನಿಂದ ಯಾರೋ ನನ್ನನ್ನು ಕೇಳಿದರು. "ನೀವು ಒಪ್ಪಿದರೆ ನಮಗೆ ತುಂಬ ಸಂತೋಷವಾಗುವುದು."

ನಾನು ತಟಕ್ಕನೆ ತಿರುಗಿ ನೋಡಿದೆ. ದೋಣಿಯಲ್ಲಿ ಯುವದಂಪತಿಗಳು. ಯುವತಿ ನೀಲಿ-ಕೆಂಪು ಹೂವುಗಳಿರುವ ಹಳದಿ ಬಣ್ಣದ ಉಡುಪನ್ನು ಧರಿಸಿ, ತಲೆಗೆ ತಿಳಿ ನೇರಿಳೆ ಬಣ್ಣದ ರೇಷ್ಮೆವಸ್ತ್ರವನ್ನು ಸುತ್ತಿಕೊಂಡಿದ್ದಳು. ಅವಳ ಕೈಯಲ್ಲಿ ಚಿತ್ತಾದ ಬುಟ್ಟಿಯೊಂದಿತ್ತು. ಅವರಿಬ್ಬರ ಮುಖದಲ್ಲೂ ಇದ್ದ ಪ್ರಸನ್ನತೆ ಹಾಗೂ ಪ್ರೇಮಮಯ ಆಗ್ರಹವನ್ನು ಕಂಡು, ಮರುಮಾತಾಡದೆ ದೋಣಿಯನ್ನು ಏರಿಬಿಟ್ಟೆ. ನಾವು ದೋಣಿಯಲ್ಲಿ ನಿಂತು ಮಾತನಾಡಿದೆವು. 'ರೇಲಿಂಗ್' ಮೇಲೆ ಬಾಗಿ ನಿಂತಿದ್ದ ಆ ಯುವಕ ನನ್ನನ್ನು ಪ್ರಶ್ನಿಸಿದ. "ನಿಮಗೆ ನದಿಯ ನೀರು ಯಾವ ಬಣ್ಣದ್ದಾಗಿ ತೋರುತ್ತೆ ?"

"ನೀಲಿ." ಎಂದೆ ನಾನು.

"ಹಾಗಾದರೆ ನೀವು ಖಂಡಿತವಾಗಿಯೂ ಪ್ರೇಮಜೀವಿಗಳು !" ಎಂದನಾತ. ಉತ್ಸಾಹಭರಿತ ದನಿಯಲ್ಲಿ

"ನನಗಂತೂ ಈ ನೀರು ಹಸುರಾಗಿ ತೋರುತ್ತೆ !" ಆ ಯುವತಿ ನಿಡುಸುಯ್ದಂತೆ ನಟಿಸಿ ನುಡಿದಳು. "ನನ್ನನ್ನು ಯಾರೂ ಪ್ರೀತಿಸುವುದಿಲ್ಲ !"

ಅವರಿಬ್ಬರೂ ಬಿಚ್ಚುಮನಸ್ಸಿನಿಂದ ನಗಲಾರಂಭಿಸಿದರು. ಅಷ್ಟುಹೊತ್ತಿಗೆ ಅವರೊಡನೆ ಸಮರಸನಾಗಿ ಹೋಗಿದ್ದ ನಾನೂ ಜೊತೆಗೂಡಿದೆ. ಬ್ಲೂ-ಡೆನ್ಯುಬಿನ ಈ ಕಾವ್ಯ ಎಷ್ಟು ಸರಳ, ಆದರೆಷ್ಟು ಹೃದಯಸ್ಪರ್ಶಿ. ನದಿಯ ನೀರು ಎಲ್ಲರಿಗೂ ನೀಲಿಯಾಗೇ ತೋರುತ್ತೆ; ಆದರೆ ಅದು ಪ್ರೇಮಜೀವಿಗಳಿಗೆ ಮಾತ್ರ ಹಾಗೆ ತೋರುವುದೆಂದು ಪ್ರತೀತಿ. ಎಂದರೆ. ಎಲ್ಲರೂ ಪ್ರೇಮಜೀವಿಗಳೆ ಎಂದರ್ಥವಲ್ಲವೆ ? ಇದು ವಿಶ್ವಪ್ರೇಮದ ಒಂದು ಸುಂದರ ಕಾವ್ಯವಲ್ಲವೆ ? ಆಗ ನನಗೆ ಮನು ನನ್ನ ಬಳಿಯಲ್ಲೇ ಇರುವಂತೆ, ನನ್ನ ಸುತ್ತಮುತ್ತ ಓಡಾಡುತ್ತಿರುವಂತೆ ಭಾಸವಾಯಿತು; ಎಲ್ಲೆಲ್ಲೂ ಅವಳ ರೂಪವೇ ಗೋಚರಿಸತೊಡಗಿತು. ಮನಸ್ಸು ಹಗುರವಾಗಿಹೋಯಿತು. ನಾನು ನಿಶ್ಚಿಂತನಾಗಿ, ಅವರಲ್ಲೇ ಸಮರಸನಾದೆ, ದೋಣಿ ದಡ ಸೇರಿದಾಗ. ಮತ್ತೆ ಭೇಟಿಯಾಗುವ ಆಶ್ವಾಸನೆಗಳೊಂದಿಗೆ ನಾವು ಬೀಳ್ಕೊಂಡೆವು. ದೋಣಿಯು ಹಿಂದಿರುಗುವಾಗ್ಗೆ. ಹಠಾತ್ತಾಗಿ, ಆ ಯುವತಿ ಮುಂದಕ್ಕೆ ಬಾಗಿ ನನ್ನ ಎಡಗೆನ್ನೆಯನ್ನು ಚುಂಬಿಸಿದಳು. ಸ್ನೇಹದ ಅಂತಹ ಅಕೃತ್ರಿಮ ರೂಪವನ್ನು ನಾನೆಂದೂ ಕಂಡಿರಲಿಲ್ಲ.

ಆಗ ಮನು ಕೇವಲ ನನ್ನವಳು ಮಾತ್ರ

ವಾಗಿ ಉಳಿದಿರಲಿಲ್ಲ. ಆದ್ದರಿಂದಲೆ ನಾನು ಅವಳಿಗೆ ತೀರ ಹತ್ತಿರದವನಾಗಿದ್ದೆ. ತಕ್ಷಣ ಹೋಟೆಲಿಗೆ ಹಿಂದಿರುಗಬೇಕೆಂಬ ಬಯಕೆ ಇಲ್ಲವಾಯಿತು. ನಾನು, ನಾನು ಸರ್ವಾಂತರ್ಯಾಮಿಯಾದಂತೆ ಭಾಸವಾಗತೊಡಗಿತು. ಚಲಿಸುತ್ತಿದ್ದ ಬಂಡಿಗಳು, ಓಡಾಡುತ್ತಿದ್ದ ಜನರು, ಹಸ್ತದಲ್ಲಿ ಹಸ್ತವಿರಿಸಿಕೊಂಡು ಹೋಗುತ್ತಿದ್ದ ದಂಪತಿಗಳು, ನಿಕ್ಕರಿನ ಜೇಬುಗಳಲ್ಲಿ ಕೈಗಳನ್ನಿಟ್ಟುಕೊಂಡು, ಸಿಳ್ಳು ಹಾಕುತ್ತ, ತನ್ನದೇ ಆದ ರೀತಿಯಿಂದ ನಡೆಯುತಲಿದ್ದ ಬಾಲಕ. ಎಣಿಸಿದಂತೆ ಹೆಜ್ಜೆಗಳನ್ನಿಡುತ್ತ, ಆಗಾಗ್ಗೆ ಹಿಂದಿರುಗಿ ನೋಡುತ್ತಲಿದ್ದ ದುರ್ಬಲ ಯುವಕ, ಪ್ರಪಂಚದ ಹೊರೆಯನ್ನೆಲ್ಲ ತಾನೆ ಹೊತ್ತಿರುವಳೇನೋ ಎಂಬಂತೆ ಅವಸರದಿಂದ ನಡೆದಿದ್ದ ಆ ಆಫೀಸ್ ಗರ್ಲ್—ಅವರೆಲ್ಲರ ಅಂತರ್ಯವನ್ನು ಅರಿತಿದ್ದಂತೆ ತೋರುತ್ತಿತ್ತು. ಅದನ್ನು ಬಂದಿಸಿತೂ ಬಿಡದೆ ಹೀರಿ ಹೀರಿ ಸವಿಯಬೇಕನ್ನಿಸುತ್ತಿತ್ತು.

ನಾನು ಆಗ ಅರಿತೆ ಮನುವಿನ ಜೀವನದ ಮರ್ಮವನ್ನು. ನಾಲ್ಕೂವರೆ ತಿಂಗಳ ಅವಧಿಯಲ್ಲಿ ಅವಳು ನನಗೆ ಸ್ವರ್ಗ ಮತ್ತು ಪಾತಾಳದ ಎಲ್ಲ ಹಾದಿಗಳನ್ನು ತೋರಿಬಿಟ್ಟಿದ್ದಳು. ಕೊಡಲು ಅಥವಾ ತೆಗೆದುಕೊಳ್ಳಲು ಯೋಗ್ಯವಾದುದನ್ನು ಒಂದನ್ನೂ ಉಳಿಸಿದಲಿಲ್ಲ. ಒಂದು ವಿಶೇಷ ಅರ್ಥದಲ್ಲಿ ಅವಳು ನನ್ನ ಪಾಲಿಗೆ 'ಕೃಷ್ಣ'ನಂತೆ ಆಗಿದ್ದಳು. ಕೃಷ್ಣ ರಾಧೆಯ ಪ್ರತಿಯೊಂದು ವೃತ್ತಿಯಲ್ಲೂ ಅವಳಿಗೆ ಸಹಕಾರಿಯಾಗುತ್ತಿದ್ದ, ಸಹಗಾಮಿಯಾಗುತ್ತಿದ್ದ. ಅವಳಿಗಾಗಿ ಚಿಕ್ಕವನೂ ಆಗುತ್ತಿದ್ದ, ದೊಡ್ಡವನೂ ಆಗುತ್ತಿದ್ದ. ಅದೇ ತರಹದ ಅಪೂರ್ವತೆ ಮನು ವ್ಯವಹಾರದಲ್ಲೂ ಇದ್ದಿತು. ಕೃಷ್ಣ ಮಥುರೆಗೆ ಹೊರಟುಹೋದ, ರಾಧೆಯ ಬಾಳು ಮುಗಿಯಿತು— ಮುಗಿಯಿತೆಂದು ನಾವು ಭಾವಿಸುತ್ತೇವಷ್ಟೆ. ಆದರೆ, ನಿಜವಾಗಿಯೂ ಹಾಗೆ ಆಗಲಿಲ್ಲ. ಆಗ ರಾಧೆ ಕೃಷ್ಣಮಯವಾಗಿ ಹೋದಳು. ಅವಳ ವಾಸ್ತವಿಕ ಜೀವನ ಆರಂಭವಾದುದು ಆಗ.

ನಾನು ಹೋಟೆಲಿಗೆ ಬಂದು. ಲಿಫ್ಟ್ ಇದ್ದ ಕಡೆಗೆ ಹೊರಟಿದ್ದೆ. ಪೋರ್ಟರ್ ಒಬ್ಬ ನನಗೆ ಒಂದು ಪತ್ರ ಮತ್ತು ಒಂದು ಚಿಕ್ಕ ಪಾರ್ಸಲನ್ನು ತಂದುಕೊಟ್ಟ. ಲಂಡನ್‌ನಿಂದ ನನ್ನ ಬ್ಯಾಂಕ್‌ನವರು ಅವುಗಳನ್ನು ನನ್ನ ಇಲ್ಲಿನ ವಿಳಾಸಕ್ಕೆ ಕಳಿಸಿಕೊಟ್ಟಿದ್ದರು.

ನಾನು ಕೊಠಡಿಯಲ್ಲಿ ಕುಳಿತು ಸಾವಕಾಶವಾಗಿ-ಶಾಂತವಾಗಿ-ಲಕೋಟೆಯನ್ನು ಬಿಚ್ಚಿದೆ. ಪತ್ರದಲ್ಲಿ ದಿನಾಂಕ ಮತ್ತು ಸ್ಥಾನಗಳ ಉಲ್ಲೇಖವಿರಲಿಲ್ಲ. ನಸುಹಳದಿ ಬಣ್ಣದ ನುಣುಪಾದ, ಶುಭ್ರವಾದ ಕಾಗದದಲ್ಲಿ, ನನಗೆ ನನ್ನ ಅಕ್ಷರಗಳಷ್ಟೇ ಸುಪರಿಚಿತವಾದ ಮನುವಿನ ಮುದ್ದು-ಮುದ್ದಾದ ಅಕ್ಷರಗಳು ಮೂಡಿದ್ದವು. ಮನು ಹಿಂದೆಂದೂ ನನಗೆ ಇಷ್ಟು ದೀರ್ಘವಾದ ಪತ್ರವನ್ನು ಬರೆದಿರಲಿಲ್ಲ. ಸಾಮಾನ್ಯವಾಗಿ ಅವಳ ಪತ್ರಗಳಲ್ಲಿ ಎರಡೇ ಎರಡು ವಾಕ್ಯಗಳಿರುತ್ತಿದ್ದವು. ಇಲ್ಲವೆ ಚಿತ್ರಾಂಕಿತ ಕಾರ್ಡುಗಳ ಮೇಲೆ ಕೇವಲ ಅವಳ ವಿಳಾಸ ಮತ್ತು ಒಂದು ಮೂಲೆಯಲ್ಲಿ ಅಸಂಖ್ಯಾತ ಸುಂದರ ರೇಖೆಗಳ ನಡುವೆ ಸೂಕ್ಷ್ಮವಾದ ಹೂವುಗಳಂತೆ ಇಣುಕುವ ಅವಳ ಹೆಸರಿನ ಅಕ್ಷರಗಳು ಇರುತ್ತಿದ್ದವು—ಅಷ್ಟೆ. ಆದರೆ ಅಂದಿನ ಪತ್ರ ಸುದೀರ್ಘವಾಗಿತ್ತು, ಎರಡೂ ಕಡೆ ಬರೆದ ಎಂಟು ಹಾಳೆಗಳು. ಅವುಗಳಲ್ಲಿ ಅವಳ ಜೀವನದ ಸಾರ ಸರ್ವಸ್ವವೇ ಅಡಗಿತ್ತು:

"ಈ ಪತ್ರವನ್ನೋದಿ ನಿಮಗೆ ಆಶ್ಚರ್ಯವೇನೂ ಆಗುವುದಿಲ್ಲವೆಂಬ ಪೂರ್ಣ ವಿಶ್ವಾಸ ನನಗಿದೆ. ಈ ವೇಳೆಗೆ ನೀವು ಸಮತ್ವಭಾವದಿಂದ ಜೀವನದ ಸಂಘರ್ಷದಲ್ಲಿ ಭಾಗವಹಿಸಲು ಸಿದ್ಧರಾಗಿರಬಹುದೆಂದು ನಂಬಿದ್ದೇನೆ. ಬಹುಶಃ ನನ್ನನ್ನು ಮರೆತಿದ್ದರೂ ಮರೆತಿರಬಹುದು. ಆದರೆ ನಾನಿರುವಲ್ಲಿ ನಿಮ್ಮ ಹೊರತು ಮತ್ತೇನೂ ಇಲ್ಲ.

"ನಾನಿಂದು ಬರೆಯುತ್ತಿರುವುದನ್ನು ಪ್ರಾಯಶಃ, ನೀವು ಪತ್ರವೆಂದು ಕರೆಯಲಾರಿರಿ. ನಾನೊಮ್ಮೆ ಮನಸ್ಸಿನಲ್ಲೇ ಮಾಡಿಕೊಂಡಿದ್ದ ಪ್ರತಿಜ್ಞೆಯನ್ನು ಇಂದು ಕಾರ್ಯರೂಪಕ್ಕೆ ತರುತ್ತಲಿದ್ದೇನೆ.

"ನನ್ನ ತಾಯಿ ನನಗೆ ಜನ್ಮ ಕೊಟ್ಟ ಕೂಡಲೇ ಇಹಲೋಕವನ್ನು ತ್ಯಜಿಸಿದಳು. ಅದು ನಡೆದದ್ದು ಕಳೆದ ಯುದ್ಧ ಕಾಲದಲ್ಲಿ. ಹೀಗಾಗಿದ್ದರಿಂದ, ಆರಂಭದಲ್ಲಿ ನನ್ನ ಸಾಲ್ಜ್‌ಬರ್ಗ್‌ನಲ್ಲಿನ ಚಿಕ್ಕಮ್ಮನ ಮನೆಯಲ್ಲಿ ಬಾಲ್ಯ ಕಳೆಯಿತು.

ನನ್ನ ಬಾಳಿನ ಆ ಕಾಲ ಎಂಥವರನ್ನೂ ಮತ್ಸರಕ್ಕೀಡು ಮಾಡುವಂಥಾದ್ದು. ಅವರು ನನ್ನ ಪ್ರತಿಯೊಂದು ಆಶೆಯನ್ನು ಪೂರೈಸುತ್ತಿದ್ದರು. ಚಿಕ್ಕಮ್ಮನಿಗೂ ಮಕ್ಕಳಿದ್ದರು—ಒಂದು ಗಂಡು, ಎರಡು ಹೆಣ್ಣು. ಆದರೆ ಚಿಕ್ಕಮ್ಮನಾಗಲಿ, ಚಿಕ್ಕಪ್ಪನಾಗಲಿ ನಮ್ಮಗಳಲ್ಲಿ ಭೇದವೆಣಿಸುತ್ತಿರಲಿಲ್ಲ. ನಾನೇ ಚಿಕ್ಕವಳಾದ ಕಾರಣ ನನ್ನ ಮೇಲೆ ಹೆಚ್ಚು ಮಮತೆ. ಚಿಕ್ಕಪ್ಪನವರು ವಾಸ್ತುತಜ್ಞರಾದ ಕಾರಣ, ಯುದ್ಧ ಮುಗಿದ ನಂತರ ಅವರ ವ್ಯವಹಾರ ಕುದುರಿತು; ಸುಖ-ಸಮೃದ್ಧಿಯ ದಿನಗಳು ಬಂದುವು. ನನ್ನ ಸೋದರ, ಕಾರ್ಲ್, ವಿಯೆನ್ನಾದಲ್ಲಿ ವ್ಯಾಸಂಗ ಮಾಡುತ್ತಿದ್ದ. ಸೋದರಿಯರಿಬ್ಬರೂ ಮದುವೆ ಮಾಡಿಕೊಂಡು ಗಂಡಂದಿರ ಮನೆ ಸೇರಿದ್ದರು. ಆಗ ಮನೆಯವರು ನನ್ನನ್ನು ಸ್ವಿಟ್ಜರ್ಲೆಂಡಿನ, ಒಂದು ಮಿಷನ್ ಸ್ಕೂಲ್‌ನಲ್ಲಿ ಸೇರಿಸಲು ನಿರ್ಧರಿಸಿದರು. ಆಗ ನನಗೆ ಹದಿನೈದು ತುಂಬಿ ಹದಿನಾರರಲ್ಲಿ ಕಾಲಿರಿಸಿದ್ದೆ.

"ಇಂಟರ್ ಕಾಲನ್ ಬಳಿ, ಊರಿಗೆ ತುಸು ದೂರದಲ್ಲಿದ್ದ ಆ ಶಾಲೆಯಲ್ಲಿ ನಾನು ಕಲಿತಿದ್ದು ಏನು ಗೊತ್ತೆ? ಕದ್ದು ಈಜಾಡುವುದು, ನಮ್ಮ ಫ್ರೆಂಚ್ ಶಿಕ್ಷಕಿಯನ್ನು ಪ್ರೀತಿಸುವುದು.. ಅವರ ಹೆಸರು ಸಿಸ್ಟರ್ ಹೆಲನ್. ಅವರು ಎಷ್ಟು ಸುಂದರವಾಗಿದ್ದರು ಗೊತ್ತೆ? ಅವರನ್ನು ನೋಡಿದ ಕೂಡಲೆ ನನ್ನ ಹೃದಯದ ಚಲನೆ ಒಂದು ಕ್ಷಣ ನಿಂತುಹೋಗಿ, ಮರುಕ್ಷಣದಲ್ಲೆ ದ್ವಿಗುಣ ವೇಗದಿಂದ ಪುನರಾರಂಭವಾಗುತ್ತಿತ್ತು. ಅವರು ಮಾತಾಡುತ್ತಿರುವಾಗ ಮಧ್ಯದಲ್ಲಿ ತುಟಿ ಎರಡುಮಾಡದೆ ಸುಮ್ಮನೆ ಅವರ ಶುಭ್ರವಾದ ಲಿನನ್ನಿನ ತೋಳಿಗೆ ಕೆನ್ನೆ ಉಜ್ಜುತ್ತಿರಬೇಕೆನ್ನಿಸುತ್ತಿತ್ತು. ಪ್ರತಿಯೊಬ್ಬರೊಂದಿಗೂ ಅವರ ವ್ಯವಹಾರ ಅಷ್ಟೇ ಪ್ರೇಮಪೂರ್ಣವಾದುದಾಗಿರುತ್ತಿತ್ತಾದರೂ ಪ್ರತಿಯೊಬ್ಬರು ಅವರು ತನ್ನನ್ನು ಮಾತ್ರ ಪ್ರೇಮಿಸುತ್ತಾರೆಂಬ ಭ್ರಮೆಗೊಳಗಾಗಿರುತ್ತಿದ್ದರು. ಆದರೆ ಬೆನ್ನ ಹಿಂದೆ ಸಿಸ್ಟರ್ ಹೆಲನ್ನರನ್ನು ಆಡಿಕೊಳ್ಳುವವರೂ ಇದ್ದರು.

"ಒಂದು ರಾತ್ರಿ, ಎಲ್ಲವೂ ನಿಶ್ಶಬ್ದವಾದ ಕೂಡಲೆ, ಕಿಟಕಿ ಹಾರಿ, ಸರೋವರ ತಟದಲ್ಲಿ ನಾನು ನಿತ್ಯ ಈಜಲು ಹೋಗುತ್ತಿದ್ದ ಗುಪ್ತ ತಾಣಕ್ಕೆ ಹೊರಟೆ. ಬೇಸಿಗೆಯ ಕಾಲ. ಆಗ ನನಗೆ ಪ್ರಿಯವಾಗಿದ್ದ ಕಾರ್ಯಗಳು ಎರಡೇ—ಮನದಲ್ಲೆ ಆಶಾಲೋಕವನ್ನು ಸೃಜಿಸುವುದು ಮತ್ತು ರಾತ್ರಿಯಲ್ಲಿ ಮನದಣಿಯೆ ಈಜುವುದು. ಅಂಥ ಸಮಯದಲ್ಲಿ ನೀರಿನ ಕಣಗಳು ದೇಹದ ರಂಧ್ರ-ರಂಧ್ರವನ್ನು ಹೊಕ್ಕು ಅವನ್ನು ತೆರೆ ಮಾಡಿ ಜೀವನದಲ್ಲಿ ಉಲ್ಲಾಸದ ಬುಗ್ಗೆಯನ್ನೆ ಹರಿಸುತ್ತವೆ. ಅಂದಿನ ವರೆಗೂ ನಾನು ಆರಿಸಿದ್ದ ಸರೋವರ ತಟದ ಆ ತಾಣವು ತುಂಬ ಗುಪ್ತವಾದುದೆಂದು, ಕೇವಲ ನನ್ನದೆಂದು ಭಾವಿಸಿದ್ದೆ. ಆದರೆ, ಅಂದು ಅಲ್ಲಿ ಯಾರೋ ನನಗಿಂತ ಮುಂಚಿತವಾಗಿಯೆ ಬಂದುಬಿಟ್ಟಿದ್ದರು. ಆಗಾಗ್ಗೆ ನೀರಿನಿಂದ ಹಳಗಿದ ಈಜುಗಾರನ ಕೈಗಳ ಶಬ್ದ ಕೇಳಿಬರುತ್ತಲಿತ್ತು. ನಾನು ಹೆದರಿದೆ, ಆದರ ಹಿಂದಿರುಗಲು ಮನಸ್ಸಾಗಲಿಲ್ಲ. ಆ ವ್ಯಕ್ತಿ ಯಾರೆಂದು ತಿಳಿಯುವ ಕುತೂಹಲ ಉಂಟಾಯಿತು. ನಾನು ಮರಗಳ ಮರೆಯಿಂದ ನೋಡ ಹತ್ತಿದೆ. ಮೊದಲು ನೀರಿನಲ್ಲಾಗುತ್ತಿದ್ದ ಶಬ್ದ ನಿಂತಿತು. ಅನಂತರ ದಡದಲ್ಲೊಂದು ವ್ಯಕ್ತಿ ದೃಗ್ಗೋಚರವಾಯಿತು. ದೂರದಿಂದ ಆ ವ್ಯಕ್ತಿಯನ್ನು ಗುರುತಿಸಲು ಸಾಧ್ಯವಾಗಲಿಲ್ಲವಾದರೂ ಅವಳೂ ನನ್ನಂತೆ ಏಕಾಂಗಿಯಾಗಿ ಬಂದಿರುವ ಸ್ತ್ರೀಯೆಂದು ಮಾತ್ರ ತಿಳಿಯಿತು. ಅವಳು ಮೆಲ್ಲ ಮೆಲ್ಲನೆ ಬಳಿ ಸಾರಿದಳು. ನಾನು ಕಣ್ಣರಳಿಸಿ ನೋಡಿದೆ. ಕೂಡಲೆ ನನ್ನ ಹೃದಯದ ಬಡಿತವೆ ನಿಂತುಹೋಯಿತು. ಅಪ್ರಜ್ಞವಾಗಿಯೇ ನಾನು ಓಡಿ ಹೋಗಿ ಸೋದರಿ ಹೆಲನ್ನರ ಕಾಲುಗಳನ್ನ ಹಿ ಕೊಂಡಿದ್ದೆ.

"ಅವರು ಬೆಚ್ಚಲಿಲ್ಲ. ಶಾಂತವಾಗಿ ನನ್ನನ್ನು ಮೇಲಕ್ಕೆ ಸೆಳೆದುಕೊಂಡರು. 'ಸ್ವಲ್ಪ ಇ ಕೂಡು' ಎಂದು ನನ್ನನ್ನು ಒಂದು ಕಡೆ ಕೂರಿಸಿ ಬಟ್ಟೆಗಳನ್ನು ಧರಿಸಿಕೊಳ್ಳಲು ಹೊರಟರು. ನಾನ ಮೊದಲು ಮಂಡಿಗಳಲ್ಲಿ ಮುಖವನ್ನು ಅಡಗಿ ಕುಳಿತೆ; ನಂತರ, ಇದ್ದಕ್ಕಿದ್ದ ಹಾಗೆ, ನಿಸ್ಸಂಕೋಚವಾಗಿ ಅವರನ್ನೇ ದಿಟ್ಟಿಸತೊಡಗಿದೆ. ಕವಸ ದಂತೆ ಸಣ್ಣದಾಗಿದ್ದ ಟವಲಿನಿಂದ, ಸಾವಧಾನವಾ ಮೈಯನ್ನೊರಸಿಕೊಂಡು, ಒಂದೊಂದೇ ಬಟ

ಯನ್ನು—ಶೀಘ್ರವಾಗಿ ಆದರೆ ಸುವ್ಯವಸ್ಥಿತವಾಗಿ—ಧರಿಸತೊಡಗಿದರು. ಅಬ್ಬ, ಎಷ್ಟೊಂದು ಬಟ್ಟೆಗಳು! ಮಠದಲ್ಲಿರುವ ಮಹಿಳೆಯರಿಗೆ ಅಷ್ಟೊಂದು ಬಟ್ಟೆಗಳ ಅವಶ್ಯಕತೆ ಉಂಟೆಂದು ನಾನು ಊಹಿಸಿರಲೂ ಇಲ್ಲ. ಅಷ್ಟೊಂದು ಬಟ್ಟೆಗಳಲ್ಲಿಯೂ ಕೂಡ ಅವರು ನವವಿಕಸಿತ ಕುಸುಮದಂತೆ ಪ್ರಫುಲ್ಲಿತವಾಗಿರುತ್ತಿದ್ದರು. ಬಟ್ಟೆಗಳನ್ನೆಲ್ಲ ಧರಿಸಿಕೊಂಡನಂತರ ಬೂಟು ಮತ್ತು ಕಾಲ್ಚೀಲಗಳನ್ನೆತ್ತಿಕೊಂಡು ನನ್ನ ಬಳಿ ಬಂದರು. ಕೂಡಲೆ ಎದ್ದು, ಪಾದರಕ್ಷೆಗಳನ್ನು ಅವರಿಂದ ಕಸಿದುಕೊಂಡು, ಅವುಗಳನ್ನು ತೊಡಿಸುವ ನೆಪದಲ್ಲಿ ಅವರ ಮುದ್ದಾದ ಪಾದಪದ್ಮಗಳನ್ನು ಮುದ್ದಿಸಿ-ಚುಂಬಿಸಿ ನಲಿಯಬೇಕೆನ್ನಿಸಿತು. ನನ್ನ ಮನದ ಇಂಗಿತವನ್ನು ಅವರು ಅರಿತರೆ? ಬೂಟುಗಳನ್ನು ನನ್ನ ಮುಂದಿಟ್ಟು, ನನ್ನ ಪಕ್ಕದಲ್ಲಿ ಕುಳಿತು, ಆ ಕರವಸ್ತ್ರವನ್ನು ನನ್ನ ಕೈಗಿತ್ತರು. ನಾನು ನನ್ನ ಬಯಕೆಯನ್ನು ಪೂರೈಸಿಕೊಂಡು, ಅವರಿಗೆ ಪಾದರಕ್ಷೆಗಳನ್ನು ತೊಡಿಸಿದೆ.

"ಅನಂತರ, ಅವರೆಂದರು. 'ನೀನು ನೀರಿನಲ್ಲಿ ಇಳಿಯಬಯಸುವುದಾದರೆ ಇಳಿ. ನಾನು ಇಲ್ಲೇ ಕುಳಿತಿರುತ್ತೇನೆ.' ನಾನು ನಕಾರದಲ್ಲಿ ತಲೆಯಾಡಿಸಿದೆ...ಮತ್ತೆ, ಇದ್ದಕ್ಕಿದ್ದ ಹಾಗೆ. 'ಮತ್ತೆಂದಾದರೂ ನಾವಿಬ್ಬರೂ ಒಟ್ಟಿಗೆ ಹೋಗೋಣ...' ಎಂದೆ

"ಅಂದು ಒಬ್ಬರ ಕತ್ತಿನಲ್ಲೊಬ್ಬರು ತೋಳು ಹಾಕಿಕೊಂಡು ಆದಷ್ಟು ಹೊತ್ತು ಕಾ[illegible] ಕಾಣೆ. (ಆ ರಾತ್ರಿಯ ನಂತರ ನಾನು ಮತ್ತೆ ನೀರಿಗಿಳಿದದ್ದು ಲಾಕ್ ಅಲನ್‌ನಲ್ಲೇ, ನೀವು ನನ್ನ ಜೊತೆ ಇದ್ದಾಗ.)

"ಮಾರನೆಯ ದಿನ ನಾನು ಗಾಳಿಯಲ್ಲಿ ಹಾರಾಡುತ್ತಲಿದ್ದೆ—ಆನಂದಪರವಶಳಾಗಿ. ಪ್ರಪಂಚದ ಸಕಲ ಸೌಲಭ್ಯಗಳು ಕೇವಲ ನನಗೆ ಮಾತ್ರ ದೊರೆತಿವೆ ಅನ್ನಿಸಿತ್ತು ನನಗೆ. ತರಗತಿಯಲ್ಲಿ ನಮ್ಮಿಬ್ಬರ ದೃಷ್ಟಿಗಳು ಒಂದುಗೂಡಿದಾಗಂತೂ ನನ್ನ ಮನ ಸಂತೋಷದಿಂದ ನಲಿದಾಡಿ ಹೋಗುತ್ತಿತ್ತು...

"ಮಾರನೆಯ ದಿನ ಸಂಜೆಯ ಪ್ರಾರ್ಥನೆಯಾದ ನಂತರ ಸೋದರಿ ಹೆಲೆನ್ ತಮ್ಮ ಕೊಠಡಿಗೆ ತೆರಳುತ್ತಿದ್ದರು. ನಾನು ಎಲ್ಲರ ಕಣ್ಣು ತಪ್ಪಿಸಿ ಅವರನ್ನು ಹಿಂಬಾಲಿಸಿದೆ. ಅವರು 'ರಾತ್ರಿ ಊಟವಾದ ನಂತರ ಹಿಂಬದಿಯ ದೀಪದ ಕಂಬದ ಹತ್ತಿರ ಬಾ.' ಎಂದು ಹೇಳಿ, ಮುಂದೆ ಹೋಗಿಬಿಟ್ಟರು.

"ವೇಳೆಗೆ ಸರಿಯಾಗಿ ನಾನು ದೀಪದ ಕಂಬದ ಬಳಿ ಹೋಗಿ ನಿಂತೆ. ಒಂದು ನಿಮಿಷ, ಎರಡು ನಿಮಿಷ... ಸೋದರಿ ಹೆಲೆನ್ ಬರಲಿಲ್ಲ. ನಾನು ಚಿಂತಾಗ್ರಸ್ತಳಾದೆ. ಕೊನೆಗೆ ಅವರು ಬಂದರು. 'ಆಲ್ಬಂ'ನಂತಿದ್ದ ಒಂದು ಪುಸ್ತಕವನ್ನು ನನ್ನ ಕೈಯಲ್ಲಿರಿಸಿ. 'ಇದು ನಿನಗೆ, ಇಟ್ಟುಕೋ!' ಎಂದರು. ನಾನು ಏನನ್ನೋ ಹೇಳಹೊರಟೆ, ಆದರೆ, ಅಷ್ಟರಲ್ಲೆ ಅವರು ಅಪಾರ ಸ್ನೇಹದಿಂದ ನನ್ನ ತಲೆಯನ್ನು ತಡವಿ ಹೊರಟುಹೋದರು. ನಾನು ದಿಙ್ಮೂಢಳಾದೆ. ಆ ಪುಸ್ತಕವನ್ನು ಬಲವಾಗಿ ಎದೆಗವಚಿಕೊಂಡೆ; ಗೌನಿನಲ್ಲಡಗಿಸಿಕೊಂಡೆ. ಅಂದು ರಾತ್ರಿ ಅದನ್ನು ತೆರೆದು ನೋಡಲು ಸಾಧ್ಯವೇ ಆಗಲಿಲ್ಲ. ಡಾರ್ಮಿಟರಿಯಲ್ಲಿ ತುಂಬ ಹುಡುಗಿಯರಿದ್ದ ಕಾರಣ. ಆ ಪುಸ್ತಕವನ್ನು ನೋಡುವುದಂತಿರಲಿ, ಗೌನಿನಿಂದೀಚೆಗೆ ತೆಗೆಯುವುದು ಕೂಡ ಸಾಧ್ಯವಿರಲಿಲ್ಲ. ರಾತ್ರಿ ಇಡೀ ಅದು ಅಲ್ಲೇ ಉಳಿಯಿತು.

"ಮಾರನೆಯ ದಿನ ಮಧ್ಯಾಹ್ನದ ಭೋಜನದಲ್ಲಿ, ದೊಡ್ಡ ಮೇಜಿನಲ್ಲಿ ಸೋದರಿ ಹೆಲೆನ್ ಇಲ್ಲದಿರುವುದನ್ನು ಗಮನಿಸಿದಾಗ ನನ್ನ ಅಡಿಯಿಂದ ಭೂಮಿಯೇ ಜಾರಿತು. ಊಟ ಸೇರದಾಯಿತು. ನಿನ್ನೆ ದೊರೆತಿದ್ದ ಪುಸ್ತಕವನ್ನು ನೋಡಲು ಸಾಧ್ಯವಾಗಿರಲಿಲ್ಲ. ದಿಕ್ಕುಗೆಟ್ಟ ನಾನು ಕೆಲಸದಾಳು ಎಲ್ಸಾ ಬಳಿಗೋಡಿದೆ. ಅವಳನ್ನು ವಿಚಾರಿಸಿದಾಗ, ಅಂದು ಬೆಳಿಗ್ಗೆ ಸೋದರಿ ಹೆಲೆನ್ ಅವರನ್ನು ಸ್ಪೇನಿನ ಮಠ ಒಂದಕ್ಕೆ ಕಳಿಸಲಾಯಿತೆಂದು ತಿಳಿದುಬಂತು ಕೇಳಿ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು...ಹೆಚ್ಚಿನ ವಿವರಗಳು ಎಲ್ಸಾಗೆ ತಿಳಿದಿರಲಿಲ್ಲ. ಬೇರೆ ಯಾರಿಂದಲೂ ತಿಳಿಯುವಂತಿರಲಿಲ್ಲ

"ಅಂದು ರಾತ್ರಿಯೇ ನನಗೆ ಜ್ವರ ಬಂದುಬಿಟ್ಟಿತು. ಜ್ವರವಿಳಿಯದಿರಲು ಮನೆಗೆ ತಂತಿ ಕಳಿಸಲಾಯಿತು. ನಂತರ ನನ್ನನ್ನು ಸಾಲ್ಸ್‌ಬರ್ಗಿಗೆ

ಕರೆದೊಯ್ದಿರಬೇಕು. ಆ ಏಳೆಂಟು ದಿನಗಳ ನೆನಪು ಅಷ್ಟು ಸ್ಪಷ್ಟವಾಗಿಲ್ಲ...ನಾನು ಪೂರ್ಣವಾಗಿ ಗುಣ ಹೊಂದಲು ಸುಮಾರು ಒಂದು ತಿಂಗಳೇ ಹಿಡಿಯಿತು. ಆ ಸಮಯದಲ್ಲಿ ನಾನು ಮಾಡುತ್ತಿದ್ದದ್ದು ಒಂದೇ ಒಂದು ಕೆಲಸ. ಸೋದರಿ ಹೆಲೆನ್‌ರ ಆಲ್ಬಂ–ಡೈರಿ (ಅದನ್ನು ಏನೆಂದು ಕರೆಯಬೇಕೋ ನಾನರಿಯೆ) ಯನ್ನು ನೋಡುತ್ತಿರುವುದು. ನಾನು ನಿಮಗೊಂದು ನವಿಲಿನ ಚಿತ್ರವನ್ನು ತೋರಿದ್ದೆನಲ್ಲ ಅದು ಆ ಪುಸ್ತಕದಲ್ಲಿನ 'ಸ್ಕೆಚ್' ಒಂದರಿಂದ ಪ್ರೇರಿತವಾಗಿ ನಿರ್ಮಿಸಿದ ಚಿತ್ರ. ಆ ಪುಸ್ತಕದಲ್ಲಿ ವಾಕ್ಯಗಳಿಗಿಂತ ಹೆಚ್ಚಾಗಿ ಆ ಪರಿಯ ಸಣ್ಣ–ಪುಟ್ಟ ಚಿತ್ರಗಳೇ ಇವೆ. ಅವುಗಳನ್ನು ನೀವು ಹೇಗಿದ್ದರೂ ನೋಡೇ ನೋಡುತ್ತೀರಿ.

"ಆಗ ನಾನು ಚಿತ್ರಕಲೆಯನ್ನು ಅಭ್ಯಾಸಿಸಲು ನಿರ್ಧರಿಸಿದೆ. ಅದು ನನ್ನ ಪಾಲಿಗೆ ಸೋದರಿ ಹೆಲೆನರ ಸಂದೇಶವೇ ಆಗಿತ್ತು. ನಾನು ಆಸ್ಟ್ರಿಯದ ಸಂಗ್ರಹಾಲಯಗಳನ್ನೆಲ್ಲ ಸಂದರ್ಶಿಸಿದೆ. ಅಭ್ಯಾಸಕ್ಕಾಗಿ ಮೊದಲು ನನ್ನನ್ನು ಲಂಡನ್ನಿಗೆ, ನಂತರ ಪ್ಯಾರಿಸ್‌ಗೆ ಕಳಿಸಿ ಕೊಡುವುದೆಂದು ನಿರ್ಧರಿಸಲಾಯಿತು. ನಮ್ಮ ಭೆಟ್ಟಿಯಾದಾಗ ನಾನು 'ಸ್ಲೇಡ್' ಸ್ಕೂಲ್‌ನಲ್ಲಿ ಅಭ್ಯಾಸ ಮಾಡುತ್ತಿದ್ದೆ.

"ಸೋದರಿ ಹೆಲೆನ್ ತಮ್ಮ ಡೈರಿಯಲ್ಲಿ ಒಂದು ಕಡೆ ಬರೆದಿದ್ದಾರೆ: 'ಹೂವಿನ ಅಂತರಂಗವನ್ನು ಪ್ರವೇಶಿಸಲು ಯತ್ನಿಸಬಾರದು. ಅಲ್ಲಿ ರಿಕ್ತತೆಯ ಹೊರತು ಮತ್ತೇನೂ ಇರದು. ಅಲ್ಲದೆ ಹೂವಿನ ಸೌಭಾಗ್ಯವಿರುವುದೇ ಆ ರಿಕ್ತತೆಯಲ್ಲಿ.' ಈ ಮಾತು ಹೂವಿಗೆ ಅನ್ವಯಿಸಿದಂತೆಯೇ ರಸಿಕನಿಗೂ ಅನ್ವಯಿಸುತ್ತದೆ. ಹೂವು–ಅದರ ವಿಶ್ವ ಯಾರ ಹೃದಯವನ್ನು ಅಲಂಕರಿಸುತ್ತದೆಯೋ, ಆ ರಿಕ್ತತೆ ಅವನಿಗಾಗಿ ಮೀಸಲಾಗಿರುತ್ತದೆ. ನಾನು ನಿಮ್ಮನ್ನು ಪ್ರಥಮ ಬಾರಿ ಕಂಡಾಗಲೇ ನನಗೆ ಅದರ ಅರಿವಾಯಿತು. ನನ್ನ ಹೃದಯ–ಪುಷ್ಪದ ಸೌಭಾಗ್ಯ ಸದಾ ನಿಮ್ಮಲ್ಲಿ ಸುರಕ್ಷಿತವಾಗಿ ಉಳಿಯುವುದೆಂಬ ವಿಶ್ವಾಸ ನನ್ನಲ್ಲಿ ಮೂಡಿತು.

"ಬಹುಶಃ ನಾನು ನಿಮ್ಮ ಬಾಳಿನೊಂದಿಗೆ ಸರಸವಾಡಿದೆನೆಂದು ನೀವು ಬಗೆದಿದ್ದರೂ ಬಗೆದಿರಬಹುದು. ಆದರೆ, ರೂಪ್, ನಾನು ಹಾಗೊಂದೂ ಮಾಡಿಲ್ಲ. ಸೋದರಿ ಹೆಲೆನ್ ನನ್ನನ್ನು ತಮ್ಮ ಉತ್ತರಾಧಿಕಾರಿಣಿಯಾಗಿ ಆಯ್ದುಕೊಂಡರು, ಅವರ ಮನದ ಇಂಗಿತವನ್ನು ನನಗೆ ನೀಡಿದರು. ಅದನ್ನೇ ಈ ಪತ್ರದೊಂದಿಗೆ ನಾನು ನಿಮಗೆ ಕಳಿಸಿಕೊಡುತ್ತಿದ್ದೇನೆ. ನೀವು ನನ್ನ ಉತ್ತರಾಧಿಕಾರಿ. ನೀವು ವಿಚಾರಶೀಲರು. ವಿಚಾರಗಳನ್ನು ಸರಳ ಶಬ್ದಗಳಲ್ಲಿ ವ್ಯಕ್ತಪಡಿಸಲು ಸಮರ್ಥರು. ಈ ಸಂದೇಶವನ್ನು ಎಲ್ಲರಿಗೂ ಸಾರಿ. ಯಾರದನ್ನು ಗ್ರಹಿಸಬಲ್ಲರೋ ಅವರೇ ನಮ್ಮ ಭಾವಿ ಉತ್ತರಾಧಿಕಾರಿಗಳಾಗುವರು.

"ನಾನೀಗ ಎಲ್ಲಿದ್ದೇನೆಂದು ನೀವು ಕೇಳಲಿಚ್ಛಿಸಬಹುದು. ನಾನು ಟಿರೋಲಿಯ ಒಂದು ಸಣ್ಣ ಹಳ್ಳಿಯಲ್ಲಿದ್ದೇನೆ. ಸಿಕ್ಕಾಪಟ್ಟೆ ತಿರುಗಾಡುತ್ತೇನೆ, ಹೊಲದಲ್ಲಿ ಕೆಲಸ ಮಾಡುತ್ತೇನೆ, ಚಿತ್ರಗಳನ್ನು ರಚಿಸುತ್ತೇನೆ. ಒಂದು ದಿನ ನೀವು ನನ್ನನ್ನು ತುಂಬ–ತುಂಬ ಪ್ರೀತಿಸುವಿರಿ, ಬಯಸುವಿರಿ. ನನ್ನ ಹೊರತು ಬಾಳುವುದೇ ಕಷ್ಟವೆಂದು ತಿಳಿಯುವಿರಿ. ಅಂದು ನಾನೂ ನಿಮ್ಮಲ್ಲಿಗೆ ಬರುತ್ತೇನೆ. ಅಲ್ಲಿಯವರೆಗೂ, ಎಂದೆಂದಿಗೂ..."

ಮನುವಿನ ಪತ್ರ ಬಂದು ಹದಿನಾರು ವರುಷಗಳಾಗಿವೆ. ಕಾಲ ಕಳೆದಂತೆಲ್ಲ ಅವಳ ನೆನಪು ಹೆಚ್ಚು ಸ್ಪಷ್ಟ, ಹೆಚ್ಚು ಉತ್ಕಟವಾಗುತ್ತಿದೆ. ಇದುವರೆಗಂತೂ ಅವಳು ಬಂದಿಲ್ಲ. ಅವಳ ಶಿಕ್ಷಕಿ ಸೋದರಿ ಹೆಲೆನರ ಡೈರಿಯಲ್ಲಿ ಹೃದಯದ ರಾಜತ್ವ ಎಷ್ಟು ಓತಪ್ರೋತವಾಗಿದೆ ಎಂದರೆ, ಇಷ್ಟು ವರ್ಷಗಳ ನಂತರವೂ ನನಗಲ್ಲಿ ಸ್ಥಿರವಾಗಿ ಕಾಲೂರಲಾಗಿಲ್ಲ. ಒಂದಲ್ಲ ಒಂದು ದಿನ ನಾನು ಆ ಡೈರಿಯನ್ನು ಪ್ರಕಟಿಸಬೇಕು, ನಿಜ. ಆದರೆ, ಅದರ ಒಂದೊಂದು ಶಬ್ದ, ಒಂದೊಂದು ರೇಖೆ ನನ್ನದಾದ ನಂತರ.

ನಗೆಮಲ್ಲಿಗೆ

ರಾಜಕಾರಣಿಗಳೊಬ್ಬರು ಸಂದರ್ಶಕರ ಜತೆಗೆ ಉದ್ರಿಕ್ತವಾಗಿ ಮಾತನಾಡುತ್ತಿದ್ದರು.

"....ಈ ಪತ್ರಿಕೆಗಳನ್ನು ನಂಬಬೇಡಿ. ಇವುಗಳಲ್ಲಿ ಬರುತ್ತಿರುವ ಸುದ್ದಿಗಳಲ್ಲಿ ನೂರಕ್ಕೆ ಎಂಭತ್ತರಷ್ಟು ಭೋಗಸ್. ಹೆಂಗಸರ ಮಾತುಗಳಿದ್ದಂತೆ. ಬರೀ ಭೋಗಸ್...."

"ಸ್ವಾಮೀ, ತಮಗೆ ಮದುವೆಯಾಗಿದೆಯೇ?" ಸಂದರ್ಶಕರು ಪ್ರಶ್ನಿಸಿದರು.

"ಆಗಿದೆ....ಯಾಕೆ ?"

"ಅಮ್ಮಾವ್ರ ಮೇಲೆ ತಮಗೆ ಸಂಶಯವೇ?"

- ವಿ. ಎಂ. ಜೋಶಿ

*

"ನಾನು ನಿನ್ನ ಯಾಕೆ ಹೊಡೆದೆ ಅನ್ನೋದು ಗೊತ್ತಾಯಿತೆ ?"

"ಇಲ್ಲಪ್ಪಾ, ಯಾಕೆ ?"

"ನಿನಗಿಂತಲೂ ಸಣ್ಣವನಾದ ಶಾಮನನ್ನು ನೀನು ಹೊಡೆದದ್ದಕ್ಕೆ."

"ಆದರೆ ನಾನು ನಿನಗಿಂತ ಸಣ್ಣವನಿದ್ದೇನಲ್ಲಪ್ಪಾ."

*

ಪ್ರೊಫೆಸರ್: 'ಮಿಲ್ಟನ್'ನ ಬಗ್ಗೆ ಎರಡು ಮಾತುಗಳನ್ನು ಹೇಳು.

ವಿದ್ಯಾರ್ಥಿ: 'ಮಿಲ್ಟನ್' ತನ್ನ ಮದುವೆ ಆದಕೂಡಲೇ 'ಪ್ಯಾರಡೈಸ್ ಲಾಸ್ಟ್' ಬರೆದ. ಸ್ವಲ್ಪ ಕಾಲದ ನಂತರ ಅವನ ಹೆಂಡತಿ ಸತ್ತು ಹೋದಳು. ಆಗ 'ಪ್ಯಾರಡೈಸ್ ಗೈನ್ಡ್' ಬರೆದ.

ಆರ್. ಎಸ್. ಶೆಟ್ಟಿ

"ನೀವು ಲಗ್ನಮಾಡಿಕೊಂಡು ಎಷ್ಟು ಸುಖ
ವಾಗಿದ್ದೀರಾ ! ತಾಪತ್ರಯಗಳನ್ನು ನೋಡಿ
ಕೊಳ್ಳಲು ನಿಮಗೆ ಹೆಂಡತಿಯಾದರೂ ಇದ್ದಾಳೆ.
ನನಗಾರಿದ್ದಾರೆ ಹೇಳಿ ?"

"ಆದರೆ ಬ್ರಹ್ಮಚಾರಿಗೆ ತಾಪತ್ರಯಗಳಾ
ದರೂ ಎಲ್ಲಿರುತ್ತವಪ್ಪಾ ?"

*

"ರಾಮೂ, ಶಾಮು ಏಕೆ ಅಳುತ್ತಿದ್ದಾನೆ?"

"ನನ್ನ ಬಿಸ್ಕೀಟನ್ನು ನಾನು ತಿನ್ನುತ್ತಿದ್ದೇನೆ
ಅದನ್ನು ತನಗೂ ಕೊಡೆಂದು ಅಳುತ್ತಿದ್ದಾನೆ."

"ಹಾಗಾದರೆ ಶಾಮು ತನ್ನ ಬಿಸ್ಕೀಟನ್ನು
ಇಷ್ಟು ಬೇಗ ತಿಂದು ಮುಗಿಸಿದನೇ?"

"ಇಲ್ಲಮ್ಮಾ, ಆತನ ಬಿಸ್ಕೀಟನ್ನು ನಾನ
ತಿನ್ನುವಾಗಲೂ ಆತ ಹೀಗೇ ಅಳುತ್ತಿದ್ದ."



'ನಾನು ಈ ವರೆಗೆ ಭಾಷಣ ಮಾಡಿದ್ದು ಮಾ
ಮಂತ್ರಿಗಳ ಪರವಾಗಿ... ನನ್ನನ್ನೇ ಮಂತ್ರಿ ಎಂದ
ತಿಳಿದು ಸತ್ಕರಿಸಿದ್ದಕ್ಕಾಗಿ ಧನ್ಯವಾದಗಳು...'

ಓವರ್ ಮಹಾಶಯರು ಯಾವುದೋ ಜೈಲಿನ ನಿರೀಕ್ಷಣೆಗೆ ಹೋಗಿದ್ದರು. ಅಲ್ಲಿ ಕೈದಿಯೊಬ್ಬ ತಲೆ ತಗ್ಗಿಸಿ ಕಲ್ಲೊಡೆಯುತ್ತಿರುವುದನ್ನು ಕಂಡು ಅವರಿಗೆ ಅವನ ಬಗೆಗೆ ಸಹಾನುಭೂತಿ ಮೂಡಿತು.

"ನಿರ್ಭಾಗ್ಯನೆ! ಈ ನರಕಕ್ಕೆ ಬಂದು ಸೇರಲು ನೀನು ಮಾಡಿದ ಪಾಪವಾದರೂ ಏನು?" ಎಂದು ಕೇಳಿದರು.

ಕೈದಿ ತನ್ನ ತಲೆಯನ್ನು ತುಸು ಮೇಲಕ್ಕೆತ್ತಿ ದುಃಖಿತ ಸ್ವರದಲ್ಲಿ,

"ಮಹಾರಾಜ್, ಕೇವಲ ಒಂದು ಸೀನಿನಿಂದಾಗಿ ನಾನು ಈ ದುಃಸ್ಥಿತಿಗೀಡಾಗಬೇಕಾಯಿತು."

"ಪಾಪ! ಪಾಪ! ಆದರೆ ಸೀನಿದ್ದಕ್ಕೆ ಜೈಲಿಗೆ ಕಳಿಸುವ ಕಾಯದೆ ನಮ್ಮ ದೇಶದಲ್ಲಿ ಇಲ್ಲವಲ್ಲ!" ಎಂದರು ನಿರೀಕ್ಷಕರು.

"ಹಾಗಲ್ಲಾ ಸಾಬ್! ಒಂದು ರಾತ್ರಿ ನಾನು ಶ್ರೀಮಂತನೊಬ್ಬನ ಮನೆಗೆ ಕನ್ನ ಹಾಕಿದೆ. ಯಜಮಾನ ನಿದ್ರೆ ಹೋಗಿದ್ದ. ಆದರೆ ಅವನ ಹತ್ತಿರ ಹೋಗುತ್ತಲೇ ನನಗೆ ಇದ್ದಕ್ಕಿದ್ದಂತೆ ಸೀನು ಬಂತು. ಶ್ರೀಮಂತ ಎಚ್ಚೆತ್ತ...."

—ಪಿ. ಚಂದ್ರಶೇಖರ್, ಕಾನಗೂರ

*

"ಏನೋ ಮರಿ, ಹೊಸ ತಮ್ಮ ಸಿಕ್ಕಿದ್ದಾನಂತಲ್ಲೋ. ಬಹಳ ಅಳುತ್ತಾನೇನು ಅವನು?"

"ಇಲ್ಲ, ಇಲ್ಲ. ಅವನನ್ನು ಚಿವುಟಿದಾಗ, ಗಲ್ಲವನ್ನು ಹಿಂಡಿದಾಗ ಮತ್ತು ನೆಲದ ಮೇಲೆ ಸ್ವಲ್ಪ ಅಪ್ಪಳಿಸಿದಾಗ ಮಾತ್ರ ಅಳುತ್ತಾನೆ."

"ಇಂದು ಸಂಜೆ ಹೆಂಡತಿಯನ್ನು ಪಾರ್ಕಿಗೆ ಕರೆದುಕೊಂಡು ಬನ್ನಿ. ನನ್ನ ಹೆಂಡತಿಯನ್ನು ಕರೆತರುತ್ತೇನೆ. ಆನಂದದಿಂದ ಸಂಜೆಯನ್ನು ಕಳೆಯೋಣ."

"ಆದರೆ ಪಾರ್ಕಿನಲ್ಲಿ ಅವರನ್ನು ಎಲ್ಲಿ ಕೂಡಿಸಿ ಹೋಗೋಣ?"

"ಏಕೆ?"

"ಮತ್ತೆ ಸಂಜೆಯನ್ನು ಆನಂದದಿಂದ ಕಳೆಯೋಣ ಎಂದಿರಲ್ಲ."

*

"ನಿನಗೆ ನನ್ನ ಹಾರ್ದಿಕ ಸಹಾನುಭೂತಿಗಳು," ಎಂದು ಬೀದಿಯಲ್ಲಿ ಎದುರಾದ ತಮ್ಮ ಮಿತ್ರನಿಗೆ ಹೇಳಿದರು ಗಣಪತಿರಾಯರು.

"ಯಾಕಯ್ಯಾ, ನನಗೇನಾಗಿದೆ ಸಹಾನುಭೂತಿ ತೋರಿಸೋಕೆ," ಎಂದರು ವಿನಾಯಕರಾಯರು.

"ಏನೂ ಇಲ್ಲ, ನಿನ್ನೆ ನಾನು ನನ್ನ ಹೆಂಡತಿಗೊಂದು ಕಂಜೀವರಂ ಸೀರೆ ಕೊಡಿಸಿದ್ದೇನೆ."

"ಅದರಿಂದ ನನಗೇನು?"


"ಏನೂ ಇಲ್ಲ, ಆದರೆ ಇವೊತ್ತು ಸಂಜೆ ನನ್ನ ಹೆಂಡತಿ ನಿಮ್ಮನೆಗೆ ಹೋಗುತ್ತಾಳಂತೆ."

*

ಪ್ರೊಫೆಸರ್ : ನೀವು ಕ್ಲಾಸಿನಲ್ಲಿ ನಿದ್ರಿಸಲಾರಿರಿ.

ವಿದ್ಯಾರ್ಥಿ : ನೀವನ್ನೋದು ಸರಿ. ನೀವು ಅಷ್ಟು ಜೋರು ಜೋರಾಗಿ ಲೆಕ್ಚರ್ ಕೊಡುತ್ತಿದ್ದಾಗ ಅದ್ಹೇಗೆ ಸಾಧ್ಯವಾಗುತ್ತೆ ಸಾರ್ ?




ಲ್ಯಾಕ್ಟೋ-ಕ್ಯಾಲಮೈನ್
ವ್ಯಾನಿಶಿಂಗ್ ಕ್ರೀಮಿನ ರೂಪದಲ್ಲಿ ?
ಹೌದು !
ಮುಖಕ್ಕೆ ಕಾಂತಿಯನ್ನು ನೀಡುತ್ತವೆ.
ಲ್ಯಾಕ್ಟೋ-ಕ್ಯಾಲಮೈನ್
ಒಂದು
ಪರಿಪೂರ್ಣ
ಮೇಕ್-ಅಪ್
ಆಗಿರುತ್ತದೆ

ನಾನೂ ಜಗಳಾಡಿದೆ

ನೀನೂ ಜಗಳಾಡಿದೆ

ಆದರೆ ಗೆದ್ದವರಾರು ?

ಕನ್ಹಯ್ಯಲಾಲ ಮಿಶ್ರ ಪ್ರಭಾಕರ

ನನಗೊಬ್ಬ ಅಭಿನ್ನ ಮಿತ್ರರಿದ್ದರು. ನಾವಿಬ್ಬರೂ ಪರಸ್ಪರ ಅಚ್ಚುಮೆಚ್ಚಿನವರಾಗಿದ್ದು 'ಮನವೊಂದು ದೇಹವೆರಡು'--- ಎಂಬಂತಿದ್ದೆವು.

ಆದರೆ ನನ್ನ ಮಿತ್ರರ ಪತ್ನಿ ತೀರಿಕೊಂಡಾಗ ನಮ್ಮ ಪರಿವಾರದ ಕನ್ನೆಯೊಬ್ಬಳ ಸಂಬಂಧದಲ್ಲಿ ನಮ್ಮಿಬ್ಬರಿಗೂ ವಿರಸವುಂಟಾಯಿತು. ನಾನೆಷ್ಟು ಪ್ರಯತ್ನಿಸಿದರೂ ಅದು ಸುಧಾರಿಸಲಿಲ್ಲ. ನಮ್ಮ ಭೇಟಿ ಹಾಗೂ ಮಾತುಕತೆ ಸಂಪೂರ್ಣ ನಿಂತು ಹೋಯಿತು. ಹಿತಶತ್ರುಗಳು ಆ ವೈಮನಸ್ಯವನ್ನು ಮತ್ತೂ ಹೆಚ್ಚಿಸಲು ಗಾಳಿ ಹಾಕಿದರು.

ಆ ಮಿತ್ರರ ಪತ್ನಿ ನನ್ನಲ್ಲಿ ನಂಬುಗೆಯಿಂದ ಇಟ್ಟಿದ್ದ ೬,೦೦೦ ರೂಪಾಯಿಯ ಆಭರಣಗಳನ್ನು ನಾನು ನುಂಗಿಹಾಕಿದೆನೆಂದು ನನ್ನ ಮೇಲೆ ಆ ಮಿತ್ರರು ಕೋರ್ಟಿನಲ್ಲಿ ದಾವೆ ಹೂಡುವುದಾಗಿ ಒಂದು ದಿನ ನನಗೆ ಖಚಿತವಾದ ಸುದ್ದಿ ಮುಟ್ಟಿತು. ಕೇಳಿ ಸಿಟ್ಟು ಬಂತು; ಜೊತೆಗೆ ನಗೆಯೂ ಬಂತು.

ಸುದೈವವಶಾತ್ ಅಂದೇ ಮುಸ್ಸಂಜೆಯ ಹೊತ್ತಿಗೆ ಅವರು ನನಗೆ ದಾರಿಯಲ್ಲಿ ಸಿಕ್ಕರು. ನನ್ನ ಕಣ್ಣುತಪ್ಪಿಸಿ ಜಾರಿಕೊಳ್ಳಬೇಕೆಂದು ಅವರು ಹವಣಿಸುತ್ತಿದ್ದಾಗ ನಾನು ನೇರವಾಗಿ ಅವರೆದುರಿಗೆ ಹೋಗಿ ಹೆಗಲ ಮೇಲೆ ಕೈಹಾಕಿ ಹೀಗೆಂದೆ: "ಇದೇನು ? ಇನ್ನೂ ದಾವೆ ಹೂಡಿಲ್ಲ; ಆಗಲೇ ಕಣ್ಣು ತಪ್ಪಿಸಿ ಹೊರಟರೆ ಮುಂದೇನು ಮಾಡುವಿರಿ ? ನಾನಂತೂ ಚೆನ್ನಾಗಿ ವಾದಿಸಿ, ನಿಮ್ಮನ್ನು ಸೆರೆಮನೆಗೆ ಕಳುಹಬೇಕೆಂದು ನಿರ್ಧರಿಸಿಬಿಟ್ಟಿದ್ದೇನೆ. ಆದರೆ ಒಂದು ಶರ್ತು...ನಿಮಗೆ ಜೈಲಾದರೆ ನಿಮ್ಮ ಹಾಗೂ ನಿಮ್ಮ ಮಕ್ಕಳ ಮೇಲ್ವಿಚಾರಣೆ ನೋಡುತ್ತ ಇರುವೆ. ದೌರ್ಭಾಗ್ಯದಿಂದ ನನಗೆ ಜೈಲಾದರೆ ಬಿಡುಗಡೆಯ ದಿನ ನೀವು ಬಾಗಿಲಲ್ಲಿ ನನ್ನನ್ನು ಕಾಣಬೇಕು. ಆದರೆ ಈಗಿಂದಲೇ ಅದೇಕೆ ತಪ್ಪಿಸಿಕೊಳ್ಳುತ್ತೀರಿ ?"

ಈ ಮಾತು ಕೇಳಿ ಅವರು ಅವಾಕ್ಕಾದರು. ನನ್ನ ಕೈಹಿಡಿದು ತಮ್ಮ ಮನೆಗೆ ಒತ್ತಾಯದಿಂದ ಕರೆದೊಯ್ದರು. ಮತ್ತು ಮನೆಗೆ ಹೋಗುತ್ತಲೇ ನನ್ನ ಪಾದ ಮುಟ್ಟಿ ಅಳತೊಡಗಿದರು. ನಾನೂ ಅಳತೊಡಗಿದೆ. ಅಂತೂ ಇಂತೂ ನಾವು ಮೊದಲಿನಂತೆಯೇ ಅಭಿನ್ನರಾದೆವು.

*

ನನ್ನ ಇನ್ನೊಬ್ಬ ಮಿತ್ರರು ಡಬಲ್ M.A.

ಕಾಲೇಜ್ ಪ್ರೊಫೆಸರರು. ಅಂದು ಒಂದು ಸಮ್ಮೇಳನವಿತ್ತು. ಅದು ಯಶಸ್ವಿಯಾಗುವ ಲಕ್ಷಣ ಕಾಣಿಸುತ್ತಿರಲಿಲ್ಲ. ಆದರೆ ನನ್ನ ಹೇಳಿಕೆಯಂತೆ ಈ ಮಿತ್ರರು ಓಣಿ ಓಣಿಗೆ ಹೋಗಿ ಮನೋರಂಜಕ ರೀತಿಯಲ್ಲಿ ಅದರ ಪ್ರಚಾರ ನಡೆಸಿದುದರಿಂದ ಜನಸಂದಣಿ ಸೇರಿತು.

ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯವಾಗುವುದರಲ್ಲಿತ್ತು. ಆದರೆ ಸ್ವಯಂ ಪ್ರೊಫೆಸರರು 'ಧ್ವನಿವರ್ಧಕ' (ಮೈಕ್) ದ ಮುಂದೆ ಬಂದಾಗ ಒಂದು ಅಪ್ರಿಯ ಘಟನೆ ಜರಗಿತು. ಅವರು ಏನೋ ಹೇಳುತ್ತಿದ್ದಾಗ, ಆದಷ್ಟು ಸಂಕ್ಷೇಪದಲ್ಲಿ ಮುಗಿಸಬೇಕೆಂದು ನಾನು ಸೂಚನೆಯಿತ್ತೆ. ಪ್ರೊಫೆಸರ್ ಒಮ್ಮೆಲೇ ಸಿಡಿದೆದ್ದರು. ಅವರ ಸಿಡುಕು 'ಮೈಕಿ'ನ ಮೂಲಕ ಹೊರಹೊಮ್ಮಿತು. ಒಂದೇ ಸಮನೆ ಬೈಗಳ ಸುರಿಮಳೆಯನ್ನೇ ಸುರಿಸಿಬಿಟ್ಟರು.

ಧ್ವನಿವರ್ಧಕದಿಂದ ಇದೆಲ್ಲವೂ ಹೊರಬಿದ್ದಾಗ ಶ್ರೋತೃಗಳು ತಾಳ್ಮೆಗೆಟ್ಟರು. ಆದರೆ ನಾನು ಏನೂ ಹೇಳದೆ, ಪ್ರೊಫೆಸರರನ್ನು ಅಲ್ಲಿಂದ ಸರಿಸಿ, ಮಧುರ ಕಂಠದ ಕವಯಿತ್ರಿಯನ್ನು ನಿಲ್ಲಿಸಿದೆ. ಮತ್ತೆ ಆ ರಾಗಸಮ್ಮೋಹದಲ್ಲಿ ಜನ ಮಗ್ನರಾದರು.

ಸಮ್ಮೇಳನ ಮುಕ್ತಾಯವಾಗುತ್ತಲೇ, ಪ್ರೊಫೆಸರ್ ನನ್ನ ಬಳಿ ಬಂದು ಕ್ಷಮಾಯಾಚನೆ ಮಾಡಬೇಕೆಂದು ಎಲ್ಲರೂ ಒತ್ತಾಯಿಸಿದರು. ವಾತಾವರಣ ಮತ್ತೆ ಬಿಸಿಯೇರುತ್ತಿರುವುದನ್ನು ಗಮನಿಸಿ ನಾನೆಂದೆ: "ಅವರು ಗಲ್ಲಿಗಲ್ಲಿಗೆ ಹೋಗಿ ಪ್ರಚಾರ ನಡೆಸುವಂತೆ ಮಾಡಲು ನನಗೆ ಅಧಿಕಾರವಿರುವಾಗ, ನನ್ನ ಮೇಲೆ ಸಿಟ್ಟಾದಾಗ ನಾಲ್ಕು ಬೈಗಳನ್ನು ಬೈಯಲು ಅವರಿಗೂ ಅಧಿಕಾರವಿಲ್ಲವೆ? ಇಷ್ಟೇ ಅಲ್ಲದೆ, ಅದು ನನ್ನ ಹಾಗೂ ಅವರ ನಡುವಣ ವೈಯಕ್ತಿಕ ವಿಚಾರ; ಸಾರ್ವಜನಿಕ ವಿಷಯವೇನೂ ಅಲ್ಲ!"

ಹೀಗಾಗಿ ಆ ಅಪ್ರಿಯ ಘಟನೆ ಅಲ್ಲೇ ಮುಗಿಯಿತು. ಮುಂದೆ ಅವರು ತಮ್ಮ ವರ್ತನೆಗಾಗಿ ನನ್ನೊಡನೆ ಕ್ಷಮೆ ಯಾಚಿಸಿದರೆನ್ನಿ.

*

ಉತ್ತರ ಪ್ರದೇಶದ ಕಾಂಗ್ರೆಸ್ ಕಮಿಟಿಯ ಸಭೆ ಸೇರಿತ್ತು. ಪೂಜ್ಯ ಟಂಡನ್ ಅಧ್ಯಕ್ಷರಾಗಿದ್ದರು. ಟಂಡನರು ಯಾವುದೋ ಕಾರ್ಯಾರ್ಥವಾಗಿ ೧೦ ನಿಮಿಷಗಳ ತನಕ ಹೊರ ನಡೆದಾಗ ಉಪಾಧ್ಯಕ್ಷ ಜವಾಹರಲಾಲರು ಅವರ ಆಸನವೇರಿದರು.

ಯಾವುದೋ ರೂಲಿಂಗಿನ ಬಗೆಗೆ ಬಿಸಿ ಬಿಸಿ ಚರ್ಚೆ ನಡೆಯುತ್ತಿತ್ತು. ಆಗಲೇ ಶ್ರೀ ಮಹಾವೀರ ತ್ಯಾಗಿಯವರು ಒಂದು ವಿಧಾನ ಗ್ರಂಥವನ್ನು ತೆರೆದು ಅವರ ಮೇಜಿನ ಮೇಲಿಡುತ್ತಾ– '೬೦ ನೆ ಪುಟ ನೋಡಿರಿ; ನೀವು ರೂಲಿಂಗ್ ಕೊಡಲು ಬಾಧ್ಯರು'– ಎಂದರು.

'ಕಿರಿ ಕಿರಿ' ಹಾಗೂ 'ಪ್ರತಿವಾದ'– ಇವೆರಡೂ ಜವಾಹರಲಾಲರ ಸ್ವಭಾವಕ್ಕೆ ವಿರುದ್ಧವಾದುದು. ಅವರ ಕಂಗಳು ಬಿರುಸಾದವು...ಪೆನ್ಸಿಲಿನ ತುದಿಯಿಂದ ಪುಸ್ತಕವನ್ನು ಮೇಜಿನ ಕೆಳಗೆತಳ್ಳುತ್ತ ಅವರೆಂದರು— "ನಾನು "ಇಂಥ ೬೦ ಪುಸ್ತಕಗಳ ... ದಿನಾಲೂ ಬರೆಯಬಲ್ಲೆ!"

ತ್ಯಾಗಿಗಳು ಇದನ್ನು ಅಪಮಾನವೆಂದು ಬಗೆದು ಫಕ್ಕನೆ ಹೀಗೆಂದರು– "ಇದು ಸಭಾಧ್ಯಕ್ಷರ ಮಿ... ಮೀರಿದ ವರ್ತನೆ. ಅಲ್ಲಿಂದ ಅವರು ಪುಸ್ತ... ಎಸೆಯಬಲ್ಲರಾದರೆ ಇಲ್ಲಿಂದಲೂ ಏನಾದರೊಂದು ವಸ್ತುವನ್ನು ಎಸೆಯಲು ಸಾಧ್ಯವಿದೆ. ಉದಾಹ... ಣೆಗೆ..."

'ಚಪ್ಪಲಿ'—ಎಂಬ ಆ ಕೊನೆಯ ಶಬ್ದವನ್ನು ಅವರು ಬಹು ನಿಧಾನವಾಗಿ ಹೇಳಿದ್ದರೂ ಎಲ್ಲ... ಕಿವಿಗೂ ಬಿದ್ದು ಸಭೆಯಲ್ಲಿ ದೊಡ್ಡ ಗೊಂದಲವ... ಪಬ್ಬಿತು.

ಎಲ್ಲರೂ ಸೇರಿ "ಕ್ಷಮೆ ಕೇಳಿ...ಕ್ಷಮೆ ಕೇಳಿ" ಎಂದು ಅವರನ್ನು ಒತ್ತಾಯಿಸಿದರು.

ಮೇಜು ಬಡಿಯುವ ಸದ್ದು ತಲೆಯೊಡೆಯು... ಸದ್ದಿಗಿಂತಲೂ ದೊಡ್ಡದಾಗಲು, ಟಂಡನ್ ಬಂದ... ಆಸನವನ್ನಲಂಕರಿಸಿದರು. ಆಗಲೇ ಇಕ್ಕಡೆಯ...

[illegible] ತಂಡವು ಪಕ್ಷಗಳನ್ನು ಸಮರ್ಥಿಸಲಿಳಿಸಿದಾಗ ಜವಾಹರಲಾಲರೇ ಹೀಗೆಂದರು:- "ನನ್ನ ಹಾಗೂ ತ್ಯಾಗಿಯವರ ನಡುವೆ ಎರಡು ವೈಯಕ್ತಿಕ ಮಾತುಗಳಿದ್ದವು. ಅವನ್ನು ಬಿಟ್ಟು ಒಂದೆ ನಾವು ಚರ್ಚಿಸುತ್ತಿದ್ದ ವಿಷಯದ ಮೇಲೆಯೇ ವಿಚಾರ ವಿನಿಮಯ ಮಾಡುವುದು ಮೇಲು. ತ್ಯಾಗಿಯವರೂ ಇದಕ್ಕೊಪ್ಪುವರೆಂದು ನನ್ನ ಅಭಿಪ್ರಾಯ."

ತ್ಯಾಗಿಯವರು ಒಪ್ಪದೆ [illegible] [illegible]? ಸಭೆ ಮುಗಿದ ಮೇಲೆ ಈ ಬಗ್ಗೆ ವಿಚಾರಣೆ ನಡೆಯಬೇಕೆಂದು ಕೆಲವರ ಬಯಕೆಯಿತ್ತು. [illegible] ಆಗಲೇ ನೆಹರೂರವರು ತ್ಯಾಗಿಯವರ ಕೈ ಹಿಡಿದು ತಮ್ಮೊಡನೆ ಕುಳ್ಳಿರಿಸಿ ಕರೆದೊಯ್ಯುವುದನ್ನು ಕಂಡು ಈ ಜನರ ಬಾಯಿಗೆ ಬೀಗ ಬಿತ್ತು.

*

ಮೇಲಿನ ಮೂರು ಸನ್ನಿವೇಶಗಳು ಮೂರು [illegible] ಎಂಬಂತೆ ತೋರುತ್ತಿವೆ ಏಕೆಂದರೆ ನಾವು [illegible] [illegible] ಇರುವ ಸಂಗತಿ ಇಷ್ಟೇ: ಇಬ್ಬರು ಗೆಳೆಯರು ಅಷ್ಟು ಮೆಚ್ಚಿನವರಾಗಿದ್ದು ಒಂದು ದಿನ ಅಕಸ್ಮಾತ್ ಪರಸ್ಪರ ಸಿಟ್ಟಿಗೆದ್ದರು. ಗೆಳೆತನ ಮುಕ್ತಾಯ... ಅಂದರೆ ವೈಮನಸ್ಯ ತಲೆದೋರಿತು.

ಆದರೆ ಇಷ್ಟು ಸಣ್ಣ ವಿಚಾರಕ್ಕೇ ಸಿಡಿಯಾಗಿದ್ದ ಗೆಳೆತನ ಕಡಿಯಾಗಬೇಕೆ? ಇಂದು ಏಕೆವಕ್ಕಿಗಳಂತಿದ್ದವರು ನಾಳೆ ವಿಷ್ಣು–ಸೀಗೆ ಏಕಾಗಬೇಕೆ?

[illegible] ಸಿಟ್ಟು [illegible]. ಸಿಟ್ಟು ಮನುಷ್ಯನ [illegible] ಎನ್ನಬಹುದು. ಅತಿ ದೊಡ್ಡ ಮನುಷ್ಯನೂ ತನಗೆ ಸಿಟ್ಟುಬಾರಗಲೆಂದು ಬಯಸುವುದಿಲ್ಲ. ಆದರೆ ಆ ಸಿಟ್ಟು ಮನುಷ್ಯನನ್ನು ಭೂತವನ್ನಾಗಿ ಮಾಡುತ್ತದೆ.

ಮನುಷ್ಯನಿಗೆ ಸಿಟ್ಟು ಬರುವುದೂ, ಪರಿಣಾಮವಾಗಿ ಗೆಳೆಯರಲ್ಲಿ ಪರಸ್ಪರ ಜಗಳವಾಗುವುದೂ ಸಹಜವೆನ್ನೋಣ. ಆದ್ದರಿಂದ. ಸಿಟ್ಟೇಕೆ ಬಂತೆಂಬುದು ಇಲ್ಲಿ ಪ್ರಶ್ನೆಯಾಗಿರದೆ. ಸಿಟ್ಟು ಬಂದಾಗ ನಾವೇನು ಮಾಡಬೇಕೆಂಬುದು ಎದುರಿಗಿರುವ ಸಮಸ್ಯೆ.

ಈ ಅತ್ಯಗತ್ಯದ ಹಾಗೂ ಮಹತ್ವಪೂರ್ಣವಾದ ಪ್ರಶ್ನೆಗೆ ಮೊದಲಿನ ಎರಡು ಸಂಸ್ಮರಣೆಗಳಲ್ಲಿ ಉತ್ತರ ಅಡಗಿದೆ. ಅದೇನೆಂದರೆ. ದುರ್ಭಾಗ್ಯದಿಂದ ಇಬ್ಬರು ಮಿತ್ರರಲ್ಲಿ ಒಬ್ಬನಿಗೆ ಸಿಟ್ಟು ಬಂತೆಂದರೆ ಇನ್ನೊಬ್ಬನೂ ಸಿಟ್ಟಾಗಬೇಕೆಂಬ ನಿಯಮವಿದೆಯೆ? ಯಾರಾದರೂ ಹೊಲಸು ಬಟ್ಟೆ ಧರಿಸಿಕೊಂಡಿದ್ದರೆ ಅದನ್ನು ಕಂಡು ನಾವು ನಮ್ಮ ಶುಭ್ರ ಬಟ್ಟೆಗಳ ಮೇಲೆ ಕೆಸರೆರಚಿಕೊಳ್ಳುತ್ತೇವೆಯೆ! ಕುಂಟನನ್ನು ಕಂಡು ನಮ್ಮ ಕಾಲು ಮುರಿದುಕೊಳ್ಳುತ್ತೇವೆಯೆ! ಅಥವಾ ಒಕ್ಕಣ್ಣನನ್ನು ಕಂಡು ಒಂದು ಕಣ್ಣು ಚುಚ್ಚಿಕೊಳ್ಳುತ್ತೇವೆಯೆ!

ಹಾಗೆಯೆ ಮಿತ್ರನಿಗೆ ಕೋಪವುಂಟಾದಾಗ ನಾವು ಸ್ವಯಂ ಅದೇಕೆ ಕಿಡಿಕಿಡಿಯಾಗುತ್ತೇವೆ? ಅದು ಅಷ್ಟು ಅಗತ್ಯವಾದುದೆ?



"ಕಲ್ಲು ತೂರಾಟದ ಭಯವಿಲ್ಲ... ಸಭಿಕರಿಲ್ಲ... ಬಿರುಸಿನ ಭಾಷಣ ಮಾಡ್ತೀನಿ.. "

ನಮ್ಮ ಮಿತ್ರನಿಗೆ ಸಿಟ್ಟು ಬಂದುದು ಅದೇನು ಒಳ್ಳೇ ಸಂಗತಿಯೆ? ಅಲ್ಲವಾದರೆ, ನೀವೇಕೆ ಒಂದು ಕೆಟ್ಟ ವಿಚಾರವನ್ನು ಅನುಕರಿಸಬೇಕು? ಅವರಿಗೆ ಸಿಟ್ಟು ಬಂದರೆ ಬರಲಿ, ಆದರೆ ನೀವು ಪ್ರಯತ್ನ ಪಟ್ಟು, ಅದು ನಿಮ್ಮ ಮಿತ್ರನ ಅಸಹಾಯತೆ ಯೆಂದು ಬಗೆದು ಮೌನವಾಗಿರಿ. ಶಾಂತರಾಗಿರಿ. ಹೀಗೆ ನೀವು ನಿಮ್ಮ ಮಿತ್ರನಿಗೆ ನೆರವು ನೀಡಿರಿ.

*

ಆದರೆ ಇತರರ ಸಿಟ್ಟನ್ನು ಕಂಡಾಗ ಅಥವಾ ಮಾತುಕತೆಯ ವೇಳೆ ನಮಗೂ ಸಿಟ್ಟುಬಂದರೆ ಏನು ಮಾಡಬೇಕು?

ಪ್ರಶ್ನೆ ಉಚಿತವೂ ಅವಶ್ಯಕವೂ ಆಗಿದೆ. ಏಕೆಂ-ದರೆ ತುಂಬಾ ಯೋಚಿಸಿಯೇ ಯಾರಾದರೂ ಸಿಟ್ಟಿಗೇಳುವುದಿಲ್ಲ. ಮೊದಲೇ ತಿಳಿಸಿದಂತೆ ಇದು ಮನುಷ್ಯನ ಒಂದು ದೌರ್ಬಲ್ಯ. ಮತ್ತು ದೌರ್ಬಲ್ಯವನ್ನು ವಶದಲ್ಲಿರಿಸಿಕೊಳ್ಳುವುದು ಅಭ್ಯಾಸ ಹಾಗೂ ಸಾಧನೆಯ ಸಂಗತಿ. ಆದರೆ ಸಿಟ್ಟು ನಮಗೂ ಬಂದುಬಿಟ್ಟರೆ ನಾವೇನು ಮಾಡ ಬೇಕು?

ಈ ಪ್ರಶ್ನೆಗೆ ಉತ್ತರ ಮೂರವೇ ಸಂಸ್ಕರಣೆ ಯಲ್ಲಿದೆ. ಸಿಟ್ಟು ಬಂದಾಗ ಜಗಳಾಡಿದೆವು; ಸಿಟ್ಟಿ ಳಿಯುತ್ತಲೇ ಒಂದಾದೆವು......ಹೀಗಾಗುವುದು ಮನುಷ್ಯನ ಸ್ವಭಾವ.

ಸಿಟ್ಟು ಬಂದಾಗ ಜಗಳಾಡಿ. ಸಿಟ್ಟಿಳಿದ ಬಳಿಕ ಒಬ್ಬರು ಮತ್ತೊಬ್ಬರನ್ನು ಅಳಿಸಿಬಿಡಲು ಯತ್ನಿ ಸಿದೆವು—ಇದು ತೋಳನ ಸ್ವಭಾವ.

ಸಿಟ್ಟು ಬಂದಾಗ—ಆ ಸಿಟ್ಟಿನಲ್ಲೇ ಬೈಗಳು, ಹೊಡೆತ-ಬಡೆತ-ಎಲ್ಲ ಜರಗಿದಾಗಲೂ ಮನುಷ್ಯ ಮನುಷ್ಯನಾಗಿಯೇ ಉಳಿಯುತ್ತಾನೆ. ಆದರೆ ಸಿಟ್ಟಿಳಿದಾಗಲೂ ಸಿಟ್ಟಿದ್ದಾಗಿನಂತೆಯೇ ವ್ಯವಹರಿ ಸುವುದರಿಂದ ಮನುಷ್ಯ ಹಿಂಸ್ರ ತೋಳನಂತಾಗು ತ್ತಾನೆ. ಇತರರು ಸಿಟ್ಟಾದಾಗಲೂ ತಾನು ಮೌನ ವಾಗಿ ಶಾಂತಿಯಿಂದಿರುವ ಮನುಷ್ಯ ದೇವತ್ವ ಕ್ಕೇರುತ್ತಾನೆ. ನೀವು ಮನುಷ್ಯರಾಗಿದ್ದರೆ ಉನ್ನತಿ ಹೊಂದಿ ದೇವತ್ವಕ್ಕೇರಲು ಯತ್ನಿಸಿರಿ. ಅದು ಸಾಧ್ಯವಿರದಿದ್ದರೆ ಕನಿಷ್ಠ ಪಕ್ಷ ಮನುಷ್ಯರಾಗಿಯೇ ಉಳಿಯಿರಿ.

*

ನಾವೇಕೆ ಪರಸ್ಪರ ಜಗಳಾಡುತ್ತೇವೆ? ಸ್ಪರ್ಧೆಯೆ ಜಗಳದ ಹಿನ್ನೆಲೆ. ಇತರರನ್ನು ಸೋಲಿಸಿ ತಾನು ಗೆಲವು ಪಡೆಯುವುದೇ ಅದರ ಉದ್ದೇಶ.

ಒಳ್ಳೇದು; ಈ ಗೆಲವಿನ ಒರೆಗಲ್ಲಾವುದು?

ಜಗಳ ಯಾರ ತಪ್ಪಿನಿಂದೇ ಆಗಲಿ, ಚೆನ್ನಾ ಗಿಯೇ ಜರಗುತ್ತದೆ. ಇಬ್ಬರೂ ತಂತಮ್ಮ ಶಕ್ತಿ ಉಪಯೋಗಿಸಿದರು; ಬಾಯಾಡಿಸಿದರು...ಕೈ ತೋರಿಸಿದರು! ಈಗ ಎದುರಿಗಿರುವ ಪ್ರಶ್ನೆಯೆಂ-ದರೆ, ನೀನು ಜಗಳಾಡಿದೆ, ನಾನೂ ಜಗಳಾಡಿದೆ; ಗೆದ್ದವರಾರು?

ಹೆಚ್ಚು ಬೈಗಳನ್ನು ತಿಂದವನಾಗಲೀ ಹೆಚ್ಚು ಹೊಡೆತ ಹೊಡೆದವನಾಗಲೀ ಗೆದ್ದನೆ? ಇಲ್ಲ; ಅವನು ಗೆದ್ದಿದ್ದಾನೆಂದು ಒಪ್ಪಲು ನಾವು ಸರ್ವಥಾ ಸಿದ್ಧವಿಲ್ಲ. ಯಾರು ಚೆನ್ನಾಗಿ ಜಗಳಾ ಡಿಯೂ ಸಿಟ್ಟಿಳಿದ ಬಳಿಕ ಜಗಳಾಡಿದವನ ಮನೆಗೆ ಹೋಗಿ ನಿಸ್ಸಂಕೋಚವಾಗಿ ಅವನೊಡನೆ ಮಾತಾಡಿ, ವಾತಾವರಣದ ಆ ಕಹಿಯನ್ನು ಸಿಹಿ ಯಾಗಿ ಬದಲಾಯಿಸುವನೋ ಅವನೇ ವಿಜಯಿ ಯೆಂದು ನನ್ನ ಅಭಿಪ್ರಾಯ.

ನಿಮ್ಮ ಮಿತ್ರರು ನಿಮ್ಮಿಂದಾಗಿ ಸಿಟ್ಟಿಗೇಳು ವಂತೆ ಮಾಡಬೇಡಿರಿ. ನಿಮ್ಮ ಮಿತ್ರರಲ್ಲಿ ಯಾರಾ ದರೂ ಸಿಟ್ಟಿಗೆದ್ದರೆಂದರೆ ನೀವು ಸ್ವಯಂ ಶಾಂತ ರಾಗಿರಿ. ಸಂಬಂಧಪಟ್ಟ ವಿಚಾರವನ್ನೇ ದೂರ ಗೊಳಿಸಿರಿ. ಇಷ್ಟಾದರೂ ನಿಮಗೆ ಸಿಟ್ಟು ಬಂದೇ ಬಿಟ್ಟಿತೆಂದರೆ ಜಗಳಾಡಿರಿ; ಆದರೆ ಸಿಟ್ಟಿಳಿಯು ತ್ತಲೇ ಮಿತ್ರನ ಮನೆಗೆ ತಲುಪಿ ಚಹ ಕುಡಿದೇ ಮರಳಿರಿ. ▲

[ಅನುವಾದ: ಬಳ್ಕೂರು ಸುಬ್ರಾಯ ಅಡಿಗ]

****

ನಾವು ಬಾಳು ಜೀನ

ಮೃಣಾಲಿನಿ ದೇಸಾಯಿ



ಕನ್ನಡಕ್ಕೆ:
ಜೆ. ಜೆ. ಹೆಗಡೆ

ನಾವು ಏಳು ಜನ

ಹಿಂಡಲಗಿ ಸೆರೆಮನೆಯಲ್ಲಿ ಗುಜರಾತಿನ ತರುಣಿಯೊಬ್ಬಳು ರಾಜಕೀಯ ಕೈದಿಯಾಗಿ ಕಳೆದ ದಿನಗಳ ಹೃದಯಸ್ಪರ್ಶಿ ಆಖ್ಯಾನ.

ಈಗ ಶೇಖರ ನನ್ನ ಬಳಿ ಬಂದು ಹೇಳಿದ. "ಅಮ್ಮಾ, ಸ್ವಲ್ಪ ಈ ಕವಿತೆಯನ್ನಷ್ಟು ನನಗೆ ತಿಳಿಸಿಹೇಳುವಿಯಾ ?" ನಾನು ಅವನ ಪುಸ್ತಕ ಕೈಗೆ ತೆಗೆದುಕೊಂಡೆ. ಕವಿತೆಯ ಶೀರ್ಷಿಕೆ—"ನಾವು ಏಳು ಜನ"—ಓರ್ವ ಮುಗ್ಧ ಪುಟ್ಟ ಬಾಲಿಕೆ. ಅವಳ ಅಣ್ಣಂದಿರಲ್ಲಿ ಇಬ್ಬರು ಸಮುದ್ರದಾಚೆ ಹೋಗಿದ್ದಾರೆ ಮತ್ತೆ ಇಬ್ಬರು ಸತ್ತುಹೋಗಿದ್ದಾರೆ. ಹಾಗಿದ್ದರೂ ಅವಳು ವಿಶ್ವಾಸಪೂರ್ವಕವಾಗಿ ಹಾಗೂ ಭಾವನಾಪೂರ್ವಕವಾಗಿ ಹೇಳುತ್ತಾಳೆ— "ವಿ ಆರ್ ಸೆವೆನ್"—ನಾವು ಏಳು ಜನ ಇದ್ದೇವೆ. ಕವಿತೆಯನ್ನು ತಿಳಿಸಿಹೇಳುವಾಗ ನನ್ನ ಕಣ್ಣಲ್ಲಿ ನೀರು ಬಂದವು. ಶೇಖರ ನುಡಿದ. "ಅಮ್ಮಾ. ನೀನೂ ಎಂಥವಳು. ಕವಿತೆಯನ್ನು ತಿಳಿಸಿಹೇಳುತ್ತ ಹೇಳುತ್ತ ಅಳತೊಡಗಿದೆ." ನಿಜವಾಗಿಯೂ ಕವಿತೆ ಹೃದಯಸ್ಪರ್ಶಿಯಾಗಿತ್ತು. ಆದರೆ ಕಣ್ಣಿನಲ್ಲಿ ನೀರು ಬಂದಿದ್ದರ ಕಾರಣ ಬೇರೆಯೆ ಆಗಿತ್ತು. ನಾವೂ ಏಳು ಜನ ಇದ್ದೆವು—ಗತಿಸಿದ ನೆನಪು ಮತ್ತೆ ತಾಜಾ ಆಯಿತು. ಮನಸ್ಸಿನೊಳಗಿನ ಕವಿತೆ ಮಾಯವಾಯಿತು. ಸದ್ಯದಲ್ಲೇ ನಡೆಯಲಿರುವ ಶೇಖರನ ಪರೀಕ್ಷೆಯ ವಿಚಾರವೂ ನನ್ನಿಂದ ದೂರವಾಗಿತ್ತು. ೨೦ ವರ್ಷಗಳ ಹಿಂದಿನ ಒಂದು ಚಿತ್ರ ನನ್ನ ಕಣ್ಣೆದುರು ಪ್ರತ್ಯಕ್ಷವಾಯಿತು......ಕತ್ತಲ ರಾತ್ರಿಯಲ್ಲಿ ಕಿಡಿಗಳನ್ನು ಹಾರಿಸುತ್ತ ಸಾಗಿರುವ ರೇಲ್ವೆಗಾಡಿ ಮತ್ತು ಅದರಲ್ಲಿದ್ದ ನಾವು ಏಳು ಜನ. ಒಬ್ಬರಿಗೊಬ್ಬರು ಹೆಚ್ಚು ಕಡಿಮೆ ಅಪರಿಚಿತರು. ವಯಸ್ಸಿನಲ್ಲಿಯೂ ಸಾಮ್ಯವಿಲ್ಲ. ಐವರು ಮಹಾರಾಷ್ಟ್ರೀಯರು. ಇಬ್ಬರು ಗುಜರಾತಿಗಳು. ಅವರಲ್ಲೊಬ್ಬಳು ಸರದಾರ ಪಟೇಲರ ಪುತ್ರಿ, ಒಬ್ಬಳು ಒಬ್ಬ ಗಿರಣಿ ಮಾಲೀಕನ ಮಗಳು. ಒಬ್ಬಳು ಪ್ರೊಫೆಸರ್. ಓರ್ವ ಸಂಪನ್ನ ಕುಟುಂಬದ ಗೃಹಿಣಿ ಮತ್ತು ಓರ್ವ ಮುದುಕಿ. ಜೊತೆಯ ನಾವಿಬ್ಬರು ಕಾಲೇಜು ಹುಡುಗಿಯರು. ನಾವೆಲ್ಲ ಹೀಗೆ ಒಂದೇ ಸ್ಥಳದಲ್ಲಿ ಏಕೆ ಸೇರಿಸಲ್ಪಟ್ಟೆವೋ ದೇವರೇ ಬಲ್ಲ ಅಥವಾ ಬ್ರಿಟಿಶ್ ಸಾಮ್ರಾಜ್ಯದ ಅಧಿಕಾರಿಗಳು ಬಲ್ಲರು.

ತುಂಬಿಹೋಗಿದ್ದ ಯರವಡಾ ಜೇಲಿನಲ್ಲಿದ್ದ ಹದಿಮೂರು ವ್ಯಕ್ತಿಗಳಿಗೆ ಸಾಮಾನು ಕಟ್ಟಿಕೊಂಡು ಹೊರಡುವ ತಯಾರಿ ಮಾಡಲು ಒಮ್ಮಿಂದೊಮ್ಮೆ ಆಜ್ಞೆ ಮಾಡಲಾಯಿತು. ಪುಣೆ ಸ್ಟೇಶನ್ನಲ್ಲಿ ಯಾವುದೋ ಗೇಟ್ ತೆಗೆದು ನಮ್ಮನ್ನು ಹಿಂಬದಿಯಿಂದ ಸ್ಟೇಶನ್ನಿನೊಳಗೆ ಕರೆತಂದರು. ಒಳಗೆ ಬಂದ ಮೇಲೆ ನಮ್ಮಲ್ಲಿ ಏಳು ಮಂದಿಯನ್ನು ಒಂದು ಡಬ್ಬಿಯಲ್ಲಿ. ಉಳಿದ ಆರು ಮಂದಿಯನ್ನು ಇನ್ನೊಂದು ಡಬ್ಬಿಯಲ್ಲಿ ಕೂಡ್ರಿಸಲಾಯಿತು.

ಗಾಡಿ ಹೊರಟ ಮೇಲೆ ಮಣಿಬೆನ್ ಹೇಳಿದಳು "ನಮ್ಮನ್ನು ಹಿಂಡಲಗಿಗೆ ಒಯ್ಯುತ್ತಿದ್ದಾರೆಂದು

ಗುಜರಾತಿಯಿಂದ ,ನವನೀತ ದ ಕೃಪೆ

ಕಾಣ್ತಿದೆ."

"ಎಲ್ಲಿದೀವಿ ?" ಯಾರೋ ಕೇಳಿದರು.

"ಬೆಳಗಾವಿಯ ಹತ್ತಿರ..."

"ಆ ಜೇಲು ಬಹಳ ಕೆಟ್ಟದ್ದಾಗಿದೆಯೆ?" ನಾನು ಕೇಳಿದೆ.

"ಹೇಗೂ ? ನೋಡುತ್ತೀಯಲ್ಲ," ಮಣಿಬೆನ್ ಹೇಳಿದಳು.

ಹೆಚ್ಚು ಮಾತಾಡಲು ವಿಷಯವಿರಲಿಲ್ಲ. ಪರಿಚಯವೂ ಅಷ್ಟಕ್ಕಷ್ಟೇ ಆಗಿತ್ತು. ಆದ್ದರಿಂದ ಎಲ್ಲರೂ ಹಾಸಿಗೆ ಬಿಡಿಸಿ ಮಲಗುವ ತಯಾರಿ ನಡೆಸಿದರು. ನಾನು ಮತ್ತು ಸುಮತಿ ಸಮವಯಸ್ಕರು. ಆದ್ದರಿಂದ ಒಬ್ಬರ ಪಕ್ಕದಲ್ಲಿ ಒಬ್ಬರು ಕುಳಿತಿದ್ದೆವು. ನಮ್ಮಿಬ್ಬರ ಪರಿಚಯವೂ ವಿಶೇಷವಾಗಿರಲಿಲ್ಲ. ಮತ್ತು ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಆಗಿತ್ತು.

ಜೇಲಿಗೆ ಬರುವ ಮೊದಲು ನಾವಿಬ್ಬರು ಮೂರು ನಾಲ್ಕು ಸಲ ಭೆಟ್ಟಿಯಾಗಿದ್ದೆವು. ನನ್ನನ್ನು ಬಂಧಿಸಿದ ಒಂದು ವಾರದ ನಂತರ ಅವಳ ಬಂಧನವಾಯಿತು. ಅವಳು ಬಂದಾಗ ಇತರರಂತೆ ನಾನೂ ಅವಳನ್ನು ಸ್ವಾಗತಿಸಿದೆ. ಅವಳು ತನ್ನ ಸಾಮಾನನ್ನು ನನ್ನ ದರೋಡಿಗೇ ಇಡಿಸಿದಳು. ಇದುವರೆಗೆ ನಾವು ನಮ್ಮ ನಮ್ಮ ಗುಂಪಿನಲ್ಲಿದ್ದೆವು. ಒಂದು ರಾತ್ರಿ ಅವಳು ಮಲಗಲು ಬಾರದಿದ್ದಾಗ ಇವಳೇಕೆ ಇಷ್ಟು ಹೊತ್ತಾದರೂ ಬರಲಿಲ್ಲ ಎಂದು ಯೋಚಿಸತೊಡಗಿದೆ. ಅಷ್ಟರಲ್ಲಿ ನಮ್ಮ ಸ್ತ್ರೀ ವಾರ್ಡನ್ ಬಂದು ನನ್ನೊಡನೆ "ನೀನು ಮಲಗಲು ಆಸ್ಪತ್ರೆಗೆ ಹೋಗಬೇಕು." ಎಂದಳು.

"ಯಾಕೆ?"

"ಆ ಆಸ್ಪತ್ರೆ ಹುಡುಗಿ ನಿನ್ನನ್ನೇ ಕರೆತರಲು ಹೇಳಿದ್ದಾಳೆ." ಮತ್ತೇನನ್ನೂ ಮಾತಾಡದೆ ನಾನು ಹಾಸಿಗೆ ಸುತ್ತಿಕೊಂಡು ಅವರ ಜೊತೆಗೆ ಹೊರಟೆ. ಆಸ್ಪತ್ರೆಯ ಬದುಕಿನಲ್ಲಿ ಸುಮತಿ ಮಂಚದ ಮೇಲೆ ಮಲಗಿದ್ದಳು! ಬಹಳ ನಿಸ್ತೇಜಳಾಗಿದ್ದಳು. "ಏನು, ಏನಾಯಿತು?" ಎಂದು ಕೇಳಿದೆ.

"ಏನೋ ಗೊತ್ತಿಲ್ಲ. ಆದರೆ ಎಷ್ಟೋ ಸಲ ನನಗೆ ಹೀಗಾಗುತ್ತದೆ," ಅವಳು ಉತ್ತರವಿತ್ತಳು.

"ಔಷಧ ತೆಗೆದುಕೊಂಡೆಯಾ?"

"ನಾಳೆ ಡಾಕ್ಟರರು ಬರುತ್ತಾರೆ. ಆಗ ನೋಡೋಣಂತೆ."

"ರಾತ್ರಿ ಹೆಚ್ಚಾದರೆ..."

"ನೀನಿದ್ದೀಯಲ್ಲ," ಬಹು ಸರಳವಾಗಿ ಆಕೆ ಹೇಳಿದಳು. ನಾವಿಬ್ಬರೂ ಅಜ್ಞಾನಿಗಳೇ. ಆದರೆ ಅವಳ ಮುಗ್ಧ ಶ್ರದ್ಧೆ ನನ್ನನ್ನು ಒಮ್ಮೆಲೇ ದೊಡ್ಡವಳನ್ನಾಗಿ ಮಾಡಿತು. ಅವಳಿಗೆ ನಿದ್ದೆ ಬರುವವರೆಗೂ ಅವಳ ತಲೆಯನ್ನು ಸ್ನೇಹದಿಂದ ನೇವರಿಸುತ್ತ ಕುಳಿತೆ. ಅವಳು ಸರಿಯಾಗಿ ನಿದ್ದೆ ಮಾಡುತ್ತಿದ್ದಾಳೆಯೋ ಎಂದು ನೋಡಲು ರಾತ್ರಿ ಎಷ್ಟೋ ಸಲ ಎದ್ದೆ.

ಅಂದಿನಿಂದ ನಾವಿಬ್ಬರೂ ಬಹಳ ದಿನದ ಸ್ನೇಹಿತೆಯರಂತೆ ಆದೆವು. ಯರವಡಾ ಜೇಲಿನಿಂದ ಹೊರಡಲು ಆಜ್ಞೆ ಬಂದ ಹದಿಮೂರು ಜನರಲ್ಲಿ ನಮ್ಮ ಹೆಸರೂ ಬಂದಾಗ, ಆಗಲಿ, ನಾವಿಬ್ಬರೂ ಒಟ್ಟಿಗೇ ಇದ್ದೇವಲ್ಲ ಎಂಬ ವಿಚಾರ ನಮಗೆ ನೆಮ್ಮದಿ ತಂದಿತು.

ಆ ರಾತ್ರಿ ಗಡಗಡ ಸದ್ದು ಮಾಡುತ್ತ ಸಾಗುತ್ತಿದ್ದ ರೈಲಿನಲ್ಲಿಯೂ ನಾವಿಬ್ಬರು ಕೈ ಕೈ ಹಿಡಿದುಕೊಂಡು ಮಲಗಿದೆವು. ಏನೇ ಬಂದರೂ ಎದುರಿಸುವ ದೃಢ ಸಂಕಲ್ಪದಿಂದಲೇ ನಾವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿದ್ದೆವು. ಅಂದ ಮೇಲೆ ಭಯಪಾದರೂ ಏತರದು? ಹಿಂಡಲಗಿಯೇ ಏಕೆ, ಮಾಂಡಲೆ ಅಥವಾ ಅಂದಮಾನಕ್ಕೆ ಬೇಕಾದರೂ ಒಯ್ಯಲಿ!

ಮರುದಿನ ಬೆಳಿಗ್ಗೆ ಬೆಳಗಾವಿಯಲ್ಲಿ ಇಳಿದೆವು. ಮಣಿಬೆನ್ನಳ ಅಂದಾಜು ಸರಿಯಾಗಿತ್ತು. ಹಿಂಡಲಗಿ ಸೆರೆಮನೆ ಪಟ್ಟಣದಿಂದ ತುಂಬ ದೂರವಿತ್ತು. ಮೋಟರಿಗೆ ಹಚ್ಚಿದ್ದ ತಂತಿಯ ಕಿಡಕಿಯಲ್ಲಿ ಕತ್ತೆತ್ತಿ ಹೊರಗಿನ ದೃಶ್ಯವನ್ನು ನಾವಿಬ್ಬರೂ ನೋಡಿಯೇ ನೋಡಿದ್ದು. ಆನಂದದಿಂದ ನಾನು ಹೇಳಿದೆ. "ಅಹಾ! ಎಂಥ ಸುಂದರ ಕೆಂಪು ಮಣ್ಣು. ಎಷ್ಟೆತ್ತರದ ಗಿಡಗಳು!"

ಆದರೆ ಆ ಆನಂದದಲ್ಲಿ ಪಾಲುಗೊಳ್ಳುವ ಮನಃಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಬಿಸಿಲು ಪ್ರಖರವಾಗುತ್ತಲಿತ್ತು. ನಿನ್ನೆಯಿಂದ ಊಟವೂ ಸಿಕ್ಕಿರಲಿಲ್ಲ. ಭವಿಷ್ಯದ ಅನಿಶ್ಚಿತತೆ ದುಃಸಹವಾಗಿತ್ತು. ಸುತ್ತಮುತ್ತಲಿನ ನಿಸರ್ಗಸೌಂದರ್ಯದಿಂದ ನನ್ನ ಮನಸ್ಸು ಪ್ರಫುಲ್ಲಿತವಾದುದನ್ನು

ಕಂಡು ಒಂದಿಷ್ಟು ನಾಚಿದೆ. ಸುಮತಿ ನನ್ನ ಕೈ ಹಿಡಿದು ಕುಳಿತಳು.

ತುಸು ಹೊತ್ತು ಕುಳಿತೇ ಇದ್ದೆ. ಮತ್ತೆ ನನ್ನ ಕಣ್ಣುಗಳು ಕೆಂಪು ಮಣ್ಣು ಮತ್ತು ಹಸಿರು ತುಂಬಿದ ಗಿಡಗಳನ್ನು ನೋಡುವುದರಲ್ಲಿ ತನ್ಮಯ ವಾದವು. ಮತ್ತೆ ಮತ್ತೆ ನನ್ನ ಕೈ ಅಮುಕಿ ಶಾಂತ ಚಿತ್ತದಿಂದ ಕೂಡ್ರಲು ಸುಮತಿ ಸೂಚಿಸುತ್ತಿದ್ದಳು. ಕೊನೆಗೆ ನಾನು ಬೇಸತ್ತು, "ಪ್ರಕೃತಿಯ ಸೌಂದರ್ಯರಸವನ್ನು ಹೊಟ್ಟೆತುಂಬ ಹೀರಲು ಬಿಡು. ಯಾರಿಗೆ ಗೊತ್ತು ಭವಿಷ್ಯ? ಮತ್ತೊಂದು ಇಂಥ ಹಸಿರು ನೋಡಲು ಸಿಗುತ್ತದೋ ಇಲ್ಲವೋ!" ಎಂದು ಹೇಳಿದೆ.

ಮಣಿಬೆನ್ ಶಾಂತಿಪೂರ್ವಕವಾಗಿ ನನ್ನ ಮಾತನ್ನು ಅನುಮೋದಿಸಿದಳು. "ನಿಜ ಭಗಿನಿಯರೆ, ಕಂಠಪೂರ್ತಿ ಸೌಂದರ್ಯರಸ ಪಾನ ಮಾಡಿರಿ. ಇಂಥ ಸೌಂದರ್ಯ ಅಲ್ಲಿ ನಿಮಗೆ ಕಾಣ ಸಿಗದು." ಆಮೇಲೆ ಎಲ್ಲರೂ ಹೊರಗೆ ನೋಡ ತೊಡಗಿದರು.

*

ಮಧ್ಯಾಹ್ನ ಸುಮಾರು ಎರಡು ಗಂಟೆಗೆ ನಾವೆಲ್ಲ ನಿಶ್ಚಿತ ಸ್ಥಳ ತಲುಪಿದೆವು. ನಮ್ಮನ್ನು ನಮ್ಮ ಕೋಣೆಗೆ ಕರೆದೊಯ್ದರು. ಎಂಥ ಕೋಣೆ! ೧೮ $\times$ ೨೦ ಅಡಿಯ ಅಳತೆ. ಇದು ಆಸ್ಪತ್ರೆಗಾಗಿ ಉಪಯೋಗಿಸುತ್ತಿದ್ದ ಕೋಣೆ. ಆದರೆ ನಾವು 'ಅ' ವರ್ಗದ ಕೈದಿಗಳಾಗಿದ್ದುದರಿಂದ ನಮಗಾಗಿ ತೆರವು ಮಾಡಲ್ಪಟ್ಟಿತ್ತು. ಇದರಲ್ಲಿ ನಳ, ಪಾಯಖಾನೆ, ಬಚ್ಚಲು—ಎಲ್ಲ ಒಟ್ಟಿಗೇ ಹೊಂದಿಕೊಂಡಿದ್ದುದು ತುಂಬ ಅನುಕೂಲವಾಗಿತ್ತು.

ಅಲ್ಲಿ ಮುಟ್ಟಿದೊಡನೆ ನಮ್ಮ ಊಟವೂ ಬಂತು. ತುಂಬ ಖಾರವಾದ ಬಟಾಟೆ ಪಲ್ಯ, ಒಂದು ದಪ್ಪ ರೊಟ್ಟಿ (ಅದು ಬೇರಾದ ಧಾನ್ಯದ್ದೂ ಇರಲಾರದಾದ್ದರಿಂದ ಗೋದಿಯ ರೊಟ್ಟಿ ಎನ್ನಬೇಕು) ಮತ್ತು ದಪ್ಪಕ್ಕಿಯ ಅನ್ನ. ರುಚಿಸಬಹುದಾದದ್ದು ಏನೂ ಇರಲಿಲ್ಲ. ಆದರೆ ಹಸಿವು ವಿಪರೀತವಾಗಿತ್ತು. ಒಣಗಿದ ಕದನ್ನವಾದರೂ ಎಲ್ಲರೂ ಹೊಟ್ಟೆ ತುಂಬ ತಿಂದೆವು. ಉಂಡು ಏಳುವಾಗ ಮಣಿಬೆನ್, "ಜೇಲಿನಲ್ಲಿರುವವರು ಇಷ್ಟು ಹೆಚ್ಚು ಉಣ್ಣಬಾರದು. ಇಲ್ಲಿ ಕಡಿಮೆ ಅನ್ನ. ಹೆಚ್ಚು ಕಷ್ಟ ಉಣ್ಣಬೇಕು," ಎಂದಳು.

ಅಂದು ಸಂಜೆ ಮತ್ತೆ ಉಪವಾಸ ಮಾಡಬೇಕಾಯಿತು. ಏಕೆಂದರೆ ಊಟ ಬರಲೇ ಇಲ್ಲ. ನಾವು ಉಂಡದ್ದು ರಾತ್ರಿಯ ಭೋಜನವೇ ಆಗಿತ್ತು. ಆದ್ದರಿಂದ ರಾತ್ರಿ ನಮ್ಮ ಕೋಣೆಯ ಬಾಗಿಲು ತೆರೆಯಲಿಲ್ಲ; ಊಟ ಬರಲಿಲ್ಲ. ಸ್ಟೇಷನ್ನಿನಲ್ಲಿಯೆ ತಂಬಿಗೆಯಲ್ಲಿ ನೀರು ತುಂಬಿಕೊಂಡಿದ್ದೆವಾದ್ದರಿಂದ ನೀರಿನ ತೊಂದರೆಯಾಗಲಿಲ್ಲ. ಇಲ್ಲದಿದ್ದರೆ ನಳವೂ ಬಂದಾಗಿಹೋಗಿತ್ತು.

ರಾತ್ರಿಯಾಗಲು ಹಾಸಿಗೆ ಹಾಸಿ ಪ್ರಾರ್ಥನೆ ಮಾಡಿದೆವು. ಪ್ರಾರ್ಥನೆ ಮುಗಿದೊಡನೆ ನಾನು ಗಟ್ಟಿಯಾಗಿ ನಕ್ಕೆ. ಎಲ್ಲರೂ ಉದಾಸರಾಗಿದ್ದಾಗ ನಾನು ನಕ್ಕದ್ದು ಉಚಿತವಾಗಿರಲಿಲ್ಲ.

"ಯಾಕೆ? ಒಮ್ಮಿಂದೊಮ್ಮೆ ಇಷ್ಟು ನಗು ಹೇಗೆ ಬಂತು?" ವಯಸ್ಸಿನಲ್ಲಿ ಎಲ್ಲರಿಗಿಂತ ಹಿರಿಯಳಾಗಿದ್ದ ಸುಶೀಲಾಬಾಯಿ— ಅವಳು ಇತರರೊಡನೆ ಹೆಚ್ಚಾಗಿ ಬೆರೆಯುತ್ತಲೂ ಇರಲಿಲ್ಲ—ಕೇಳಿದರು.

"ನಾನು ಬಹಳ ಚಿಕ್ಕವಳಿದ್ದಾಗಿನ ಒಂದು ಮಾತು ನೆನಪಿಗೆ ಬಂತು."

"ತಾಯಿ ತಿನ್ನಿಸಿದ ಉಂಡೆ ನೆನಪಿಗೆ ಬಂತೆ?"

"ಹೌದು. ಈ ಸಮಯದಲ್ಲಿ ಅದರದೂ ನೆನಪು ಬರುತ್ತಿದೆ. ಆದರೆ ಆ ನೆನಪಿನಿಂದ ನಗೆ ಬರುವುದಿಲ್ಲ. ನಾನು ಚಿಕ್ಕವಳಾಗಿದ್ದಾಗ ನಿತ್ಯವೂ ಮಲಗುವ ಮೊದಲು ಬಾಪು ಮತ್ತು ಬಾ ರನ್ನು ಸುಖವಾಗಿಡು. ನನ್ನನ್ನು ಬೇಗ ದೊಡ್ಡವಳನ್ನಾಗಿ ಮಾಡು ಎಂದು ಪ್ರಾರ್ಥನೆ ಮಾಡುತ್ತಿದ್ದೆ. ಆಗ ಸತ್ಯಾಗ್ರಹ ಜೋರಿನಿಂದ ನಡೆದಿತ್ತು. ನಿತ್ಯವೂ ಪ್ರಭಾತಫೇರಿ ನಡೆಯುತ್ತಿತ್ತು. ಅಲ್ಲಲ್ಲಿ ಲಾಠಿ ಚಾರ್ಜು ಆಗುತ್ತಿತ್ತು. ದೊಡ್ಡ ದೊಡ್ಡ ಜನರು ಜೇಲಿಗೆ ಹೋಗುತ್ತಿದ್ದರು. ಹಗಲು ರಾತ್ರಿ ಮನೆಮನೆಯಲ್ಲಿ ಈ ವಿಷಯಗಳ ಚರ್ಚೆಯಾಗುತ್ತಿತ್ತು... ಆ ಬಳಿಕ ನನ್ನ ಪ್ರಾರ್ಥನೆಯಲ್ಲಿ ಬೇಡಿಕೆಯನ್ನು ತುಸು ಹೆಚ್ಚು ಮಾಡಿದೆ..."

"ಏನೇನು? ನನ್ನ ದೇಶ ಸ್ವತಂತ್ರವಾಗಲಿ ಎಂದೆ?"



“ಅಲ್ಲ.”

“ಮತ್ತೆ? ಜೇಲಿಗೆ ಹೋದವರು ಸುಖವಾಗಿ ಇರಲಿ ಎಂದೆ?”

“ಆಂ–ಹಂ–”

“ಗಾಂಧೀಜಿ ಶತಾಯುಷಿಗಳಾಗಲಿ ಎಂದೆ?”

“ಊಂಹುಂ. ಇಂಥ ತಿಳಿವಳಿಕೆಯ ಮಾತೊಂದೂ ಅಲ್ಲ. ನಾನು ಪ್ರಾರ್ಥನೆಯನ್ನೆಂದೂ ಗಟ್ಟಿಯಾಗಿ ಮಾಡುತ್ತಿರಲಿಲ್ಲ. ಮನಸ್ಸಿನಲ್ಲಿಯೇ ಉದ್ವೇಗದಿಂದ ದೇವರನ್ನು ಕುರಿತು, ದೇಶವನ್ನು ಈಗಲೇ ಸ್ವತಂತ್ರವನ್ನಾಗಿ ಮಾಡಬೇಡ ಎಂದು ಬಿನ್ನವಿಸಿಕೊಳ್ಳುತ್ತಿದ್ದೆ. ಈ ದೊಡ್ಡ ಜನರು ತುಂಬಾ ಗದ್ದಲ ಮಾಡುತ್ತಿದ್ದಾರೆ. ಆದರೆ ನಾನಿನ್ನೂ ಚಿಕ್ಕವಳು. ನಾನು ದೊಡ್ಡವಳಾಗಿ ಸತ್ಯಾಗ್ರಹ ಮಾಡಿ ಜೇಲಿಗೆ ಹೋದ ಬಳಿಕ ಸ್ವಾತಂತ್ರ್ಯ ಬರಲಿ. ಅದಕ್ಕೂ ಮೊದಲು ಬೇಡ”

“ವ್ಹಾ! ಬಹುಶಃ ನಿನ್ನ ಪ್ರಾರ್ಥನೆಯನ್ನು ದೇವರು ಕೇಳಿರಬೇಕು. ಅಂತಲೇ ಸ್ವಾತಂತ್ರ್ಯ ಬರುವುದು ತಡವಾಗಿದೆ. ಈಗ ನಿನ್ನ ಇಚ್ಛೆ ಪೂರ್ಣವಾಗಿದೆಯೊ ಅಥವಾ ಇಲ್ಲವೊ?”

“ಹಂ. ಆಗಿದೆ. ಇದೇನು ಜೇಲೇ ಎಂದು ಯರವಡಾದಲ್ಲಿ ಅನಿಸುತ್ತಿತ್ತು. ಕಾಲೇಜಿನ ಹಾಸ್ಟೆಲ್ ಇದ್ದ ಹಾಗೆ ಇದೆಯಲ್ಲ ಅನಿಸುತ್ತಿತ್ತು. ಇಂದಿಲ್ಲಿ ಬಂದಬಳಿಕ ನಿಜವಾದ ಜೇಲನ್ನು ಕಂಡೆ. ನಿರುತ್ಸಾಹಿ ಸ್ಥಳ. ಇಡೀ ದಿನ ಕೋಣೆಯಲ್ಲಿ ಬಂದಿಯಾಗಿರಬೇಕು. ಊಟವೂ ಎಂಥದು. ಒಮ್ಮೆ ಕೊಟ್ಟ ಊಟ ಪೂರ್ತಿ ಮಾಡಲು ನಾಲ್ಕು ಸಲ ತಿನ್ನಬೇಕು. ನಿಜವಾದ ಜೇಲೆಂದರೆ ಇದೇ. ದೇವರು ಈಗ ನನ್ನ ಪ್ರಾರ್ಥನೆ ಮನ್ನಿಸಿದ. ಅಂತೆಯೆ ಪ್ರಾರ್ಥನೆ ಮಾಡುವಾಗ ನನಗೆ ನಗೆ ಬಂತು.”

“ಹುಚ್ಚಿ! ದೇವರು, ನಿನ್ನ ದೇವರು ನಿನ್ನ ಪ್ರಾರ್ಥನೆಯನ್ನು ಮನ್ನಿಸುವ ಭರದಲ್ಲಿ ನಾವೆಲ್ಲ ಈ ಕಷ್ಟದಲ್ಲಿ ಸಿಕ್ಕಿಕೊಂಡೆವಲ್ಲ.”

“ಇದರಲ್ಲಿ ಸಿಕ್ಕಿಕೊಳ್ಳುವ ಮಾತೆಲ್ಲಿ ಬಂತು? ಎಲ್ಲರೂ ತಿಳಿದೇ ಸ್ವೇಚ್ಛೆಯಿಂದ ಜೇಲಿಗೆ ಬಂದಿದ್ದೇವೆ.”

“ನಿಜ. ಈಗ ಬುದ್ಧಿವಂತರಂತೆ ಇರಿ. ಈ ಚಿಕ್ಕ ಕೋಣೆಯಲ್ಲಿ ಜಗಳಾಡದೆ. ಕಟುವಿಚಾರ ಹಬ್ಬಿಸದೆ ಇದ್ದು ತೋರಿಸಿದರೆ ಸರಿ!” ಮಣಿಬೆನ್ ನಕ್ಕು ನುಡಿದಳು.

ನನ್ನ ಬಾಲಸುಲಭ ಪ್ರಾರ್ಥನೆಯಿಂದಲೇ
ಸ್ವಾತಂತ್ರ್ಯ ಬರುವುದು ತಡವಾಗಿತ್ತೋ ಇಲ್ಲವೋ
ದೇವರೇ ಬಲ್ಲ. ಆದರೆ ಈ ಮಾತುಗಳಿಂದ
ಕೋಣೆಯಲ್ಲಿನ ಉದಾಸೀನತೆ ಮಾಯವಾಯಿತು.
ಇನ್ನು ಹಗಲು ರಾತ್ರಿ ಎಲ್ಲರೂ ಒಟ್ಟಾಗಿರ
ಬೇಕು. ಎಲ್ಲರೂ ಪರಸ್ಪರ ಹೆಚ್ಚು ಸಮ್ಮಿಲಿತ
ವಾಗಿರಲು ಪ್ರಯತ್ನಿಸತೊಡಗಿದರು. ಇದೇನು
ಸಣ್ಣ ಮಾತೆ! ನಾವಿಲ್ಲಿ ಏನೇನನ್ನೆಲ್ಲ ನೋಡಲಿ
ದ್ದೆವು. ಸಹಿಸಲಿದ್ದೆವು!

*

ಮೂರು ನಾಲ್ಕು ದಿನಗಳಲ್ಲಿ ನಮ್ಮ ಮನಸ್ಸು
ಅಲ್ಲಿಯ ಪರಿಸ್ಥಿತಿಗೆ ಒಗ್ಗಿಕೊಂಡಿತು. ಕೋಣೆಯ
ಬಾಗಿಲು ತೆರೆದಾಗ ಅಳತೆ ಮಾಡಿ ಕೊಟ್ಟ
ಊಟವನ್ನು ಇಸಿದುಕೊಳ್ಳುವುದು, ಸ್ನಾನ ಮಾಡಿ
ಬಟ್ಟೆ ತೊಳೆದುಕೊಳ್ಳುವುದು, ಮಿಕ್ಕ ಸ್ವಲ್ಪ
ಸಮಯದಲ್ಲಿ ಶತಪಥ ಹಾಕುವದು. ಕೋಣೆ
ಯಲ್ಲಿ ಕೂಡಿದ ಬಳಿಕ ಓದುವುದು. ನೂಲುವುದು.
ಹರಟೆ ಹೊಡೆಯುವುದು. ಸಾವಕಾಶ ಎಲ್ಲವೂ
ಒಂದು ಹದಕ್ಕೆ ಬಂತು.

ನಮ್ಮನ್ನು ಆಸ್ಪತ್ರೆಯ ಕೋಣೆಯಲ್ಲಿ ಇ
ಲಾಗಿತ್ತು. ಇದರಲ್ಲಿ ದಕ್ಷಿಣದ ಕಡೆ ಒಂದು
ಪೂರ್ವದಿಕ್ಕಿನಲ್ಲಿ ಒಂದು ಹೀಗೆ ಎರಡು ಕಿಡ
ಗಳಿದ್ದವು. ಕಿಡಕಿಗಳಲ್ಲಿ ಸರಳುಗಳಿದ್ದವು. ಮೇ
ಉಕ್ಕಿನ ಜಾಳಿಗೆಯನ್ನೂ ಕೂಡ್ರಿಸಿದ್ದರು. ಕಿ
ಕಿಗೆ ಮುಖ ಆನಿಸಿ ಹೊರಗೆ ನೋಡುತ್ತಿದ್ದೆವು

ಕಿಡಕಿಯ ಎದುರಿನಲ್ಲಿ ಒಂದು ಚಿಕ್ಕ ಕೋ
ಯಿತ್ತು. ಅದು ಯಾವಾಗಲೂ ಮುಚ್ಚಿ
ತ್ತಿತ್ತು. ಎದುರುಗಡೆ ಒಂದು ಹೂದೋಟವಿತ್ತು
ತೋಟವೇನು. ಹೂಗಿಡಗಳ ಚಿಕ್ಕದೊಂ
ಸಾಲಿತ್ತು. ಬಳಿಯಲ್ಲೇ ಒಂದು ಮರವಿತ್ತು
ಅದಕ್ಕೆ ಒಂದು ಮಾರ್ನಿಂಗ್ ಗ್ಲೋರಿಯ ಬ
ಹಬ್ಬಿಕೊಂಡಿತ್ತು. ಬೆಳಿಗ್ಗೆ, ಮಧ್ಯಾಹ್ನ. ಸಂ
ತನ್ನ ಬಣ್ಣ ಬದಲಿಸುವ ಅದರ ದೊಡ್ಡ ದೊ
ಹೂಗಳನ್ನು ನೋಡುತ್ತ ಎಲ್ಲವನ್ನೂ ಮರೆಯ
ತ್ತಿದ್ದೆವು. ಆ ಹೂಗಳ ಬಣ್ಣದಲ್ಲಿ ತನ್ಮಯರಾ
ತ್ತಿದ್ದೆವು.

ಒಂದು ದಿನ ಊಟ ತೆಗೆದುಕೊಳ್ಳುತ್ತಿದ್ದಾಗ ನಾವು ವಾರ್ಡನ್ ಸೀತಮ್ಮನ ಹತ್ತಿರ. "ನಮಗೂ ತೋಟದಲ್ಲಿ ಕೆಲಸ ಮಾಡಲು ಕೊಟ್ಟಾರೆ?" ಎಂದು ಕೇಳಿದೆವು.

"ಸುಪರಿಂಟೆಂಡೆಂಟ್ ಸಾಹೆಬರ ಹತ್ತಿರ ಕೇಳಿರಿ." ಎಂದವಳು ಚುಟುಕಿನಲ್ಲಿ ಉತ್ತರ ಇತ್ತಳು. ಹೆಚ್ಚು ಮಾತಾಡಲು ಅವಳಿಗೆ ಮನಸ್ಸಿರಲಿಲ್ಲ. ನಮಗೂ ಇರಲಿಲ್ಲ.

ಎರಡು ದಿನಗಳ ಬಳಿಕ ನಾವು ಮತ್ತೆ ಕೇಳಿದೆವು: "ಆ ಕಡೆ ತೋಟವಿದೆಯಲ್ಲ ಅದು ಯಾರದು? ನಾವು ಕೆಲಸ ಮಾಡಬಹುದೋ?"

"ಅಲ್ಲಿ ಓರ್ವ ಜರ್ಮನ್ ಮಹಿಳೆ ಇರುತ್ತಾಳೆ." [illegible] ನಾವು ಕೇಳಿದೆವೇನೋ, ಹೇಳಬಾರದ ಮಾತನ್ನು ಹೇಳಿದಳೇನೋ ಎಂಬಂತೆ.

ಆ ಇಡೀ ದಿನ ನಾವು ಆ ಮುಚ್ಚಿದ ಕೋಣೆಯಲ್ಲಿಯೇ ಕಳೆದೆವು. ಆ ಬಡಪಾಯಿ ಒಬ್ಬಳೇ ಹೇಗಿರಬಲ್ಲಳು? ಅವಳ ಭಾಷೆಯನ್ನು ಅರಿಯುವ ಮಾತನಾಡುವ ಜನ ಇಲ್ಲಿ ಯಾರು ಸಿಕ್ಕಾರು? [illegible] ನಮ್ಮನ್ನು [illegible] ಅವಳ ಆ [illegible] ಮುಚ್ಚಿಯೇ [illegible] ಈ ಹೂಗಿಡಗಳನ್ನು ಅವಳೇ ನೆಟ್ಟಿರಬೇಕು. ಅವಳು ಸಹ ಆ ಕಡೆಯಿಂದ ನಮ್ಮಂ- [illegible] ಯಾವಾಗಲೂ ನೋಡುತ್ತಿರಬೇಕು. ಅವಳ ವಯಸ್ಸೇನಿರಬಹುದು? ಅವಳು ಕೂಡ ತನ್ನ ದೇಶ. ತನ್ನ ಮನೆ, [illegible].

ಆ ಹೆಂಗಸನ್ನು ನೋಡದೆಯೇ ಮನದಲ್ಲಿಯೇ ಅವಳ ಸ್ಕೆಚ್ ಮಾಡಿಕೊಂಡೆವು. ಅರಳಿದ ಹೂಗಳ ನಡುವೆ ಬಂಗಾರ ಬಣ್ಣದ ಕೂದಲು, ಬಿಳಿ ಮುಖ ಮತ್ತು ಎರಡು ನೀಲಿ ಕಣ್ಣುಗಳು ನಮ್ಮತ್ತಲೇ ನೋಡುತ್ತಿರಬಹುದು ಎಂದು ನಮಗನಿಸಿತು.

ಮತ್ತು ಒಂದು ದಿನ ನಸುಕಿನಲ್ಲಿ ನಾವು ಮಾರ್ನಿಂಗ್ ಗ್ಲೋರಿಯ ಅರಳುತ್ತಿರುವ ಮೊಗ್ಗುಗಳನ್ನು ನೋಡಲೆಂದು ಕಿಡಕಿಗೆ ಮುಖ ಆನಿಸಿದೆವು. ಎಂಥ ವಿಚಿತ್ರ! ಆ ಕೋಣೆಯ ಬಾಗಿಲು ಪೂರಾ ತೆರೆದಿತ್ತು. ಆ ಮಹಿಳೆಯನ್ನು ಅಲ್ಲಿಂದ ಕರೆದೊಯ್ದಿದ್ದರು. ಎಲ್ಲಿ ಒಯ್ದಿರಬಹುದು? ಎಲ್ಲಿಯೇ ಒಯ್ಯಲಿ ಅಲ್ಲಿ ದೇವರು ಅವಳನ್ನು ಸುಖವಾಗಿಟ್ಟಿರಲಿ. ಏತಕ್ಕೋ ಏನೋ ಆ ಅಪರಿಚಿತ ಸ್ತ್ರೀಯ ಬಗ್ಗೆ ನಮ್ಮ ಕಣ್ಣುಗಳಲ್ಲಿ ನೀರು ಮೂಡಿತು. ಎಲ್ಲಿದ್ದರೂ ಅಲ್ಲಿ ಆ ಬಡಪ್ರಾಣಿ ಈ ಹೂಗಳನ್ನು ನೆನಸಿಕೊಳ್ಳುತ್ತಿರಬಹುದು. ಆ ದಿನ ಆ ಅರಳುತ್ತಿರುವ ಹೂಗಳೂ ನಮ್ಮನ್ನು ನಗಿಸಲಾರದಾದವು.

ಮತ್ತೆರಡು ದಿನಗಳು. [illegible]

ಕೊಂಡಿರುವಂತೆ ಕಾಣಿಸುತ್ತಿತ್ತು. ನಮಗೆ ಎಷ್ಟು ಆಘಾತವಾಯಿತೆಂದರೆ ಕಣ್ಣಲ್ಲಿ ನೀರೂ ಬರಲಿಲ್ಲ. ಮೇಲೆ ಬಾರಕೋಲಿನ ಏಟು ಬಿದ್ದವರಂತೆ ನಾವು ನಡುಗಿದೆವು.

ಜೇಲಿನಲ್ಲಿ ಯಾರೂ ನಮ್ಮನ್ನು ಹೊಡೆಯುತ್ತಿರಲಿಲ್ಲ. ಕೆಟ್ಟ ಶಬ್ದ ಮಾತಾಡುತ್ತಿರಲಿಲ್ಲ. ಕೀಳು ದರ್ಜೆಯದಾದರೂ ಹೊತ್ತಿಗೆ ಸರಿಯಾಗಿ ಹೊಟ್ಟೆ ತುಂಬ ಅನ್ನ ಸಿಕ್ಕುತ್ತಿತ್ತು. ಆದರೂ ನಾವು ಗುಲಾಮರಾಗಿದ್ದೆವು. ಈ ಗುಲಾಮಗಿರಿ ಸಾಮಾನ್ಯವಾಗಿದ್ದಿಲ್ಲ. ಈ ಬೇಡಿಯು ಆಚೆಕಡೆ ದೇಶದಲ್ಲೆಲ್ಲ ಇಂಥ ಅದೃಶ್ಯ ಬೇಡಿಗಳ ದೃಶ್ಯ ಹೃದಯಗಳನ್ನು ಸುಡುತ್ತಿರಬಹುದು.

ಆದರೆ ಹೀಗೆ ಅಳುವುದರಿಂದ ಏನು ಪ್ರಯೋಜನ? ನಾವಂತೂ ಇವರೊಡನೆ ಹೋರಾಡಲು ಹೊರಟಿರುವ ಸೈನಿಕರು. ಈ ಕಷ್ಟವನ್ನು ಸಹಿಸಿ ನಗುತ್ತಿರುವುದು ನಮ್ಮ ಕರ್ತವ್ಯವಾಗಿತ್ತು. ಮನಸ್ಸನ್ನು ಹೀಗೆ ಸಮಾಧಾನಪಡಿಸಿಕೊಂಡು ಬಾಗಿಲು ತೆರೆದೊಡನೆ ಕೋಣೆಯಿಂದ ಹೊರಬಿದ್ದೆವು. ಕೆಲಸ ಮಾಡುವಾಗ ಅರ್ಥಹೀನ ಮಾತುಗಳನ್ನಾಡುತ್ತ ಗಟ್ಟಿಯಾಗಿ ನಗಲು ಪ್ರಯತ್ನಿಸಿದೆವು. ಊಟವೂ ಗಂಟಲಿನಲ್ಲಿ ಇಳಿಯುತ್ತಿರಲಿಲ್ಲ. ಆದರೂ ಬಹಳ ಸುಖದಲ್ಲಿರುವವರಂತೆ ಏನೇನೊ ಮಾತಾಡುತ್ತ, ಅಭಿನಯಿಸುತ್ತ ಊಟ ಮಾಡಿದೆವು. ರಾತ್ರಿಯಾದ ಬಳಿಕವೇ ನಮ್ಮ ಮಾತು ನಿಂತಿತು. ಶಾಂತರಾಗಿ ಎಲ್ಲರೂ ಮಲಗಿದೆವು. ಆದರೆ ಆ ರಾತ್ರಿ ನಮ್ಮಲ್ಲಿ ಯಾರಿಗೂ ಸರಿಯಾಗಿ ನಿದ್ದೆ ಬರಲಿಲ್ಲ.

ಮರುದಿನ ಎದ್ದಾಗ ಕಿಡಕಿಯಲ್ಲಿ ಇಣಕದೇ ಕೆಲಸದಲ್ಲಿ ತೊಡಗಿದೆವು. ಬಾಗಿಲು ತೆರೆದಾಗ ಹೊರಗೆ ನಡೆದೆವು. ಕೆಲಸ ಮುಗಿಸಿ ಒಂದೆರಡು ಕನ್ನಡ ಶಬ್ದ ಕಲಿಯುವುದು. ದೊಡ್ಡ ಬರಾಕಿನಲ್ಲಿರುವ ಭಗಿನಿಯರೊಡನೆ ದೂರದಿಂದ ಮಾತಾಡುವುದೇ ಮುಂತಾದವುಗಳಲ್ಲಿ ದಿನವನ್ನು ಕಳೆದೆವು.

ಸಂಜೆ ಊಟಕ್ಕೆ ಕುಳಿತೆವು. ಹಸಿವೆಯೂ ಆಗಿತ್ತು. ಊಟಕ್ಕೆ ಕೊಟ್ಟಿದ್ದನ್ನೆಲ್ಲ ನಾವು ತಿನ್ನುತ್ತಿದ್ದೆವು; ಆದರೆ "ಪಾಲಾಪಾಣಿ"ಯೆಂಬ ಏನೇನೂ ರುಚಿಯಿಲ್ಲದ ಬಣ್ಣವಿಲ್ಲದ ಪದಾರ್ಥವನ್ನು, ಅದನ್ನು ತರುವ ಪಾತ್ರೆಯನ್ನು ಕಂಡಾಗ ತಿರಸ್ಕಾರದಿಂದ ನೋಡುತ್ತಿದ್ದೆವು. ಇದನ್ನು ಕುಡಿ

ದರೆ ಹೊಟ್ಟೆ ಸ್ವಚ್ಛವಾಗಿರುವುದು ಎಂದು ಮಣಿ
ಬೆನ್ ಯಾವಾಗಲೂ ಹೇಳುತ್ತಿದ್ದಳು.

ಇಷ್ಟು ದಿನಗಳಲ್ಲಿ ನಮ್ಮ ಪ್ರೊಫೆಸರ್ ಸ್ನೇಹಿತ
ಅನುತಾಯಿ ಮಣಿಬೆನ್ನಳ ಮಾತಿಗೆ ಮನ್ನಣೆ
ಕೊಟ್ಟು 'ಪಾಲಪಾಣಿ'ಯನ್ನು ಕುಡಿಯತೊಡ
ಗಿದ್ದಳು. ಮುಖ ಬೇರೆ ಕಡೆ ಮಾಡಿಕೊಂಡು ನಾವ
ನಾವು ರೊಟ್ಟಿ, ಬಾಳೆಹಣ್ಣು, ಹಾಲು ಇತ್ಯಾದಿ
ಸೇವಿಸುತ್ತಿದ್ದೆವು. ಎರಡೂ ಹೊತ್ತು ಇದೆ
ಬಗೆಯ ಊಟ.

ಅಂದು ಸಂಜೆ ಊಟಕ್ಕೆ ಕುಳಿತೆ. ಪ್ರಾರ್ಥನ
ಹೇಳಿ ಊಟ ಸುರು ಮಾಡಿದೆನೋ ಇಲ್ಲವೋ ಅನು
ತಾಯಿ ಒಮ್ಮೆಲೆ ಎದ್ದು ನಿಂತಳು. ತಾಟಿನಲ್ಲಿದ್ದ
ಊಟವನ್ನು ಬದಿಗಿಟ್ಟು ಖಾಲಿ ತಾಟನ್ನು ಹಿಡಿದು
ಕೊಂಡು ಬಚ್ಚಲು ಮನೆಗೆ ಹೋದಳು. ಆಶ
ಕ್ಕಾಗಿ ನಾವೆಲ್ಲ ನೋಡುತ್ತಲಿದ್ದೆವು. ಅನುತಾಯಿ
ತುಂಬ ಸ್ಥಿರ ಗಂಭೀರ ಸುಸ್ವಭಾವದ ವ್ಯಕ್ತಿ
ಊಟ ಕೆಟ್ಟದ್ದು ಎಂದು ಹೇಳಬಾರದು, ದೊರ
ತದ್ದನ್ನು ಉಣ್ಣಬೇಕು. ಅದನ್ನು ತಿಂದು ಪ್ರಕೃ
ಯನ್ನು ಸರಿಯಾಗಿಟ್ಟುಕೊಳ್ಳಬೇಕು. ಅಂದರೇನೆ
ನಮ್ಮನ್ನು ವಿಜಯಿಗಳೆನ್ನಬಹುದು ಎಂದು ಅವಳ
ಸದಾ ಹೇಳುತ್ತಿದ್ದಳು. ತಾನು ಹಾಗೆಯೆ ಆಚರಣ
ಮಾಡುತ್ತಿದ್ದಳು. ಇಂಥವಳು ಇಂದು ಹೀಗೇ
ಎದ್ದು ಹೋದಳು ತಿಳಿಯಲಿಲ್ಲ.

"ಊಟ ಮಾಡಿ. ನಾನು ಆ ಮೇಲೆ ಅವಳನ್ನು
ಕೇಳಿ ತಿಳಿಯುತ್ತೇನೆ." ಮಣಿಬೆನ್ ಹೇಳಿದಳು

ಜೇಲಿನ ಈ ಚಿಕ್ಕ ಕೋಣೆಯಲ್ಲಿ ಹೃದಯವನ್ನು
ಹಗುರು ಮಾಡಿಕೊಳ್ಳಲು ಒಂದು ಗಳಿಗೆಯ
ಏಕಾಂತವೂ ಸಿಕ್ಕುತ್ತಿರಲಿಲ್ಲ. ಇದಕ್ಕಾಗಿ ಬಚ್ಚಲ
ಮನೆಯಲ್ಲಿ ಅನುತಾಯಿ ಕೆಲ ಕ್ಷಣವಾದರೂ
ಒಬ್ಬಳೇ ಇರಲಿ ಎಂದು ರುಚಿಯಿಲ್ಲದ ಬ್ರೆಡ
ತುಣುಕನ್ನು ತಿನ್ನುತ್ತ ಕುಳಿತೆ.

ಕೆಲ ಹೊತ್ತಿನ ನಂತರ ತಾಟು ತೊಳೆದುಕೊಂಡ
ಹೊರಗೆ ಬಂದಾಗ ಅತ್ತತ್ತು ಅವಳ ಕಣ್ಣು ಕೆಂ
ಗಾಗಿದ್ದವು. ಕೂಡಲೆ ಹಾಸಿಗೆ ಹಾಸಿ ಮಲ
ಕೊಂಡಳು. ನಾವೂ ಮೌನವಾಗಿ ನಮ್ಮ ತಾಟ
ತೊಳೆದೆವು. ಹಾಸಿಗೆ ಹಾಸಿದೆವು. ಪ್ರಾರ್ಥ
ಮಾಡತೊಡಗಿದಾಗ ಅನುತಾಯಿ ನಮ್ಮನ್ನು
ಸೇರಿಕೊಂಡಳು. ಆದರೆ ಈಗಲೂ ಅವಳ ಕಣ್ಣು

ನೀರಿತ್ತು. ಅದರ ಕಾರಣ ಗೊತ್ತಿರದಿದ್ದರೂ ನಾನು ಮತ್ತು ಸುಮತಿ ಇಬ್ಬರೂ ಕಣ್ಣೊರಸಿಕೊಳ್ಳ ತೊಡಗಿದೆವು.

ಪ್ರಾರ್ಥನೆ ಮುಗಿದ ಬಳಿಕ ಮಣಿಬೆನ್ ಅನುತಾಯಿಯ ಬಳಿ ಹೋಗಿ ಕುಳಿತಳು. ನಾನೂ ಅಲ್ಲಿಯೇ ಹೋಗಿ ಕುಳಿತೆ.

"ಏನಾಯಿತು ಅನುತಾಯಿ? ಮನೆಯಿಂದೇನಾದರೂ ಪತ್ರ ಬಂದಿದೆಯೆ?"

"ಇಲ್ಲ." ಅವಳು ತಲೆಯಲ್ಲಾಡಿಸಿದಳು.

"ಮನೆಯ ನೆನಪಾಯಿತೆ?'

"ಇಲ್ಲ."

"ಹಾಗಾದರೆ ಮೈಯಲ್ಲಿ ಆರಾಮಿಲ್ಲವೆ?"

"ನೆಟ್ಟಗಿದೆ."

"ಅಂದರೆ ಯಾರಾದರೂ ಏನಾದರೂ ಹೇಳಿದರೆ? ಏನಾಯಿತು ಎಂದು ಹೇಳು. ನಾವೆಲ್ಲರೂ ಈ ಚಿಕ್ಕ ಕೋಣೆಯಲ್ಲಿ ಒಂದಾಗಿ ಇರಬೇಕು."

"ಹಾಗೇನೂ ಆಗಲಿಲ್ಲ. ಇಂದು ನೀವು 'ಪಾಲಾಪಾಣಿ' ಕುಡಿದಿರಾ?" ಅನುತಾಯಿಯ ಗಂಭೀರ ಸ್ವರ ವಿಚಲಿತವಾಗಿತ್ತು.

"ಹೌದು, ಕುಡಿದೆ."

"ಅದರಲ್ಲೇನಿತ್ತು?"

"ಅದನ್ನೆಲ್ಲ ನೋಡುತ್ತ ಹೋದರೆ ಇಲ್ಲಿ ಹೇಗೆ ನಡೆದೀತು?"

"ಮತ್ತೇನಾದರೂ ಇದ್ದಿದ್ದರೆ ಕೆಡಕೆನಿಸುತ್ತಿರಲಿಲ್ಲ. ಆದರೆ...ಆದರೆ ಅದರಲ್ಲಿ ಎದುರಿನ ತೋಟದ ಕಿತ್ತೆಸೆದ ಹೂಗಳಿದ್ದವು."

ಆ ತೋಟದ ಎಲೆ-ಹೂಗಳನ್ನೆಲ್ಲ ಹರಿದು ಅದರ ಸಾರು ಮಾಡಿ ನಮಗೆಲ್ಲ ಉಣಬಡಿಸುವ ವಿಚಾರ ನಿಜವಾಗಿಯೂ ಅದ್ಭುತವಾಗಿತ್ತು. ನಾವು ಹೋಗಿ ಸಾರಿನ ಪಾತ್ರೆಯನ್ನು ನೋಡಿದಾಗ ಅದರಲ್ಲಿ ಮಾರ್ನಿಂಗ್ ಗ್ಲೋರಿ, ಸೂರ್ಯಮುಖಿ ಮೊದಲಾದ ಹೂಗಳ ತುಣುಕುಗಳಿದ್ದವು. ನೋಡಿ ಮೈನಡುಗಿತು. ಈಗ ಅನುತಾಯಿಯ ದುಃಖ, ಹೇಸಿಕೆ ಎಲ್ಲರಲ್ಲಿ ಹರಡಿತು. ಎರಡು ದಿನಗಳಿಂದ ಮುದುಡಿದ್ದ ಮನಸ್ಸು ಬಂಧನಮುಕ್ತವಾಯಿತು. ಆಶ್ಚರ್ಯವೆಂದರೆ ವಾತಾವರಣ ನಿರ್ಮಲವಾಯಿತು. ಬಹಳ ಹೊತ್ತು ಮಾತನಾಡುತ್ತ ಕುಳಿತೆವು.

ನಮ್ಮ ಕೋಣೆಯ ಬಲಬದಿಗೆ ಒಂದು ದೊಡ್ಡ ಬರಾಕಿತ್ತು. ಅದರ ಹೊರಗಿನ ಜಗಲಿಗೆ ಕಬ್ಬಿಣದ ಜಾಳಿಗೆ ಹಚ್ಚಿದ್ದರು. ಅದರಿಂದ ಒಳಗಿನದೇನೂ ಕಾಣಿಸುತ್ತಿರಲಿಲ್ಲ. ಆ ದೊಡ್ಡ ಬರಾಕಿನಲ್ಲಿ ಅಪರಾಧಿ ಸ್ತ್ರೀಯರ ಜೊತೆಯಲ್ಲಿಯೆ ಸತ್ಯಾಗ್ರಹಿ ಸ್ತ್ರೀಯರನ್ನೂ ಇಟ್ಟಿದ್ದರು. ನಮ್ಮನ್ನು ಹೊರಗೆ ತಂದಾಗ ಅವರನ್ನು ಒಳಗೆ ಕೂಡಿಡುತ್ತಿದ್ದರು. ಇದರಿಂದ ಅವರಲ್ಲೊಬ್ಬರ ಮುಖವನ್ನೂ ನೋಡಲಾಗುತ್ತಿರಲಿಲ್ಲ.

ನಿತ್ಯವೂ ಹೊರಗೆ ಬಂದು ಕೆಲಸ ಮುಗಿದ ಮೇಲೆ ಒಂದು ಸಲ ಜಾಳಿಗೆಗೆ ಮುಖ ಹಚ್ಚಿ ಒಳಗಿನವನ್ನು ನೋಡುವ ಪ್ರಯತ್ನ ಮಾಡುತ್ತಿದ್ದೆ. ಒಳಗಿನವರೂ ಬಾಗಿಲ ಬಳಿ ಬಂದು ಸೇರುತ್ತಿದ್ದರು. ನಮ್ಮ ನಡುವೆ ಕಬ್ಬಿಣದ ಜಾಳಿಗೆ, ದೊಡ್ಡ ಜಗಲಿ, ಬಲವಾದ ಬಾಗಿಲು ಇದ್ದವು. ಇದಕ್ಕಿಂತಲೂ ಹೆಚ್ಚಿನ ಆತಂಕವೆಂದರೆ ಭಾಷೆಯ ತೊಡಕು. ಬರಾಕಿನ ಒಳಗೆ ನಮ್ಮಂಥ ಅನೇಕ ಹುಡುಗಿಯರಿದ್ದರು. ಅವರನ್ನು ನೋಡಿ ತುಂಬ ವ್ಯಥೆಯಾಗುತ್ತಿತ್ತು. ಅಪರಾಧಿ ಹೆಂಗಸರೊಡನೆ ಈ ಭಗಿನಿಯರು ದಿನದ ಇಪ್ಪತ್ತು ನಾಲ್ಕು ತಾಸನ್ನು ಕಳೆಯಬೇಕಾಗುತ್ತಿತ್ತು.

ನಾವೆಲ್ಲರೂ ಒಂದೇ, ಒಂದೇ ಮಾರ್ಗದಲ್ಲಿ ನಡೆಯುತ್ತ ಇಲ್ಲಿಗೆ ಬಂದವರು; ಒಂದೇ ಭಾರತ ಮಾತೆಯ ಮಕ್ಕಳು. ಆದರೂ ಒಂದು ಶಬ್ದವನ್ನೂ ಮಾತಾಡಿಕೊಳ್ಳಲಾರದಾಗಿದ್ದೆವು. ಒಬ್ಬರಿಗೊಬ್ಬರು ಧೈರ್ಯ ಹೇಳಲಾರದಾಗಿದ್ದೆವು.

ಒಂದು ದಿನ ಈ ಅಂತರ ಕಡಿಯುವ ಸಂಭವ ಉತ್ಪನ್ನವಾಯಿತು. ಬೆಳಗಾವಿಯಿಂದ ಇಬ್ಬರು ಕಾರ್ಯಕರ್ತೃ ಭಗಿನಿಯರು ಬಂದರು. ಇಬ್ಬರೂ ಕನ್ನಡ, ಮರಾಠಿ ಮತ್ತು ಇಂಗ್ಲಿಷನ್ನು ಚೆನ್ನಾಗಿ ಬಲ್ಲವರು. ಅವರನ್ನು ನಮ್ಮ ಮಗ್ಗಲಿನ ಕೋಣೆಯಲ್ಲಿಡಲಾಯಿತು. ನಮ್ಮದರ ಜೊತೆಗೇ ಅವರ ಕೋಣೆಯ ಬಾಗಿಲೂ ತೆರೆಯಲ್ಪಡುತ್ತಿತ್ತು. ಯರವಡಾ ಜೇಲಿನಲ್ಲಿಯ ನಮ್ಮ ಕೆಲ ಸಖಿಯರು ಆ ಕೋಣೆಯಲ್ಲಿಯೆ ಇರುತ್ತಿದ್ದರು. ಇದರಿಂದ ಈ ಹೊಸ ಮಹಿಳೆಯರ ಪರಿಚಯ ಕೂಡಲೆ ಆಯಿತು. ಈಗ ಇವರ ಮುಖಾಂತರ ಆ ಎರಡನೆ ಬರಾಕಿನಲ್ಲಿಯ ಭಗಿನಿಯರೊಂದಿಗೆ ಮಾತಾಡ

ಬಹುದೆಂಬ ವಿಚಾರ ಸಂತೋಷವನ್ನು ತಂದಿತು. ಅಲ್ಲಿ ಒಳಗಿರುವ ಭಗಿನಿಯರ ಕಷ್ಟ ದುಃಖಗಳು ನಮಗೀಗ ತಿಳಿಯತೊಡಗಿದವು. ಜೇಲರನಿಗೆ ಹೇಳಿಕೊಂಡು ಹಾಗೂ ಹೀಗೂ ಅವರನ್ನು ಭೆಟ್ಟಿಯಾಗಲು ಅನುಮತಿ ಪಡೆದುಕೊಂಡೆವು. ಈಗ ಪರಸ್ಪರ ಭೆಟ್ಟಿಯಾಗಿ ಹಿಂದಿ ಮತ್ತು ಇಂಗ್ಲಿಷುಗಳಲ್ಲಿ ಹಾಗೂ ಹೀಗೂ ಮಾತಾಡುತ್ತ ಪರಸ್ಪರರ ವಿಚಾರ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೆವು. ಅಪರಾಧಿ ಸ್ತ್ರೀಯರೊಂದಿಗೆ ಇರುವ ಇವರಿಗೆ ತುಂಬ ಕಷ್ಟವಾಗುತ್ತಿತ್ತು. ಅಪರಾಧಿ ಸ್ತ್ರೀಯರಿಗೆ ತಿಳಿಸಿ ಹೇಳಿ ಈ ಬರಾಕಿನ ಅರ್ಧ ಭಾಗವನ್ನು ಸತ್ಯಾಗ್ರಹಿ ಭಗನಿಯರಿಗಾಗಿ ತೆರವು ಮಾಡಿಸಿಕೊಂಡೆವು. ಎಲ್ಲರಿಗೂ ಆನಂದವಾಯಿತು.

*

ಇವರಲ್ಲಿ ಆನಂದಕ್ಕೆ ಇನ್ನೊಂದು ಕಾರಣವೂ ಇತ್ತು. ಓರ್ವ ಭಗಿನಿ ಹಡೆಯುವುದರಲ್ಲಿದ್ದಳು. ಈ ಜೇಲಿನಲ್ಲಿ ಮಗುವಿನ ಜನನವಾಗುವುದು ಎಂಬುದರಿಂದ ನಾವೆಲ್ಲ ಆನಂದದಿಂದ ಹುಚ್ಚರಂತಾದೆವು. ನಮ್ಮ ಪಾಲಿನ ಹಣ್ಣು, ಹಾಲು ಇತ್ಯಾದಿಗಳನ್ನು ಆ ಗರ್ಭಿಣಿಗೆ ಕೊಡುತ್ತಿದ್ದೆವು. ನಮ್ಮಲ್ಲಿರುವ ಖಾದಿ ಒಟ್ಟಿಗಳಲ್ಲಿ ಮೃದುವಾದವನ್ನು ಆರಿಸಿಕೊಂಡು ಬರಲಿರುವ ಮಗುವಿಗಾಗಿ ದುಪ್ಪಟಿಗಳನ್ನು ಹೊಲಿದೆವು. ಮಿತಭಾಷಿ ಸುಶೀಲಾಬಾಯಿ ಕೂಡ ಆನಂದದಲ್ಲಿ ಪಾಲುಗೊಂಡಳು. ದುಪ್ಪಟಿ ಮೇಲೆ ಕಸೂತಿ ಹಾಕಲು ಕಲಿಸತೊಡಗಿದಳು. ಈಗ ಯಾವುದೂ ಬೇಸರ ತರುತ್ತಿರಲಿಲ್ಲ. ಭಾಷೆಯ ಬಂಧನವನ್ನು ತುಂಡರಿಸಿ ಸ್ತ್ರೀಜೀವನದ ರೇಶಿಮೆ ದಾರವು ನಮ್ಮೆಲ್ಲರನ್ನು ಒಂದಾಗಿ ಬಂಧಿಸಿತು.

ಆ ಗರ್ಭಿಣಿ ಏನಾದರೂ ಕೆಲಸ ಮಾಡುವುದು ನಮಗೆ ಸಹನವಾಗುತ್ತಿರಲಿಲ್ಲ. ಆದರೆ ನಮ್ಮಲ್ಲಿ ಹಿರಿಯರು ನಮ್ಮನ್ನು ಗದರಿಸಿ ಅವಳಿಗೇನಾದರೂ ಕೆಲಸ ಕೊಡುತ್ತಿದ್ದರು. ಆದರಂತೆ ಅವಳ ಮೇಲೆ ಪ್ರೀತಿಯನ್ನೂ ಮಾಡುತ್ತಿದ್ದರು. ಅವಳಿಗಾಗಿ ಸುಶೀಲಾಬಾಯಿ ಹಾಡು ಹಾಡುತ್ತಿದ್ದಳು. ಆ ಮರಾಠಿ ಗೀತೆಗಳಲ್ಲಿ ಸೀತೆ, ದೇವಕಿ, ಜೀಜಾಬಾಯಿಯರು ಪುತ್ರರನ್ನು ಪಡೆದಾಗ ಅವರ ಮನೋಭಾವದ ಸುಂದರ ವರ್ಣನೆಯಿದ್ದಿತು.

ಕೆಲವು ಸಲ ಆ ಹೆಂಗಸಿನ ಕೂದಲು ಬಾಚಿ, ಹೆರಳು ತುರುಬು ಹಾಕಿ, ನೂಲಿನ ಹೂಗಳಿಂದ ಅಲಂಕರಿಸುತ್ತಿದ್ದೆವು. ಹೀಗೆ ದಿನಗಳು ಆನಂದದಿಂದ ಕಳೆಯುತ್ತಿದ್ದವು. ಇನ್ನು ಕೆಲವೇ ದಿನಗಳಲ್ಲಿ ನಮಗೆ ಹೊಸ ಆಟಿಕೆ ದೊರೆಯಲಿತ್ತು.

ಒಂದು ರಾತ್ರಿ ಅವಳನ್ನು ಆ ಜರ್ಮನ್ ಮಹಿಳೆಯಿದ್ದ ಕೋಣೆಯಲ್ಲಿ ಇಡಲು ಒಯ್ದರು. ಓರ್ವ ಮಹಿಳಾ ಡಾಕ್ಟರ್ ಮತ್ತು ಸುಶೀಲಾಬಾಯಿ ಅವಳ ಜೊತೆಗೆ ಹೋದಳು. ಆ ರಾತ್ರಿ ನಾವು ಆಗಾಗ ಹಾಸಿಗೆಯಲ್ಲಿ ಎದ್ದು ಕೂಡ್ರುತ್ತಿದ್ದೆವು. ಕಿಡಕಿಗೆ ಮುಖ ಆನಿಸಿ ಜಾಳಿಗೆಯ ಮೂಲಕ ನೋಡಲು ಪ್ರಯತ್ನಿಸುತ್ತಿದ್ದೆವು. ಏನೂ ತಿಳಿಯುತ್ತಿರಲಿಲ್ಲ. ಅಂದು ಯಾರಿಗೂ ನಿದ್ದೆ ಬರಲಿಲ್ಲ.

ನಸುಕಿನ ಆರು ಗಂಟೆಗೆ ಆ ಕೋಣೆಯಿಂದ ತಾಟು ಬಡಿದ ಸದ್ದು ಕೇಳಿಸಿತು. ನಾವೂ ಕೂಡ ನಮ್ಮ ಕೋಣೆಯಲ್ಲಿ ತಾಟು ಬಡಿದೆವು. ಸುಶೀಲಾಬಾಯಿ 'ಗಂಡುಕೂಸು' ಎಂದು ಒದರಿ ಹೇಳಿದಳು. ನಾವು ತಾಟು ಬಡಿದ ಸಪ್ಪಳ ಕೇಳಿ ಬರಾಕಿನಲ್ಲಿದ್ದ ಇತರ ಭಗಿನಿಯರೂ ತಾಟು ಬಡಿದು ನಮ್ಮ ಆನಂದದಲ್ಲಿ ಸಹಭಾಗಿಗಳಾದರು. ಈ ಕೋಲಾಹಲವನ್ನು ಕೇಳಿ ವಾರ್ಡರ್ ಸೀತಮ್ಮ ಓಡಿಬಂದಳು. ಪುತ್ರ ಜನನದ ಆನಂದದಲ್ಲಿ ಅವಳು ಎಲ್ಲ ಕೋಣೆಗಳ ಬೀಗಗಳನ್ನು ತೆಗೆದಳು. ಅಂದು ನಮ್ಮ ಪಾಲಿಗೆ ದೊರೆತಿದ್ದ ಸಕ್ಕರೆಯನ್ನು ಎಲ್ಲರಿಗೂ ಹಂಚಿದೆವು. ನಮ್ಮ ಆನಂದಕ್ಕೆ ಪಾರವೇ ಇರಲಿಲ್ಲ.

ಮೃದುಲಾಬೆನ್ನಳ ಕೆಲ ಆಪ್ತರು ಆ ಊರಿನಲ್ಲಿರುತ್ತಿದ್ದರು. ಪ್ರತಿನಿತ್ಯ ಮುಂಜಾನೆ ಅವರು ಮೃದುಲಾಬೆನ್ನಳಿಗೆ ಬೇಕಾಗುವ ಸಾಮಾನುಗಳ ಯಾದಿ ಮಾಡಿಕೊಂಡುಹೋಗಿ ಸಂಜೆ ಅದನ್ನು ಕಳಿಸಿಕೊಡುತ್ತಿದ್ದರು. ನಮಗೆ ಔಷಧಿ, ಪಥ್ಯದ ಆಹಾರ ಏನಾದರೂ ಬೇಕಾಗಿದ್ದರೆ ಸಿಗುತ್ತಿತ್ತು. ಆ ದಿನ ಮೃದುಲಾಬೆನ್ ಕೇಳಿದಳು, "ಏನು ತರಿಸಲಿ ?"

"ಬಹಳ ಸಾಮಾನು ತರಿಸಬೇಕು. ಆದರೆ ಇಂದಲ್ಲ. ಹನ್ನೆರಡನೆ ದಿನ ಹುಡುಗನಿಗೆ ಹೆಸರಿಡುವಾಗ ತರಿಸೋಣ. ಬೇಕಾದ ಸಾಮಾನಿನ ಯಾದಿ

ಯನ್ನು ನಾಳೆ ಕೊಡುತ್ತೇವೆ," ಉತ್ಸಾಹದಿಂದ ಹೇಳಿದೆವು.

ಅಂದು ಮಧ್ಯಾಹ್ನ ಅಚಾನಕವಾಗಿ ಗೇಟಿನಲ್ಲಿ ಘಂಟೆ ಬಾರಿಸಿತು. ಇಂದೇನೂ ಅಂಚೆಯ ದಿನವಾಗಿರಲಿಲ್ಲ. ಯಾರಾದರೂ ಹೊಸ ಕೈದಿ ಬಂದಿದ್ದಾನೆಯೆ? ನಾವೆಲ್ಲ ಬಾಗಿಲಿಂದ ನೋಡತೊಡಗಿದೆವು. ಒಂದು ಕಾಗದ ಹಿಡಿದುಕೊಂಡು ಸೀತಮ್ಮ ನಮ್ಮ ಕೋಣೆಯತ್ತಲೇ ಬರುತ್ತಿದ್ದಳು. ಬಾಗಿಲ ಬಳಿ ಬಂದು ಮೃದುಲಾಬೆನ್ನಳನ್ನು ಕರೆದು ಅವಳ ಕೈಲಿ ಕಾಗದ ಕೊಟ್ಟು, ಹೋಗಿಬಿಟ್ಟಳು. ಅದು ಪತ್ರವಾಗಿರದೆ ತಂತಿಯಾಗಿತ್ತು. ತಂತಿಯನ್ನು ಕಂಡು ನಮ್ಮ ಎದೆ ಬಡಿದುಕೊಂಡಿತು. ತಂತಿ ಕೂಡ ಪತ್ರದಂತೆ ಉದ್ದವಾಗಿತ್ತು. ನಾವೆಲ್ಲ ಉಸಿರು ಬಿಗಿಹಿಡಿದುಕೊಂಡು ನಮ್ಮ ನಮ್ಮ ಸ್ಥಳದಲ್ಲಿ ಕುಳಿತುಕೊಂಡಿದ್ದೆವು. ತಾರಿನಲ್ಲೇನಿದೆ ಎಂದು ಕೇಳುವ ಧೈರ್ಯವಾಗಲಿಲ್ಲ. ಮೃದುಲಾ-ಬೆನ್ ನಮಗೆಲ್ಲ ಮೆಚ್ಚಿಗೆಯಾಗಿದ್ದರೂ ಅವಳೊಡನೆ ಖಾಸಗಿ ವಿಷಯ ಮಾತಾಡುವಷ್ಟು ಸಲಿಗೆಯಿರಲಿಲ್ಲ. ತಾರು ಓದಿ ಅವಳು ಖಿನ್ನಳಾದದ್ದು ಕಂಡು, "ಏನು ಸಮಾಚಾರ?" ಎಂದು ಮಣಿಬೆನ್ ಕೇಳಿದಳು.

"ಸುಹೃದನಿಗೆ ಜಡ್ಡಾಗಿದೆ," ಎಂದು ಅವಳು ಹೇಳಿ ತಾರನ್ನು ಮಣಿಬೆನ್‌ಳ ಕೈಗೆ ಕೊಟ್ಟಳು. ಮಣಿಬೆನ್ ತಾರನ್ನೋದಿದಳು. ರೋಗ, ಡಾಕ್ಟರು, ಔಷಧಗಳ ವಿಚಾರವಾಗಿ ಅವರಿಬ್ಬರೂ ಮಾತಾಡತೊಡಗಿದರು.

ನಾವೆಲ್ಲ ಶಾಂತರಾಗಿ ಕುಳಿತಿದ್ದೆವು. ನಮ್ಮ ಆನಂದ–ಉತ್ಸಾಹಗಳು ತಣ್ಣಗಾಗಿದ್ದವು.

ಮರುದಿನ ಹೊರಗಡೆ ಹೋದಾಗ ನಾವೆಲ್ಲ ಮುಕ್ತ ಮನಸ್ಸಿನಿಂದ, ಆನಂದದಿಂದ ಮಾತಾಡತೊಡಗಿದೆವು. ಮರುದಿನವೂ ತಾರು ಬಂತು. ಹಿಂದಿನ ದಿನದಂತೆ ನಾವು ಗಾಬರಿಗೊಳ್ಳಲಿಲ್ಲ. ಮುಂದೆ ನಿತ್ಯವೂ ಮಧ್ಯಾಹ್ನ ಸೀತಮ್ಮ ತಾರು ತರುತ್ತಿದ್ದಳು. "ಹೇಗಿದೆ?" ಎಂದಷ್ಟೆ ಕೇಳುತ್ತಿದ್ದೆವು. "ಇನ್ನೂ ಬೇನೆ ಬಿಟ್ಟಿಲ್ಲ. ಹಾಗೆಯೆ ಇದ್ದಾನೆ," ಎಂದು ಮೃದುಲಾಬೆನ್ ಹೇಳುತ್ತಿದ್ದಳು. ನಾವು ಕೊಡಬೇಕಾಗಿದ್ದ ಯಾದಿಯನ್ನು ಮೃದುಲಾಬೆನ್ ತಾನೇ ಕೇಳಿ ಇಸಿದುಕೊಂಡಳು.

ಅಂತೂ ಮಗುವಿನ ಹನ್ನೆರಡನೆಯ ದಿನ ಬಂತು. ಸಂಜೆ ಮಗುವಿಗೆ ಹೆಸರಿಡಬೇಕಾಗಿತ್ತು. "ಆಜಾದ್" ಎಂದು ಹೆಸರಿಡುವುದು ನಿಶ್ಚಯ

ವಾಗಿತ್ತು. ಬಳಿಕ ಚಿಕ್ಕದೊಂದು ಪಾರ್ಟಿ ನಡೆಯುಲಿತ್ತು. ಅದಕ್ಕಾಗಿ ಎರಡು ದಿನಗಳಿಂದ ಸಕ್ಕರೆ, ಬ್ರೆಡ್, ಹಣ್ಣು ಇತ್ಯಾದಿಗಳನ್ನು ಉಳಿಸಿದ್ದೆವು. ಮೃದುಲಾಬೆನ್ ಮಿಠಾಯಿಯನ್ನೂ ತರಿಸಿದ್ದಳು. ಮಧ್ಯಾಹ್ನ ಎಂದಿನಂತೆ ಘಂಟೆ ಬಾರಿಸಿತು. ಸೀತಮ್ಮ ತಾರು ತಂದಳು. ತಾರು ಎಂದಿನಂತಿರದೆ ಮಾಮೂಲಿ ತಾರಿನಂತೆ ಚಿಕ್ಕದಾಗಿತ್ತು. ಓದಿದ ಬಳಿಕ ಮೃದುಲಾಬೆನ್ ಬಚ್ಚಲುಮನೆಗೆ ಹೋದಳು.

ಆ ಚಿಕ್ಕ ಕೋಣೆಯಲ್ಲಿದ್ದ ನಾವು ಏಳು ಜನರಿಗೆ ಬಚ್ಚಲುಮನೆಗೆ ಹೋದರೆ ಮಾತ್ರ ಏಕಾಂತ ಲಭಿಸುತ್ತಿತ್ತು. ಆದ್ದರಿಂದ ನಮ್ಮಲ್ಲಿ ಯಾರಾದರೂ ಒಮ್ಮಿಂದೊಮ್ಮೆ ಬಚ್ಚಲುಮನೆಗೆ ಹೋದರೆ ನಾವು ಶಾಂತರಾಗಿರುತ್ತಿದ್ದೆವು. ಹೋದವರು ಹೊರಗೆ ಬಂದೊಡನೆ ನಾವು ಏನೂ ಅರಿಯದವರಂತೆ ಇದ್ದುಬಿಡುತ್ತಿದ್ದೆವು. ತುಸು ಹೊತ್ತಿನ ಮೇಲೆ ಮೃದುಲಾಬೆನ್ ಹೊರಗೆ ಬಂದಳು. ಜಾಳಿಗೆಯ ಬಳಿ ಸೀತಮ್ಮ ನಿಂತಿದ್ದಳು. ಇಷ್ಟು ಸ್ತಬ್ಧಳಾಗಿ ಅವಳು ನಿಲ್ಲಬಲ್ಲಳೆಂದು ಊಹಿಸಲೂ ಬರುವಂತಿರಲಿಲ್ಲ. ಮೃದುಲಾಬೆನ್ ಬಾಗಿಲ ಬಳಿ ಬಂದಾಗಲೇ ಸೀತಮ್ಮ ಇನ್ನೂ ಹೋಗಿಲ್ಲವೆಂದು ನಮಗೆ ಅರಿವಾಯಿತು. "ಹೊರಗೆ ಮನುಷ್ಯ ನಿಂತಿದ್ದಾನೆ. ನೀವು ಬೇಡಿದ ವಸ್ತುಗಳನ್ನು ತರಬೇಕೆ ಬೇಡವೆ ಎಂದು ಕೇಳುತ್ತಿದ್ದಾನೆ." ಸೀತಮ್ಮ ಹೇಳಿದಳು.

"ಮತ್ತೆ? ತರಬೇಕು. ಇಂದು ರಾತ್ರಿ ಆಜಾದನಿಗೆ ಹೆಸರು ಇಡಬೇಕಲ್ಲವೆ? ಆಗ ನೀನೂ ಬಾ." ಮೃದುಲಾಬೆನ್ ಹೇಳಿದಳು. ನಗುತ್ತ ಮಾತನಾಡುವ ಅವಳ ಸ್ವಭಾವ ನಮಗೆಲ್ಲ ಪರಿಚಿತವಾಗಿತ್ತಾದ್ದರಿಂದ ನಮಗೆ ಏನೂ ವಿಶೇಷವೆನಿಸಲಿಲ್ಲ.

ಅಂದು ಸಂಜೆ ನಮ್ಮೆಲ್ಲರನ್ನು ಒಂದು ತಾಸು ಮೊದಲೆ ಹೊರಗೆ ಬಿಟ್ಟರು. ಬರಾಕಿನ ಸ್ತ್ರೀಯರಿಗೂ ಕಡಿಮೆ ಕೆಲಸ ಕೊಡಲ್ಪಟ್ಟಿತ್ತು. ರಂಗೋಲಿ ಹಿಟ್ಟು ಸಿಕ್ಕಿರದಿದ್ದರೂ ಬಿಳಿ ಚಾಕಿನ ತುಣುಕು ಸಿಕ್ಕಿತ್ತು. ಮಣ್ಣು ಮತ್ತು ಚಾಕಿನಿಂದ ಸುಶೀಲಾಬಾಯಿ ಸುಂದರ ಸ್ವಸ್ತಿಕವನ್ನು ಬರೆದಳು. ಮಂಚದ ಕಾಲು ಮತ್ತು ಕಿಡಕಿಯ ಸರಳುಗಳ ನಡುವೆ ತೊಟ್ಟಿಲು ಕಟ್ಟಿದೆವು. ಆಜಾದನಿಗೆ ತುಂಬ ಮಾತೆಯರು ಸಿಕ್ಕಿದ್ದರು. ಅವನ ತಾಯಿಗೂ ಹೊಸ ಸೀರೆ ಉಡಿಸಿದ್ದೆವು. ನಾವು ತಯಾರಿಸಿದ ವಸ್ತುಗಳನ್ನೆಲ್ಲ ತಾಯಿ–ಮಗುವಿಗೆ ಕಾಣಿಕೆ ಕೊಟ್ಟೆವು. ಮಿಠಾಯಿ ಬಂದಿತ್ತು. ಅದನ್ನೂ ರೊಟ್ಟಿ, ಬ್ರೆಡ್ಡು ಮೊದಲಾದವನ್ನೂ ಎಲ್ಲರಿಗೂ ಬಡಿಸಿದೆವು. ಅಪರಾಧಿ ಸ್ತ್ರೀಯರಿಗೂ ಮಿಠಾಯಿ ಕೊಟ್ಟೆವು.

ರಾತ್ರಿಯಾಯಿತು. ಕತ್ತಲೆಯಾದೊಡನೆ ಸೀತಮ್ಮ ಕೋಣೆ ಮತ್ತು ಬರಾಕುಗಳಿಗೆ ಕೀಲಿ ಹಾಕಿದಳು. ಹಾಸಿಗೆ ಹಾಸಿ ಪ್ರಾರ್ಥನೆ ಮಾಡಿ ಅಂದಿನ ಆನಂದದ ಮಾತುಗಳನ್ನಾಡತೊಡಗಿದೆವು. ನಮ್ಮ ಕುಟುಂಬದಲ್ಲಿಯೆ ಹೊಸ ಬಾಲಕನ ಜನ್ಮವಾದಂತಿತ್ತು. ಮಾತುಗಳು ಮುಗಿಯುತ್ತಲೇ ಇರಲಿಲ್ಲ. ದೀಪ ಆರಿಸಿದ ಬಳಿಕವೂ ಮಾತುಕತೆ ನಡೆಯಿತು. ಆಮೇಲೆ ನಿದ್ದೆ ಆವರಿಸಿತು.

ಮಧ್ಯರಾತ್ರಿಯಾಗಿರಬೇಕು. ನನಗೆ ಒಮ್ಮಿಂದೊಮ್ಮೆ ಎಚ್ಚರವಾಯಿತು. ಸಮೀಪದ ಹಾಸಿಗೆ ಖಾಲಿಯಾಗಿದೆಯೆಂದು ನನಗೆ ಅನಿಸಿತು. ನನ್ನ ಒಂದು ಬದಿಗೆ ಸುಮತಿ ಹಾಗೂ ಇನ್ನೊಂದು ಬದಿಗೆ ಮೃದುಲಾಬೆನ್ನಳ ಹಾಸಿಗೆ ಇತ್ತು. ಸುತ್ತಲೂ ನೋಡಿದೆ. ಕತ್ತಲೆಯಲ್ಲಿ ಕಣ್ಣುಗಳು ನೋಡುವಂತಾದಾಗ ಕಿಡಕಿಯ ಸರಳುಗಳಿಗೆ ತಲೆಯಾನಿಸಿ ಕುಳಿತು ಮೃದುಲಾಬೆನ್ ಅಳುತ್ತಿರುವುದನ್ನು ಕಂಡೆ. ಆದರೆ ಸಪ್ಪಳವೇನೂ ಆಗುತ್ತಿರಲಿಲ್ಲ.

ಅವಳ ಬಳಿ ಹೋಗಬೇಕು ಎನಿಸಿದರೂ ತಡೆದುಕೊಂಡೆ. ಸ್ವಾಭಿಮಾನಿಯಾದ ಅವಳಿಗೆ ಇದು ಸೇರಿಕೆಯಾಗದು. ಅನಧಿಕಾರಿಯೊಬ್ಬಳು ತನ್ನ ಕಣ್ಣೀರನ್ನು ಕಾಣುವುದು ಅವಳಿಗೆ ಸಹಿಸದು. ಅವಳ ದುಃಖ ಹೆಚ್ಚಾದೀತು.

ನಿದ್ದೆ ಬರುವುದು ಸಾಧ್ಯವಿರಲಿಲ್ಲ. ಮಧ್ಯಾಹ್ನ ಬಂದಿದ್ದ ಚಿಕ್ಕ ತಾರು ನೆನಪಾಯಿತು. ನನಗೆ ಅರ್ಥವಾಯಿತು. ಮೃದುಲಾಬೆನ್ನಳ ದುಃಖವನ್ನು ಅರಿತೆ. ಅವಳ ವೇದನೆ ನನ್ನಲ್ಲಿ ವ್ಯಾಪಿಸಿ ಕಣ್ಣಲ್ಲಿ ನೀರು ಬಂತು. ಈಗ ನನ್ನಿಂದ ತಡೆಯುವುದಾಗಲಿಲ್ಲ. ಮೆಲ್ಲಗೆ ಎದ್ದು ಹೋಗಿ ಅವಳ ಮಗ್ಗಲಲ್ಲಿ ಕುಳಿತೆ. ಅವಳ ಕೈಗಳ ಮೇಲೆ ಕೈಯಿಟ್ಟೆ.

ಕಿಡಕಿ ಸರಳುಗಳಿಗೆ ತಲೆಯಾನಿಸಿ ರಾತ್ರಿಯಿಡೀ ಅಳುತ್ತ ಕುಳಿತೆವು.

ನಸುಕಿನ ತಂಗಾಳಿಯು ಮೊದಲನೇ ತೆರೆಯೊಂದಿಗೆ ತನ್ನ ರೂಢಿಯಂತೆ ಮಣಿಬೆನ್ ಎದ್ದಳು. ನಮ್ಮನ್ನು ಕಂಡು ಸನಿಯಕ್ಕೆ ಬಂದಳು. ಈಗ ಮೃದುಲಾಬೆನ್ನಳಿಗೆ ತಡೆಯುವುದಾಗಲಿಲ್ಲ. ಮಣಿಬೆನ್ನಳ ಎದೆಯಲ್ಲಿ ಮುಖವಿಟ್ಟು, "ಮಣಿಬೆನ್, ಸುಹೃದ ತೀರಿಹೋದ," ಎಂದು ಬಿಕ್ಕಿದಳು.

ಈಗ ಎಲ್ಲರೂ ಎಚ್ಚತ್ತಿದ್ದರು. ಎಲ್ಲರಿಗೂ ವಿಷಯ ಗೊತ್ತಾಯಿತು. ಮೃದುಲಾಬೆನ್ನಳ ಬಂಧು ಸತ್ತಿದ್ದು ನಮ್ಮೆಲ್ಲರ ಬಂಧು ಸತ್ತಂತಾಯಿತು; ಅವಳ ಕುಲೀನತೆ, ಸಹನಶಕ್ತಿ, ಉದಾರತೆಗಳ ಬಗ್ಗೆ ನಮ್ಮಲ್ಲಿದ್ದ ಆದರ ಹೆಚ್ಚಿತು.

ನಮ್ಮ ಆನಂದದಲ್ಲಿ ವಿಘ್ನ ಬಾರದಿರಲೆಂದು ಅವಳು ತನ್ನ ದುಃಖವನ್ನು ಬಹಿರಂಗಪಡಿಸಿರಲಿಲ್ಲ. ಮಿಠಾಯಿ ತರಿಸಿ ಹಂಚಿದ್ದಳು. ತನ್ನ ದುಃಖಕ್ಕಿಂತಲೂ ನಮ್ಮ ಸಂತೋಷ ಮಹತ್ವದ್ದೆಂದು ತಿಳಿದಿದ್ದಳು. ನಮಗೆ ಇದು ಅಪೂರ್ವ ಅನುಭವವಾಗಿತ್ತು.

*

ಅದಷ್ಟು ಸಂತೋಷದಿಂದಿರಲು ನಾವೆಲ್ಲ ಪ್ರಯತ್ನಿಸುತ್ತಿದ್ದೆವು. ಎಂದಾದರೊಂದು ದಿನ ... ಯಾವುದಾದರೊಂದು ಕಾಗೆ ಅಲ್ಲಿ ಬರುತ್ತಿತ್ತು. ಒಂದು ಹಕ್ಕಿ ನೋಡಸಿಕ್ಕಿತಲ್ಲ ಎಂದು ಆಗ ನಮಗೆ ಆನಂದವಾಗುತ್ತಿತ್ತು. ಈ ಕಾಗೆ ಕೂಡ ಹೊಸತು ಎಂದು ಅನಿಸುತ್ತಿತ್ತು.

ಒಂದು ರಾತ್ರಿ ಎಲ್ಲ ಕೆಲಸ ಮುಗಿಸಿ ಅಡ್ಡಾದಾಗ ಒಂದು ತುಂಬ ಕರ್ಕಶ ಸ್ವರ ಕೇಳಿಸಿತು. ನಾವೆಲ್ಲ ಎದ್ದು ಕುಳಿತೆವು. ಸುಶೀಲಾಬಾಯಿ ಮುಖ ಕಿವುಚಿ, "ಗೂಗೆ! ಇಲ್ಲಿ ಹೇಗೆ ಬಂತೋ!" ಎಂದಳು.

ಮಣಿಬೆನ್ ಹೇಳಿದಳು, "ನಮ್ಮಲ್ಲಿ ಇದಕ್ಕೆ 'ಚೀಬರಿ' ಎನ್ನುತ್ತೇವೆ. ಇದರ ಕೂಗು ಅಶುಭವೆನ್ನುತ್ತಾರೆ. ಕಳ್ಳರು ಕೂಡ ಕಳ್ಳತನಕ್ಕೆ ಹೊರಟಾಗ ಇದರ ಧ್ವನಿ ಕೇಳಿದರೆ ಮುಂದಕ್ಕೆ ಹೋಗುವುದಿಲ್ಲ."

ಅದೇನೇ ಇರಲಿ, ಗೂಗೆಯ ಕೂಗು ಮಾತ್ರ ತುಂಬ ಕರ್ಕಶವಾಗಿತ್ತು. ನೀರವ ರಾತ್ರಿಯಲ್ಲಿ ಕಿವಿಯನ್ನು ಭೇದಿಸುವ ಈ ಕರ್ಕಶ ಸ್ವರ ಕೇಳಿ ಭಯಭೀತರಾದೆವು. ನಿದ್ದೆ ಹೇಗೆ ಬರಬೇಕು?

ಮಾತಾಡುತ್ತ ಮಾತಾಡುತ್ತ ನಾನಿದುವರೆಗೂ ಗೂಗೆಯನ್ನು ನೋಡಿಲ್ಲವೆಂದೆ. "ನೋಡಿರದಿದ್ದರೇನೂ ಕೆಡಲಿಲ್ಲ. ಏನೂ ಹಾನಿಯಾಗಲಿಲ್ಲ," ಎಂದು ಸುಶೀಲಾಬಾಯಿ ನನ್ನನ್ನು ಗದರಿಕೊಂಡಳು. ನಮ್ಮ ವ್ಯರ್ಥ ಮಾತುಗಳಿಂದ ಅವಳು ಖತಿಗೊಂಡಿದ್ದಳು. ನಾವು ಸುಮ್ಮನಾಗಿ ಹಾಡನ್ನು ಹೇಳಲು ಅವಳಿಗೆ ಆಗ್ರಹ ಮಾಡಿದೆವು. ದ್ರೌಪದಿ ಮತ್ತು ಕೃಷ್ಣರ ಪ್ರೇಮದ ಒಂದು ಉದ್ದನ್ನ ಆಖ್ಯಾನ ಗೀತೆ ರುಕ್ಮಿಣಿ ಹಾಡಿದಳು. ಅವಳ ಮಧುರ ಧ್ವನಿ ಕೇಳುತ್ತ ಗೂಗೆಯ ವಿಚಾರ ಮರೆ



ಮೃದು ಮಧುರವಾಗಿ ಮುದ್ದಾಡುವ ತಂಗಾಳಿಯೆ, ಅಥವಾ ಮಲ್ಲಿಗೆಯ ಪರಿಮಳದ ಪ್ರೇಮಾಲಿಂಗನವೇ

ಬಹಳ ಸಮಯ ಉಳಿಯುವ ಮಲ್ಲಿಗೆಯ ಪರಿಮಳ...
ಸಮಯೋಚಿತವಾದ ಸಮೃದ್ಧ ಲಾವಣ್ಯ—ಎರಡನ್ನೂ ಜಯ್
ಸೌಂದರ್ಯ-ಸಾಬೂನು ನಿಮ್ಮದನ್ನಾಗಿ ಮಾಡುವುದು.
ಅದರ ಕೋಮಲ ನೊರೆ ಹಾಗೂ ಅದರಲ್ಲಿ ಕೊನೆಯ
ವರೆಗೆ ಉಳಿಯುವ ಪರಿಮಳ ನಿಮ್ಮ ಚರ್ಮಕ್ಕೆ
ಹಿತಕರ! [illegible]
[illegible] ಜಯ್
ಉಪಯೋಗಿಸಿ—ಫಾಯಿಲ್ ರ್ಯಾಪರ್ ಇರುವ
ಏಕಮಾತ್ರ ಸೌಂದರ್ಯ-ಸಾಬೂನು ಅದು!

ನಿಮ್ಮ ಸೌಂದರ್ಯ ಪ್ರಫುಲ್ಲಿತವಾಗಲು ಜಯ್ ಸೌಂದರ್ಯ-
ಸಾಬೂನು—ನಿಮ್ಮ ಪ್ರೀತಿಯ ಮಲ್ಲಿಗೆಯ ಪರಿಮಳದೊಂದಿಗೆ



ಟಾಟಾ ತಯಾರಿಕೆ

ತೆವು. ಮಧ್ಯರಾತ್ರಿಯ ನಂತರ ನಮಗೆ ನಿದ್ರೆ ಬಂತು.

ಮುಂದೆ ನಾಲ್ಕೈದು ದಿನ ಆರಾಮಾಗಿ ಕಳೆದೆವು. ಕೆಲಸ ಮುಗಿಸಿದ ಬಳಿಕ ಅಜಾದನನ್ನು ಎತ್ತಿ ಆಡಿಸುತ್ತಿದ್ದೆವು. ಒಂದೆರಡು ಕನ್ನಡ ಶಬ್ದ ಕಲಿಯಲು ಪ್ರಯತ್ನಿಸುತ್ತಿದ್ದೆವು. ಸುಶೀಲಾಬಾಯಿ ಈಗ ದಿನಾಲು ಮಣ್ಣಿನಲ್ಲಿ ಏನಾದರೊಂದು ದೊಡ್ಡ ಚಿತ್ರ ಬರೆಯುತ್ತಿದ್ದಳು. ಒಂದು ದಿನ ಕಮಲದಲ್ಲಿದ್ದ ಲಕ್ಷ್ಮೀದೇವಿಯ ಚಿತ್ರ ಬರೆದಿದ್ದಳು. ನಾನು ಅದನ್ನು ನೋಡುತ್ತ ಕುಳಿತಿದ್ದಾಗ ಸುಮತಿ ಬಂದು. "ನೋಡಬೇಕೆಂದಿದ್ದರೆ ಬಾ." ಎಂದು ಕರೆದಳು.

ಎದ್ದು ಕೋಣೆಯ ಬಳಿಗೆ ಬಂದಾಗ, "ಮೇಲೆ ನೋಡು. ಅದೇನು?" ಎಂದಳು.

ಕಲ್ಲಿನಲ್ಲಿ ಕಟೆದ ಒಂದು ದುಂಡಾದ ಪಕ್ಷಿಯಂಥದೊಂದು ಅಲ್ಲಿ ಕುಳಿತಿತ್ತು. ಜೊತೆಯಲ್ಲಿ ಅದರ ಮೂರು ಮರಿಗಳಿದ್ದವು. ಅವು ಅಲುಗಾಡುತ್ತಿರಲಿಲ್ಲ. ಕೂಗುತ್ತಿರಲಿಲ್ಲ. ಪಿಳಿಪಿಳಿ ನೋಡುತ್ತಿದ್ದವಷ್ಟೆ. ಅವು ಕಣ್ಣನ್ನಂತೂ ಮುಚ್ಚಲಾರವಲ್ಲ. ಈ ಹೊಸ ಅತಿಥಿಗಳು ಕುರೂಪಿಗಳಲ್ಲದಿದ್ದರೂ ನೋಡಿದರೆ ಮನಸ್ಸು ಮೆಚ್ಚುತ್ತಿರಲಿಲ್ಲ. ನಾವು ಅನುತಾಯಿಯನ್ನು ಕರೆತಂದೆವು. ಅವಳು ಕೂಡಲೇ. "ಇದು ಗೂಗೆ. ನೋಡಬೇಕೆನ್ನುತ್ತಿದ್ದಿ. ನೋಡಿದಿಯೋ ಇಲ್ಲೋ. ನಿನ್ನೆಲ್ಲ ಕಾಮನೆಗಳನ್ನು ಪರಮಾತ್ಮ ಪೂರೈಸಬೇಕೆಂದಿದ್ದಾನೆ," ಎಂದಳು.

ಇಷ್ಟರಲ್ಲಿ ಊಟ ತರಲು ನಾವಲ್ಲಿಂದ ಹೋದೆವು. ಗೂಗೆ ಕಂಡದ್ದನ್ನು ನಾವು ಯಾರಿಗೂ ಹೇಳಲಿಲ್ಲ. ಗೂಗೆಯ ಈ ಪರಿವಾರ ಎಲ್ಲಿಂದ ಬಂತು? ನಮ್ಮ ಕೋಣೆಯ ಛತ್ತಿನ ಮೇಲೆ ಅದರ ಗೂಡು ಇದೆಯೆ? ಅವೇನು ಅಲ್ಲಿ ಕುಳಿತು ತಪಸ್ಸು ಮಾಡುತ್ತಿವೆಯೋ ಅಥವಾ ನಮ್ಮ ಜೀವನದ ಕ್ಷಣಗಳನ್ನು ಎಣಿಕೆ ಹಾಕುತ್ತಿವೆಯೋ? ಶಂಕೆ–ಕುಶಂಕೆಗಳ ಜೊತೆಗೆ ಮೋಜೂ ಅನಿಸುತ್ತಿತ್ತು.

ಮರುದಿನ ಕೋಣೆಯ ಹೊರಗೆ ಬಂದೊಡನೆ ದೃಷ್ಟಿ ಮೇಲೆ ಹೋಯಿತು. ಗೂಗೆಯ ಪರಿವಾರ ಅಲ್ಲಿ ಹಾಜರಿತ್ತು. ನಿನ್ನೆಯಂತೆಯೇ ಪಿಳಿಪಿಳಿ ನೋಡುತ್ತಿದ್ದವು. ಮಧ್ಯಾಹ್ನ ಎಲ್ಲಿ ಹೋಗುತ್ತವೆ? ರಾತ್ರಿಯೆಲ್ಲ ಹೀಗೆಯೇ ಇಲ್ಲಿ ಕುಳಿತಿರುವವೆ? ಹೀಗೆಲ್ಲ ವಿಚಾರ ಮಾಡುತ್ತಲೇ ಕೆಲಸ ಮಾಡತೊಡಗಿದೆವು. ಏನಾದರೂ ಕೆಲಸ ಮಾಡಿ ಮುಗಿಸಬೇಕಲ್ಲ.

ನಾವು ಬಟ್ಟೆ ತೊಳೆದು ಒಣಗಿಸುತ್ತಿದ್ದಾಗ ಸುಶೀಲಾಬಾಯಿ ಚಿತ್ರ ಬರೆಯಲು ಕುಳಿತಳು.

ಬಟ್ಟೆ ಒಣಗಿಸಿ ಊಟದ ಪಾತ್ರೆಗಳನ್ನು ಎತ್ತಿಕೊಳ್ಳುತ್ತಿದ್ದಾಗ ಹೊರಗೆ ತಾಟು ಬಡಿದ ಸಪ್ಪಳ ಕೇಳಬರತೊಡಗಿತು. ಕೋಲಾಹಲವೂ ಕೇಳಿಸಿತು. ನಾವು ಪಾತ್ರೆ ಹಿಡಿದುಕೊಂಡು ಗೇಟಿನ ಬಳಿ ಬಂದೆವು. ಅಲ್ಲಿಂದ ಹೆಚ್ಚು ಗದ್ದಲ ಬರುತ್ತಿತ್ತು. ಹೊರಗಿನಿಂದ ಜನ ಕೂಗಿ ಏನೋ ಹೇಳುತ್ತಿದ್ದರು. ಅವರೇನನ್ನುತ್ತಾರೆಂದು ತಿಳಿಯಲು ಯತ್ನಿಸಿದೆವು. ಸುಮತಿ ಕೂಡಲೇ ಎಲ್ಲರೂ ಬಟ್ಟೆ ಒಗೆಯುತ್ತಿದ್ದ ಸ್ಥಳಕ್ಕೆ ಹೋಗಿ ಅಲ್ಲಿಂದ ಕನ್ನಡ ಮಾತಾಡುವ ಭಗಿನಿಯರನ್ನು ಕರೆತಂದಳು. ಅವರು ಹೇಳಿದರು. "ಇಂದು ಯಾರೂ ಊಟ ಸ್ವೀಕರಿಸಬಾರದು ಎಂದು ಹೇಳುತ್ತಿದ್ದಾರೆ, ಕಾರಣವೇನು ಎಂದು ಹೇಳಿದ್ದು ಸರಿಯಾಗಿ ತಿಳಿಯುತ್ತಿಲ್ಲ."

ಏನಾಗಿರಬಹುದು? ಹೊರಗೆ ಏನಾದರೂ ಘೋರ ಅತ್ಯಾಚಾರವಾಗಿದೆಯೇ? ಯಾರಾದರೂ ಸತ್ತಿದ್ದಾರೆಯೇ? ಇಷ್ಟು ದೊಡ್ಡ ಪ್ರಮಾಣದಲ್ಲಿ ಅನ್ನ ತ್ಯಾಗ ಮಾಡುವಂಥ ಪ್ರಸಂಗವಾದರೂ ಏನಿರಬಹುದು?

ಸಮಯವಾಗಿದ್ದರೂ ಊಟ ಬಂದಿರಲಿಲ್ಲ. ಅಷ್ಟರಲ್ಲಿ ಗದ್ದಲ ಶಾಂತವಾಯಿತು. ಒಬ್ಬ ಗಟ್ಟಿಯಾಗಿ ಇಂಗ್ಲೀಷಿನಲ್ಲಿ, "ಏನೂ ತಿನ್ನಬೇಡಿರಿ. ಬಿಸಿಲಿನಲ್ಲಿ ನಿಲ್ಲಬೇಡಿರಿ. ಜೇಲಿನಲ್ಲಿ ಕಾಲರಾ ಹಬ್ಬಿದೆ. ನಿನ್ನೆ ರಾತ್ರಿ ೭೫ ಜನ ಸತ್ತರು. ೨೦೦ ಜನ ರೋಗದಿಂದ ಬಳಲುತ್ತಿದ್ದಾರೆ," ಎಂದ. ಈ ವಿಪತ್ತು ಅನಿರೀಕ್ಷಿತವಾಗಿತ್ತು.

ನಾವೆಲ್ಲ ಕೋಣೆಗೆ ಮರಳಿ ತೆಪ್ಪಗೆ ಕುಳಿತೆವು. ಇಷ್ಟೆಲ್ಲ ನಡೆದಿದ್ದಾಗ ಸುಶೀಲಾಬಾಯಿ ತನ್ನ ಚಿತ್ರ ಬಿಡಿಸುವುದರಲ್ಲೇ ಮಗ್ನಳಾಗಿದ್ದಳು. ಕಷ್ಟ ಲೀಲೆಯ ಹಾಡುಗಳನ್ನು ಅನ್ನುತ್ತಲಿದ್ದಳು. ಬಿಸಿಲು ಏರುತ್ತಿತ್ತು. ಸೆಕೆ ಹೆಚ್ಚುತ್ತಲಿತ್ತು.

ಹೊರಗಿನ ಮನುಷ್ಯ, "ಬಿಸಿಲಿನಲ್ಲಿ ಇರಬೇಡಿರಿ," ಎಂದು ಕೂಗಿ ಹೇಳಿದ್ದ.

ನಾನು ಸರ್ರನೆ ಹೊರಗೆ ಓಡಿದೆ. ಹೋದವಳೇ ಚೀರಿದೆ. ಸುಶೀಲಾಬಾಯಿ ನೆಲದ ಮೇಲೆ ಎಚ್ಚರ ತಪ್ಪಿ ಬಿದ್ದಿದ್ದಳು. ಅವಳಿಗೆ ವಾಂತಿಯಾಗಿತ್ತು. ಮಣ್ಣಿನಲ್ಲಿ ಕಾಲೀಯ ಮರ್ದನದ ಕಾಲೀಯ ಹೆಡೆ, ಕೃಷ್ಣನ ಪಾದಗಳು ಎಲ್ಲ ಆವಿರ್ಭೂತವಾಗಿದ್ದವು. ಕೃಷ್ಣನ ಮುಖವನ್ನು ಮಾತ್ರ ಬಿಡಿಸುವುದು ಉಳಿದಿತ್ತು.

ನಾನು ಚೀರಿದ್ದು ಕೇಳಿ ಎಲ್ಲರೂ ಓಡಿ ಬಂದರು. ಸುಶೀಲಾಬಾಯಿಯ ಅವಸ್ಥೆ ನೋಡಿದ ಮಣಿಬೆನ್ ನಮಗೆಲ್ಲರಿಗೂ ಒಳಗೆ ಹೋಗಹೇಳಿದಳು. ನಾವು ಹೋಗದಿರಲು ಗದರಿಸಿ ಒಳಗೆ ಕಳಿಸಿದಳು. ಅವಳು ಮತ್ತು ಮೃದುಲಾಬೆನ್ ಸುಶೀಲಾಬಾಯಿಯನ್ನು ಆಸ್ಪತ್ರೆ ಕೋಣೆಯಲ್ಲಿ ಮಲಗಿಸಿದರು. ಗೇಟಿನ ಬಳಿಯ ಗಂಟೆಯನ್ನು ಬಾರಿಸಲು ಮೃದುಲಾಬೆನ್ ಓಡಿದಳು.

ಮಣಿಬೆನ್ ಸುಶೀಲಾಬಾಯಿಯನ್ನು ಸ್ವಚ್ಛಗೊಳಿಸತೊಡಗಿದಳು. ಸುಶೀಲಾಬಾಯಿಗೆ ಮತ್ತೆ ವಾಂತಿಯಾಯಿತು. ಮಣಿಬೆನ್ ಸ್ವಚ್ಛ ಅರಿವ ಸಾಬೂನು ಮತ್ತು ಡೆಟಾಲುಗಳನ್ನು ತರಹೇಳಿದಳ ಅನುತಾಯಿ ಇವೆಲ್ಲವನ್ನೂ ಅವಳಿಗೆ ಕೊಟ ಬಂದಾಗ ಅವಳ ಕಣ್ಣುಗಳೇ ನಮಗೆಲ್ಲವನ ಹೇಳಿದವು. ಒಂದು ಅಕ್ಷರವನ್ನೂ ಆಡದೆ ನಾವ ಕಣ್ಣೊರಸಿಕೊಳ್ಳುತ್ತ ಕುಳಿತೆವು.

ಊಟ ತರಲು ನಾವು ಯಾರೂ ಹೋಗಲಿ ವಾದ್ದರಿಂದ ಜೇಲ್ ವಾರ್ಡರನೇ ತಂದು ಜಗಲಿಯ ಮೇಲಿಟ್ಟಿದ್ದ. "ಪಾಲಾಪಾಣಿ"ಯ ಉಗ್ರವಾಸ ಮೂಗಿಗೆ ಬಂದು ಬಡಿಯುತ್ತಿತ್ತು. ಈ ಅ ಬ್ರಹ್ಮ, ಈ ಜೀವನ, ನಮ್ಮ ಪರವಶತೆ ಇವೆಲ್ಲ ಗಳ ಬಗ್ಗೆ ತೀವ್ರ ತಿರಸ್ಕಾರದಿಂದ ಮನಸ್ಸು ಪ ಣ್ಣವಾಗಿತ್ತು.

ತುಸು ಹೊತ್ತಿನ ಮೇಲೆ ಗಂಟೆ ಬಾರಿಸಿತ ಗೇಟಿನ ಬಾಗಿಲು ತೆರೆದು ಒಬ್ಬ ದೊಡ್ಡ ಡಾಕ್ಟ ಜೇಲಿನ ಇತರ ನಾಲ್ಕೈದು ಡಾಕ್ಟರರು ಮತ ಕೆಲ ಅಧಿಕಾರಿಗಳು ಒಳಗೆ ಬಂದರು. ಮೊದಲ ಅವರು ಆಸ್ಪತ್ರೆಗೆ ಹೋದರು. ಹಿಂದಿನಿಂ ಸ್ಟ್ರೆಚರ್ ಬಂತು. ಸುಶೀಲಾಬಾಯಿಯನ್ನು ಅದ

ಮೇಲೆ ಮಲಗಿಸಿ ಹೊತ್ತೊಯ್ದರು. ಭೀತರಾದ ನಾವು ನೋಡುತ್ತ ಜಗಲಿಯ ಮೇಲೆ ನಿಂತಿದ್ದೆವು. ...ರ ಜೊತೆಗೆ ಹೊರಟ ಮಣಿಬೆನ್ ಅವ ...ರಾಕಿಗೆ ಕರೆದೊಯ್ದಳು. ಅವಳ ... ಸರಿಯಾಗಿತ್ತು. ಅಲ್ಲಿ ಮೂರು ಭಗಿನಿಯರಿಗೆ ವಾಂತಿಯಾಗಿತ್ತು. ಅವರ ಬಳಿ ಕ್ರಿಮಿನಾಶಕ ಅಥವಾ ಇನ್ನಾವ ಔಷಧವೂ ಇರಲಿಲ್ಲ. ವ್ಯಾಧಿ ಪೀಡಿತರನ್ನು ಕೂಡಲೇ ಕರೆದೊಯ್ಯಲಾಯಿತು. ಆ ಕೋಣೆಯ ಮಗ್ಗಲಿಗೆ ಇದ್ದ ಅಂಗಳದಲ್ಲಿ ಮಣಿಬೆನ್ ಒಂದು ಹೊಂಡವನ್ನು ತೋಡಿಸಿದಳು. ಅದರಲ್ಲಿ ಹೊಲಸಾದ ಬಟ್ಟೆಗಳನ್ನು ಸುಡಿಸಬೇಕೆಂದಳು. ಕೈದಿಗೆ ಕಡ್ಡಿ ಕೊಡಬೇಕೆ ಬಾರದೆ ಎಂದು ಚರ್ಚೆಯಾಗಿ ಕೊನೆಗೆ, ಸೀತಮ್ಮ ಬೆಂಕಿ ಹಚ್ಚಿದಳು. ಅವಳು ಬೆಂಕಿ ಹಚ್ಚುತ್ತಿದ್ದಂತೆ ಒಳಗಿಂದ ಹೊಲಸಾದ ಬಟ್ಟೆಗಳು ಬರತೊಡಗಿದವು.

ಡಾಕ್ಟರರು ನಮಗೆಲ್ಲ ಇನಾಕ್ಯುಲೇಶನ್ ಮಾಡುವ ಸಿದ್ಧತೆ ನಡೆಸಿದರು. ದೊಡ್ಡ ಡಾಕ್ಟರರ ಖುರ್ಚಿಯನ್ನು ನಮ್ಮ ಜಗಲಿಯ ಮೇಲೆ ತಂದಿಟ್ಟರು. ಅವರು ಬಂದು ಕುಳಿತ ಮೇಲೆ, "ಡಾಕ್ಟರರೇ; ಈ ಊಟವನ್ನಷ್ಟು ನೋಡುವಿರಾ?" ಎಂದೆ. ಬ್ರೆಡ್ ಕತ್ತರಿಸುವ ಕೆಲಸ ನನ್ನದಾಗಿತ್ತು. ಒಳಗಿನಿಂದ ಚಾಕು ತಂದು ಬ್ರೆಡ್ ಕತ್ತರಿಸಿ ಡಾಕ್ಟರರ ಕೈಗೆ ಕೊಟ್ಟೆ. ಪ್ರತಿಯೊಂದು ತುಂಡಿನಲ್ಲೂ ಹುಳಗಳಿದ್ದವು. "ನಿತ್ಯವೂ ಹೀಗೆಯೇ ಇರುತ್ತದೆಯೇ?" ಡಾಕ್ಟರರು ಕೇಳಿದರು. "ಹೌದು. ನಾನು ದಿನಾಲೂ ಸ್ವಚ್ಛ ಮಾಡಿ ಇಡುವುದರಿಂದ ಇತರರಿಗೆ ಇದು ಗೊತ್ತಾಗಿಲ್ಲ." ಎಂದೆ.

"ಮತ್ತೆ ನೀನು?"

"ನಾನೂ ತಿನ್ನುತ್ತೇನೆ."

"ಇದನ್ನು ಹೇಗೆ ತಿನ್ನುತ್ತಿ?"

"ನಾನು ಸತ್ಯಾಗ್ರಹಿ," ಎಂದು ಗರ್ವದಿಂದ ಅಂದೆ.

ಊಟದ ಇತರ ಸಾಮಾನುಗಳನ್ನು ಡಾಕ್ಟರರು ಪರೀಕ್ಷಿಸಿದರು. ಅಲ್ಯುಮಿನಿಯಮ್ಮಿನ ಕೊಳಕು ಪಾತ್ರೆಗಳು, ತಿನಿಸಿನ ಮೇಲೆ ಕುಳಿತ ಧೂಳು, ಬೆಂದ ಹುಳಗಳು...ಕಾಲಿನಿಂದೊದ್ದು ಡಾಕ್ಟರರು ಪಾತ್ರೆಯನ್ನುರುಳಿಸಿದರು. "ಪಾಲಾಪಾಣಿ"ಯ ಗಡಿಗೆಯನ್ನು ಒದ್ದು ಒಡೆದುಹಾಕಿದರು. ಸಂಬಂಧಪಟ್ಟ ಎಲ್ಲರನ್ನೂ ಕಠಿಣವಾಗಿ ಬಯ್ದರು.

ನಾವೆಲ್ಲ ಇನಾಕ್ಯುಲೇಶನ್ ಮಾಡಿಸಿಕೊಂಡೆವು. ಮೃದುಲಾಬೆನ್ ಮತ್ತು ಮಣಿಬೆನ್ ಮಾತ್ರ ಮಾಡಿಸಿಕೊಳ್ಳಲಿಲ್ಲ. ಇಬ್ಬರೂ ರೋಗಿಗಳನ್ನು ಉಪಚರಿಸುವ ಕೆಲಸ ಮಾಡುತ್ತಿದ್ದರೂ ತಾವು ಇನಾಕ್ಯುಲೇಶನ್ ಮಾಡಿಸಿಕೊಳ್ಳಲಿಲ್ಲ.

ಈಗ ಸರಸರ ವೈದ್ಯಕೀಯ ಸಹಾಯ ಒಂದು ತಲುಪಿತು. ಸ್ಟ್ರೆಚರ್ ತಂದು ರೋಗಿಗಳನ್ನು ಸಾಗಿಸಲಾಯಿತು. ಕ್ರಿಮಿನಾಶಕ ಔಷಧಿಯ ಡಬ್ಬಿಗಳು ಬಂದವು. ನಿಂಬೆಹಣ್ಣು, ಉಳ್ಳಾ ಗಡ್ಡೆಗಳು ರಾಶಿಯಾಗಿ ಬಂದವು. ಊಟದ ಮೊದಲು ಕುಡಿಯುವ ಔಷಧಿ ಬಂತು. ಒದ್ದೆ ಬಟ್ಟೆಗಳನ್ನು ಒಣಗಿಸಲು ಹಗ್ಗಗಳು ಕಟ್ಟಲ್ಪಟ್ಟವು. ಕೆಲಕಾಲದ ಮೊದಲು ಓರ್ವಳು ಹಗ್ಗದಿಂದ ಫಾಶಿ ಹಾಕಿಕೊಂಡಿದ್ದಳು. ಆ ನಂತರ ಹಗ್ಗಗಳನ್ನು ಕಟ್ಟುತ್ತಿರಲಿಲ್ಲ. ಬಚ್ಚಲು ಮತ್ತು ಪಾಯಖಾನೆಯ ಬಾಗಿಲುಗಳೂ ಅರ್ಧಕ್ಕೆ ಕತ್ತರಿಸಲ್ಪಟ್ಟಿದ್ದವು.

ಚಕ್ರ ಜೋರಾಗಿ ತಿರುಗತೊಡಗಿತು. ಆದರೂ ಸ್ಟ್ರೆಚರುಗಳು ಸಾಲುಗಟ್ಟಿರುತ್ತಿದ್ದವು. ಮಗ್ಗಲ ಕೋಣೆಯಲ್ಲಿ ಇಬ್ಬರು ಮೃತಪಟ್ಟರು. ದೊಡ್ಡ ಬರಾಕಿನಲ್ಲಿ ಯಾರು ಯಾರು ಸತ್ತರು ತಿಳಿಯಲಿಲ್ಲ. ನಮ್ಮ ಕೋಣೆಯ ಬಾಗಿಲು ತೆರೆದೇ ಇರುತ್ತಿತ್ತು. ಬರಾಕನ್ನು ಮುಚ್ಚಲು ಕೂಡ ಯಾರಿಗೂ ಪುರಸತ್ತಿರಲಿಲ್ಲ.


ಮಧ್ಯಾಹ್ನ ಎರಡನೆಯ ಊಟ ಬಂತು. ಜೊತೆಯಲ್ಲಿ ಒಬ್ಬ ಡಾಕ್ಟರರೂ ಬಂದರು. ಹಸಿದ ಹೊಟ್ಟೆಯಲ್ಲಿ ಯಾರೂ ಇರಬಾರದು ಎಂದು ನಮಗೆ ತಿಳಿಸಿ ಹೇಳಲಾಯಿತು. ಊಟ ಚೆನ್ನಾಗಿದ್ದರೂ ಗಂಟಲಲ್ಲಿ ಇಳಿಯುತ್ತಿರಲಿಲ್ಲ. ಹಾಗೂ ಹೀಗೂ ತುಸು ತಿಂದೆವು. ಮೃದುಲಾಬೆನ್ ಮತ್ತು ಮಣಿಬೆನ್ನರು ಕೋಣೆಗೆ ಬಂದರು. ಇಬ್ಬರೂ ಸ್ನಾನ ಮಾಡಿ ಊಟ ಮಾಡಿದರು. ಮಣಿಬೆನ್ ಕೈತೊಳೆಯುತ್ತಿದ್ದಾಗಲೇ ಬರಾಕಿನಿಂದ ಇಬ್ಬರು ಬಂದು, "ಆಜಾದನ ತಾಯಿಗೆ ವಾಂತಿಯಾಗಿದೆ" ಎಂದರು.

ಸಹಜ ಸುಂದರವಾಗಿ ಕಾಣಲು



ಆಶಾ

ಅಲಂಕಾರ ಪ್ರಸಾಧನಗಳು



ಆಶಾ ಫೇಸ್ ಪೌಡರ್‌ನ ಹೊಸ ಫಾರ್ಮ್ಯುಲಾ ನಿಮ್ಮ ಮುಖದ ಸಹಜ ಸೌಂದರ್ಯವು ಎದ್ದು ಕಾಣುವಂತೆ ಮಾಡುತ್ತದೆ. ನಿಮ್ಮ ಚರ್ಮಕ್ಕೆ ಗಂಟೆಗಟ್ಟಲೆ ಹದವಾದ ಕಾಂತಿಯನ್ನು ನೀಡುತ್ತದೆ. ನಾಲ್ಕು ಮೋಹಕ ಬಣ್ಣಗಳಲ್ಲಿ ಅನುರೂಪವಾದುದನ್ನು ಆರಿಸಿರಿ— ನ್ಯಾಚುರಲ್, ರೇಚೆಲ್, ಪೀಚ್ ಮತ್ತು ಬಿಳಿ ಬಣ್ಣಗಳು.

ಆಶಾ ವ್ಯಾನಿಸಿಂಗ್ ಕ್ರೀಮ್ ಉಪಯೋಗಿಸಿ ನಿಮ್ಮ ಚರ್ಮವನ್ನು ಕೋಮಲ, ತಾಜಾ, ನಯ ಮತ್ತು ಅಂದವಾಗಿ ಇಡಿರಿ. ಸಹಜ ಸುಂದರವಾಗಿ ಕಾಣಲು ಪೌಡರ್ ಹಚ್ಚಿಕೊಳ್ಳುವ ಮೊದಲು ತೊಡೆದುಕೊಳ್ಳಲು ಅನುಪಮವಾಗಿದೆ.

ಆಶಾ ಕಾಡಿಗೆ ನಿಮ್ಮ ಮೋಹಕ ನಯನಗಳನ್ನು ತಂಪಾಗಿ ಮತ್ತು ವಿಶ್ರಾಂತವಾಗಿ ಇಡುವುದು.


ನಿಮ್ಮ ಮುಖಾಲಂಕಾರಕ್ಕೆ ಮುಕುಟಪ್ರಾಯವಾದ ತಿಲಕವಿಡಲು ಆಶಾ ಕುಂಕುಮ ಉಪಯೋಗಿಸಿರಿ. ದ್ರವರೂಪದ ಅಥವಾ ಅಂಟಿನಂತಹ, ಮೂರು ಬೇರೆ ಬೇರೆ ಬಣ್ಣಗಳಲ್ಲಿ ದೊರೆಯುತ್ತದೆ.

Asha

STUSA709

ತಾಟನನ್ನು ತೊಳೆಯಲು ನನಗೆ ಹೇಳಿ ಮಣಿ-ಬೆನ್ ಅನುತಾಯಿಗೆ ಹೇಳಿದಳು. "ನೀನು ಅಜಾದನನ್ನು ಈ ಕೋಣೆಗೆ ತೆಗೆದುಕೊಂಡು ಬಾ." ಆಮೇಲೆ ಆಸ್ಪತ್ರೆಗೆ ಹೋದಳು. ನಾವು ಅಜಾದ ನನ್ನು ಮಲಗಿಸುವ ಪ್ರಯತ್ನ ಮಾಡುತ್ತಿದ್ದೆವು. ಅಗಲೇ ಸುಮತಿ ಒಮ್ಮೆಲೆ ಹಾಸಿಗೆಯ ಮೇಲೆ ಬಿದ್ದಳು. ನಾನು ಹೋಗಿ ಏನಾಯಿತೆಂದು ಕೇಳುವುದರೊಳಗಾಗಿ ಅವಳು ಏಳುತ್ತ ಬೀಳುತ್ತ ಬಚ್ಚಲುಮನೆಗೆ ಹೋದಳು. ಅಲ್ಲಿ ಅವಳಿಗೆ ವಾಂತಿಯಾಯಿತು.

ಅವಳು ಮೊದಲಿಂದಲೂ ಕ್ಷೀಣಕಾಯಳಾಗಿ ದ್ದಳು. ಒಂದು ಸಲ ವಾಂತಿಯಾದುದಕ್ಕೆ ಅವಳು ಬೆಳ್ಳಗೆ ಬಣ್ಣಗೆಟ್ಟುಹೋದಳು. "ದೇವರೇ, ಇವಳು ಕೂಡ ಸ್ಟ್ರೆಚರಿನ ಮೇಲೆ ಮಲಗಿ ಹೋಗುವಳೇ ?" ಎಂದು ಮನದಲ್ಲಿಯೆ ಆರ್ತ ಸ್ವರ ಹೊರಟಿತು. ಜೇಲಿನಿಂದ ಬಂದ ಮೇಲೆ ಇದೀಗ ಮೊದಲ ಬಾರಿ ಭಯ ನನ್ನಲ್ಲುಂಟಾ ಯಿತು. ಗಟ್ಟಿಯಾಗಿ ಅಳುವ ಮನಸ್ಸಾಯಿತು. ಅಂತೂ ಇಂತೂ ಸುಮತಿಯನ್ನು ಮತ್ತೆ ಹಾಸಿಗೆಗೆ ಕರತಂದೆ. ಅವಳು ಕಣ್ತೆರೆದು ನನ್ನ ಮುಖ ನೋಡಿ ನಕ್ಕು. "ಅಯ್ಯೋ! ನೀನೇಕೆ ಗಾಬರಿ ಯಾಗುತ್ತೀ? ನಾನು ಸದಾ ರೋಗಿ. ನನಗೆ


ಫಾಸ್ಫೋಮಿನ್
ಕುಟುಂಬದ ಎಲ್ಲರಿಗೂ ಆರೋಗ್ಯಕರ
ಸಾಮರ್ಥ್ಯವನ್ನು ...ತ್ತದೆ
ದೇಹದ ಪ್ರತಿರೋಧಕ ಶಕ್ತಿಯನ್ನು
ಬಲಪಡಿಸುತ್ತದೆ.
SQUIBB
Phosfomin
MULTIPLE GLYCEROPHOSPHATES B COMPLEX VITAMINS ELIXIR
VITAMINS ELIXIR
SARABHAI CHEMICALS
ಫಾಸ್ಫೋಮಿನ್...
ಹಣ್ಣುಗಳ ರುಚಿಯಿರುವ ಹಸುರು
ಬಣ್ಣದ ವಿಟಮಿನ್ ಟಾನಿಕ್
ShIlpi HPMA-35A/70 Kan

ಏನೂ ಆಗುವುದಿಲ್ಲ" ಎಂದಳು. ಇಷ್ಟು ಮಾತಾಡಿದ್ದಕ್ಕೇ ಅವಳಿಗೆ ಏದುಸಿರು ಬಂತು. ನಿಶ್ಚೇಷ್ಟಳಂತೆ ಬಿದ್ದುಕೊಂಡಳು.

ಅಷ್ಟರಲ್ಲಿ ಮಣಿಬೆನ್ ಕೋಣೆಗೆ ಬಂದಳು. ಅವಳಿಗೂ ಸುಮತಿಯಲ್ಲಿ ತುಂಬ ಪ್ರೀತಿಯಿತ್ತು. ಅವಳ ಮುಖದಲ್ಲೂ ದಣಿವು, ಚಿಂತೆಗಳು ಸ್ಪಷ್ಟವಾಗಿ ಗೋಚರವಾಗುತ್ತಿದ್ದವು. ಸುಮತಿಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ನೇವರಿಸತೊಡಗಿದಳು. ನಾನು ಅವಳ ಕೈಯನ್ನು ಹಿಡಿದು ಸುಮ್ಮನೆ ಕುಳಿತಿದ್ದೆ. ಮನಸ್ಸನ್ನು ಕಠೋರವನ್ನಾಗಿ ಮಾಡಿಕೊಂಡು ಅನುತಾಯಿ ಆಜಾದನನ್ನು ಮಲಗಿಸುತ್ತಿದ್ದಳು. ನಮ್ಮಲ್ಲಿ ಎಲ್ಲರಿಗಿಂತ ಹೆಚ್ಚು ವಯಸ್ಸಾಗಿದ್ದ ಜಾನಕಿಬಾಯಿ ಅವಳ ಸಹಾಯಕ್ಕೆ ಹೋದಳು. ಜಾನಕಿಬಾಯಿ ತುಂಬ ತೇಜಸ್ವಿ ಹೆಂಗಸು. ಆದರೆ ಹೃದಯ-ರೋಗ ಪೀಡಿತಳಾದ ಅವಳಿಗೆ ಹೆಚ್ಚು ಕೆಲಸ ಮಾಡಲಾಗುತ್ತಿರಲಿಲ್ಲ. ಆದರೆ ಚಿಕ್ಕ ಮಗುವನ್ನು ಮಲಗಿಸುವುದು ಸಾಧ್ಯವಿತ್ತು. ಪಾಪ ಆಜಾದ ಸುಖವಾಗಿ ನಿದ್ರಿಸಿದ.

ಸುಮತಿಗೆ ಮತ್ತೆ ವಾಂತಿಯಾಯಿತು. ಅವಳ ಅರಿವೆಗಳು ಹೊಲಸಾದವು. ನಾವು ಅವಳನ್ನು ಸ್ವಚ್ಛ ಮಾಡುತ್ತಿದ್ದಾಗ ಸೀತಮ್ಮ ಬಂದಳು. ಸುಮತಿಯ ಅವಸ್ಥೆ ನೋಡಿದವಳೇ ಓಡಿ ಹೋಗಿ ಸ್ಟ್ರೆಚರ್ ತಂದಳು. ಸುಮತಿಗೆ ಎಚ್ಚರ ತಪ್ಪಿತ್ತು. ಅವಳು, "ನೀವೆಲ್ಲ ರಾಜರು. ನೀವು ರಾಜರು. ನೀವು ಪಾತ್ರೆ ತೊಳೆಯುತ್ತೀರಿ, ಅರಿವೆ ಒಗೆಯುತ್ತೀರಿ... ನಾವು ಕತ್ತೆಗಳು... ಹಾಸಿಗೆಯಲ್ಲಿ ಮಲಗಿರಬೇಕಾಗುತ್ತದೆ..." ಇತ್ಯಾದಿ ಬಡಬಡಿಸುತ್ತಿದ್ದಳು. ಅವಳ ಉತ್ಕಟ ಪ್ರಕೃತಿಯನ್ನು ಕಂಡು ಯಾರೂ ಅವಳಿಗೆ ಕೆಲಸ ಮಾಡಲು ಬಿಡುತ್ತಿರಲಿಲ್ಲ. ಈ [illegible] ಅವಳಿಗೆ ಬೇಸರವನ್ನು [illegible].

ನನ್ನ ಸಮವಯಸ್ಕಳೂ ಸ್ನೇಹಿತೆ [illegible] ಪ್ರಿಯಳೂ ಆದ ಸುಮತಿ! ನಾವಿಲ್ಲಿಗೆ ಬಂದಾಗ ಎಲ್ಲರೂ ಚಿಂತೆಯಿಂದ ರಾತ್ರಿಯೆಲ್ಲ ಎಚ್ಚರಿರುತ್ತಿದ್ದರು. ಆದರೆ ನಾವಿಬ್ಬರೂ ಕೈಕೈ ಹಿಡಿದುಕೊಂಡು ಸುಖವಾಗಿ ನಿದ್ರಿಸುತ್ತಿದ್ದೆವು. ಅವಳೆಷ್ಟು ಭಾವನಾಶೀಲಳೂ ತಿಳಿವಳಿಕೆಯುಳ್ಳವಳೂ ಆಗಿದ್ದಳು! ಹಾಸಿಗೆಯಲ್ಲಿ ಮಲಗಿದ್ದಾಗಲೂ ಎಲ್ಲರ ಬಗ್ಗೆ ಆಲೋಚಿಸುತ್ತಿದ್ದಳು. ಯಾರ ಪತ್ರ ಬಂತು, ಯಾರದಿಲ್ಲ, ಯಾರು ಬೇಸರದಿಂದಿದ್ದಾರೆ, ಎಲ್ಲ ಅವಳಿಗೆ ಗೊತ್ತಿರುತ್ತಿತ್ತು. ಆದರಿಂದಲೇ ಅವಳು ಎಲ್ಲರಿಗೆ ಪ್ರಿಯಳಾಗಿದ್ದಳು.

ಅವಳ ಸ್ಟ್ರೆಚರು ಹೊರಗೆ ಹೋದದ್ದೇ ನಾನು ಮತ್ತು ಅನುತಾಯಿ ಜೋರಾಗಿ ಅತ್ತುಬಿಟ್ಟೆವು. ಮಣಿಬೆನ್ನಳ ಕಣ್ಣುಗಳೂ ನೀರಿನಿಂದ ತುಂಬಿದ್ದವು. ಜಾನಕಿಬಾಯಿ ತನ್ನ ಕಣ್ಣುಗಳನ್ನೊರಸಿಕೊಂಡು ನಮಗೆ ಸಾಂತ್ವನ ಹೇಳುತ್ತಿದ್ದಳು. ಅಷ್ಟರಲ್ಲಿ ಮೃದುಲಾಬೆನ್ ಬಂದಳು. ಅವಳು ಅಳುತ್ತಿರಲಿಲ್ಲ. ಆದರೆ ಅವಳ ಕಣ್ಣುಗಳು ಕೆಂಪಗಾಗಿದ್ದವು. ಮುಖದಲ್ಲಿ ತ್ರಸ್ತಭಾವವಿತ್ತು.

"ಸುಮತಿಯನ್ನು ಒಯ್ದರೆ?" ಒಣ ಸ್ವರದಲ್ಲಿ ಅವಳು ಕೇಳಿದಳು. ಈಗ ನಾನು ಬಿಕ್ಕುವಿಕೆಯನ್ನು ತಡೆಯದಾದೆ. ಅವಳು ನನ್ನ ಹತ್ತಿರ ಬಂದ, "ಹುಡುಗಿ, ಹೀಗೆ ಅತ್ತರೆ ಹೇಗೆ? ಯುದ್ಧದಲ್ಲಿ ಸೈನಿಕರು ಗಾಯಗೊಳ್ಳುತ್ತಾರೆ, ಸತ್ತು ಹೋಗುತ್ತಾರೆ," ಎಂದಳು.


ಹೌದು. ನಾವು ಕೇವಲ ಸ್ನೇಹಿತರೂ ಸಹಕಾರಿಗಳೂ ಆಗಿರಲಿಲ್ಲ. ಸೈನಿಕರೂ ಆಗಿದ್ದೆವು. ನಾನು ದೃಢ ಚಿತ್ತದಿಂದ ಕಣ್ಣೊರಸಿಕೊಂಡೆ, ಅನುತಾಯಿಯೂ ಸ್ವಸ್ಥಚಿತ್ತಳಾದಳು. ಆಜಾದನತ್ತ ನೋಡುತ್ತ, "ಇವನ ತಾಯಿ ಹೇಗಿದ್ದಾಳೆ?" ಎಂದು ಜಾನಕೀಬಾಯಿ ಕೇಳಿದಳು.

"ಇವನ ತಾಯಿ? ಇನ್ನು ಮೇಲೆ ನಾವೆಲ್ಲರೂ ಇವನ ತಾಯಿಯರು."

ಈ ಶಬ್ದಗಳಿಂದ ವಿಚಾರಶೃಂಖಲೆ ಹರಿಯಿತು. ಸಂವೇದನೆ ಅಧಿಕವಾಯಿತು. ತಲೆಯ ಮೇಲೆ ವಜ್ರಾಘಾತವಾಯಿತು, ಮೃತ್ಯುವಿನ ಮುಖ ತೀರ ಸನಿಹಕ್ಕೆ ಬಂದಿತ್ತು. ಅವಳಿಗೆ ಈ ಬಾಲಕನ ತಾಯಿ ಪ್ರಥಮ ತುತ್ತಾಗಿದ್ದಳು.

"ಮತ್ತೆ ಸುಶೀಲಾಬಾಯಿ?" ಜಾನಕಿಬಾಯಿಯ ಸ್ವರ ಒಡೆದುಹೋಗಿತ್ತು.

"ನೀವೆಲ್ಲ ಶಾಂತರಾಗಿರಿ," ಮೃದುಲಾಬೆನ್ ಗಂಭೀರಳಾಗಿ ಹೇಳಿದಳು, "ಸುಶೀಲಾಬಾಯಿ ಸ್ವರ್ಗ ಸೇರಿದಳು. ನಾವೆಲ್ಲ ಪ್ರಾರ್ಥನೆ ಮಾಡೋಣ."



ವಿವಾ

ಎರಡು ರೀತಿಯ ಆರೋಗ್ಯ ಪಾನ

ದಿನವೆಲ್ಲಾ ಶಕ್ತಿ—
ರಾತ್ರಿ ಸುಖಕರ ವಿಶ್ರಾಂತಿ

ಮುಂಜಾನೆ ವಿವಾ... ದಿನವಿಡೀ ಶಕ್ತಿ ಮತ್ತು ಉಲ್ಲಾಸ! ಮೊಲ್ಟ್, ಗೋದಿ ಮತ್ತು ಪ್ರೊಟೀನ್ ಸಮ್ಮಿಶ್ರಿತ ಕೆನೆಭರಿತ ಶುದ್ಧ ಹಾಲಿನ ವಿವಾ...ದಿನವಿಡೀ ದುಡಿಯಲು ಶಕ್ತಿ ಸಾಮರ್ಥ್ಯವನ್ನು ಒದಗಿಸುತ್ತದೆ.

ರಾತ್ರಿಯಲ್ಲಿ ವಿವಾ... ರಾತ್ರಿ ಸುಖಕರ ನಿದ್ರೆ! ವಿವಾದಲ್ಲಿರುವ ರುಚಿಕರ ಮತ್ತು ಶಕ್ತಿದಾಯಕ ಅಂಶಗಳು ದೇಹದ ಬೆಳವಣಿಗೆಗೆ ಸಹಕಾರವಾಗುವುದಲ್ಲದೆ, ನರಗಳನ್ನು ಶಾಂತಗೊಳಿಸಿ, ಸ್ನಾಯುಗಳಿಗೆ ಶಕ್ತಿಯನ್ನು ಪೂರೈಸುತ್ತದೆ. ಸುಖವಾದ ನಿದ್ರೆಯಿಂದ ಎಚ್ಚರವಾಗುವಾಗ ಶಕ್ತಿ ಹಾಗೂ ಉಲ್ಲಾಸವು ಲಭಿಸುತ್ತದೆ.

ವಿವಾ ಪೂರ್ವ ಜೀರ್ಣಿತ ಆಹಾರ—ಬಲಹೀನ ಮತ್ತು ಶುಶ್ರೂಷೆಯಲ್ಲಿರುವವರಿಗೆ ಉತ್ತಮವಾದುದು.

ನಿಮ್ಮ ಆರೋಗ್ಯಕ್ಕಾಗಿ—ವಿವಾ ಕುಡಿಯಿರಿ ನಿಮ್ಮ ರುಚಿಗನುಗುಣವಾಗಿ—ನೀರು ಅಥವಾ ಹಾಲಿನೊಂದಿಗೆ.



ಭಾರತದಲ್ಲಿ ತಯಾರಕರು:
ಜಗತ್‌ಜಿತ್ ಇಂಡಸ್ಟ್ರೀಸ್ ಲಿಮಿಟೆಡ್
ಜಗತ್ ಜಿತ್ ನಗರ, ಹಮೀರ (ಪಂಜಾಬ)
ಏಕಮಾತ್ರ ಮಾರಾಟಗಾರರು
ಹೋಮ್ ಪ್ರಾಡಕ್ಟ್ಸ್ ಮಾರ್ಕೆಟಿಂಗ್ ಡಿವಿಜನ್
.. ಡಿವಿಜನ್ ಆಫ್ ಸಾರಾಭಾಯಿ ಸನ್ಸ್ ಪ್ರೈ. ಲಿ.

Shilpi JI-2A/70 Kan.

ಇಂಥ ಸಮಯದಲ್ಲಿ ಮಾತಾದರೂ ಹೇಗೆ ಹೊರಟೀತು. ನಾವು ಏಳು ಜನರ ಕೋಣೆಯಲ್ಲಿ ನಾವೀಗ ಐದು ಜನ ಮತ್ತು ಮಾತೃವಿಹೀನ ಆಜಾದ ಮಾತ್ರ ಉಳಿದಿದ್ದೆವು. ಪ್ರಾರ್ಥನೆ ಮುಗಿಯುವುದರೊಳಗೆ ಎಷ್ಟು ಜನ ಉಳಿಯುತ್ತೇವೆಯೋ ಯಾರು ಬಲ್ಲರು?

“ಮಂಗಲ ಮಂದಿರವ ತೆರೆ ದಯಾಘನ,” ಎಂದು ಅಳು ಸ್ವರದಲ್ಲಿ ನಾವು ದೇವರನ್ನು ಪ್ರಾರ್ಥಿಸುತ್ತಿದ್ದೆವು. ನಿದ್ದೆಯಲ್ಲಿ ಆಜಾದ ಮುಗುಳ್ನಕ್ಕ. ರಾತ್ರಿ ಹೇಗೆ ಕಳೆಯಿತು, ತಿಳಿಯಲೇ ಇಲ್ಲ. ಪೂರ್ವದಿಗಂತದಲ್ಲಿ ಕೆಂಪು ಮೂಡಲು ನಾನು, ಅನುತಾಯಿ ಮತ್ತು ಮಣಿಬೆನ್ ಸ್ನಾನಕ್ಕಾಗಿ ಹೊರಟೆವು. ಆ ಗೂಗೆಯ ಪರಿವಾರ ಬಲು ಆಥ್ಯತೆಯಿಂದ ನಮ್ಮತ್ತ ಪಿಳಿಪಿಳಿ ನೋಡುತ್ತಿತ್ತು. ಆ ನೋಟವನ್ನು ಸಹಿಸಲಾರದೆ ನಾನು ಮುಖ ತಿರುಗಿಸಿದೆ.

ದಿನಗಳು ಸರಿದವು. ಆಜಾದನನ್ನು ಅವನಜ್ಜಿ ಬಂದು ಕರೆದುಕೊಂಡು ಹೋದಳು. ಸೀತಮ್ಮನಿಗೂ ಬೇನೆ ತಗಲಿ ಅವಳು ಆಸ್ಪತ್ರೆ ಸೇರಿದ್ದಳು. ನಮ್ಮ ವಾರ್ಡಿನ ಬೀಗದ ಕೈ ಮತ್ತು ಎಲ್ಲ ಕಾರಭಾರ ನಮ್ಮ ಕೈಲಿತ್ತು. ಆದರೆ ಇದರಿಂದ ನಮಗೆ ಹರ್ಷವಾಗಲಿ, ಶೋಕವಾಗಲಿ ಆಗಲಿಲ್ಲ.

ಜೇಲಿನಲ್ಲಿದ್ದ ಸ್ತ್ರೀಯರ ಪೈಕಿ ಐವರು ನಿಧನ ಹೊಂದಿದರು. ಇನ್ನು ಹಲವರು ಆಸ್ಪತ್ರೆಯಲ್ಲಿದ್ದರು. ಅವರ ಉಪಚಾರ ನಡೆಯುತ್ತಿತ್ತು. ಅವರ ಪ್ರಕೃತಿ ನಿಧಾನವಾಗಿ ಸುಧಾರಿಸುತ್ತಲಿತ್ತು.

ಈಗ ಇಪ್ಪತ್ತು ನಾಲ್ಕು ಗಂಟೆಗಳೂ ನಮ್ಮ ಕೋಣೆಯ ಬಾಗಿಲು ತೆರೆದಿರುತ್ತಿತ್ತು. ಆದರೆ ಕೆಲಸವಿಲ್ಲದೆ ಹೊರಗಿನ ಬಯಲಿಗೆ ಯಾರೂ ಹೋಗುತ್ತಿರಲಿಲ್ಲ, ಒಂದು ಚಿಕ್ಕ ಸಸಿಯೂ ಆ


ಕ್ರಿಯಾತ್ಮಕ
ಹಾಗೂ
ಭಿನ್ನತೆ
ದಾವಣಗೆರೆ
ಟೆರೀನ್ ಕಾಟನ್
ದಾವಣಗೆರೆ ಕಾಟನ್ ಮಿಲ್ಸ್— ಇದುವೇ ಪರಂಪರ ಹಾಗೂ ಆಧುನಿಕತೆಯ ರೂಪ.

ನೀರವ ಬಯಲಿನಲ್ಲಿ ಬೆಳೆಯುತ್ತಿರಲಿಲ್ಲ. ಮೂಲೆಯಲ್ಲಿಂದ ಆ ಹೂಗಿಡಗಳ ನೆನಪು ಮನಸ್ಸನ್ನು ಶೂಲದಂತೆ ಇರಿಯುತ್ತಿತ್ತು. ಮಣ್ಣಿನಲ್ಲಿ ಬಿಡಿಸಿದ್ದ ಆ ಚಿತ್ರ ಅಳಿಸಿಹೋಗಿತ್ತು. ಓದಲು ಕುಳಿತರೆ ಸುಮತಿಯ ಕಣ್ಣುಗಳು ನೆನಪಿಗೆ ಬರುತ್ತಿದ್ದವು. ಪ್ರಾರ್ಥನೆಗೆ ಕುಳಿತರೆ ಸುಶೀಲಾಬಾಯಿಯ ಧ್ವನಿ ಕೇಳಿಸುತ್ತಲಿತ್ತು. ಗಟ್ಟಿಯಾಗಿ ಅಳುವ ಮನಸ್ಸಾಗುತ್ತಿತ್ತು. ಆಗ ಮೃದುಲಾಬೆನ್‌ಳ ಕಣ್ಣುಗಳು ಎದುರಿಗೆ ಬರುತ್ತಿದ್ದವು. ಭಾವನೆಗಳನ್ನು ನಿಯಂತ್ರಿಸಿ ಅಶ್ರುಸಾಗರವನ್ನು ಅಡಗಿಸಿಡುವ ಆ ಗಂಭೀರ ಕಣ್ಣುಗಳನ್ನು ಕಂಡೊಡನೆ ಕಣ್ಣೀರು ತಡೆದು ಮನಸ್ಸು ಮಾತ್ರ ತಾಂಡವ ಮಾಡುತ್ತಿತ್ತು.

*

ಈಗ ಸೆರೆಮನೆಯ ಬಿಗುವು, ಬಂಧನ ಸಡಿಲಾಗಿದ್ದವು. ಊಟವೂ ಚೆನ್ನಾಗಿರುತ್ತಿತ್ತು. ಆದರೆ ಮನಸ್ಸು ಸತ್ತುಹೋಗಿತ್ತು, ಧೈರ್ಯ ಉಡುಗಿತ್ತು. ಈ ಸಾವು ಎಷ್ಟೊಂದು ಭಯಂಕರ !

ಒಂದು ದಿನ ವರ್ಷಋತು ಬಂದಿರದಿದ್ದರೂ ಒಮ್ಮೊಂದೊಮ್ಮೆ ಆಕಾಶ ಮೇಘಾಚ್ಛಾದಿತವಾಯಿತು. ಮಾತುಗಳು ನಿಂತವು. ಉದಾಸೀನತೆ ಹೆಚ್ಚಿತು. ಕೆಲಸ ಮುಗಿಸಿ ನಾನು ಜಗಲಿಗೆ ಬಂದು ಕುಳಿತೆ. ನಡು ಮಧ್ಯಾಹ್ನದಲ್ಲಿ ವ್ಯಾಪಿಸಿದ ಕತ್ತಲೆ, ಸ್ತಬ್ಧತೆ ಎಲ್ಲ ಅಸಹನೀಯವೆನಿಸುತ್ತಿತ್ತು. "ಇಂಥ ಹವೆಯಿರುವಾಗ ಕಾಫಿ ಕುಡಿಯುವುದರಲ್ಲಿ ಸುಖವಿದೆ, ಅಲ್ಲವೆ?" ಎಂದೆ.

"ನಿಜವೇ?" ನಗಲು ಯತ್ನಿಸುತ್ತ ಅನುತಾಯಿ ನುಡಿದಳು.

"ಈಗ ಕಾಫಿ ಕುಡಿಯಬೇಕೆ?" ಮಣಿಬೆನ್ ಕೇಳಿದಳು. ಇದು ಹೇಗೆ ಸಾಧ್ಯವಾದೀತು? ಇಲ್ಲಿ ಕಾಫಿ ಸಿಗುವ ಸಂಭವವಿಲ್ಲ ಎಂಬುದು ಗೊತ್ತಿದ್ದರೂ ಮಾತಾಡಲೇನಡ್ಡಿ ಎಂದು ನಾನು ಆ ಮಾತುಗಳನ್ನು ಆಡಿದ್ದೆ.

"ಯಾಕೆ ? ಹುಚ್ಚರಂತೆ ಏನು ನೋಡುತ್ತಿ?" ಎಂದು ಮಣಿಬೆನ್ ನಕ್ಕಳು. "ಕಾಫಿ ಸಿಗುವುದಿಲ್ಲ. ಸುಮ್ಮನೆ ಅಂದೆ ಎಂದು ಯೋಚಿಸುತ್ತೀಯೇನು ?"

"ಹೌದು."

"ಹಾಗಿದ್ದರೆ ಮಜಾ ನೋಡು."

ಮಣಿಬೆನ್ ನಿಜವಾಗಿಯೂ ಮೃದುಲಾಬೆನ್ನಳ ಪೆಟ್ಟಿಗೆಯಿಂದ ಕಾಫಿಪುಡಿಯ ಚಿಕ್ಕ ಡಬ್ಬಿಯನ್ನು ಹೊರಗೆ ತೆಗೆದಳು. ಥರ್ಮಾಸ್ ತೆರೆದಳು. ಕಾಲರಾ ಶುರುವಾದಾಗಿನಿಂದ ಅವಳು ಚಹಕ್ಕಾಗಿಯೆಂದು ಸಿಗುವ ಬಿಸಿ ನೀರನ್ನು ಥರ್ಮಾಸಿನಲ್ಲಿ ತುಂಬಿ ಇಡುತ್ತಿದ್ದಳು—ಕೈ ತೊಳೆಯಲು ಉಪಯೋಗಿಸಲೆಂದು. ಜಂಕಿಪೆಟ್ಟಿಗೆ ಇದ್ದರೂ ನಿಯಮಬಾಹಿರವಾಗಿ ಅದನ್ನವಳು ಉಪಯೋಗಿಸುತ್ತಿರಲಿಲ್ಲ.

ಹಾಲು ಮತ್ತು ಸಕ್ಕರೆ ಇತ್ತು. ಆ ಬಿಸಿ ನೀರಿನಲ್ಲಿ ಕಾಫಿಪುಡಿ, ಸಕ್ಕರೆ ಮತ್ತು ಹಾಲು ಹಾಕಿ ಕಾಫಿ ತಯಾರಾಯಿತು. ಆ ಕಾಫಿಗಿದ್ದ ರುಚಿ ಬೇರೆ ಯಾವ ಕಾಫಿಯಿಂದಲೂ ಇನ್ನೂ ಸಿಕ್ಕಿಲ್ಲ.

ಎಷ್ಟೋ ದಿನಗಳ ನಂತರ ನಾವು ನಕ್ಕು ಹರಟೆ ಹೊಡೆದೆವು. ಯಾರ್ಯಾರ ವಿಷಯದಲ್ಲಿ ಏನೇನು ತಿಳಿದುಕೊಂಡಿದ್ದೆವು ಎಂಬುದನ್ನೆಲ್ಲ ಹೇಳಿದೆವು. ಅವುಗಳಲ್ಲಿ ಎಷ್ಟು ನಿಜ, ಎಷ್ಟು ಸುಳ್ಳು ಎಂಬುದನ್ನರಿಯಲು ಆನಂದವೆನಿಸಿತು. ಎರಡು ವಿಷಯಗಳಲ್ಲಿ ಎಲ್ಲರ ಅಭಿಪ್ರಾಯ ಒಂದೇ ಆಗಿತ್ತು. ಅನುತಾಯಿ ತುಂಬ ಒಳ್ಳೆಯವಳು ಎಂಬ ಮಾತು ಎಲ್ಲರಿಗೂ ಒಪ್ಪಿಗೆಯಾಗಿತ್ತು. ಇನ್ನೊಂದೆಂದರೆ ಮಣಿಬೆನ್ ಕಠೋರಳೂ ಭಯಪ್ರದಳೂ ಎಂಬ ಕಲ್ಪನೆ ತೀರ ಸುಳ್ಳಾಗಿತ್ತು.

"ಮೊದಲ ನೋಟಕ್ಕೇ ನೀನು ನನಗೆ ಬಹಳ ಮೆಚ್ಚಿಗೆಯಾದೆ," ಎಂಬ ಅನುತಾಯಿಯ ಮಾತು ನನಗೆ ತುಂಬ ಆಶ್ಚರ್ಯವನ್ನುಂಟು ಮಾಡಿತು.

"ನಿಮ್ಮನ್ನು ಕಂಡರೆ ನನಗೆ ಭಯವಾಗುತ್ತಿತ್ತು. ನಾನು ಮೂರ್ಖಳಂತೆ ಏನಾದರೂ ಹೇಳಿಬಿಡುತ್ತೇನೆ."

"ಅಂತೇ ನೀನು ನನಗೆ ಸೇರುತ್ತಿ," ಎಂದು ಅನುತಾಯಿ ನಕ್ಕಳು. ನಾವೆಲ್ಲರೂ ಕೂಡ ನಕ್ಕೆವು. ನಮ್ಮ ಅದೃಷ್ಟವೂ ಈಗ ನಗತೊಡಗಿತ್ತು. ನಾಲ್ಕು ದಿನಗಳ ನಂತರ ವಾರ್ಡರ್ ಸೀತಮ್ಮ ಬಂದಳು. ಅವಳ ಕೈಯಲ್ಲಿ ಆಜ್ಞಾಪತ್ರವಿತ್ತು. ನಾವು ಹನ್ನೆರಡು ಜನರನ್ನು ಪುಣೆಗೆ ಕರೆದೊಯ್ಯಲಿದ್ದರು. ಸುಮತಿಯೂ



anita
TOILET SOAP
FOR TEENAGE COMPLEXION



ಗುಣವಾಗಿ ಬಂದಿದ್ದಳು. ಒಂದು ರಾತ್ರಿ ನಾವು ಪುನಃ ಗಾಡಿಯಲ್ಲಿ ಕುಳಿತೆವು. ನಾವೀಗ ಪುಣೆಯ ಯರವಡಾ ಜೇಲಿಗೆ ಹೋಗುತ್ತಿದ್ದೆವು. ಹಳೆಯ ಸ್ನೇಹಿತರನ್ನು ಕಾಣಲಿದ್ದೆವು. ಹೊರಗಿನ ಜಗತ್ತಿನಲ್ಲಿ ಏನೇನು ಸಂಭವಿಸಿದೆಯೆಂಬುದು ನಮಗೆ ತಿಳಿಯಲಿತ್ತು. ಯಾವ ಅನಿಶ್ಚಿತತೆಯೂ ಎದುರಿನಲ್ಲಿರಲಿಲ್ಲ. ನಾವು ಇಲ್ಲಿಗೆ ಬಂದಾಗ ನಾನು ಮತ್ತು ಸುಮತಿ ಒಬ್ಬರಿಗೊಬ್ಬರು ಆಧಾರವಾಗಿದ್ದೆವು. ಇಂದು ಹೋಗುತ್ತಿರುವಾಗ ಸುಶೀಲಾಬಾಯಿಯ ನೆನಪು–ನಾವೆಲ್ಲರೂ ಒಂದೇ ಆಗಿದ್ದೆವು.

*

ಇಂದು ಈ ಕವಿತೆಯನ್ನು ಓದುವಾಗ ಕಳೆದು ಹೋದ ಈ ಸಮಯದ ಅಂತರವನ್ನು ದಾಟಿ ಹಿಂಡಲಗಿ ಜೇಲಿನ ಗೋಡೆಯನ್ನು ಜಿಗಿದು ಮನಸ್ಸು ಆ ಚಿಕ್ಕ ಕೋಣೆಯನ್ನು ಪ್ರವೇಶಿಸಿತು. ಕಾಲಪ್ರವಾಹದ ಪ್ರಚಂಡ ತೆರೆಗಳನ್ನು ನಾವು ಏಳು ಜನ ಪರಸ್ಪರ ಸಹಾಯದಿಂದ ದಾಟಿದ್ದೆವು. ತೆರೆ ಚೆಲ್ಲಾಪಿಲ್ಲಿಯಾಯಿತು. ನಾವೂ ಬೇರೆಬೇರೆಯಾದೆವು. ಸರದಾರರ ಮಗಳು ಮಣಿಬೆನ್ ಅವರ ನಿಧನಾನಂತರವೂ ಲೋಕಸಭೆ ಮತ್ತು ಗುಜರಾತಗಳ ಸಂಬಂಧವನ್ನಿರಿಸಿಕೊಂಡಿದ್ದಳು. ಮೃದುಲಾಬೆನ್‌ಳೂ ರಾಜಕಾರಣದಲ್ಲಿ ಸಿಲುಕಿಕೊಂಡಳು. ಅನುತಾಯಿ ಸಮಾಜವಾದಿಯಾಗಿ ಜಗತ್ತಿನ ಸಂಚಾರಮಾಡಿ ಬಂದಳು. ಅವಳು ಈಗ ನಗರ ಸಭೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಸ್ಥಾನದಲ್ಲಿದ್ದಾಳೆ. ಸುಮತಿ – ಅಮೇರಿಕೆಯಲ್ಲಿ ಇದ್ದು ಬಂದವಳು–ರಾಜಧಾನಿಯ ಉನ್ನತ ಸ್ಥಾನದಲ್ಲಿದ್ದಾಳೆ. ಉಳಿದಿಬ್ಬರು ಸ್ವರ್ಗವಾಸಿಗಳಾಗಿದ್ದಾರೆ. ಉಳಿದವರು ನಾವು ಐವರು.

ಜೀವನದ ಗಡಿಬಿಡಿಯ ಮಧ್ಯಾಹ್ನ ಕಾಲವನ್ನು ದಾಟಿ ಸಂಧ್ಯಾ ಕಾಲದ ಮುಳುಗುವ ಸೂರ್ಯ ಕಿರಣಗಳಲ್ಲಿ ಭೂತಕಾಲದ ಈ ಪ್ರಕಾಶರೇಖೆ ಈಗ ಎಂದಾದರೊಂದು ಸಲ ಕಂಡಾಗ ಮನಸ್ಸು "ಹೌದು. ನಾವು ಏಳು ಜನರಿದ್ದೆವು," ಎಂದು ಹೇಳುತ್ತದೆ. ವರ್ಡ್ಸ್‌ವರ್ಥನ ಕವಿತೆಯಲ್ಲಿ ವರ್ಣಿಸಿರುವ ಆ ನಿರ್ದೋಷ ಬಾಲಿಕೆಯಂತೆ ನನ್ನ ಭಾವನೆ ಪುಟಿದೆದ್ದು ಕಣ್ಣುಗಳು ತೇವಗೊಳ್ಳುತ್ತವೆ—"ನಾವು ಏಳು ಜನ." ▲



ಡಾಕ್ಟರರು ರೋಗಿಗೆ ಧೈರ್ಯ ಹೇಳುತ್ತ, "ನೀವೇನೂ ಅಂಜಬೇಡಿ. ನಿಜ ಅಂದರೆ ನನಗೂ ಈ ರೋಗ ಇತ್ತು. ಆದರೆ ಈಗ ನೋಡಿ, ನಾನು ಹೇಗೆ ಗಟ್ಟಿಮುಟ್ಟಾಗಿದ್ದೇನೆ."

"ಹೌದು ಡಾಕ್ಟರ್," ಎಂದನಾ ರೋಗಿ, "ಆದರೆ ನೀವು ಬೇರೆ ಡಾಕ್ಟರರಿಂದ ಚಿಕಿತ್ಸೆ ಮಾಡಿಸಿಕೊಂಡಿದ್ದಿರಿ!"

This Magazine owned by the Loka Shikshana Trust, Hubli, is printed & published by B. G. Guttal at the Samyukta Karnatak Press, Koppikar Road, Hubli

Representatives: Bombay: V. S. Mani, Phone: 472794 Calcutta: H. Muzamdar Phone: How 67-3164 Madras: P. M. Srinivasan. Phone: 83748 New Dehli P. R. Chopra. Phone: 224130





KASTURI PRICE:
Registered with the Registrar of Newspapers for India under No. 3633/57

